
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 15, 2010 ರೂ. 12/-


ಭ್ರಷ್ಟರ ರಕ್ಷಕ ಪೇಜಾವರಗೆ ಡಾಕ್ಟರೇಟ್



ಲೋಕಾಯುಕ್ತಕ್ಕೆ ಹೆದರಿ

ಸೀಎಂ ಮಗ ಪರಾರಿ


ಸ್ಪೆಷಲ್ ಡಿಸಿ ರಾಮಾಂಜನೇಯನ ದುಷ್ಟ ಪುರಾಣ



ಆಲಿ ಮುಗಿಸಲು ಮಾಹಿನ್ ಸ್ಕೆಚ್




ಸೋಮಣ್ಣನ ವಸೂಲಿ ಶುರು



ಚೆಡ್ಡಿ ಮಹೇಂದ್ರ ಜೆಡಿಎಸ್‌ಗೆ

ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್



ಬಿ ಹಾ ರ ಚು ನಾ ವ ಣೆ

ಗೆದ್ದವರು ಯಾರು? ಅಭಿವೃದ್ಧಿಯ ಕೆರೆಗೆ ಹಾರವಾದವರು ಯಾರು?

ನಿತೀಶ್ ಕುಮಾರ್ ನೇತೃತ್ವದ ಜಾತ್ಯತೀತ ಸಂಯುಕ್ತ ಜನತಾದಳ ಹಾಗು ಕೋಮುವಾದಿಗಳ ಬಿಜೆಪಿ ಮೈತ್ರಿಕೂಟ ಬಿಹಾರದ ಇತಿಹಾಸದಲ್ಲೇ ಅಭೂತಪೂರ್ವವಾದ ಸಾಧನೆ ಮಾಡಿ 4/5 ಪಾಲು ಸೀಟುಗಳನ್ನು ಪಡೆದು ದಾಖಲೆ ನಿರ್ಮಿಸಿದೆ. ಇದು ನಿರೀಕ್ಷಿತವೇ ಆಗಿದ್ದರೂ ಈ ಪ್ರಮಾಣದ ಬಹುಮತ ಬರುತ್ತದೆಂದು ಸ್ವತಃ ನಿತೀಶ್ ಕುಮಾರರೇ ನಿರೀಕ್ಷಿಸಿರಲಿಲ್ಲ. ಈಗ ಈ ಗೆಲುವನ್ನು ಹೇಗೆ ಬಣ್ಣಿಸಬೇಕೆಂಬ ಬಗ್ಗೆ ಭಾರತದ ಚುನಾವಣಾ ಪಂಡಿತರಲ್ಲಿ ಮತ್ತು ಮಾಧ್ಯಮಗಳಲ್ಲಿ ಒಂದು ಸ್ಪರ್ಧೆಯೇ ಏರ್ಪಟ್ಟಿದೆ.

ನಿತೀಶ್ ಕುಮಾರ್ ನೇತೃತ್ವದಲ್ಲಿ ಅಭಿವೃದ್ಧಿ ಮತ್ತು ಉತ್ತಮ ಆಡಳಿತಕ್ಕೆ ಜನರು ನೀಡಿದ ಸಕಾರಾತ್ಮಕ ಬೆಂಬಲವೆಂದು ವ್ಯಾಖ್ಯಾನಿಸಲಾಗುತ್ತಿದೆ. ಅಲ್ಲದೆ, ಈ ಚುನಾವಣೆಯಲ್ಲಿ ವ್ಯಕ್ತವಾಗಿರುವಂತೆ ಭಾರತದ ಮತದಾರ ಜಾತಿಯನ್ನು ಮೀರಿ ಬೆಳೆದಿದ್ದಾನಾದ್ದರಿಂದ ಇನ್ನು ಜಾತಿ ಆಧಾರಿತ ರಾಜಕಾರಣದ ಯುಗ ಮುಗಿಯಿತೆಂದು ಕೆಲವರು ಆಶಾಭಾವನೆ ವ್ಯಕ್ತಪಡಿಸುತ್ತಿದ್ದಾರೆ. ಹಾಗೆಯೇ ಈವರೆಗೆ ಭಾರತದ ಚುನಾವಣೆಗಳಲ್ಲಿ ಮತದಾರ ಆಡಳಿತಾರೂಢ ಸರ್ಕಾರದ ವಿರುದ್ಧವಾಗಿಯೇ ಮತ ಚಲಾಯಿಸುತ್ತಿದ್ದ. ಈ ಚುನಾವಣೆಯಲ್ಲಿ ಮತದಾರ ಆ ನಕಾರಾತ್ಮಕ ಪದ್ಧತಿಗೆ ಇತಿಶ್ರೀ ಹಾಡಿ, ಉತ್ತಮ ಆಡಳಿತದ ಪರವಾಗಿ ಮತ ನೀಡುವ ಪ್ರಬುದ್ಧತೆಯನ್ನು ತೋರಿರುವುದರಿಂದ ನಮ್ಮದು ಪ್ರಬುದ್ಧ ಪ್ರಜಾತಂತ್ರವಾಯಿತೆಂದೂ ಕೆಲವರು ಸಂಭ್ರಮಗೊಂಡಿದ್ದಾರೆ.

ಗೆಲುವನ್ನು ತರ್ಕದ ಹಂಗಿಲ್ಲದೆ ವಾಚಾಮಗೋಚರವಾಗಿ ಹೊಗಳಾಡುವುದೂ, ಸೋಲನ್ನು ಕನಿಷ್ಠ ವಿಶ್ಲೇಷಣೆಗೂ ಒಳಪಡಿಸದೆ ಅವಸಾನದ ಭವಿಷ್ಯಕಾರರಾಗುವುದು ನಮ್ಮ ವಿದ್ವಜ್ಜನರ ಮತ್ತು ಮಾಧ್ಯಮಗಳ ರೂಢಿ. ಹೀಗಾಗಿ ನಿಜವಾಗಿ ಬಿಹಾರದಲ್ಲಿ ಗೆದ್ದಿರುವುದು ಏನು ಮತ್ತು ಯಾರು ಎಂದು ಅರ್ಥಮಾಡಿಕೊಳ್ಳಲು ಈ ಅಬ್ಬರದ ಸಂತೆಯಾಚೆ ಹೋಗಿ ಸಾವಧಾನದಿಂದ ವಿಶ್ಲೇಷಣೆ ಮಾಡುವ ಅಗತ್ಯವಿದೆ.

ಮೇಲೆ ಹೇಳಿದ ಹಲವು ಆಶಯಾತ್ಮಕ ಮತ್ತು ಉತ್ಪ್ರೇಕ್ಷಿತ ಹೊಗಳಿಕೆಗಳಲ್ಲಿ ಒಂದು ಸತ್ಯಾಂಶದ ಮಾತಿರುವುದಂತೂ ನಿಜ. 2005ರಲ್ಲಿ ಮೊದಲಬಾರಿಗೆ ಜನತಾ ದಳ (ಯು) ಮತ್ತು ಬಿಜೆಪಿ ಮೈತ್ರಿಕೂಟದ ಎನ್‌ಡಿಎ ಒಕ್ಕೂಟದ ನೇತೃತ್ವ ವಹಿಸಿ ನಿತೀಶ್ ಕುಮಾರ್ ಕಳೆದ ಐದು ವರ್ಷದಲ್ಲಿ ನಡೆಸಿದ ಆಡಳಿತದಿಂದ ಏನಿಲ್ಲವೆಂದರೂ ಬಿಹಾರದಲ್ಲಿ ಅಪರಾಧ, ದರೋಡೆ, ಕಿಡ್ನಾಪ್ ಇನ್ನಿತರ ಪ್ರಕರಣಗಳು ಕಡಿಮೆಯಾಗಿದೆಯೆಂದು ಹೇಳಲಾಗುತ್ತಿದೆ. ಈ ಅವಧಿಯಲ್ಲಿ 21,000ಕ್ಕೂ ಹೆಚ್ಚು ಅಪರಾಧಿಗಳಿಗೆ ಶಿಕ್ಷೆ ಕೊಡಿಸಿರುವುದು ಅದಕ್ಕೆ ಪ್ರಮುಖ ಉದಾಹರಣೆಯಾಗಿ ನೀಡಲಾಗುತ್ತಿದೆ. ಇದಲ್ಲದೆ ರಾಜಧಾನಿಯಾದ ಪಾಟ್ನಾ ನಗರ ಮತ್ತು ಅದರ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಮೂಲಸೌಕರ್ಯಗಳು ಯಾರ ಗಮನಕ್ಕಾದರೂ ಬೀಳುವಂತೆ 'ಅಭಿವೃದ್ಧಿಯಾಗಿವೆ'. ಅಷ್ಟು ಮಾತ್ರವಲ್ಲ, ಪಾಟ್ನಾದಿಂದ ರಾಜ್ಯದ ಹಲವು ಪ್ರಮುಖ ಕೇಂದ್ರಗಳನ್ನು ಸಂಧಿಸುವ ರಸ್ತೆಗಳು ಕಳೆದ 60 ವರ್ಷಗಳಲ್ಲಿ ಕಾಣದಿದ್ದಂತಹ ಪ್ರಗತಿಯನ್ನು ಕಂಡಿವೆ. ಹೀಗಾಗಿ ಇಡೀ ಬಿಹಾರಿಗಳು ತಮ್ಮ ರಾಜ್ಯದಲ್ಲಿ ಹಿಂದೆಂದೂ ಇಲ್ಲದಂತಹ



ಚಾರ್ವಾಕ

▸ ಶಿವಸುಂದರ್

ಏನೋ ಅಭಿವೃದ್ಧಿಯಾಗುತ್ತಿದೆ ಎಂಬ ಭಾವನೆಯನ್ನಂತೂ ಪಡೆದುಕೊಳ್ಳುವಂತಾಗಿದೆ. ಹೀಗಾಗಿಯೇ ಜೆಡಿ (ಯು) ಪಕ್ಷಕ್ಕೆ ಬೆಂಬಲ ಸೂಚಿಸುವವರಿಗಿಂತ ನಿತೀಶ್ ಕುಮಾರ್‌ಗೆ ಬೆಂಬಲ ಸೂಚಿಸುವರ ಸಂಖ್ಯೆ ಹೆಚ್ಚಾಗಿತ್ತು.

ಕಳೆದ 60 ವರ್ಷಗಳಲ್ಲಿ ಬಿಹಾರ ಇಷ್ಟನ್ನೂ ಕಾಣದೆ ಬಿಮಾರು ರಾಜ್ಯಗಳ ಭಾಗವಾಗಿ ಬೀಮಾರ್ (ಖಾಯಿಲೆ) ಅನುಭವಿಸುತ್ತಿತ್ತು. ಹೀಗಾಗಿ ಈ ಕೆಲವು ಅಂಶಗಳು ನಿತೀಶ್ ಕುಮಾರರ ಬಗ್ಗೆ ಒಂದು ಗುಡ್‌ವಿಲ್ ಅನ್ನು ಸೃಷ್ಟಿಸಿತ್ತು.


ಆದರೆ ಇಷ್ಟಕ್ಕೆ ಭಾರತದಂತಹ ದೇಶದಲ್ಲಿ ಅದರಲ್ಲೂ ಬಿಹಾರದಂತ ರಾಜ್ಯದಲ್ಲಿ ಜನ ಜಾತಿ-ಮತ ಎಲ್ಲವನ್ನೂ ಬಿಟ್ಟು ಓಟು ಕೊಟ್ಟುಬಿಡುತ್ತಾರೆಯೇ? ಖಂಡಿತಾ ಇಲ್ಲ. ವಾಸ್ತವವಾಗಿ ಬಿಹಾರದ ಪರಿಸ್ಥಿತಿಯನ್ನು ಮತ್ತು ನಿತೀಶ್ ಕುಮಾರರ ಅಭಿವೃದ್ಧಿ ಮಾದರಿಯನ್ನು ಆಳವಾಗಿ ವಿಶ್ಲೇಷಿಸಿ ನೋಡಿದರೆ ಈ ವಿಶ್ಲೇಷಣೆಗಳೆಲ್ಲಾ ಎಷ್ಟು ಹುಸಿ ಮತ್ತು ಹಸಿ ಎಂಬುದು ತಿಳಿಯುತ್ತದೆ.

ಮೊದಲನೆಯದಾಗಿ ಬಿಹಾರಕ್ಕಿಂತ ಹೆಚ್ಚಿನ ಅಭಿವೃದ್ಧಿ ಹೊಂದಿದಂತಹ ಆಧುನಿಕ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗುಜರಾತ್‌ನಂತಹ ರಾಜ್ಯಗಳಲ್ಲೇ ಜಾತಿ ರಾಜಕಾರಣ ಗಟ್ಟಿಯಾಗುತ್ತಿರುವ ಸಂದರ್ಭದಲ್ಲಿ ಬಿಹಾರದಂತಹ ಜಾತಿಗ್ರಸ್ತ ರಾಜ್ಯದಲ್ಲಿ ಕೇವಲ ರಸ್ತೆ ಕಟ್ಟಿದ ಮಾತ್ರಕ್ಕೆ ಜಾತಿ ಮಾಯವಾಗಿ ಬಿಡುವುದಿಲ್ಲ. ಈ ಬಾರಿ ಯಾವ್ಯಾವ ಜಾತಿಗಳು ಯಾವ್ಯಾವ ಪಕ್ಷಕ್ಕೆ ಓಟು ಹಾಕಿವೆ ಎಂಬ ವಿಶ್ಲೇಷಣೆ ಮಾಡಿದರೂ ಈ ಅಂಶ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಲಾಲು ಪ್ರಸಾದ್ ಯಾದವ್ ಎಷ್ಟೇ ಭ್ರಷ್ಟನೆಂದು ಸಾಬೀತಾದರೂ ಈ ಬಾರಿಯ ಚುನಾವಣೆಯಲ್ಲಿ ಶೇ.75ಕ್ಕಿಂತ ಹೆಚ್ಚಿನ ಯಾದವರು ಲಾಲು ಪ್ರಸಾದನ ಪಕ್ಷಕ್ಕೆ ಓಟು ಹಾಕಿದ್ದಾರೆ. ಬ್ರಾಹ್ಮಣ, ಭೂಮಿಹಾರ್, ಕ್ಷತ್ರಿಯರಂತಹ ಮೇಲ್ಜಾತಿ ಜನರು ಓಟು ಹಾಕಿರುವುದು ಕೆಳಜಾತಿಯ ನಿತೀಶ್ ಕುಮಾರ್ ಪಾರ್ಟಿಗಲ್ಲ.. ಬದಲಿಗೆ ಬಿಜೆಪಿಗೆ. ಆದರೆ ಜೆಡಿಯು ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡಿರುವುದರಿಂದ ಆ ಓಟುಗಳೆಲ್ಲಾ ಒಟ್ಟಾರೆಯಾಗಿ ಎನ್‌ಡಿಎ ಮಡಿಲಿಗೆ ಬಿದ್ದಿವೆಯಷ್ಟೆ. ಹಾಗೆಯೇ ಅತ್ಯಂತ ಹಿಂದುಳಿದ ಜಾತಿಗಳು ನಿತೀಶ್ ಕುಮಾರ್‌ಗೆ ಓಟು ಹಾಕಿದ್ದರೆ, ರಾಮ್ ವಿಲಾಸ್ ಪಾಸ್ವಾನ್ ಪಕ್ಷಕ್ಕೆ ದಲಿತರು ಓಟು ಹಾಕಿದ್ದಾರೆ. ಮೋದಿಯನ್ನು ಪ್ರಚಾರಕ್ಕೆ ಬರದಂತೆ ತಡೆದಿದ್ದರಿಂದ ಮುಸ್ಲಿಮರ ಓಟಿನ ಲಾಭ ನಿತೀಶ್‌ಗೆ ಒಂದಷ್ಟು ಆಗಿರುವುದು ನಿಜವೇ. ಮುಸ್ಲಿಮರೇ ಹೆಚ್ಚಿರುವ ಪೂರ್ವೋತ್ತರ ಬಿಹಾರದಲ್ಲಿ ಎನ್‌ಡಿಎ ಒಕ್ಕೂಟದಿಂದ ಬಿಜೆಪಿ ಅಭ್ಯರ್ಥಿಗಳೇ ಹೆಚ್ಚಾಗಿ ನಿಂತಿದ್ದರೂ ಮುಸ್ಲಿಮರು ಬಿಜೆಪಿಗೇ ಓಟು ಹಾಕಿ ಗೆಲ್ಲಿಸಿದ್ದಾರೆ. ಇನ್ನು ಈ ಬಾರಿ ಹೆಂಗಸರು ಹಿಂದೆಂದಿಗಿಂತಲೂ ಹೆಚ್ಚಾಗಿ ಮತದಾನ ಮಾಡಿದ್ದಾರೆ. ಆದರೆ ಒಟ್ಟಾರೆ ಜಾತಿ ಲೆಕ್ಕದಲ್ಲಿ ಓಟುಗಳು ನಿರೀಕ್ಷಿತ ರೀತಿಯಲ್ಲಿ ಚಲಾಯಿತವಾಗಿರುವ ಪರಿ ನೋಡಿದರೆ ಅದೆಲ್ಲವನ್ನೂ ಮೀರಿ ಬಹುಸಂಖ್ಯಾತ ಮಹಿಳೆಯರು ಜಾತಿ ಎಲ್ಲೆಯನ್ನು ದಾಟಿ ಓಟು ಹಾಕಿದ್ದಾರೆ ಎಂದು ತೀರ್ಮಾನಿಸಲು ಆಧಾರವಿಲ್ಲ. ಈ ನಡುವೆಯೂ ನಿತೀಶ್ ಕುಮಾರರು ಹಿಂದಿನ ಮುಖ್ಯಮಂತ್ರಿಗಿಂತ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಇತರ ಜಾತಿಗಳ ಓಟು ಪಡೆದಿರಬಹುದು ಎಂದು ಊಹಿಸಬಹುದೇ ವಿನಃ ಅದೊಂದು ದೊಡ್ಡ ವಿದ್ಯಮಾನವಾಗಿ ಸಂಭವಿಸಿದೆ ಎಂಬ ತೀರ್ಮಾನಕ್ಕೆ ಬರಲು ಯಾವುದೇ ಪುರಾವೆಯಿಲ್ಲ.

ಏಕೆಂದರೆ ನಮ್ಮ ಚುನಾವಣಾ ಪದ್ಧತಿಯಲ್ಲಿ ಒಂದು ಮತಕ್ಷೇತ್ರದಲ್ಲಿ ಇತರ ಪಕ್ಷಗಳಿಗಿಂತ ಹೆಚ್ಚು ಮತಗಳು ಯಾರು ಪಡೆಯುತ್ತಾರೋ ಅವರು ಗೆಲ್ಲುತ್ತಾರೆ. ಹೀಗಾಗಿ ಇದು ನಿಜಕ್ಕೂ ಒಂದು ಪಕ್ಷದ ನಿಜವಾದ ಉನ್ನತಿ ಅಥವಾ ಅವನತಿಯನ್ನು ತೋರಿಸಿಕೊಡುವುದಿಲ್ಲ. ಈ ಸಾಲಿನ ಚುನಾವಣೆಯಲ್ಲಿ ಬಿಹಾರದಲ್ಲಿ ಹೆಚ್ಚು ಕಡಿಮೆ 3 ಕೋಟಿ ಜನ ಓಟು ಹಾಕಿದ್ದರು. ಅದರಲ್ಲಿ ಶೇ. 39ರಷ್ಟು ಓಟು ನಿತೀಶ್ ಒಕ್ಕೂಟಕ್ಕೂ, ಶೇ.25ರಷ್ಟು ಓಟು ಲಾಲು ಒಕ್ಕೂಟಕ್ಕೂ ದಕ್ಕಿದೆ. ಆದರೆ ಕಳೆದ ಸಾರಿಗಿಂತ ನಿತೀಶ್ ಒಕ್ಕೂಟ 63ಕ್ಕೂ ಹೆಚ್ಚಿನ ಸೀಟುಗಳನ್ನು ಪಡೆದಿದ್ದರೂ ಮತಶೇರಿನಲ್ಲಿ ಮಾತ್ರ ಶೇ.3ರಷ್ಟು ಮಾತ್ರ ಹೆಚ್ಚಳವನ್ನು ಪಡೆದಿದೆ. ಅಂದರೆ ಕಳೆದ ಬಾರಿಗಿಂತ ಈ ಸಾರಿ 9 ಲಕ್ಷ ಹೆಚ್ಚು ಮತದಾರರು ಮಾತ್ರ ನಿತೀಶ್ ಒಕ್ಕೂಟದ ಕಡೆಗೆ ಸರಿದಿದ್ದಾರೆ. ಇವರೆಲ್ಲರೂ ಇದುವರೆಗೆ ಲಾಲುಗೆ ಜಾತಿ ಆಧಾರದಲ್ಲಿ ಮತಕೊಡುತ್ತಿದ್ದರು ಎಂದುಕೊಂಡರೂ ಅವರ ಸಂಖ್ಯೆ 3 ಕೋಟಿ ಮತದಾರರಲ್ಲಿ ಕೇವಲ 10 ಲಕ್ಷ. ಅಂದರೆ ಶೇ.3 ಮಾತ್ರ. ಇದು ಅಸಲಿಯತ್ತು. ಲಾಲು ಒಕ್ಕೂಟ ಕೇವಲ 25 ಸೀಟುಗಳನ್ನು ಮಾತ್ರ ಪಡೆದು ನಿತೀಶ್ ಮೈತ್ರಿಕೂಟ ಅದರ ಶೇ.800 ರಷ್ಟು ಹೆಚ್ಚು ಸೀಟು ಪಡೆದಿದ್ದರೂ ಶೇ.800 ರಷ್ಟು ಹೆಚ್ಚು ಮತಬೆಂಬಲವನ್ನೇನೂ ಪಡೆದಿಲ್ಲ. ಅವರು ಪಡೆದಿರುವುದು ಲಾಲೂ ಒಕ್ಕೂಟಕ್ಕಿಂತ ಕೇವಲ ಶೇ. 13ರಷ್ಟು ಹೆಚ್ಚಿನ ಓಟು ಮಾತ್ರ. ಇಷ್ಟಕ್ಕೇ ಈ ಫಲಿತಾಂಶವನ್ನು ಜಾತಿ ಮೀರಿದ ಅಲೆ ಎಂದು ಬಣ್ಣಿಸಲು ಸಾಧ್ಯವೆ?

ಹಾಗಿದ್ದರೂ ಮೇಲ್ಜಾತಿಗಳನ್ನು ಪ್ರತಿನಿಧಿಸುವ ಬಿಜೆಪಿ ಮತ್ತು ಕೆಳಜಾತಿಗಳನ್ನು ಪ್ರತಿನಿಧಿಸುವ ಜೆಡಿಯುಗಳ ಎನ್‌ಡಿಎ ಒಕ್ಕೂಟ ಚುನಾವಣೆಯಲ್ಲಿ ಗೆಲ್ಲಲು ಕಾರಣವೇನು? ಅದಕ್ಕೆ ಕಾರಣ ಜಾತಿ ಮೀರಿದ್ದಲ್ಲ. ಬದಲಿಗೆ ಜಾತಿಯನ್ನು ಸಮರ್ಥವಾಗಿ ಬಳಸಿಕೊಂಡು ಚುನಾವಣೆಯಲ್ಲಿ ಗೆಲ್ಲಬಲ್ಲ ಜಾತಿ ಸಮೀಕರಣವನ್ನು ರೂಪಿಸಿಕೊಂಡಿದ್ದೇ ಈ ಜಯಭೇರಿಗೆ ಕಾರಣ. ಒಂದೆಡೆ ಯಾದವ-ಮುಸ್ಲಿಂ-ದಲಿತ ಜಾತಿಗಳ ಲಾಲೂ-ಪಾಸ್ವಾನ್ ಒಕ್ಕೂಟ. ಅದಕ್ಕೆ ಪ್ರತಿಯಾಗಿ ಬ್ರಾಹ್ಮಣ್-ಕ್ಷತ್ರಿಯ-ಭೂಮಿಹಾರ್ ಇನ್ನಿತರ ಮೇಲ್ಜಾತಿ ಮತ್ತು ಕುರ್ಮಿ ತರಹದ ಯಾದವೇತರ ಅತ್ಯಂತ ಹಿಂದುಳಿದ ಜಾತಿಗಳ ಒಕ್ಕೂಟ ಬಿಹಾರದಲ್ಲಿ ಸೆಣೆಸಿತ್ತು. ಈ ಬಾರಿ ಒಂದು ಜಾತಿ ಸಮೀಕರಣ ಸೋತು ಮತ್ತೊಂದು ಜಾತಿ

▸▸ 15



ನೋ ಕಾಮೆಂಟ್ಸ್

"ಕೆಲವೊಮ್ಮೆ ಸೀಮಿತವಾದ ಅಲ್ಪಸ್ವಲ್ಪ ಹಿಂಸೆಯ ಬಳಸುವುದು ಬಿಟ್ಟು ಬೇರೆ ದಾರಿಯಿರುವುದಿಲ್ಲ... ಒ ಒಂದು ಹಡಗಿನಲ್ಲಿ 500 ವ್ಯಾಪಾರಿಗಳಿದ್ದರು. ಅವರಲ್ಲೊ ವ್ಯಾಪಾರಿ ಉಳಿದ 499 ಜನರನ್ನು ಕೊಂದು ಅವರ ಸಂಪತ್ತನ್ನು ಮತ್ತು ಹಡಗನ್ನು ವಶಪಡಿಸಿಕೊಳ್ಳ ಯೋಚಿಸಿದ. ಆ ವ್ಯಾಪಾರಿಯಲ್ಲಿದ್ದ ದುಷ್ಟತನ ಆ ದುಷ್ಟ ಯೋಜನೆಗಳಿಗೆ ಪ್ರಚೋದಿಸಿದಾಗ ಬುದ್ಧನೇ ಆತನ ಕೊಂದುಹಾಕಿದ. ಬುದ್ಧ ಈ ಕೊಲೆ ಮಾಡಿ ವ್ಯಾಪಾರಿಯಲ್ಲಿದ್ದ ದುಷ್ಟತನ ಆತನಿಂದ ಕೆಟ್ಟ ಕ ಮಾಡಿಸುವುದನ್ನು ತಡೆಯುವುದಕ್ಕಾಗಿ. ಇಲ್ಲಿ ಉದ್ದೆ ಅಹಿಂಸಾತ್ಮಕವಾಗಿಯೇ ಇತ್ತು, ಆದರೆ ಕ್ರಿಯೆ ಹಿಂ ಆದರೂ ಇದು ಸಮರ್ಥನೀಯವಾದ ಹಿಂಸೆ. ಇ ಕೆಲವರು ಚೆನ್ನಾಗಿ ಮಾತನಾಡುತ್ತಲೇ ಒಳಗೊಳಗೆ ಫೋ ಮೋಸ ಮಾಡುವ ಜನರೂ ಇದ್ದಾರೆ. ಅವರ ಕ್ರಿ ಅಹಿಂಸಾತ್ಮಕವಾಗಿರಬಹುದು. ಆದರೆ ಉದ್ದೇಶ ಹಿಂಸಾತ್ಮ ಹಾಗಾಗಿ ಅವರ ಕರ್ಮವೂ ಹಿಂಸಾತ್ಮಕವಾಗಿರುತ್ತ ಇದು ಬೌದ್ಧ ದೃಷ್ಟಿಕೋನ!"

- ದಲಾಯಿ ಲಾಮಾ, ಬೌದ್ಧರ ಧರ್ಮಗು

"ನನ್ನ ಮುಂದೆ ಈವರೆಗೆ 39 ಕೇಸುಗಳು ಫೈಲಾಗಿ ಅದರಲ್ಲಿ ಇತರ ಕೇಸುಗಳನ್ನು ಬಿಟ್ಟು ಬರೀ ಏಳು ಕೇಸು ವರ್ತಮಾನವನ್ನು ಮಾತ್ರ ಏಕೆ ಸರ್ಕಾರ ಕೇಳುತ್ತಿದೆ. ಏಳರಲ್ಲಿ ಆರು ಪ್ರಕರಣಗಳು ಬಿಜೆಪಿಯೇತರ ಸರ್ಕಾರದ ಸಂಭವಿಸಿದ ಪ್ರಕರಣಗಳೇ ಆಗಿರುವುದರಿಂದ ಇದರ ಹಿಂ ಲೋಕಾಯುಕ್ತ ಸಂಸ್ಥೆಯನ್ನು ರಾಜಕೀಯ ದುರುದ್ದೇಶಗಳಿ ಬಳಸಿಕೊಳ್ಳುವ ಯೋಜನೆ ಕಾಣುತ್ತಿದೆ. ನಾನು ಅದ ಅವಕಾಶ ಮಾಡಿಕೊಡುವುದಿಲ್ಲ."

- ನ್ಯಾ. ಸಂತೋಷ್ ಹೆಗ್ಡೆ, ಲೋಕಾಯು

"ನಾನು ಕಾಶ್ಮೀರದ ವಿಷಯದಲ್ಲಿ ಕಾಶ್ಮೀರಿ ಜನತೆ ಜನಾಭಿಪ್ರಾಯ (ಪ್ಲೆಬಿಸೈಟ್) ಸಂಗ್ರಹಿಸುವುದೊಂದೇ ದಾ ಎಂದು ಭಾಷಣ ಮಾಡಿರುವುದು ದೇಶದ್ರೋಹ ಅಪರಾಧವೆನ್ನುವುದಾದರೆ ಮರಣೋತ್ತರವಾಗಿ ದೇಶ ಮೊಟ್ಟಮೊದಲ ಪ್ರಧಾನಿ ನೆಹರೂರವರ ಮೇಲೂ ಅದ ಪ್ರಕರಣವನ್ನು ದಾಖಲಿಸಬೇಕಾಗುತ್ತದೆ."

- ಅರುಂಧತಿ ರಾಯ

"ನಿತೀಶ್ ಕುಮಾರ್‌ರವರು ಎರಡನೇ ಬಾರಿ ಗೆದ್ದ ಎಂದಮಾತ್ರಕ್ಕೆ ಮತ್ತು ಬಿಹಾರದ ಅಭಿವೃದ್ಧಿಯ ದ ಶೇ.11ರಷ್ಟು ಎಂದಮಾತ್ರಕ್ಕೆ ಅದನ್ನು ಕಡುಬಡತನ ರಾಜ್ಯಗಳ ಪಟ್ಟಿಯಿಂದ ತೆಗೆಯಲು ಸಾಧ್ಯವಿಲ್ಲ. ಏಕೆಂದ ಒಂದು ರಾಜ್ಯ ಅಥವಾ ದೇಶದ ಬೆಳವಣಿಗೆಯನ್ನು ಕೇವ ಆರ್ಥಿಕ ಅಭಿವೃದ್ಧಿಯ ದರದಿಂದ ಅಳೆಯುವುದು ತಪ್ಪು ಇಂದಿಗೂ ಬಿಹಾರದಲ್ಲಿ ಶೇ.60ರಷ್ಟು ಜನ ಬಡವರ ಆಗಿದ್ದಾರೆ. ವಾಸ್ತವ ಹೀಗಿರುವಾಗ ಅಭಿವೃದ್ಧಿ ದರ ಹೇ ಮಾನದಂಡವಾಗಲು ಸಾಧ್ಯ? ಅಲ್ಲದೆ ಯಾವ ರಾಜ್ಯ ಆರ್ಥಿಕ ತಳಹದಿಯೇ ಸೀಮಿತವಾದದ್ದೋ ಅದ ವಿಶಾಲವಾದ ಆರ್ಥಿಕ ತಳಹದಿಯನ್ನುಳ್ಳ ರಾಜ್ಯಗಳಿಗಿಂ ಹೆಚ್ಚಿನ ಅಭಿವೃದ್ಧಿ ದರವನ್ನು ತೋರಿಸುವುದರ ಆಶ್ಚರ್ಯವೇನೂ ಇಲ್ಲ."

- ಡಾ. ಆಶೀಶ್ ಬೋಸ್, ಗ್ರಂಥಕರ್ತ
ಹಿಂದುಳಿದ ರಾಜ್ಯಗಳಾದ ಬಿಹಾರ (Bi)
ಮಧ್ಯಪ್ರದೇಶ್ (Ma), ರಾಜಸ್ಥಾನ (R) ಮತ
ಉತ್ತರಪ್ರದೇಶ (U) -BIMARU-ಹಿಂದಿಯ
ಕಾಯಿಲೆಗ್ರಸ್ಥ ಎಂದು ಕರೆದ ಅರ್ಥಶಾಸ್ತ್ರ

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನು ಯಾವಾಗಲೂ ಸಾರ್ವಜನಿಕರಿಗೆ ಎಷ್ಟು ಕೊಡುತ್ತೇನೆಯೋ ಅದಕ್ಕಿಂತ ಕಡಿಮೆ ಆಶ್ವಾಸ ನೀಡಿರುತ್ತೇನೆ."

- ನಿತೀಶ್ ಕುಮಾರ್, ಬಿಹಾರ ಮುಖ್ಯಮಂ

ಆದರೆ ಬಾಳಾ ಠಾಕ್ರೆ, ಅಧ್ವಾನಿಗಳು ಕೊಲೆ ಮಾಡಿದರೂ ಕೇಸಿರುವುದಿಲ್ಲ!

"ಅರುಂಧತಿ ರಾಯ್‌ರವರು ಮಾಡಿದ ಭಾಷಣದ ದೇಶ ವಿರೋಧಿ ಅಥವಾ ದೇಶದ್ರೋಹಿ ಎನ್ನಬಹುದಾ ಯಾವುದೇ ಅಂಶಗಳಿರಲಿಲ್ಲ ಎಂದು ದೆಹಲಿ ಪೊಲೀಸರ ವರದಿ ಕೊಟ್ಟಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಆದ ಆರೋಪಿಗಳು ಮೇಲ್ನೋಟಕ್ಕೆ ಅಪರಾಧ ಎಸಗಿದ್ದಾ ಎಂದು ನಂಬಬಹುದಾದ ಪುರಾವೆಯಿದೆಯಾದ್ದರಿಂ ದೆಹಲಿ ಪೊಲೀಸರು ಅರುಂಧತಿ ರಾಯ್ ಮತ್ತಿತರ ಮೇಲೆ ಸೂಕ್ತವಾದ ತನಿಖೆ ನಡೆಸಿ ಸರಿಯಾದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸತಕ್ಕದ್ದು."

-ನವಿತಾ ಕುಮಾರಿ ಭಾಘಾ, ದೆಹ
ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ

ಯಡ್ಡಿ 'ಭೂಲೋಕ ರಕ್ಷಕ'ನಾದಾಗ...



ಕಂಡಹಾಗೆ

ಗೌರಿ ಲಂಕೇಶ್

ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಆಡಳಿತವನ್ನು ಹೇಗೆ ನಡೆಸಬೇಕು ಎಂಬುದು ಗೊತ್ತಿಲ್ಲದಿದ್ದರೂ ಸಂದರ್ಭಕ್ಕೆ ತಕ್ಕಂತೆ ನಟಿಸುವುದಂತೂ ಕರಗತವಾಗಿದೆ. ಸುಮ್ಮನೆ ಯೋಚಿಸಿ ನೋಡಿ....

ದೇವೇಗೌಡ ಮತ್ತು ಅವರ ಸುಪುತ್ರರ ವಿರುದ್ಧ ಯಡ್ಡಿ ಸಿಡಿಯುವ ಡೈಲಾಗ್‌ಗಳಲ್ಲಿನ ಗತ್ತು 'ಬಬ್ರುವಾಹನ'ದಲ್ಲಿನ ರಾಜ್‌ಕುಮಾರ್ ಅವರ ಡೈಲಾಗ್‌ಗಳನ್ನು ಮೀರಿಸು ತ್ತಿರುತ್ತವೆ. ಸಾರ್ವಜನಿಕ ಸಭೆಯಲ್ಲಿ ಅವರು ಕಣ್ಣೀರಿಡುವ ಸೀನ್‌ಗಳಂತೂ 'ಜೋಗಿ' ಸಿನಿಮಾದಲ್ಲಿನ 'ಮದರ್ ಸೆಂಟಿಮೆಂಟ್' ಅನ್ನು ನಿವಾಳಿಸಿ ಬಿಡುತ್ತದೆ. ಶೋಭಾ ಜೊತೆಗೆ ಕಾಣಿಸಿಕೊಂಡಾಗಲಂತೂ ಅವರ ಮುಖದಲ್ಲಿನ ಆನಂದದ ಮುಂದೆ ಪ್ರಣಯ ರಾಜಾ ಶ್ರೀನಾಥರ ಎಲ್ಲ ಚಿತ್ರಗಳೂ ಮೂಲೆಗುಂಪಾಗುತ್ತವೆ. ಬಿಜೆಪಿ ಹೈಕಮಾಂಡ್‌ನ್ನೇ ಯಡಿಯೂರಪ್ಪ ಸಂಭಾಳಿಸಿದ ರೀತಿಯ ಮುಂದೆ ಕರಾಟೆಕಿಂಗ್ ಪ್ರಭಾಕರ್‌ರ ಎಲ್ಲಾ ಫೈಟಿಂಗ್ ದೃಶ್ಯಗಳೂ ಸಪ್ಪೆ ಸಪ್ಪೆ!


ಯಡಿಯೂರಪ್ಪನ ಈ ನಟನಾ ಪ್ರತಿಭೆಯನ್ನು ಕರ್ನಾಟಕದ ಜನರ್‍ಯಾರೂ ನಂಬುತ್ತಿಲ್ಲ. ಆದರೆ ಇದನ್ನು ಸಹಜವಾಗಿ ಮೆಚ್ಚಿದವರು ಮಲೆಯಾಳಂನ ಸಿನಿಮಾ ನಿರ್ದೇಶಕ ಮತ್ತು ನಿರ್ಮಾಪಕ ವಿಜೀಶ್ ಮಣಿ ಎಂಬುವವರು. ಇತ್ತೀಚೆಗೆ ಭಿನ್ನಮತೀಯರ ದಂಗೆ ಎದ್ದಾಗ ಅದೆಂತೆಂತಹದ್ದೋ ದೇವಸ್ಥಾನ, ಗುಡಿ ಎಂದೆಲ್ಲ ಯಡಿಯೂರಪ್ಪ ಹಗಲೂರಾತ್ರಿ ಸುತ್ತಾಡುತ್ತಿದ್ದಾಗ ಅವರು ಕೇರಳದ ಕುನ್ನೂರು ಪ್ರದೇಶದ ಮದಯಿಕಾವು ಎಂಬ ದೇವಸ್ಥಾನಕ್ಕೂ ಹೋಗಿದ್ದರು. ಆಗ ಅವರನ್ನು ಭೇಟಿಯಾದ ವಿಜೀಶ್ ಮಣಿ ತಮ್ಮ ಹೊಸ ಚಿತ್ರದ ಕತೆಯನ್ನು ವಿವರಿಸಿದರಂತೆ. ಅಯ್ಯಪ್ಪ ಸ್ವಾಮಿ ಮತ್ತು ವಾವರ್ ಎಂಬ ಮುಸಲ್ಮಾನನ ನಡುವಿನ ಸ್ನೇಹವನ್ನು ಕುರಿತ ಚಿತ್ರಕತೆಯನ್ನು ಮೆಚ್ಚಿದ ಯಡ್ಡಿ ಅದರಲ್ಲಿ ನಟಿಸಲು ಒಪ್ಪಿಕೊಂಡರಂತೆ.

ಅಂದಹಾಗೆ, ಈ ಚಿತ್ರದಲ್ಲಿ ಅಯ್ಯಪ್ಪನ ಭಕ್ತನಾಗಿ ವಿವೇಕ್ ಓಬೇರಾಯ್ ಅಲ್ಲದೆ, ಶಬರಿಮಲೈ ದೇವಸ್ಥಾನದ ಧರ್ಮಾಧಿಕಾರಿ ರಾಜ ತಂತ್ರಿ ಅವರ ಮಗ ಬ್ರಹ್ಮದತ್ತನ್ ಮತ್ತು ಹಲವಾರು ಕ್ರಿಕೆಟಿಗರೂ ನಟಿಸುತ್ತಿದ್ದಾರಂತೆ.

ಕೇರಳದ ಪ್ರಮುಖ ದಿನಪತ್ರಿಕೆಗಳಲ್ಲಿ ಒಂದಾದ 'ಮಾತೃಭೂಮಿ'ಯಲ್ಲಿ ಪ್ರಕಟಗೊಂಡಿರುವ ವರದಿಯಲ್ಲಿ ನಿರ್ಮಾಪಕ-ನಿರ್ದೇಶಕ ವಿಜೀಶ್ ಮಣಿ ಅವರು ಈ ಚಿತ್ರವನ್ನು 35 ಭಾಷೆಗಳಲ್ಲಿ 18 ಭಾರತೀಯ ಮತ್ತು 17 ವಿದೇಶಿ ಭಾಷೆಗಳಲ್ಲಿ ನಿರ್ಮಿಸುತ್ತಿದ್ದು, 50 ಬರಹಗಾರರು ರಚಿಸಿರುವ ಗೀತೆಗಳಿಗೆ 200 ಹಾಡುಗಾರರು ದನಿ ನೀಡಿದ್ದಾರಂತೆ. ಅಷ್ಟೇ ಅಲ್ಲದೆ, ಖ್ಯಾತ ತಾಳವಾದ್ಯಕಾರರಾದ ಶಿವಮಣಿ ಈ ಚಿತ್ರದ ಸಂಗೀತ ನಿರ್ದೇಶಕರಂತೆ.

ಡಿಸೆಂಬರ್ 19 ರಂದು ಇದರ ಚಿತ್ರೀಕರಣ ಪ್ರಾರಂಭಗೊಂಡು, ಇನ್ನೂ ಹಲವೇ ತಿಂಗಳಲ್ಲಿ ಜಗತ್ತಿನಾದ್ಯಂತ ಬಿಡುಗಡೆಗೊಳ್ಳಲಿದೆಯಂತೆ. ಅಂದಹಾಗೆ ಈ ಚಿತ್ರದ ಹೆಸರು 'ಭೂಲೋಕ ರಕ್ಷಕ'.

ಇತ್ತೀಚೆಗೆ "ಇನ್ನು ಮುಂದೆ ಸ್ವಜನಪಕ್ಷಪಾತ ಮಾಡುವುದಿಲ್ಲ, ಆದಷ್ಟು ಪಾರದರ್ಶಕವಾಗಿ ಆಡಳಿತ ನಡೆಸುತ್ತೇನೆ"



ಎಂದೆಲ್ಲ ದೇವರ ಮೇಲೆ ಆಣೆ ಪ್ರಮಾಣ ಮಾಡಿರುವ ಯಡಿಯೂರಪ್ಪ 'ಭೂಲೋಕ ರಕ್ಷಕ' ಚಿತ್ರದಲ್ಲಿ ನಿಜವಾದ ದೈವಭಕ್ತನ ಪಾತ್ರ ವಹಿಸುತ್ತಿರುವುದರಿಂದ ಅವರ ವ್ಯಕ್ತಿತ್ವದಲ್ಲಿ ಖಂಡಿತವಾಗಿಯೂ ಬದಲಾವಣೆಗಳನ್ನು ಕಾಣಬಹುದು ಎನಿಸಿತು ನನಗೆ.

ಉದಾಹರಣೆಗೆ ಯಡಿಯೂರಪ್ಪ ಈಗ ತನ್ನ ಪುತ್ರ, ಪುತ್ರಿ, ಅಳಿಯ, ಸೊಸೆಯಂದಿರನ್ನೆಲ್ಲ ಹೊರಗಟ್ಟಿ ತಮ್ಮ ಸುತ್ತ ಲಿಂಗಾಯಿತರಲ್ಲದ ಆದರೆ ಪ್ರಾಮಾಣಿಕ ಮತ್ತು ದಕ್ಷರಾದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ದೇವೇಗೌಡ ಮತ್ತು ಅವರ ಪುತ್ರರಿಂದ ಮಾತ್ರವಲ್ಲದೆ ತಮ್ಮ ಮಕ್ಕಳಾದ ವಿಜಯೇಂದ್ರ ಮತ್ತು ರಾಘವೇಂದ್ರ ಕಬಳಿಸಿದ್ದ ಸರ್ಕಾರಿ ಭೂಮಿಯನ್ನೆಲ್ಲ ಕಿತ್ತುಕೊಂಡು ಆ ಜಾಗಗಳಲ್ಲಿ ಜನತಾ ಮನೆಗಳನ್ನು ನಿರ್ಮಿಸುತ್ತಿದ್ದಾರೆ.

ಹಾಗೆಯೇ ಬಳ್ಳಾರಿಯ ರೆಡ್ಡಿ ಗ್ಯಾಂಗಿನ ಎಲ್ಲಾ ಅವ್ಯವಹಾರಗಳ ದಾಖಲೆಗಳನ್ನು ಲೋಕಾಯುಕ್ತ ಸಂತೋಷ್ ಹೆಗಡೆ ಅವರಿಗೆ ನೀಡಿ, ದುಷ್ಟ ರೆಡ್ಡಿಗಳ ವಿರುದ್ಧ ನೋಟೀಸ್‌ಗಳು ಜಾರಿ ಆಗುವಂತೆ ನೋಡಿಕೊಂಡಿದ್ದಾರೆ. ಹೀಗೆ ರೆಡ್ಡಿಗಳ ಹಾರಾಟವನ್ನು ಯಶಸ್ವಿಯಾಗಿ ನಿಯಂತ್ರಿಸಿದ ಯಡಿಯೂರಪ್ಪ ಬಳ್ಳಾರಿಯಲ್ಲಿ ನಿರ್ಮಿಸಲು ಯೋಜಿಸಿದ್ದ ವಿಮಾನ ನಿಲ್ದಾಣವನ್ನು ರದ್ದುಪಡಿಸಿ ಅಲ್ಲಿನ ರೈತರ ಹಿತೈಷಿಯಾಗಿದ್ದಾರೆ.

ಕೇಶವಕೃಪಾದ ಚೆಡ್ಡಿಗಳನ್ನು ಮತ್ತು ಕಾಗೇರಿ, ರವಿ ತರಹದ ಅವರ ಪಿಂಡಗಳನ್ನು ತರಾಟೆಗೆ ತೆಗೆದುಕೊಂಡ ಯಡಿಯೂರಪ್ಪ "ಸಾವರ್‌ಕರ್ ಮತ್ತು ಗೋಲ್ವಾಲ್ಕರ್‌ಗೆ ಗೋಲಿಮಾರ್" ಎಂದಿದ್ದಾರಲ್ಲದೆ ಕರ್ನಾಟಕದ ಎಲ್ಲಾ ಶಾಲೆಗಳಲ್ಲಿ ಬಸವ ತತ್ವಗಳನ್ನು ಹೇಳಿಕೊಡಬೇಕೆಂದು ಆದೇಶ ಹೊರಡಿಸಿದ್ದಾರೆ.

ಇದೇ ಹೊತ್ತಿಗೆ ಉಡುಪಿಯ ಅಷ್ಟಮಠಗಳ ವಶದಿಂದ ಕೃಷ್ಣ ದೇವಸ್ಥಾನವನ್ನು ಹಿಂದೆ ಪಡಿದಿದ್ದಾರಲ್ಲದೆ, ರಾಮಚಂದ್ರಾಪುರದ ರಾಘವೇಶ್ವರ ಸ್ವಾಮಿಯ ಭಂಟ ಜಗದೀಶ್ ಭಟ್ಟನ ವಿರುದ್ಧ ಲೈಂಗಿಕ ಕಿರುಕುಳದ ಕೇಸ್ ಜಾರಿ ಆಗುವಂತೆ ನೋಡಿಕೊಂಡಿದ್ದಾರೆ. ಇಷ್ಟಕ್ಕೆ ಸುಮ್ಮನಾಗದೆ ರಾಜ್ಯದ ಎಲ್ಲಾ ಲಿಂಗಾಯತ ಮಠಾಧೀಶರು ರಾಜಕೀಯದಲ್ಲಿ ಮೂಗು ತೂರಿಸಬಾರದು ಎಂದು ಕಟ್ಟೆಚ್ಚರ ನೀಡಿದ್ದಾರೆ.

ಗಣಿ ಲೂಟಿಗಾರರು ಕದ್ದು ಮುಚ್ಚಿಟ್ಟಿದ್ದ ಹಣವನ್ನೆಲ್ಲ ತೆಗೆದುಕೊಂಡು ನೆರೆ ಹಾವಳಿಯಲ್ಲಿ ಮನೆ-ಬದುಕು ಕಳೆದುಕೊಂಡಿದ್ದ ಜನರಿಗೆಲ್ಲ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಮೂಲಕ ಆ ಜನರ ಪಾಲಿಗೆ ಕಲ್ಯಾಣನಾಡನ್ನೇ ಸೃಷ್ಟಿಸಿದ್ದಾರೆ.

ರಾಜ್ಯದ ಮಹಿಳೆಯರಿಗೆ ಜುಜುಬಿ ಸೀರೆಗಳನ್ನು ಹಂಚಿ ಏನೂ ಪ್ರಯೋಜನವಿಲ್ಲ ಎಂದು ಘೋಷಿಸಿರುವ ಯಡಿಯೂರಪ್ಪ ಅದರ ಬದಲಾಗಿ ಎಲ್ಲಾ ಮಹಿಳೆಯರಿಗೆ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕ್‌ಗಳಿಂದ ಸಾಲ ಸಿಗುವಂತೆ ಮಾಡುವ ಮೂಲಕ ಅವರೆಲ್ಲ ಸ್ವಾವಲಂಬಿಗಳಾಗಿರುವಂತೆ ಯೋಜನೆಯನ್ನು ಜಾರಿಗೆ ತಂದಿದ್ದಾರೆ.

'ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್' ಎಂಬ ಸಂತೆಯಲ್ಲಿ ಅರ್ಜಿಗಳನ್ನು ಗುಜರಾಯಿಸಿ ಈ ರಾಜ್ಯದ ಸಾವಿರಾರು ಎಕರೆ ಭೂಮಿಯನ್ನು ಕಬ್ಜಾ ಮಾಡಿಕೊಳ್ಳಲು ಕಾದು ನಿಂತಿದ್ದ ಟಾಟಾ, ಲಕ್ಷ್ಮಿ ಮಿತ್ತಲ್ ತರಹದ ಉದ್ಯಮಿಗಳನ್ನೆಲ್ಲ ಒದ್ದೋಡಿಸಿದ್ದಾರೆ. ಜೊತೆಗೆ "ಏನೇ ಬಂದರೂ ಜಾನುವಾರು ಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತರುವುದಿಲ್ಲ" ಎಂದು ಘೋಷಿಸುವ ಮೂಲಕ ತಾನು ನಿಜವಾಗಿಯೂ ರೈತರ ಬಂಧು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಇದೆಲ್ಲದರ ಮಧ್ಯೆ ನರ್ಸ್ ರೇಣುಕಾಚಾರ್ಯರಿಗೆ ಮನೆಯ ದಾರಿ ತೋರಿಸಿದ್ದಾರಲ್ಲದೆ, ಕಟ್ಟಾ ಮತ್ತು ಆತನ ಮಗನನ್ನು ಜೈಲಿಗಟ್ಟಿದ್ದಾರೆ; ಆರ್. ಅಶೋಕ್‌ನ ಭೂಕಬಳಿಕೆ ವಿರುದ್ಧ ಯಡ್ಡಿಯೂರಪ್ಪರೇ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.

ಇಂಥ ಹಲವಾರು ಕೆಲಸಗಳ ಮೂಲಕ ಯಡಿಯೂರಪ್ಪ 'ಭೂಲೋಕ ರಕ್ಷಕ'ನಾಗುವತ್ತ ಸಾಗುತ್ತಿದ್ದಾಗ ಅಲಾರಾಮ್ ಗಂಟೆ ಬಾರಿಸಿದ್ದರಿಂದ ಎಚ್ಚರವಾಯಿತು.

ಪಕ್ಕದಲ್ಲೇ 'ಮಾತೃಭೂಮಿ' ಪತ್ರಿಕೆ 'ಭೂಲೋಕ ರಕ್ಷಕ' ಎಂಬ ಕಾಲ್ಪನಿಕ ಸಿನಿಮಾದ ಬಗ್ಗೆ ಪ್ರಕಟಿಸಿದ್ದ ಹಾಸ್ಯ ವರದಿಯ ಪ್ರತಿ ಬಿದ್ದಿತ್ತು... ●


ಆತುರಗೆಟ್ಟ ಆಂಜನೇಯ ಜಗನ್ ರೆಡ್ಡಿ ತಲೆ ಕೆಡಿಸಿದವನು ಜನಾರ್ದನ್ ರೆಡ್ಡಿ

ಕೆಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಪ್ರವೃತ್ತಿ ಜನಾರ್ದನ ರೆಡ್ಡಿಗೆ ಹೊಸದೇನಲ್ಲ.

ಈಗ ಅದನ್ನೇ ಆಂಧ್ರದ ಬಾಲಕ ರಾಜಕಾರಣಿ ಜಗನ್ ರೆಡ್ಡಿ ಮೇಲೆ ಜನಾರ್ದನ್ ರೆಡ್ಡಿ ಪ್ರಯೋಗಿಸುತ್ತಿದ್ದಾನೆ.

ಈಗತಾನೆ ಕಾಂಗ್ರೆಸ್‌ನಿಂದ ಆಚೆಬಂದಿರುವ ಜಗನ್ ಎಗರಾಡುತ್ತಿರುವ ರೀತಿ ನೋಡಿದರೆ ಅವನೊಬ್ಬ ಸೀಜನ್ಡ್ ಪಾಲಿಟಿಷಿಯನ್ ಅಲ್ಲ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಕಾಂಗ್ರೆಸ್ ಹೈಕಮಾಂಡಿಗೇ ಚಾಲೆಂಜ್ ಮಾಡಿ ತಲೆ ಎತ್ತಲು ಜಗನ್ ಏನೂ ಶರದ್ ಪವಾರ್ ಅಲ್ಲ, ಮಮತಾ ಬ್ಯಾನರ್ಜಿಯೂ ಅಲ್ಲ. ಈಗಿನ್ನು 37 ರ ಹರೆಯದ ಜಗನ್ ಒಂದೆರಡು ವರ್ಷ ಸಹನೆಯಿಂದ ಕಾದಿದ್ದರೆ ಮುಂದೆ ಆಂಧ್ರ ಮುಖ್ಯಮಂತ್ರಿಯಾಗುವ ಎಲ್ಲಾ ಸಾಧ್ಯತೆಗಳಿದ್ದವು. Stop gap ಅರೇಂಜ್‌ಮೆಂಟ್ ರೀತಿ ಮುಖ್ಯಮಂತ್ರಿಯಾಗಿದ್ದ ರೋಸಯ್ಯನಿಗೆ ವಯಸ್ಸಾಗಿತ್ತು, ಆರೋಗ್ಯವೂ ಸರಿ ಇರಲಿಲ್ಲ, ಪಾರ್ಟಿಯ ಸಂಸದರು, ಶಾಸಕರಿಗೆ ಜಗನ್ ಬೇಡ ಎಂದೇನೂ ಇರಲಿಲ್ಲ, ಆದರೆ ಜಗನ್‌ಗೆ ರಾಜಕಾರಣದ ಈ ಸೂಕ್ಷ್ಮಗಳು ಅರ್ಥವಾದಂತೆ ಇಲ್ಲ. ಅಪ್ಪ ವೈಎಸ್‌ಆರ್ ರೆಡ್ಡಿಯ ಹೆಣ ದಫನ್ ಆಗುವ ಮೊದಲೇ ಸಿಎಂ ಕುರ್ಚಿಗಾಗಿ ಕಾದಿದ್ದವನಂತೆ ವರ್ತಿಸಿದ ಜಗನ್ ಬಗ್ಗೆ ಬಹುತೇಕರಿಗೆ ಜಿಗುಪ್ಸೆಯಾಗಿತ್ತು, ಅದಿಷ್ಟೇ ಅಲ್ಲ, ಆಂಧ್ರದ ಮಟ್ಟಿಗೆ ಕಾಂಗ್ರೆಸ್ ಪಾರ್ಟಿಯಾಗಲಿ, ಸೋನಿಯಾ ಆಗಲಿ ಅಪ್ರಸ್ತುತ ಎನಿಸುವಂತೆ ವೈಎಸ್‌ಆರ್ ರೆಡ್ಡಿ ಪಾರ್ಟಿಯನ್ನು 'ವೈಎಸ್‌ಆರ್ ಪಾರ್ಟಿ' ಎಂತಲೇ ಬಿಂಬಿಸುತ್ತಿದ್ದ, ಬೆಳೆಸಿದ್ದ.



ಯಾವ ಪಕ್ಷವೂ ಈ ತರದ ಉದ್ಧಟತನವನ್ನು ಸಹಿಸಲಾರದು. ಹಾಗಾಗಿಯೇ ವೈಎಸ್‌ಆರ್ ಸತ್ತ ನಂತರ ಮಗ ಜಗನ್ ಹಳೆಯ ಪ್ರವೃತ್ತಿ ಮುಂದುವರೆಸದಂತೆ ಕೊಂಚ ಲಗಾಮು ಹಾಕಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿತ್ತು, ಆದರೆ ಜಗನ್ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ, ಅದರ ಬದಲಾಗಿ ದಿನೇದಿನೇ ಅಸಹನೆ ಜಾಸ್ತಿ ಮಾಡಿಕೊಳ್ಳುತ್ತಾ ರೋಸಯ್ಯ ವಿರುದ್ಧ ಚೀರಿಕೊಳ್ಳತೊಡಗಿದ. ಈ ಕಾಯಿಲೆ ಜಾಸ್ತಿಯಾಗಿ ಮೊನ್ನೆ ತನ್ನ ಸಾಕ್ಷಿ ಟಿವಿಯಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ವಿರುದ್ಧವೇ ಪ್ರೋಗ್ರಾಂ ಮಾಡಿಸಿದ. ತನ್ನ ಎರಡು ದೀರ್ಘ ಯಾತ್ರೆಗೆ ಕಾಂಗ್ರೆಸ್ ತಡೆ ಹಾಕಿದ್ದು ಸರಿಯಲ್ಲ ಎನ್ನುವ ಸಿಟ್ಟೂ ಜಗನ್‌ಗಿತ್ತು. ಆಶ್ಚರ್ಯ ಅಂದರೆ ವೈಎಸ್‌ಆರ್ ಸಾವಿನ ಸುದ್ದಿ ಕೇಳಿ ನಾನೂರಕ್ಕೂ ಹೆಚ್ಚು ಜನ ಆತ್ಮಹತ್ಯೆ ಮಾಡಿಕೊಂಡರೆಂಬ ಸುದ್ದಿ ಕೇವಲ ಉತ್ಪ್ರೇಕ್ಷೆಯಾಗಿತ್ತು, ಮಹಾತ್ಮಾ ಗಾಂಧಿ ಕೊಲೆಯಾದಾಗಲೂ ಇಷ್ಟು ಜನ ಸತ್ತಿರಲಿಲ್ಲ, ಹೀಗಿರುವಾಗ ಈ ವೈಎಸ್‌ಆರ್ ಅಂತಾ ಲೋಕನಾಯಕನಾ?

ರೆಡ್ಡಿಗಳ ಕರಿ ನೆರಳು

ಜಗನ್ ರೆಡ್ಡಿ ಸಂಸದನ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ತಕ್ಷಣ ಜನಾರ್ದನ ರೆಡ್ಡಿ ಹೈದರಾಬಾದಿಗೆ ಓಡಿಹೋದ. ಜಗನ್‌ನನ್ನು ಬಿಜೆಪಿಗೆ ಕರೆತರಲು ರೆಡ್ಡಿ ಯತ್ನಿಸಿದ ಎನ್ನುವ ಸುದ್ದಿ ಆಗ ಇತ್ತು. ಆದರೆ ಈ ರೆಡ್ಡಿಗಳ ಲೆಕ್ಕಾಚಾರ ಬೇರೆಯೇ ಇದೆ. ಅವರು ಜಗನ್ ಮುಂದಿಟ್ಟುಕೊಂಡು ಪ್ರಾದೇಶಿಕ ಪಕ್ಷವೊಂದನ್ನು ತೇಲಿಬಿಡಲು ಹೊರಟಿದ್ದಾರೆ. ಕೇವಲ ರಾಯಲಸೀಮಾದಲ್ಲೇ ಮೂವತ್ತು ನಲವತ್ತು ಶಾಸಕರನ್ನು ಗೆಲ್ಲಿಸಿಕೊಂಡರೆ ಸಾಕು ಆಂಧ್ರ ರಾಜಕೀಯದಲ್ಲಿ, ಸರ್ಕಾರ ರಚನೆಯಲ್ಲಿ ಬೇಕಾದಷ್ಟು ಚೌಕಾಸಿ ನಡೆಸಬಹುದೆಂಬುದು ಅವರ ಲೆಕ್ಕಾಚಾರ.

ಆದರೆ ಅದು ಅಷ್ಟು ಸಲೀಸಲ್ಲ, ಜಗನ್ ಚಿಕ್ಕಪ್ಪ ವಿವೇಕಾನಂದ ರೆಡ್ಡಿಯನ್ನೇ ಈಗ ಕಾಂಗ್ರೆಸ್ ಹೈಜಾಕ್ ಮಾಡಿ ರೆಡ್ಡಿ ಫ್ಯಾಮಿಲಿಯಲ್ಲಿ ಒಡಕು ತಂದಿದೆ. 1999 ರಲ್ಲಿ ಪುಲಿವೆಂದುಲ ಅಸೆಂಬ್ಲಿಗೆ ಸ್ಪರ್ಧಿಸಿ 90 ಸಾವಿರ ಲೀಡ್‌ನಲ್ಲಿ ಗೆದ್ದಿದ್ದ ವಿವೇಕ ರೆಡ್ಡಿ, 2004 ರಲ್ಲಿ ಕಡಪದಿಂದ ಲೋಕಸಭೆಗೆ ನಿಂತು ಲಕ್ಷ ಚಿಲ್ಲರೆ ಲೀಡ್‌ನಿಂದ ಗೆದ್ದಿದ್ದ, ನಂತರ ಅದೇ ಸ್ಥಾನವನ್ನು 2009 ರಲ್ಲಿ ಜಗನ್‌ಗೆ ಬಿಟ್ಟುಕೊಟ್ಟಿದ್ದ ವಿವೇಕ ರೆಡ್ಡಿ.

ಈಗ ಜಗನ್ ತಾಯಿ ವಿಜಯಲಕ್ಷ್ಮಿಯೂ ಪುಲಿವೆಂದುಲದ ಶಾಸಕಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ನಾಳೆ ಇಲ್ಲಿ ಮರುಚುನಾವಣೆಯಾದರೆ ಜಗನ್ ವಿರುದ್ಧ ವಿವೇಕಾನಂದ ರೆಡ್ಡಿಯೇ ನಿಂತರೂ ಆಶ್ಚರ್ಯವಿಲ್ಲ.



ಸರಿಯೋ ತಪ್ಪೋ....

ಜಗನ್ ತನ್ನ ಅಧಿಕಾರದ ಬಯಕೆ ಈಡೇರಿಸಿಕೊಳ್ಳಲು ಹೊಸ ರಾಜಕೀಯದ ಹಾದಿ ಹಿಡಿದಿದ್ದಾನೆ. ಅವನ ರಾಜಕೀಯ ನಡೆ ಈಗ ಪುನಃ ಸೊನ್ನೆಯಿಂದ ಶುರುವಾಗುತ್ತಿದೆ. ಸುಮಾರು 60 ಸಾವಿರ ಕೋಟಿ ರೂಪಾಯಿಗಳಷ್ಟು ಉದ್ಯಮ ವ್ಯವಹಾರಗಳು ಜಗನ್‌ಗಿದೆ. ಆದರೆ ರಾಜಕೀಯ ಕೃಪಾಕಟಾಕ್ಷ, ಅಧಿಕಾರವಿರದಿದ್ದರೆ ಇಷ್ಟು ದೊಡ್ಡ ಉದ್ಯಮ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವುದು ಕಷ್ಟ. ಜಗನ್‌ನ ಸಾಕ್ಷಿ ಟಿವಿ ಹಾಗೂ ದಿನಪತ್ರಿಕೆಗಳು ಈಗಲೂ ಪ್ರತಿದಿನ ಒಂದು ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಿವೆ. ಜಗನ್‌ನ ಸಿಮೆಂಟ್, ಪಾಲಿಮರ್, ರಿಯಲ್ ಎಸ್ಟೇಟ್ ಕಂಪನಿಗಳು ಲಾಸಾಗಿ ಕುಸಿಯುತ್ತಿವೆ. ಮಹತ್ವಾಕಾಂಕ್ಷೆಯ, ಜನಾರ್ದನ ರೆಡ್ಡಿ ಜೊತೆಗಿನ ಬ್ರಹ್ಮಿಣಿ ಸ್ಟೀಲ್ಸ್ ಕಾರ್ಖಾನೆ ಕಣ್ಣುಬಿಡುವ ಮೊದಲೇ ಕೋಮಾ ಸ್ಥಿತಿಗೆ ಹೋಗಿದೆ. ಈ ಕಷ್ಟಕಾಲದಲ್ಲಿ ಸ್ವಂತದ ರಾಜಕೀಯ ಪಾರ್ಟಿಯನ್ನು ಕಟ್ಟಿ ಬೆಳೆಸಬೇಕೆಂದರೆ, ಚುನಾವಣಾ ಹೋರಾಟ ನಡೆಸಬೇಕೆಂದರೆ ಅದು ಹುಡುಗಾಟದ ಮಾತಲ್ಲ. ಜಗನ್‌ನ ದುಡ್ಡಿನ ಡ್ಯಾಂನ ಎಲ್ಲಾ ಗೇಟ್‌ಗಳನ್ನು ಮೇಲೆತ್ತಿ ಹಣವನ್ನು ನೀರಿನಂತೆ ಹರಿಸಬೇಕಾಗುತ್ತದೆ. ಈ ಪರದಾಟದಲ್ಲಿ ಜಗನ್ ನಿತ್ರಾಣನಾಗಿ ಇನ್ನಷ್ಟು ಕುಸಿದರೂ ಆಶ್ಚರ್ಯವಿಲ್ಲ.

ಕರ್ನಾಟಕ-ಆಂಧ್ರ ಈ ಎರಡೂ ಕಡೆ ಸರ್ಕಾರಗಳನ್ನು ಕಂಟ್ರೋಲ್ ಮಾಡುವ ಪ್ಲಾನ್ ಇದ್ದ ಬಳ್ಳಾರಿ ರೆಡ್ಡಿಗಳಿಗೆ ಈಗ ಎರಡೂ ಕಡೆ ಸೋಲಾಗಿದೆ.

ಅತ್ತ ಜಗನ್ ಕಷ್ಟದಲ್ಲಿರುವಾಗ ಬಳ್ಳಾರಿ ರೆಡ್ಡಿ ಅಮೆರಿಕಾ, ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಕಾಣಿಸಿಕೊಂಡಿದ್ದಾನೆ. ಅವನ ಗಣಿ ದಂಧೆಯಲ್ಲಿ ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘಿಸಿರುವ ಪ್ರಕರಣಗಳನ್ನು ರಿಪೇರಿ ಮಾಡಿ ತನ್ನ ತಲೆ ಉಳಿಸಿಕೊಳ್ಳಲು ರೆಡ್ಡಿ ಸರ್ಕಸ್ ನಡೆಸುತ್ತಿದ್ದಾನೆ.

ಹೀಗಿರುವಾಗ ಜಗನ್ ಪಾಡು ಏನಾಗಿರಬೇಕ? ●

ರಣಪಾತಕಿ ಮಾಹಿನ್‌ನ ಕೋರ್ಟ್ ಸ್ಕೆಚ್

ಆಲಿಯ ಕೊಲ್ಲಲು ಐವತ್ತು ಮಂದಿ!

ಬನಶಂಕರಿ ವಾರ್ಡ್‌ನ ಜೆಡಿಎಸ್ ಕೌನ್ಸಿಲರ್ ಮೊಹಮ್ಮದ್ ಆಲಿ ಉರ್ಫ್ ದಿವಾನ್ ಆಲಿಯನ್ನು ಕೋರ್ಟ್ ಆವರಣದಲ್ಲೇ ಕತ್ತರಿಸಿ ಹಾಕುವ ಪಾತಕಿ ಮಾಹಿನ್ ಷಡ್ಯಂತ್ರ ವಿಫಲಗೊಂಡಿದೆ. ಬಹುಶಃ ಎಸಿಪಿ ಟೈಗರ್ ಅಶೋಕ್ ಕುಮಾರ್ ಸಕಾಲಕ್ಕೆ ಧಾವಿಸಿ ಬಂದು ಆಲಿಯನ್ನು ರಕ್ಷಿಸದೇ ಹೋಗಿದ್ದರೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಇನ್ನೂರು ಮಂದಿ ಕೌನ್ಸಿಲರ್‌ಗಳ ಪೈಕಿ ಆಲಿ ಕಗ್ಗೊಲೆಯಾದ ಮೊದಲ ಪುರಪಿತೃವಾಗುತ್ತಿದ್ದ!


ಆಲಿ ಬಚಾವಾಗಿದ್ದಾನೆ. ರೌಡಿ ಮಾಹಿನ್ ಎಸ್ಕೇಪಾಗಿದ್ದಾನೆ. ಆತನ ತಮ್ಮ ಸಲೀಂ ಊರುಬಿಟ್ಟೇ ಪರಾರಿಯಾಗಿದ್ದು ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಮಾಹಿನ್ ವಿರುದ್ಧ ದಾಖಲಾದ ಹತ್ಯಾಯತ್ನದ ದೂರು ಮತ್ತು ಪೊಲೀಸರ ಕಣ್ಣಾಮುಚ್ಚಾಲೆ ಆಟ ಎಲ್ಲವೂ ಬಿಜೆಪಿ ಸರ್ಕಾರದ ಪೊಲೀಸ್ ದುರವಸ್ಥೆಯ ಪ್ರತೀಕಗಳಷ್ಟೆ.


ಕಳೆದ ಪಾಲಿಕೆ ಚುನಾವಣೆಯಲ್ಲಿ ಬನಶಂಕರಿ ದೇವಸ್ಥಾನ ವಾರ್ಡ್‌ನಿಂದ ಎರಡು ಸಾವಿರಕ್ಕೂ ಅಧಿಕ ಮತಗಳಿಂದ ಜೆಡಿಎಸ್ ಅಭ್ಯರ್ಥಿಯಾಗಿ ಗೆದ್ದು ಕೌನ್ಸಿಲರ್ ಆದ ಮೊಹಮ್ಮದ್ ಆಲಿ ಉರ್ಫ್ ದಿವಾನ್ ಆಲಿ ಸದ್ಯ ನಗರ ಯೋಜನಾ ಸ್ಥಾಯಿ ಸಮಿತಿಯ ಸದಸ್ಯ ಕೂಡ. ಚಾಮರಾಜಪೇಟೆಯ ಶಾಸಕ ಜಮೀರ್ ಅಹ್ಮದ್ ಪಾಲಿಗೆ ಆಲಿಯೇ ಬಲಗೈಬಂಟ. ಜೆಡಿಎಸ್ ನಾಯಕ ಕುಮಾರ ಸ್ವಾಮಿಗೂ ಆಲಿ ಅಚ್ಚುಮೆಚ್ಚು. ಆದರೆ ಪೂರ್ವಾಶ್ರಮದ ಪ್ರಾರಬ್ಧ ಕರ್ಮದಂತೆ ಮುಸ್ಲಿಂ ಅಂಡರ್‌ವರ್ಲ್ಡ್ ಆತನನ್ನು ನೆರಳಿನಂತೆ ಹಿಂಬಾಲಿಸಿ ಬರುತ್ತಿದೆ. ಯಾವುದೋ ಕಾಲಕ್ಕೆ ರೌಡಿ ತನ್ವೀರ್ ತಂಡದಲ್ಲಿ ಸಕ್ರಿಯನಾಗಿದ್ದ ಆಲಿ ಕ್ರಮೇಣ ಸಮಾಜಸೇವಕನ ಗೆಟಪ್ಪಿನಲ್ಲಿ ಕಾಣಿಸಿಕೊಂಡ. ಜೆಡಿಎಸ್ ಸೇರಿ ಜಮೀರ್, ಕುಮಾರಸ್ವಾಮಿ ಜೊತೆ ಮಿಂಚಲಾರಂಭಿಸಿದ. ತನ್ನ ವಿರುದ್ಧ ಸಿಸಿಬಿ ಪೊಲೀಸರು ದಾಖಲಿಸುತ್ತಿದ್ದ ಖೊಟ್ಟಿ ಕೇಸುಗಳ ವಿರುದ್ಧ ಮಾನವ ಹಕ್ಕು ಆಯೋಗದ ತನಕ ಹೆಣಗಾಡಿದ. ಬನಶಂಕರಿ ಸುತ್ತಮುತ್ತಲ ಮುಸ್ಲಿಂ ಏರಿಯಾದ ಯಾರಬ್ ನಗರ, ಇಲಿಯಾಸ್‌ನಗರ, ಸರಬಂಡೆ ಪಾಳ್ಯ ಇತ್ಯಾದಿ ಮೊಹಲ್ಲಾಗಳಲ್ಲಿ ಮಕ್ಕಳ ಪುಸ್ತಕ ಹಂಚುವುದು, ರೇಷನ್ ಕಾರ್ಡ್, ಪಿಂಚಣಿ, ವಿಧವಾ ವೇತನಾ ಕೊಡಿಸುವುದನ್ನೇ ಕಾಯಕ ಮಾಡಿಕೊಂಡ.

ಇದೆಲ್ಲದರ ಪರಿಣಾಮವಾಗೇ ಕಳೆದ ಪಾಲಿಕೆ ಚುನಾವಣೆಯಲ್ಲಿ ಬನಶಂಕರಿ ದೇವಸ್ಥಾನ ವಾರ್ಡಿನ ಹಿಂದೂ ಮುಸ್ಲಿಮರೆಲ್ಲ ಸೇರಿ ಆಲಿಯನ್ನು ಗೆಲ್ಲಿಸಿದ್ದು. ಗೆದ್ದು ಕೌನ್ಸಿಲರ್ ಆದನಾದರೂ ಆಲಿ ಬಂದೂಕುಧಾರಿ ಪೊಲೀಸರ ಬೆಂಗಾವಲಲ್ಲೇ ಪಾಲಿಕೆ ಸಭೆಗೆ ಹಾಜರಾಗುತ್ತಿದ್ದುದ್ದಕ್ಕೆ ಇದ್ದ ಒಂದೇಒಂದು ಕಾರಣವೆಂದರೆ ಅದು 2009ರ ಏಪ್ರಿಲ್ 16ರಂದು ಮೈಕೋಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯ ಬಿಸ್ಮಿಲ್ಲಾನಗರದ ನಡುರಸ್ತೆಯಲ್ಲಿ ಕೊಲೆಯಾದ ಮಚ್ಚಿ ಶೌಕತ್!

ಮುಸ್ಲಿಂ ಅಂಡರ್‌ವರ್ಲ್ಡ್‌ನ ಅತ್ಯಂತ ಖತರ್‌ನಾಕ್ ಪಾತಕಿಯೆಂದೇ ಕುಖ್ಯಾತನಾದ ಮಾಹಿನ್ ಶೌಕತ್ ಹತ್ಯೆಯ ಮೂಲ ಪುರುಷನಾಗಿದ್ದ. ಆತನ ಬಿಸ್ಮಿಲ್ಲಾನಗರದ ಬಂಟರಾದ ಬೈಲ್‌ಜಿಯಾ, ಪರ್‌ವೀರು, ಸಮೀರ್, ಅಲ್ಲಾವುದ್ದೀನ್, ವಿಜಲು, ಅಳ್ಳಲು, ನವಾಬ್ ಮುಂತಾದವರೆಲ್ಲ ಸೇರಿಕೊಂಡೇ ಶೌಕತ್‌ನನ್ನು ಮುಗಿಸಿದ್ದರು. ಶೌಕತ್ ಬಿಸ್ಮಿಲ್ಲಾನಗರದ ಮಸೀದಿ ಮುಂದಿನ ಫುಟ್‌ಪಾತ್‌ನಲ್ಲಿ ಮೀನು ಮಾರಿಕೊಂಡಿದ್ದ. ಏರಿಯಾದ ರೌಡಿ ಮತ್ತು ಮಾಹಿನ್‌ನ ಬಂಟ ಬೈಲ್‌ಜಿಯಾ ತನಗೆ ಹಫ್ತಾ ಕೊಡುವಂತೆ ಪದೇಪದೇ ಶೌಕತ್‌ನನ್ನು ಪೀಡಿಸುತ್ತಿದ್ದ. ಈ ಬಗ್ಗೆ ಶೌಕತ್ ಮೈಕೋ ಲೇಔಟ್‌ನಲ್ಲಿ ಆಗ ಇನ್ಸ್‌ಪೆಕ್ಟರ್ ಆಗಿದ್ದ ಸುಧಾಕರ್‌ಗೆ ಪದೇಪದೇ ದೂರು ಕೊಟ್ಟಿದ್ದ. ತನ್ನನ್ನು ಮಾಹಿನ್ ಗ್ಯಾಂಗ್ ಕೊಂದೇ ಹಾಕುತ್ತದೆ, ರಕ್ಷಣೆ ಕೊಡಿ ಎಂದು ರಾಜ್ಯಪಾಲರಿಂದ ಮುಖ್ಯಮಂತ್ರಿ, ಪೊಲೀಸ್ ಕಮೀಷನರ್‌ತನಕ ದೂರಿನ ಮೇಲೆ ದೂರು ಕೊಟ್ಟ. ಜಂಟಿ ಪೊಲೀಸ್ ಕಮೀಷನರ್ ಅಲೋಕ್‌ಕುಮಾರ್ ಕಾಲಿಗೆ ಬಿದ್ದು ಕಣ್ಣೀರು ಹಾಕಿದ್ದೂ ಪ್ರಯೋಜನವಾಗಲಿಲ್ಲ.


ಅಂತಿಮವಾಗಿ 2009ರ ಏಪ್ರಿಲ್ 16ರಂದು ಬಿಸ್ಮಿಲ್ಲಾನಗರದ ಮಸೀದಿ ಮುಂದೇ ಶೌಕತ್ ಹೆಣವಾಗಿದ್ದ. ಇಲ್ಲಿ


ಮದುವೆ ಸಂದರ್ಭದಲ್ಲಿ ಮಚ್ಚಿ ಶೌಕತ್


ಮಾಹಿನ್

ಆಲಿಯ ಗ್ರಹಚಾರವೋ ಎಂಬಂತೆ ಶೌಕತ್ ಕೊಲೆಯನ್ನು ಕಣ್ಣಾರೆ ಕಂಡಿದ್ದ ಚಾಂದ್ ಎಂಬಾತನನ್ನು ಹಿಡಿದ ಮೈಕೋ ಲೇಔಟ್‌ನ ಪೊಲೀಸರು ಆತನನ್ನೇ ಪ್ರಕರಣದ ಸಾಕ್ಷಿದಾರನನ್ನಾಗಿ ಮಾಡಿಕೊಂಡರು. ಈತನ ಜೊತೆ ಅಕ್ರಮ್ ಎಂಬ ಮತ್ತೊಬ್ಬ ಆಲಿಯ ಶಿಷ್ಯನನ್ನು ಸಾಕ್ಷಿ ಮಾಡಿಕೊಂಡರು. ವಿಪರ್ಯಾಸ ಹೇಗಿತ್ತೆಂದರೆ ಕೊನೆಯಲ್ಲಿ ರೌಡಿ ಮಾಹಿನ್ ಕೂಡ ಇದ್ದ ಎಂದು ಶೌಕತ್‌ನ ಅಣ್ಣ ಬರ್ಕತ್, ಶೌಕತ್‌ನ ತಾಯಿ ಮತ್ತು ವಿಧವಾ ಪತ್ನಿ ಮಲಿಕಾಬೀ ಸೇರಿಕೊಂಡು ಮೈಕೋ ಲೇಔಟ್ ಪೊಲೀಸ್ ಠಾಣೆಗೆ ಲಿಖಿತ ದೂರು ಕೊಟ್ಟರೂ ಪೊಲೀಸರು ಅದನ್ನು ಹರಿದೆಸೆದು ತಮಗೆ ಇಷ್ಟಬಂದಂತೆ ದೂರು ಬರೆಸಿಕೊಂಡು ಕೇಸಿನಿಂದ ಮಾಹಿನ್ ಹೆಸರನ್ನು ಕೈಬಿಟ್ಟಿದ್ದರು.

ಇಡೀ ಕೊಲೆ ಪ್ರಕರಣದಿಂದ ಮಾಹಿನ್ ಹೆಸರನ್ನು ತೆಗೆದುಹಾಕಿ ಉಪಕರಿಸಿದ್ದು ಆಗ ಆಡುಗೋಡಿಗೆ ಎಸಿಪಿಯಾಗಿದ್ದ ನಾಗರಾಜು. ಎಸಿಪಿ ಸಾಹೇಬರ ಮುಂದೆ ನಿಂತ ಮಾಹಿನ್ ತನ್ನ ಬಂಟರನ್ನು ಪೊಲೀಸರಿಗೆ ಸರೆಂಡರ್ ಮಾಡಿಸಿದ್ದ. ಆದರೆ ಪ್ರಕರಣದ ವಿಚಾರಣೆ ಕೋರ್ಟ್‌ಗೆ ಬರುತ್ತಿದ್ದಂತೆ ಸಾಕ್ಷಿದಾರರು ತನ್ನ ಹೆಸರನ್ನು ತಂದೇ ತರುತ್ತಾರೆಂಬ ಭೀತಿ ಆತನಿಗಿತ್ತು. ಸಾಕ್ಷಿದಾರರ ಪೈಕಿ ಅಕ್ರಮ್ ಮತ್ತು ಚಾಂದ್ ಕೌನ್ಸಿಲರ್ ಆಲಿಗೆ ಪರಿಚಯವಿದ್ದುದ್ದರಿಂದ ತನ್ನನ್ನು ಕೇಸಿಗೆ ಸಿಲುಕಿಸಲು ಆಲಿಯೇ ಪಿತೂರಿ ನಡೆಸುತ್ತಿದ್ದಾನೆಂಬ ಅನುಮಾನ ಮಾಹಿನ್ ತಲೆ ಹೊಕ್ಕಿತ್ತು. ಜೊತೆಗೆ ತನ್ನ ಬಂಟರಾದ ಬೈಲ್‌ಜಿಯಾ, ಸಮೀರ್, ನವಾಜ್‌ರನ್ನೂ ಶೌಕತ್ ಕೊಲೆ ಕೇಸಿಂದ ಬಚಾವು ಮಾಡಬೇಕಲ್ಲ–


ಅಶೋಕ್‌ಕುಮಾರ್


ಅದಕ್ಕೆ ಆಲಿಯನ್ನೇ ಹೆದರಿಸಿಬಿಟ್ಟರೆ, ಕೇಸಿನ ಮಿಕ್ಕೆಲ್ಲರೂ ತೆಪ್ಪಗಾಗುತ್ತಾರೆ ಎಂದು ಮಾಹಿನ್ ಲೆಕ್ಕಹಾಕಿದ್ದಾನೆ. ಇಲ್ಲಿಗೆ ಮೂರು ತಿಂಗಳ ಹಿಂದೆ ಆಲಿಗೆ ಫೋನ್ ಮಾಡಿದ್ದೇ 'ದೇಖೋ ಬೈ; ಶೌಕತ್ ಮನೆಯವರು ನಿನ್ನ ಮಾತನ್ನು ಕೇಳೇಕೇಳ್ತಾರೆ. ಸಾಲದ್ದಕ್ಕೆ ಪ್ರಮುಖ ಸಾಕ್ಷಿಗಳಿಬ್ಬರೂ ನಿನಗೆ ಬೇಕಾದವರೇ. ಚುಮ್ಮೆ ನನಗೂ ನಿನಗೂ ಯಾಕೆ ದುಷ್ಮನಿ? ಶೌಕತ್ ಹೆಂಡ್ತಿಗೆ ನಾನೇ ಅಷ್ಟೂ ಇಷ್ಟು ಕಾಸು ಕೊಡಿಸ್ತೇನೆ. ನಿನಗೆ ಬೇಕಾದರೆ ಒಂದಷ್ಟು ಕಾಸು ಕೊಡೋಣ. ನೀನೆ ನಿಂತು ಎಲ್ಲರನ್ನೂ ರಾಜಿ ಮಾಡಿಸಿಬಿಡು....!' ಎಂದಿದ್ದಾನೆ ಮಾಹಿನ್

ಹಾಗಂತ ಆಲಿ ಒಪ್ಪಬೇಕಲ್ಲ–ಇದಕ್ಕೂ ನನಗೂ ಸಂಬಂಧವಿಲ್ಲ, ನೀವುಂಟು ಶೌಕತ್‌ನ ಮನೆಯವರುಂಟು. ಏನು ಬೇಕಾದ್ರೂ ಮಾಡ್ಕೊಳ್ಳಿ. ಸುಮ್ಮನೇ ನನ್ನ ಹೆಸರನ್ನು ಇದರಲ್ಲಿ ತರಬೇಡಿ ಎಂದು ಆಲಿ ಫೋನ್ ಕುಕ್ಕಿದ್ದಾನೆ. ಆದರೆ ಮಾಹಿನ್ ಅಷ್ಟಕ್ಕೆ ಬಿಡಲಿಲ್ಲ. ಆಲಿಗೆ ಪರಿಚಿತರಿದ್ದ ಯಾರ್ಯಾರಿಂದಲೋ ಫೋನ್ ಮಾಡಿಸಿದ್ದಾನೆ. ಇದ್ಯಾವುದಕ್ಕೂ ಆಲಿ ಜಗ್ಗುವುದಿಲ್ಲ ಎಂದು ಗೊತ್ತಾಗಿದ್ದೇ ಆಲಿಯನ್ನೇ ಮುಗಿಸಿಬಿಡಲು ನಿರ್ಧರಿಸಿದ್ದಾನೆ. ಆದರೆ ಮಾಹಿನ್ ಬೇರೆಲ್ಲ ಪಾತಕಿಗಳಂತಲ್ಲ. ಇಂಥವನನ್ನು ತಾನು ಮುಗಿಸಬೇಕು ಎಂದು ನಿರ್ಧರಿಸಿಬಿಟ್ಟನೆಂದರೆ ಮೊದಲು ಆತನನ್ನು ಕರೆದು ರಾಜಿ ಮಾಡಿಕೊಂಡಂತೆ ನಟಿಸುತ್ತಾನೆ. ಕರೆದು ಬಿರಿಯಾನಿ ತಿನ್ನಿಸಿ 'ಇದರಲ್ಲಿ ನನ್ನ ಪಾತ್ರವೇನೂ ಇಲ್ಲ, ನಮ್ಮ ಹುಡುಗರು ಮಾಡಿದ ಕೊಲೆಯಿಂದ ನಂಗೆ ಕೆಟ್ಟ ಹೆಸರು ಬಂದಿದೆ. ಆ ಕಾರಣಕ್ಕೆ ಅವರನ್ನೆಲ್ಲ ಈಗ ದೂರ ಇಟ್ಟಿದ್ದೇನೆ. ನನಗೂ ನಿನಗೂ ಯಾಕೆ ದುಷ್ಮನಿ? ನಾವಿಬ್ಬರೂ ಭಾಯಿಬಾಯಿ ಥರ..' ಎಂದು ಕೈ ಮಿಲಾಯಿಸಿಬಿಟ್ಟನೆಂದರೆ– ಅಲ್ಲಿಗೆ ಮಾಹಿನ್ ಆತನನ್ನು ಮುಗಿಸುತ್ತಾನೆಂದರ್ಥ.

ಈ ರೀತಿ ದೋಸ್ತಿ ನಟಿಸಿದ ಮಾಹಿನ್ ಜೊತೆ ಕೂತು ಬಿರಿಯಾನಿ ತಿಂದ ಯಾರೊಬ್ಬರೂ ಈತನಕ ಬದುಕುಳಿದಿಲ್ಲ. ಮೊದಲು ಕಲಾಸಿಪಾಳ್ಯದ ಚಟ್ನಿ ಸಲೀಮ್‌ನನ್ನು ಮುಗಿಸಿದ. ತನ್ನನ್ನು ಕಲಾಸಿಪಾಳ್ಯದಲ್ಲಿ ಅಟ್ಟಾಡಿಸಿ ಹೊಡೆದಿದ್ದ ಚಟ್ನಿ ಸಲೀಮ್ ವಿರುದ್ಧ ಪಾರ್ವತಿಪುರದ ಮಾದೇಶ ಮತ್ತು ಬಾವಸೀನರನ್ನು ಎತ್ತಿಕಟ್ಟಿ ಅವರಿಗೆ ರೊಕ್ಕ ತಿನ್ನಿಸಿ ಕೊಲ್ಲಿಸಿದ ಇದೇ ಮಾಹಿನ್ ಅನಂತರ ತಿಲಕ್‌ನಗರದ ಶೇರೂನನ್ನು ಕೊಲ್ಲಿಸಿದ್ದ. ಅನಂತರ ಬಡೆ ಮಕಾನ್‌ನ ಅಜಗರ್ ತಮ್ಮ ರಿಯಾಜ್‌ನನ್ನು ಮುಗಿಸಿದ. ತೀರಾ ಇತ್ತೀಚಿಗೆ ಇದೇರೀತಿ ಮಾಹಿನ್ ರಾಜಿ ಮಾಡಿಕೊಂಡಿದ್ದು ರೇಪಿಸ್ಟ್ ನಸ್ರು ಅಣ್ಣ ಜನಿಯ ಜೊತೆ.

ಜನಿಯನ್ನು ತನ್ನ ಮನೆಗೆ ಕರೆಸಿಕೊಂಡು ಕೈತುಂಬಾ ಕಾಸು ಕೊಟ್ಟಿದ್ದ. ಬಿರಿಯಾನಿಯನ್ನೂ ತಿನ್ನಿಸಿದ್ದ. ಖುರಾನ್ ಮೇಲೆ ಪ್ರಮಾಣಮಾಡಿ ಇವತ್ತಿನಿಂದ ನಾನೂ ನೀನೂ ಭಾಯಿಭಾಯಿ ಎಂದು ಆಲಂಗಿಸಿಕೊಂಡಿದ್ದ. ನಂಬಿದ ಜನಿ ಯಾಮಾರಿಬಿಟ್ಟ. ಯಾವತ್ತೂ ಹುಷಾರಾಗಿದ್ದವನು ಒಬ್ಬೊಬ್ಬನೇ ಓಡಾಡಲಾರಂಭಿಸಿದ. ಇದನ್ನೇ ಕಾದಿದ್ದ ಮಾಹಿನ್ ತನ್ನ ಹುಡುಗರನ್ನು ಛೂ ಬಿಟ್ಟು ಜನಿಯ ಮನೆಗೇ ನುಗ್ಗಿಸಿ ಆತನ ಹೆಂಡತಿ ಮಕ್ಕಳ ಎದುರೇ ಕೊಚ್ಚಿ ಹಾಕಿಸಿದ್ದ.

ಇದು ಮಾಹಿನ್‌ನ ವಿಲಕ್ಷಣ ತಂತ್ರ. ಚಟ್ನಿ ಸಲೀಮ್ ಕೊಲೆಕೇಸ್‌ನಲ್ಲಿ ಫಿಟ್ ಆಗದೇ ಮಾಹಿನ್ ಬಚಾವಾದ. ಶೇರೂ ಕೊಲೆ ಕೇಸಿನಲ್ಲಿ ಶಿಕ್ಷೆ ಆಯಿತಾದರೂ ಜನಿಯ ಹತ್ಯೆಯಲ್ಲಿ ರೊಕ್ಕ ತಿಂದ ಪೊಲೀಸರು ಆತನ ಹೆಸರನ್ನು ಆರೋಪ ಪಟ್ಟಿಯಿಂದ ಕೈ ಬಿಟ್ಟಿದ್ದರು. ಅಜಗರ್ ತಮ್ಮ ರಿಯಾಜ್ ಹತ್ಯೆ ಯಲ್ಲಿ ಪೊಲೀಸರಿಗೆ ಪ್ರಸಾದ ತಿನ್ನಿಸಿ ಮಾಹಿನ್ ನುಣುಚಿಕೊಂಡ.


ಜಮೀರ್‌ಅಹ್ಮದ್

ಯಾವತ್ತು ಮಾಹಿನ್ ಮಂಡ್ಯ ಜೈಲಿಗೆ ಬಂದು ಆಲಿಯನ್ನು ಭೇಟಿ ಮಾಡಿ 'ನನಗೂ ಮಚ್ಚಿ ಶೌಕತ್ ಕೊಲೆಗೂ ಬಿಲ್‌ಕುಲ್ ಸಂಬಂಧವಿಲ್ಲ' ಎಂದು ಖುರಾನ್ ಮೇಲೆ ಪ್ರಮಾಣ ಮಾಡಿದನೋ ಆಲಿಗೆ ಅಲ್ಲಿಂದಲೇ ಅನುಮಾನ ಶುರುವಾಗಿತ್ತು. 'ನಾನೂ ನೀನು ಅಣ್ಣ ತಮ್ಮಂದಿರ ಥರ ಇದ್ದುಬಿಡೋಣ ನಿನಗೋಸ್ಕರನೇ ನಾನು ಬೈಲ್‌ಜಿಯಾ, ಸಮೀರ್, ನವಾಜ್‌ರನ್ನು ದೂರ ಇಟ್ಟಿದ್ದೇನೆ. ಈಗ ಅವರಿಗೂ ನನಗೂ ಸಂಬಂಧಾನೇ ಇಲ್ಲ, ಶೌಕತ್ ಕೊಲೆ ಕೇಸಲ್ಲಿ ನೀವು ಏನು ಬೇಕಾದ್ರೂ ಮಾಡ್ಕೊಳ್ಳಿ ನಾನು ಅದಕ್ಕೆ ಎಂಟ್ರಿ ಆಗೋಲ್ಲ' ಎಂದ ಮತ್ತೆಮತ್ತೆ ಖುರಾನ್ ಮೇಲೆ ಆಣೆ ಮಾಡಿ ಮಾಹಿನ್ ದೋಸ್ತಿ ನಟಿಸಿದ್ದ.

ಆ ನಂತರ ಮಂಡ್ಯ ಜೈಲಿನಿಂದ ಆಲಿ ಹೊರಬಂದ ನಂತರವೂ ಪದೇಪದೇ ಆಲಿಗೆ ಫೋನ್ ಮಾಡಿ 'ಬಿರಿಯಾನಿ ತಿನ್ನೋಣ ಬಾ' ಎಂದು ಮಾಹಿನ್ ಕರೆಯುತ್ತಿದ್ದ. ಮೊದಮೊದಲು ಇದನ್ನೆಲ್ಲ ನಂಬುತ್ತಿದ್ದ ಆಲಿಗೆ ಒಳಗೊಳಗೆ ಮಾಹಿನ್ ತನ್ನ ಹತ್ಯೆಗೆ ಮಾಡುತ್ತಿದ್ದ ಸಂಚು ಗಮನಕ್ಕೆ ಬಂದಿದೆ. ಶೌಕತ್‌ನ ಹಂತಕರನ್ನು ಜೈಲಿಗೇ ಹೋಗಿ ಮಾಹಿನ್ ಭೇಟಿ ಮಾಡಿ ಬಂದಿದ್ದ. ಅವರ ವಕೀಲರ ಖರ್ಚನ್ನೂ ಆತನೇ ನಿಭಾಯಿಸಿದ್ದ. ಆಲಿಯ ದುಷ್ಮನ್‌ಗಳಾದ ಪಂಟರ್ ಖಲೀಫ್, ನೀಲಸಂದ್ರದ ಫಾನವಾಜ್ (ಈತ ಜನಿ ಕೊಲೆ ಕೇಸಿನಲ್ಲಿದ್ದ) ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತನಾದ ಸಲ್ಲು ಎಂಬಾತನ ತಮ್ಮ ಮೆಹಬೂಬ್, ಸಮೀರ್, ನವಾಜ್ ಮುಂತಾದವರೆಲ್ಲರಿಗೂ ಜೈಲಿಗೆ ಬಿರಿಯಾನಿ ಕಳಿಸುವುದು, ಕೇಸಿನ ಖರ್ಚು ನೋಡಿಕೊಳ್ಳುವುದು ಮಾಡಿಕೊಂಡಿದ್ದೇ ಮಾಹಿನ್ ಆಲಿಯ ಜೊತೆ ದೋಸ್ತಿ ನಟಿಸುತ್ತಿದ್ದ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ್ದ ಕೌನ್ಸಿಲರ್ ಆಲಿಗೆ ಮಾಹಿನ್ ತನ್ನನ್ನು ಮುಗಿಸಲು ಹವಣಿಸುತ್ತಿದ್ದಾನೆಂಬುದು ಚೆನ್ನಾಗೇ ಗೊತ್ತಿತ್ತು. ನಿನ್ನೆಮೊನ್ನೆಯತನಕ ಮಾಹಿನ್ ಮತ್ತು ಆಲಿ ಶಾಸಕ ಜಮೀರ್ ಪಾಳಯದಲ್ಲೇ ಇದ್ದವರು. ಮಾಹಿನ್ ಖತರ್‌ನಾಕ್ ಬುದ್ಧಿ ನೋಡಿದ ಜಮೀರ್ ಸದ್ಯ ಆತನನ್ನು ಹೊರದಬ್ಬಿದ್ದಾರೆ. ಪಾಲಿಕೆ ಚುನಾವಣೆಯಲ್ಲಿ ಕಲಾಸಿಪಾಳ್ಯದಿಂದ ಪಕ್ಷೇತರನಾಗಿ ನಿಂತು ಬರಕತ್ತಾಗದೇ ಹತಾಶನಾಗಿದ್ದ ಮಾಹಿನ್‌ಗೆ ಹೇಗಾದರೂ ಮಾಡಿ ಆಲಿಯನ್ನು ಮುಗಿಸುವ ವಿಕೃತಿ ತಲೆಹೊಕ್ಕಿದೆ.


ದಿವಾನ್‌ಆಲಿ

ಆಲಿಯನ್ನು ಮುಗಿಸಿಬಿಟ್ಟರೆ ಶಾಸಕ ಜಮೀರ್ ಬೇರೆ ವಿಧಿಯಿಲ್ಲದೇ ತನಗೆ ಮಸ್ಕಾ ಹೊಡೆಯುತ್ತಾರೆ, ಜೊ
ಮಚ್ಚಿ ಶೌಕತ್‌ನ ಕೊಲೆಕೇಸಿನಿಂದ ತನ್ನ ಶಿಷ್ಯರನ್ನೂ ಬಚ
ಮಾಡಿದಂತಾಗುತ್ತದೆ. ಇಂಥ ಲೆಕ್ಕಹಾಕಿಯೇ ತನ್ನ ತ
ಸಲೀಮ್‌ನ ನೇತೃತ್ವದಲ್ಲಿ ನೀಲಸಂದ್ರ ಪಾನವಾಜ್, ಬಿ
ನಗರದ ಬೈಲ್‌ಜಿಯಾ, ಗುರಪ್ಪನಪಾಳ್ಯದ ಬಾಬ, ಅಜ
ನಗರದ ಮೆಹಬೂಬ್ ಮುಂತಾದ ಅನಾಹುತಕಾರಿ ಹ
ಪಡೆಯನ್ನೇ ರೆಡಿಮಾಡಿದ್ದಾನೆ. ಅದೇನಾಯಿತೋ
ಹೊತ್ತಿಗೆ ಆಲಿಯ ರಕ್ಷಣೆಗೆಂದು ಸರ್ಕಾರ ನೇಮಿ
ಇಬ್ಬರು ಬಂದೂಕುಧಾರಿ ಪೊಲೀಸರ ಬೆಂಗಾವ
ಕಮೀಷನರ್ ಬಿದರಿ ವಾಪಸ್ಸು ಪಡೆದಿದ್ದಾರೆ. ಬಹ
ಆಲಿಯ ಹಿನ್ನೆಲೆ ಗೊತ್ತಿದ್ದು ಇಲಾಖೆಗೆಲ್ಲಿ ಮುಜ
ವಾಗುತ್ತೋ ಎಂದು ಹಾಕಿದ್ದ ಗನ್‌ಮ್ಯಾನ್‌ಗಳನ್ನು ಕಮೀಷ
ವಾಪಸ್ಸು ಪಡೆದಿರಬೇಕು. ಹೊಂಚುಹಾಕಿದ್ದ ಮಾಹಿ
ಇಷ್ಟೇ ಸಾಕಿತ್ತು. ಕಳೆದ ಒಂದು ತಿಂಗಳಿಂದ ಆಲಿ ಎ
ಹೋಗುತ್ತಾನೆ. ಯಾವ ಗಾಡಿಯಲ್ಲಿ ಓಡಾಡುತ್ತಾನೆ. ಆ
ಕೇಸುಗಳು ಯಾವ್ಯಾವ ಕೋರ್ಟನಲ್ಲಿದೆ ಇತ
ಪ್ರತಿಯೊಂದನ್ನೂ ಹುಡುಗರನ್ನು ಬಿಟ್ಟು ಕಲೆಹಾಕಿದ
ತಿಂಗಳ ಹಿಂದೆ ಕಾವೇರಿ ಭವನದ ಹಿಂದಿದ್ದ ಸೆ
ಕೋರ್ಟ್‌ಗೆ ಹಳೇ ಕೇಸೊಂದಕ್ಕಾಗಿ ಆಲಿ ಬಂದಾಗ ಮು
ರೇಜರ್ ಮಾರ್ಕಿದ್ದ ರೌಡಿಯೊಬ್ಬ ವಕೀಲರ ವೇಷಧ
ತನ್ನನ್ನು ಹಿಂಬಾಲಿಸುತ್ತಿದ್ದದ್ದು ಆಲಿಯ ಕಣ್ಣಿಗೆ ಬಿ
ಆಗಲೇ ಹುಷಾರಾದ ಆಲಿಗೆ ಮಾಹಿನ್‌ನ ಖತರ್‌ನಾಕ್ ತ
ಸುಳಿವು ಸಿಕ್ಕಿದೆ.

ಮೊನ್ನೆ ಅಂದರೆ ನವೆಂಬರ್ 2
ಸೋಮವಾರ ಮತ್ತೆ ಸೆಷನ್ಸ್ ಕೋರ್ಟ್
ಕೇಸಿತ್ತಾದ್ದರಿಂದ ಈ ಬಾರಿ ಆಲಿ ಒಬ
ತನ್ನ ಡ್ರೈವರ್ ಜೊತೆಗೆ ಕೋರ್ಟ್‌ಗೆ ಬ
ದ್ದಾನೆ. ಆದರೆ ಮಾಮೂಲಿನಂತೆ ಪಾರ್ಕಿ
ಸೆಲ್ಲಾರ್‌ನಲ್ಲಿ ಕಾರನ್ನು ನಿಲ್ಲಿಸದೇ ಕೋಟ
ಎದುರಿನ ರಸ್ತೆಯಲ್ಲೇ ಕಾರನ್ನು ಹಾಕಿ ಒಬ
6ನೇ ಫಾಸ್ಟ್‌ಟ್ರಾಕ್ ಕೋರ್ಟ್ ಹಾಲಿಗೆ ನಡೆ
ಬಂದಿದ್ದಾನೆ. ಆ ಹೊತ್ತಿಗಾಗಲೇ ಮಾಹಿ
ಮುಹೂರ್ತ ಗೊತ್ತು ಮಾಡಿದ್ದ. ಪಾರ್ಕಿಂಗ
ಎರಡನೇ ಮಹಡಿಯ ತುಂಬ ಒಂದು ಡಜ
ಹುಡುಗರನ್ನು ನಿಲ್ಲಿಸಿದ್ದ. ಕೆಳಮಹಡಿಯಲ್ಲೂ ಹಂತಕ
ಅಣಿಯಾಗಿದ್ದರು. ಮತ್ತೊಂದು ತಂಡದಲ್ಲಿದ್ದ ಹತ್ತಕ್ಕೂ ಹೆ
ಮಂದಿ ಕೋರ್ಟ್ ಹಾಲ್‌ನಲ್ಲೇ ಆಲಿಯನ
ಸುತ್ತುವರೆದಿದ್ದಾರೆ.ಯಾವತ್ತೂ ಕಾಣದಿದ್ದ ನಿಗೂಢ ವ್ಯಕ್ತಿ
ತನ್ನನ್ನು ಹಿಂಬಾಲಿಸುತ್ತಿದ್ದದ್ದನ್ನು ಗಮನಿಸಿದ ಆಲಿಗೆ ಗುಮ
ನಿಜವಾಗಲಾರಂಭಿಸಿದೆ. ಕೆಳಮಹಡಿಯಲ್ಲಿ ಮಾಹಿನ್
ಲಂಗಡಾ ಸಲೀಮ್ ಜೊತೆ 20 ಮಂದಿ ರೌಡಿಗಳ ಜ
ಹೊಂಚು ಹಾಕಿರುವುದು ಕಣ್ಣಿಗೆ ಬಿದ್ದಿದೆ. ಬಹು
ಪಾರ್ಕಿಂಗ್‌ನಲ್ಲೇ ಆಲಿಯನ್ನು ಮುಗಿಸಲು ಮಾಹಿನ್ ಸ್ಕೆಚ್‌ಹಾ
ಎಸ್ಕೇಪಾಗಲು ಅವಕಾಶವೇ ಆಗದಂತೆ ಮೂರೂ ಮಹಡಿಗ
ಹುಡುಗರನ್ನು ಮಾಹಿನ್ ರೆಡಿಮಾಡಿಬಿಟ್ಟಿದ್ದ. ಕೈ ಇಟ್ಟಮೇ
ಯಾವ ರೀತಿಯಲ್ಲೂ ಆಲಿ ಬಚಾವಾಗಬಾರದು!

ಮಾಹಿನ್‌ನ ಹಂತಕ ಪಡೆ ತನ್ನನ್ನು ಸುತ್ತುವರೆದಿ
ಪಕ್ಕಾ ಆಗಿದ್ದೇ ಆಲಿ ಕೋರ್ಟ್ ಹಾಲ್‌ಗೆ ಓಡಿದ್ದಾ
ಅಲ್ಲಿಂದಲೇ ಎಸಿಪಿ ಟೈಗರ್ ಅಶೋಕ್‌ಕುಮಾರ್‌ಗೆ ಫೋ
ಮಾಡಿದ್ದಾನೆ. ಅಚಾನಕ್ಕಾಗಿ ಅವತ್ತು ಸೆಷನ್ಸ್ ಕೋರ್ಟ್
ಬಂದಿದ್ದ ಅಶೋಕ್‌ಕುಮಾರ್ ಸ್ಥಳಕ್ಕೆ ಧಾವಿಸಿ ಬಂ
ಸುತ್ತ ನಿಂತ ರೌಡಿ ಪಡೆಯನ್ನು ಗಮನಿಸಿದ್ದಾ
ತಕ್ಷಣವೇ ಅಲಸೂರು ಗೇಟ್ ಇನ್ಸ್‌ಪೆಕ್ಟ
ಆನಂದ್‌ಗೆ ಫೋನ್‌ಮಾಡಿ ಪೊಲೀಸರ
ಕರೆಸಿಕೊಂಡಿದ್ದಾರೆ. ಕೆಲವೇ ಕ್ಷಣದಲ್ಲಿ ಸ್ಥಳಕ್ಕೆ ಬ
ಅಲಸೂರು ಗೇಟ್ ಪೊಲೀಸರಿಗೂ ಅ
ಹೊಂಚು ಹಾಕುತ್ತಿದ್ದ ಮಾಹಿನ್, ಆತನ ತ
ಸಲೀಮ್ ಮತ್ತು ತಂಡವನ್ನು ತೋರಿಸಿದ್ದಾ
ಬಹುಶಃ ಪೊಲೀಸರು ಮನಸ್ಸು ಮಾಡಿ
ಇಡೀ ಮಾಹಿನ್‌ಗ್ಯಾಂಗ್ ಅನ್ನು ಹಿಡಿ
ಹಾಕಬಹುದಿತ್ತು. ಸರಿಸುಮಾರು ಐವ
ಮಂದಿಯಿದ್ದ ಮಾಹಿನ್ ಪಡೆಯ ಮುಂದೆ ಮೂರ್ನಾ
ಮಂದಿಯಿದ್ದ ಪೊಲೀಸರು ಯಾವ ಲೆಕ್ಕ?


ಆಲಿಯನ್ನು ರಕ್ಷಿಸಿ ಠಾಣೆಗೆ ಕರೆತರುವಷ್ಟರಲ್ಲಿ ಪೊ
ಸರಿಗೆ ಸಾಕುಸಾಕಾಗಿ ಹೋಗಿತ್ತು. ಆಲಿ ಸದ್ಯ ಮಾಹಿ
ಗ್ಯಾಂಗ್ ವಿರುದ್ಧ ದೂರು ನೀಡಿದ್ದಾನೆ. ತನ್ನ ವಿರುದ್ಧ ದೂ
ದಾಖಲಾಗಿದ್ದು ಗೊತ್ತಾಗಿದ್ದೇ ತಡ, ಮಾಹಿನ್ ತನ್ನ ಹೆಂ
ಮಕ್ಕಳ ಸಮೇತ ಎಸ್ಕೇಪಾಗಿದ್ದಾನೆ. ಆತನ ತಮ್ಮ ಲಂಗ
ಸಲೀಮ್ ಕೂಡ ಊರುಬಿಟ್ಟಿದ್ದಾನೆ. ಆಲಿಯ ಆಯು
ಇನ್ನೂ ಗಟ್ಟಿಯಿತ್ತೇನೋ? ಬೆಂಗಳೂರು ಮಹಾನ
ಪಾಲಿಕೆಯ ಕೌನ್ಸಿಲರ್ ಒಬ್ಬನ ಹತ್ಯೆ ತಪ್ಪಿದಂತಾಗಿದೆ.

● ರಾ.ಸೋಮನಾಥ

ತುಮಕೂರು ವಿವಿ ಅವಾಂತರ ಭ್ರಷ್ಟರ ರಕ್ಷಕ ಪೇಜಾವರರಿಗೆ ಡಾಕ್ಟರೇಟು!

ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಸಿ. ಶರ್ಮಾನ ಅವಾಂತರಗಳ ಖಾತೆಗೆ ಮತ್ತೊಂದು ಅಸಹ್ಯ ಜಮೆಯಾಗಿದೆ. ದಲಿತ ವಿದ್ಯಾರ್ಥಿಗಳಿಗೆ ದ್ರೋಹ ಬಗೆಯುತ್ತಲೇ ರಾಜ್ಯಪಾಲರಿಗಿಂತಲೂ ಅಧಿಕ ಸಂಬಳ ಪಡೆಯುವ ಮೂಲಕ ಕುಖ್ಯಾತಿ ಹೊಂದಿದ್ದವನೀತ. ಇಂಥಾ ಶರ್ಮಾ ಮತೀಯವಾದದ ಮೂಟೆಯಂತಿರುವ ಪೇಜಾವರ ಶ್ರೀಗಳಿಗೆ ಗೌರವ ಡಾಕ್ಟರೇಟು 'ದಾನ' ಮಾಡಿದ್ದಾನೆ!

ಈ ವಿಚಾರ ಕಳೆದ ತಿಂಗಳ ಕೊನೆಯಲ್ಲಿ ಹೊರಬಿದ್ದಿದೆ. ಶರ್ಮಾನ ದರ್ಬಾರಿನಲ್ಲಿ ಪೇಜಾವರರನ್ನೂ ಸೇರಿಸಿ ಮೂರು ಮಂದಿಯ ಮುಡಿಗೆ ಡಾಕ್ಟರೇಟು ಏರಿಸಲಾಗಿದೆ. ಈತನ ಹಿನ್ನೆಲೆ ಕಾರ್ಯವೈಖರಿಯ ಅರಿವಿರುವವರಿಗೆ ಈ ಡಾಕ್ಟರೇಟುಗಳ ಹಿಂದಿರುವ ವಿವಿಧ ಹಿತಾಸಕ್ತಿಗಳ ಗ್ರಹಿಕೆಯೂ ಇರುತ್ತದೆ. ಆದರೆ ಪೇಜಾವರರಿಗೆ ಡಾಕ್ಟರೇಟು ದಾನಮಾಡಿರುವುದು ಅನೇಕ ಅನುಮಾನ, ಅಸಹ್ಯ ಹಾಗೂ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಪೇಜಾವರರ ಬಗ್ಗೆ ಬಹುಹಿಂದಿನಿಂದಲೂ ಕೋಮುವಾದಿಗಳ ಪರವಿರುವರೆಂಬ ತಕರಾರುಗಳಿದ್ದವು. ಬರುಬರುತ್ತಾ ಖುದ್ದು ಅವರೇ ಕೋಮುವಾದಿಯೆಂಬ ಅಂಶ ಜಾಹೀರಾಯಿತು. ಖಾದಿ ತೊಟ್ಟ ಮಂದಿ ಖಾಯಿಯಂಥ ಅಂತಃಕರಣ ಹೊಂದಿರಬೇಕು ಅಂತೊಂದು ಮಾತಿದೆ. ಅಂಥ ಅಂತಃಕರಣದ ಕಣ್ಣಿಗೆ ಇಡೀ ಜಗತ್ತು ಸ್ಪಷ್ಟವಾಗಿ, ತನ್ನದೇ ಎಂಬಂತೆ ಕಾಣಿಸುತ್ತದೆ ಹಾಗೂ ಅಲ್ಲಿನ ಸಂಪರ್ಕಗಳು ತನ್ನವೆಂಬಂತೆ ಭಾಸವಾಗುತ್ತದೆಂಬುದು ಅದರ ಒಳಾರ್ಥ.

ಆದರೆ ಪೇಜಾವರರ ಹಿಂದೂತ್ವದ ಕಾಮಾಲೆಕಣ್ಣಿಗೆ ಇಡೀ ಸಮಾಜ ಜಾತಿ, ಧರ್ಮಗಳ ಆಧಾರದಲ್ಲಿ ಕಿತ್ತೆದ್ದು ಕಾಣಿಸುತ್ತದೆ. ಅವರ ಮನಸ್ಸು ಅದನ್ನೇ ಸಂಭ್ರಮಿಸುತ್ತದೆ. ಧರ್ಮದ ಹೆಸರಲ್ಲಿ ಅಮಾಯಕರು ತಲ್ಲಣಿಸಿದರೆ, ಶ್ರೀಗಳ ಸಕಲ ಶಕ್ತಿಗಳೂ ಆರೋಪಿಗಳ ಪರ ವಕಾಲತ್ತು ವಹಿಸುತ್ತವೆ!

ಇನ್ನು ಮೊನ್ನೆ ಯಡಿಯೂರಪ್ಪ ಭೂಮಿ ನುಂಗಿ ಸಿಕ್ಕಿಬಿದ್ದಾಗಿನ ಸಂದರ್ಭದಲ್ಲಿ ಪೇಜಾವರರು ನಡೆದುಕೊಂಡ ರೀತಿ ಅಸಹ್ಯ ಹುಟ್ಟಿಸುವಂತಿದೆ. ತಾನೊಬ್ಬ ಸ್ವಾಮೀಜಿ ಎಂಬುದನ್ನೂ ಮರೆತಂತೆ ವರ್ತಿಸಿ ಭ್ರಷ್ಟ ಯಡ್ಡಿಯ ಪರ ನಿಂತ ಪೇಜಾವರರು 'ಆರೋಪ ಸಾಬೀತಾಗುವವರೆಗೂ ಯಡಿಯೂರಪ್ಪ ವಿರುದ್ಧ ಕ್ರಮ ಬೇಡ' ಎಂಬರ್ಥದ ಮಾತುಗಳನ್ನಾಡಿ ಭಟ್ಟಂಗಿತನ ಮೆರೆದಿದ್ದರು.

ಅವಿವೇಕಿ ಶರ್ಮಾ ಇಂಥಾ ಆಸಾಮಿಗೆ ಡಾಕ್ಟರೇಟು ದಾನ ಮಾಡಿದ್ದಾನೆ!

ಆದರೆ ಕೊಡುವವರ ಜಾತಕ ಹೇಗೆ ಇರಲಿ, ಡಾಕ್ಟರೇಟಿಗೊಂದು ಘನತೆ ಇದೆಯಲ್ಲಾ?

ಪೇಜಾವರರ ವರ್ತನೆಗಳಲ್ಲೇ ಎಂಥಾ ವೈರುಧ್ಯ, ಯಾಮಾರಿಸುವಿಕೆಗಳಿವೆಯೋ ನೋಡಿ. ತೀರಾ ಇವರದ್ದೇ 'ಅಧಿಪತ್ಯ'ವಿರುವ ಉಡುಪಿ ಕೃಷ್ಣ ಮಠದಲ್ಲಿ ಇಂದಿಗೂ ಪಂಕ್ತಿಭೇದ ಜಾರಿಯಲ್ಲಿದೆ. ಈ ಅಸಹ್ಯವನ್ನು ನಿವಾರಿಸಲು ಒಂದು ಕ್ಷಣವೂ ಮನಸ್ಸು ಮಾಡದ ಪೇಜಾವರರು ದಲಿತ ಕೇರಿಗಳಿಗೆ ನುಗ್ಗಿ ದಲಿತೋದ್ಧಾರಕನ ಪೋಸು ಕೊಡುತ್ತಾರೆ!

ಪಾಪಿ ಭಜರಂಗಿಗಳು ತಮ್ಮ ಮಗ್ಗುಲಲ್ಲೇ ಅನ್ಯಧರ್ಮೀಯರ ಮೇಲೆ ದಾಳಿ ನಡೆಸಿದರೆ ಪೇಜಾವರರ ಮನುಷ್ಯತ್ವ ಮಿಸುಕುವುದಿಲ್ಲ. ಉತ್ತರ ಕರ್ನಾಟಕದಲ್ಲಿ ನೆರೆಗೆ ಸಿಕ್ಕು ಕಂಗಾಲಾದ ಮಂದಿ ಈ ಕ್ಷಣಕ್ಕೂ ಸೂರಿಲ್ಲದೆ, ಅರೆಹೊಟ್ಟೆಯಲ್ಲಿ ನರಳುತ್ತಿದ್ದರೆ ಇವರಿಗೆ ಕರುಣೆ ಹುಟ್ಟುವುದಿಲ್ಲ. ಈ ನಿರಾಶ್ರಿತರ ಹೆಸರಲ್ಲೇ ಹೊಡೆದ ಹಣವನ್ನು ನುಂಗಿ ನೊಣೆದ ಯಡಿಯೂರಪ್ಪನನ್ನು ಸಣ್ಣಗೆ ಗದರಬೇಕೆಂತಲೂ ಅನಿಸುವುದಿಲ್ಲ. ಆದರೆ ಯಡಿಯೂರಪ್ಪ ಕುರ್ಚಿಯಿಂದ ಎಗರಿ ಬೀಳುತ್ತಾರೆಂದಾಕ್ಷಣ ಸ್ವಾಮಿಗಳ ಮನಸ್ಸು ಕನಿಕರಿಸಿ ಮುಲುಗುಡಲಾರಂಭಿಸುತ್ತದೆ. ಇಂಥವರಿಗೆ ಡಾಕ್ಟರೇಟು ಕೊಟ್ಟ ಶರ್ಮಾನ ಬುದ್ಧಿಗೆ ಅದ್ಯಾವ ಕಿಲುಬು ಹತ್ತಿದೆಯೋ ಕೃಷ್ಣ ಪರಮಾತ್ಮನೇ ಬಲ್ಲ!

ಸದ್ಯ ಕುಲಪತಿ ಶರ್ಮಾ ಪೇಜಾವರರಿಗೆ ಗೌರವ ಡಾಕ್ಟರೇಟು ಕೊಡಲಿರುವುದರ ವಿರುದ್ಧ ತುಮಕೂರಿನಲ್ಲಿ ಹೋರಾಟದ ಕಾವೇರುತ್ತಿದೆ.

ಈ ಕ್ರಮದ ವಿರುದ್ಧ ತುಮಕೂರಿನ ದಲಿತ ಸಂಘರ್ಷ ಸಮಿತಿ ನಿರ್ಣಾಯಕ ಹೋರಾಟಕ್ಕೆ ಧುಮುಕಿದೆ. ಪೇಜಾವರರೊಬ್ಬ ಮತೀಯವಾದಿ ಸ್ವಾಮೀಜಿ. ಅವರಿಗೆ ಡಾಕ್ಟರೇಟು ಕೊಡುವ ಯಾವ ಅಗತ್ಯವೂ ಇಲ್ಲ ಎಂಬುದು ಪ್ರತಿಭಟನಾಕಾರರ ತಕರಾರು. ಇದು ರಾಜ್ಯದ ಎಲ್ಲಾ ಪ್ರಜ್ಞಾವಂತರ ತಕರಾರೂ ಹೌದು!

ಉಡುಪಿಯ ಕೃಷ್ಣ ದೇವಾಲಯವನ್ನು ಕಬ್ಜಾ ಮಾಡಿಕೊಂಡಿರುವ ಪೇಜಾವರರು ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗೆ ನಾಮ ತೀಡಿದ್ದಾರೆ. ಕೃಷ್ಣ ದೇವಾಲಯದಲ್ಲಿ ತಿಂಗಳೊಂದಕ್ಕೆ 3 ಕೋಟಿ 80 ಲಕ್ಷಕ್ಕೂ ಆದಾಯ ಬರುತ್ತದೆ. ಸನ್ಯಾಸಿ ಯಡಿಯೂರಪ್ಪನವರು ಇಂಥಾ ಅಗಾಧ ದೇವಸ್ಥಾನವನ್ನು ಡಿನೋಟಿಫೈ ಮಾಡಿ ಪೇಜಾವರರ ಮುಡಿ ತುಂಬಿದ್ದಾರೆ. ಜೊತೆಗೆ ಪೇಜಾವರರು ಲಾಗಾಯ್ತಿನಿಂದಲೂ ಹಿಂದೂ ಮಹಾಸಭಾಗಳ ಮೂಲಕ ಮೀಸಲಾತಿಯನ್ನು ವಿರೋಧಿಸಿಕೊಂಡೇ ಬಂದವರು. ಆ ಮೂಲಕ ಹಿಂದುಳಿದ, ದಲಿತ ವರ್ಗಗಳ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬರೆ ಎಳೆದವರು. ಅಷ್ಟಕ್ಕೂ ಈ ಸ್ವಾಮಿಗೆ ಗಟ್ಟಿಯಾದುದೊಂದು ಅಜೆಂಡಾವೇ ಇಲ್ಲ. ಅದಿದ್ದರೂ ಲಾಭನಷ್ಟಗಳ ಆಧಾರದಲ್ಲೇ ಹೊರಹೊಮ್ಮುತ್ತವೆ- ಇವು ಇಡೀ ಪ್ರತಿಭಟನೆಯ ಟಾರ್ಗೆಟ್ ಅಂಶಗಳು. ಅಂದಹಾಗೆ ಈ ಪ್ರತಿಭಟನೆ ಇದೇ 4 ನೇ ತಾರೀಖಿನಂದು ವಿವಿ ಆವರಣದಲ್ಲಿ ನಡೆಯಲಿದೆ.

ಈ ಪ್ರತಿಭಟನೆಗೆ ಪ್ರಜಾಪ್ರಭುತ್ವದ ಆಶಯಗಳನ್ನು ಆರಾಧಿಸುವ ಎಲ್ಲರ ಬೆಂಬಲವಿದೆ. ದುರಂತವೆಂದರೆ ಸಾಹಿತಿ, ಪ್ರಗತಿಪರ ಅನ್ನಿಸಿಕೊಂಡಿರುವ ಕೆ.ಬಿ. ಸಿದ್ದಯ್ಯನವರಂತಹ ಆರಾಮಕುರ್ಚಿ ಬುದ್ಧಿಜೀವಿಗಳು ಪ್ರತಿಭಟನೆಯ ವಿರುದ್ಧವೇ ಅಪಸ್ವರ ಹಾಡುತ್ತಿದ್ದಾರೆ.

ಪ್ರತಿಭಟನೆಯ ಕಿಚ್ಚು ಇಂಥಾದ್ದರಿಂದೆಲ್ಲ ಬಿರುಸು ಕಳೆದುಕೊಳ್ಳದಿರಲಿ.

● ಸಂತೋಷ್

ಐಲು ವಿಸಿ ಶರ್ಮಾ!



ತುಮಕೂರು ವಿವಿಯ ಗ್ರಹಚಾರ ನೆಟ್ಟಗಿಲ್ಲವೋ, ಅದರ ವಿದ್ಯಾರ್ಥಿಗಳ ನಸೀಬೇ ಹಳ್ಳ ಹಿಡಿದಿದೆಯೋ ಗೊತ್ತಿಲ್ಲ. ವಿವಿಯ ಕುಲಪತಿ ಸ್ಥಾನದಲ್ಲಿ ಕೂರೋ ಮಂದಿ ಒಂದಿಲ್ಲೊಂದು ಭಾನಗಡಿ ಸೃಷ್ಟಿಸುತ್ತಲೇ ಇರುತ್ತಾರೆ. ಆದುದರಿಂದಲೇ ದಲಿತ ಪರ ಕಾಳಜಿಯಿಂದ ಅಸ್ತಿತ್ವ ಪಡೆದ ವಿವಿ ಎತ್ತೆತ್ತಲೋ ಹೆಜ್ಜೆ ಹಾಕುತ್ತಿದೆ.


ಈಗಿನ ಕುಲಪತಿ ಶರ್ಮಾ ಪಕ್ಕಾ ಐಲು ಆಸಾಮಿ. ಜಾತಿಯಲ್ಲಿ ಬ್ರಾಹ್ಮಣ. ಈತನ ಮನಸ್ಸೂ ಕೂಡಾ ದಲಿತ ವಿರೋಧಿ ಎಂಬುದನ್ನು ಆತನ ಕಾರ್ಯವೈಖರಿಗಳೇ ಸಾಬೀತುಪಡಿಸುತ್ತವೆ. ಈತ ಈಗ್ಗೆ ಒಂದೂವರೆ ವರ್ಷದ ಹಿಂದೆ ಅಧಿಕಾರಕ್ಕೇರುತ್ತಲೇ ಪ್ರತೀ ವಿಭಾಗದಲ್ಲಿ ಜಾರಿಯಲ್ಲಿದ್ದ ಶೇಕಡಾ. 65 ರಷ್ಟು ಮೀಸಲಾತಿಯನ್ನು 31 ಕ್ಕೆ ಇಳಿಸಿದ. ಈ ಭಾಗದ ಪ್ರಗತಿಪರರು ಸತತ 22 ದಿನಗಳ ಕಾಲ ಧರಣಿ ಮಾಡಿ ಇಕ್ಕಿದ ಬಳಿಕ 10 ಪರ್ಸೆಂಟ್ ಹೆಚ್ಚಿಸಿದ್ದನಷ್ಟೆ! ದಲಿತ ವಿದ್ಯಾರ್ಥಿಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಕಾಡುವ ಈತ ಮಹಿಳಾ ಹಾಸ್ಟೆಲ್ ಅನ್ನು ಕರಾಬು ಜಾಗವೊಂದಕ್ಕೆ ವರ್ಗಾಯಿಸಿದ್ದಾನೆ. ಅಲ್ಲಿ ಹೆಣ್ಮಕ್ಕಳು ಪಡುವ ಪಾಡು ಈತನಿಗೆ ತಾಕುತ್ತಲೇ ಇಲ್ಲ ಇದಲ್ಲದೆ ವಿವಿಯಲ್ಲಿ ಹೆಜ್ಜೆಹೆಜ್ಜೆಗೂ ಮೂಲಭೂತ ಸಮಸ್ಯೆಗಳನ್ನೇಕವು ತಾಂಡವವಾಡುತ್ತಿವೆ. ಅವುಗಳನ್ನೆಲ್ಲ ಸರಿಪಡಿಸಬೇಕಾದ ಶರ್ಮಾ ಕರ್ನಾಟಕದ ವಿವಿಗಳ ಇತಿಹಾಸವೇ ಕಂಡು ಕೇಳರಿಯದಂತೆ ತಿಂಗಳ ಸಂಬಳ ಪಡೆಯುತ್ತಿದ್ದಾನೆ. ಮಾಮೂಲಿ ಎಲ್ಲಾ ವಿಸಿಗಳ ಸಂಬಳ ಎಪ್ಪತ್ತು ಸಾವಿರದಷ್ಟಿದ್ದರೆ, ಈ ಭೂಪನ ಸಂಬಳ 2 ಲಕ್ಷದ ಗಡಿ ದಾಟಿದೆ! ಇಂಥಾ ಧನದಾಹಿಯಿಂದ ಇನ್ನೆಂಥಾ ದಕ್ಷತೆಯನ್ನು ನಿರೀಕ್ಷಿಸಬಹುದು?

ಕುಲಪತಿಗಳ ನಿವೃತ್ತಿ ವಯಸ್ಸು ಹೆಚ್ಚಳ ಜಾತಿಬಂಧುಗಳನ್ನು ಪೊರೆಯುವ ಹಂಬಲ!

ಎಲ್ಲೆಲ್ಲಿ ಸ್ವಜಾತಿ ಪ್ರೇಮ ಹರಡಬಹುದೋ ಅದನ್ನೆಲ್ಲ ಯಡಿಯೂರಪ್ಪ ಮತ್ತವರ ಚೇಲಾ ಪಡೆ ನಿಯತ್ತಿನಿಂದ ಮಾಡಿಮುಗಿಸುತ್ತಿದೆ. ಸರ್ಕಾರ ಉದುರಿದ ಬಳಿಕವೂ ಆಯಕಟ್ಟಿನ ಜಾಗಗಳಲ್ಲಿ ತಮ್ಮದೊಂದು ಹಿಡಿತವಿರಬಹುದೆಂಬ ಲೆಕ್ಕ ಇವರುಗಳ ನೆತ್ತಿಗೇರಿದೆ. ದುರಂತವೆಂದರೆ ಕರ್ನಾಟಕದ ಪ್ರಮುಖ ವಿವಿಗಳೇ ಈ ಜಾತಿ ಸನ್ನಿಯ ಅಖಾಡಗಳಾಗಿ ಬದಲಾಗಿವೆ.

ಸೂಕ್ಷ್ಮವಾಗಿ ವಿವಿಗಳತ್ತಲೊಮ್ಮೆ ಗಮನಹರಿಸಿದರೆ ಲಿಂಗಾಯತರ ಕಲರವ ವಿಪರೀತವಾಗಿದೆ. ಸದ್ಯ ರಾಜ್ಯದ ಎಂಟು ವಿವಿಗಳಲ್ಲಿ ಲಿಂಗಾಯತರನ್ನೇ ಕುಲಪತಿಗಳನ್ನಾಗಿ ಕೂರಿಸಲಾಗಿದೆ. ಇಷ್ಟಾದರೂ ಯಡ್ಡಿಯ ಜಾತಿಪ್ರೇಮ ಇಂಗಿದ ಲಕ್ಷಣಗಳಿಲ್ಲ. ಈ ವಿಚಾರ ಸಚಿವ ಸಂಪುಟ ಸಭೆಯಲ್ಲಿ ವಿವಿ ಕುಲಪತಿಗಳ ನಿವೃತ್ತಿ ವಯಸ್ಸು ಏರಿಸುವ ನಿರ್ಧಾರದೊಂದಿಗೆ ಜಾಹೀರಾಗಿದೆ.

ಸದ್ಯ ಕುಲಪತಿಗಳ ನಿವೃತ್ತಿ ವಯಸ್ಸು 65 ಅಂತ ನಿಗದಿಯಾಗಿತ್ತು. ಯಡಿಯೂರಪ್ಪನ ದಯೆಯಿಂದ ಅದು 67ಕ್ಕೆ ವಿಸ್ತರಿಸಲ್ಪಟ್ಟಿದೆ. ಅರೇ ಇದರಲ್ಲಿ ಜಾತಿಪ್ರೇಮದ ವಿಚಾರವೇನು ಬಂತು ಅಂತಿರೇನೋ? ಆದರೆ, ಇದರಲ್ಲಿ ಪಕ್ಕಾ ಜಾತಿ ವಿಷ ಹರಡಿಕೊಂಡಿರುವುದು ಕಟುಸತ್ಯ!



ಇಂತಹುದೊಂದು ನಿರ್ಧಾರವನ್ನು ಕೈಗೊಂಡ ಯಡಿಯೂರಪ್ಪನವರ ಅವಸರವೇ ಅತೀ ಅನುಮಾನ ಮೂಡಿಸುವಂತಿದೆ. ಇನ್ನೇನು ಕುರ್ಚಿಯಿಂದ ಕಳಚಿ ಬಿದ್ದರು ಅಂದುಕೊಳ್ಳುತ್ತಲೇ ಸಾವರಿಸಿಕೊಂಡು ಬಚಾವಾದರು. ಯಡಿಯೂರಪ್ಪ ಅಖಂಡ ಹತ್ತು ದಿನಗಳ ರಾಜಕೀಯ ಬೇಗುದಿಯಿಂದ ಬಸವಳಿದು 'ಗೆದ್ದು' ಬಂದ ಯಡ್ಡಿ ನಡೆಸಿದ ಮೊದಲ ಸಚಿವ ಸಂಪುಟ ಸಭೆ ಅದು. ಇದೇ ಸಭೆಯಲ್ಲಿ ಯಡಿಯೂರಪ್ಪ ಏಕಾಏಕಿ ಕುಲಪತಿಗಳ ನಿವೃತ್ತಿ ವಯಸ್ಸು ಹೆಚ್ಚಿಸುವ ನಿರ್ಧಾರವನ್ನು ಹೊರಗೆಡವಿದ್ದಾರೆ.

ಇದೇ ಅನುಮಾನ ಹೊಗೆಯಾಡಲು ಪ್ರಮುಖ ಕಾರಣ. ಇದರ ಬೆನ್ನತ್ತಿದರೆ ಮೇಲ್ನೋಟದ ನಿರ್ಧಾರದ ಹಿಂದಿರುವ ಕಪಟಗಳೆಲ್ಲ ಬೆತ್ತಲಾಗುತ್ತವೆ. ಮೊದಲೇ ಹೇಳಿದಂತೆ ರಾಜ್ಯದ 8 ವಿವಿಗಳಲ್ಲಿ ಲಿಂಗಾಯತ ಕುಲಪತಿಗಳೇ ದರ್ಬಾರು ನಡೆಸುತ್ತಿದ್ದಾರಲ್ಲ? ಅವರೆಲ್ಲರ ಹಿತ ಕಾಯುವುದಷ್ಟೇ ಈ ನಿವೃತ್ತಿ ವಯಸ್ಸು ಹೆಚ್ಚಳದ ಹೆಚ್ಚುಗಾರಿಕೆ.

ದಾವಣಗೆರೆ ವಿವಿಯ ಇಂದುಮತಿ, ಬೀದರ್ ಪಶು ವೈದ್ಯಕೀಯ ವಿವಿಯ ಡಾ.ಸುರೇಶ್, ಧಾರವಾಡ ವಿವಿಯ ಡಾ.ಆರ್.ಆರ್. ಹಂಚಿನಾಳ, ಬೆಂಗಳೂರು ವಿವಿಯ ಡಾ.ಎನ್.ಪ್ರಭುದೇವ್, ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಡಾ.ಮಹೇಶಪ್ಪ-ಇಷ್ಟೂ ಜನ ಯಡಿಯೂರಪ್ಪನ ಜಾತಿಪ್ರೇಮದ ಫಲವಾಗಿಯೇ ಕುಲಪತಿಗಳಾದವರು. ಅಂದಹಾಗೆ ಇವರೆಲ್ಲ ಲಿಂಗಾಯತರು! ಇವರಲ್ಲನೇಕರು ಲಿಂಗಾಯತರಷ್ಟೇ ಅಲ್ಲ, ಆರೆಸ್ಸೆಸ್ ವಟುಗಳೂ ಆಗಿದ್ದಾರೆ. ಇಂಥವರನ್ನಿಟ್ಟುಕೊಂಡು ಶಿಕ್ಷಣವನ್ನು ಕೇಸರೀಕರಣಗೊಳಿಸುವುದು ಬಿಜೆಪಿ ಪಡೆಯ ಇನ್ನೊಂದು ಹಾಗೂ ಮುಖ್ಯ ಹುನ್ನಾರ.

ಪ್ರಸ್ತುತ ಯಡ್ಡಿ ಸರ್ಕಾರ ಈ ಪರ ಜಾತಿ ಅಮಲಿಗೆ ಬಿದ್ದು ವಿವಿಗಳನ್ನು ಆವರಿಸಿಕೊಳ್ಳುತ್ತಿರುವ ವಿಚಾರ ರಾಜ್ಯಪಾಲರ ಗಮನಕ್ಕೂ ಬಂದಿತ್ತು. ಆದರನ್ವಯ ಧಾರವಾಡ ವಿವಿ ಕುಲಪತಿ ಆಯ್ಕೆಯಲ್ಲಿ ಅದಕ್ಕೊಂದು ಫೈಟ್ ಕೊಡಲೆತ್ನಿಸಿದ್ದರು. ಕುಲಪತಿ ನೇಮಕಾತಿ ಶೋಧನಾ ಸಮಿತಿ ಲಿಂಗಾಯತ ಹಿಂಚಿಗೇರಿ, ಕುರುಬ ಸಮುದಾಯದ ಡಾ.ವಾಲಿಕಾರ್ ಹಾಗೂ ಒಕ್ಕಲಿಗ ಪಂಗಡದ ಪ್ರೊ. ತಿಮ್ಮೇಗೌಡರ ಹೆಸರು ಸೂಚಿಸಿತ್ತು. ರಾಜ್ಯಪಾಲರು ಡಾ. ವಾಲಿಕಾರರ ಹೆಸರನ್ನು ಅನುಮೋದಿಸಿದ್ದರು. ಆದರೆ ಜಾತಿಯನ್ನೇ ಪ್ರಮುಖ ಮಾನದಂಡವನ್ನಾಗಿಸಿಕೊಂಡ ಯಡ್ಡಿ ಭೂಗಳ್ಳ ಹಿಂಚಿಗೇರಿಯೇ ಕುಲಪತಿಯಾಗಬೇಕೆಂದು ಪಟ್ಟು ಹಿಡಿದಿದ್ದರು.

ಇದು ಯಡಿಯೂರಪ್ಪನವರ ಜಾತಿಪ್ರೇಮಕ್ಕೆ ಪಕ್ಕಾ ಉದಾಹರಣೆ. ಮುಖ್ಯಮಂತ್ರಿಯಾದವನು ಯಾವ ಕೋಮಿಗೆ ಸೇರಿದವನಾಗಿದ್ದರೂ ಎಲ್ಲರನ್ನೂ ಒಳಗೊಂಡು ನ್ಯಾಯಯುತ ಅಧಿಕಾರ ನಡೆಸುವುದು ಆತನ ಕರ್ತವ್ಯ. ಆದರೆ ಯಡ್ಡಿಗೆ ಜಾತ್ಯತೀತತೆ, ಸಾಮಾಜಿಕ ನ್ಯಾಯ, ಪ್ರತಿಭೆ-ಇವ್ಯಾವುದೂ ಮುಖ್ಯವಾಗುತ್ತಿಲ್ಲ. ಸದ್ಯ ಈ ಆಸಾಮಿ ಲಿಂಗಾಯತರ ಮನೆಯ ನಾಯಿಯ ಕತ್ತಿಗೊಂದು ಸೂಟ್‌ಕೇಸ್ ಕಟ್ಟಿ ಕಳಿಸಿದರೂ ಸಚಿವ ಸ್ಥಾನವನ್ನೋ, ನಿಗಮ ಮಂಡಳಿ ಅಧ್ಯಕ್ಷಗಿರಿಯನ್ನೋ ಧಾರೆಯೆರೆಯುವಷ್ಟು ಜಾತಿವಾದಿಯಾಗಿಬಿಟ್ಟಿದ್ದಾರೆ.

ಜಾತೀಯತೆಯೆಂಬುದು ಮುಖ್ಯಮಂತ್ರಿಯಾದವನ ವೈಯಕ್ತಿಕ ಮಟ್ಟದಲ್ಲಿದ್ದರೆ ಅದನ್ನು ತಡಕೊಳ್ಳಬಹುದೇನೋ. ಆದರೆ ಯಡ್ಡಿ ಆಡಳಿತ ವಿಭಾಗದ ವಿವಿಧ ಶಾಖೆಗಳಲ್ಲಿ ತಮ್ಮವರನ್ನೇ ತೂರಿಸುತ್ತಾ ವಿವಿಗಳಿಗೂ ಜಾತಿ ಕೆಸರು ಹರಡುತ್ತಾ ಸಾಗಿರುವುದು ನಾಚಿಕೆಗೇಡು.

ಇದೆಲ್ಲ ನೋಡುತ್ತಿದ್ದರೆ, ವಿವಿ ಕುಲಪತಿಗಳ ನಿವೃತ್ತಿ ವಯಸ್ಸು ಹೆಚ್ಚಳದ ಹಿಂದೆ ಜಾತಿಬಂಧುಗಳನ್ನು ಸಲಹುವ ಹಂಬಲದ ಹೊರತಾಗಿ ಬೇರ್ಯಾವ ಘನ ಉದ್ದೇಶಗಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಪ್ರಜಾಪ್ರಭುತ್ವವನ್ನು ಜನರಿಂದ ಜನರಿಗಾಗಿ ಜನರಿಗೋಸ್ಕರ ಅಂತ ವಿಶ್ಲೇಷಿಸಲಾಗುತ್ತದೆ. ಆದರೀಗ ಕರ್ನಾಟಕದ ಪಾಲಿಗೆ ಅದು 'ಲಿಂಗಾಯತನಿಂದ ಲಿಂಗಾಯತರಿಗಾಗಿ ಲಿಂಗಾಯತರಿಗೋಸ್ಕರ!' ಅಂತಲೇ ಅರ್ಥ ಹೊಮ್ಮಿಸುತ್ತಿದೆ!

ಅರಿವುಗೇಡಿ ಮುಖ್ಯಮಂತ್ರಿಯ ಜಾತಿಪ್ರೇಮಕ್ಕೆ ಧಿಕ್ಕಾರವಿರಲಿ!

● ಬಾಗಿಲಗದ್ದೆ

ರಾಮುಲು ಅಭಿನವ ವಾಲ್ಮೀಕಿ ಅಂದ ಭಟ್ಟಂಗಿ ರಂಗರಾಜ್!

ಇಂದು ವಿವಿಗಳೊಳಗೆ ಜಾತಿಯ ವಿಷಗಾಳಿ ಬೀಸುತ್ತಿರುವುದಕ್ಕೆ ಯಡಿಯೂರಪ್ಪ ಒಬ್ಬರನ್ನೇ ಹೊಣೆಯಾಗಿಸಿದರೆ ಅದು ಅಪೂರ್ಣ ಗ್ರಹಿಕೆಯಾದೀತು. ಯಾಕೆಂದರೆ ಆಳೋ ಮಂದಿಯ ಆಮಿಷಗಳನ್ನು ತಿರಸ್ಕರಿಸುವ ಸ್ವಾಭಿಮಾನ ಇತರ ವರ್ಗಕ್ಕಿದ್ದರೆ ಇಂಥಾ ಅಧ್ವಾನಗಳು ನಡೆಯುವುದಿಲ್ಲ.

ಈ ನಿಟ್ಟಿನಲ್ಲಿ ನೋಡಹೊರಟರೆ ಅಧಿಕಾರಿಗಳಲ್ಲನೇಕರ ಜಾತಿಯನ್ನು ಮುಂದಿಟ್ಟುಕೊಂಡು ಉನ್ನತ ಹುದ್ದೆ ಗಿಟ್ಟಿಸಿಕೊಳ್ಳುವ ಅಸಹ್ಯಕ್ಕೆ ಹೆಜ್ಜೆಯಿಟ್ಟಿದ್ದಾರೆ. ಇದಕ್ಕಾಗಿ ಅವರು ಎಂಥಾ ಭಟ್ಟಂಗಿತನಕ್ಕೂ ಹೇಸುವುದಿಲ್ಲ. ಸದ್ಯ ಹೀಗೆ ಸ್ವಾಭಿಮಾನವನ್ನೆಲ್ಲಾ ಕಳಚಿಟ್ಟ ಪ್ರಭೃತಿಯೊಂದು ರೌಡಿ ರಾಮುಲುನನ್ನು ಅಭಿನವ ವಾಲ್ಮೀಕಿ ಅಂತೆಲ್ಲ ಒದರಿ ಕೃಷ್ಣದೇವರಾಯ ವಿವಿಯ ರಿಜಿಸ್ಟ್ರಾರ್ ಹುದ್ದೆಗಿಟ್ಟಿಸಿಕೊಂಡಿದ್ದಾರೆ.



ಆತ ಸದ್ಯ ಕುವೆಂಪು ವಿವಿಯಲ್ಲಿರುವ ಡಾ.ರಂಗರಾಜ್ ವನದುರ್ಗ!

ನಾಯಕ ಜನಾಂಗದವರಾದ ರಂಗರಾಜ್ ಬಂಡಾಯ ಹಾಗೂ ಪ್ರಗತಿಪರತೆಯ ಪೋಸು ಕೊಡುತ್ತಿದ್ದವರು. ಅದರಿಂದಾಗಿಯೇ ಇವರಿಗೊಂದಷ್ಟು ಹೆಸರು, ಗೌರವ ದಕ್ಕಿದ್ದೂ ಸುಳ್ಳಲ್ಲ. ಆದರೆ ಕೃಷ್ಣದೇವರಾಯ ವಿವಿ ಸ್ಥಾಪನೆಯಾಗುವುದು ಪಕ್ಕಾ ಆಯ್ತು ನೋಡಿ? ರಂಗರಾಜ್ ವಿವಿಯ ರಿಜಿಸ್ಟ್ರಾರ್ ಹುದ್ದೆಗಾಗಿ ಪರಿತಪಿಸಹತ್ತಿದ್ದರು.

ತನ್ನ ಜಾತಿಯನ್ನೇ ನಾಚಿಕೆಯಿಲ್ಲದೆ ಮುಂದಿಟ್ಟುಕೊಂಡ ಈತ ಶ್ರೀರಾಮುಲುನಿಗೂ ಗಂಟು ಬಿದ್ದಿದ್ದರು. ಅದೊಂದು ದಿನ ರಾಮುಲುನ ಮನೆಗೆ ಹೋದರಾದರೂ ಆತ ಈ ಆಸಾಮಿಯನ್ನು ಕರೆದು ಮಾತಾಡಿಸುವುದಿರಲಿ, ಒಳಗೂ ಬಿಟ್ಟುಕೊಂಡಿರಲಿಲ್ಲ. ಹತಾಶರಾದ ರಂಗರಾಜ್ ಕುವೆಂಪು ವಿವಿಯೇ ಗಟ್ಟಿಯೆಂದುಕೊಂಡು ವಾಪಸಾಗಿದ್ದರು.

ಆದರೆ ಇತ್ತೀಚೆಗೊಂದು ನಾಯಕ ಸಮುದಾಯದ ಸಭೆ ನಡೆಯಿತಲ್ಲಾ? ಅದರಲ್ಲಿ ರಂಗರಾಜ್‌ರ ದಿಕ್ಕು ಬದಲಾಗಿ ಹೋಗಿತ್ತು. ಆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀರಾಮುಲು ಬಂದಿದ್ದ. ಉತ್ತಮ ವಾಗ್ಮಿಯೂ ಆಗಿರುವ ರಂಗರಾಜ್‌ಗೆ ವೇದಿಕೇಲಿ ಮಾತನಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಇದನ್ನು ಸದುಪಯೋಗಪಡಿಸಿಕೊಂಡ ರಂಗರಾಜ್ ಶ್ರೀರಾಮುಲುನನ್ನು ತಾರಾಮಾರ ಹೊಗಳಲಾರಂಭಿಸಿದರು. ಪಕ್ಕಾ ರೌಡಿ ರಾಮುಲುನನ್ನು ವಾಲ್ಮೀಕಿಯ ಅಪರಾವತಾರ ಎಂಬಂತೆಯೂ ಬಿಂಬಿಸಿ ಒಂದರ್ಧ ಗಂಟೆ ಭಾಷಣ ಬಜಾಯಿಸಿದರು.

ಇದರಿಂದ ಖುಷಿಯಾಗಿ ಹೋದ ರಾಮುಲು ರಂಗರಾಜ್ ಬಗ್ಗೆ ವಿಚಾರಿಸಿದ್ದಾನೆ. ಅಲ್ಲೇ ಕೆಲಮಂದಿ ಆತನ ಪರಿಚಯ ಹೇಳಿ, ಹಿಂದೊಮ್ಮೆ ಕೃಷ್ಣದೇವರಾಯ ವಿ. ರಿಜಿಸ್ಟ್ರಾರ್ ಹುದ್ದೆ ಅಪೇಕ್ಷಿಸಿದ್ದ ಬಗ್ಗೆಯೂ ಹೇಳಿದ್ದಾರೆ. ಇಷ್ಟಾದದ್ದೇ ತಡಮಾಡದ ಶ್ರೀರಾಮುಲು ರಿಜಿಸ್ಟ್ರಾರ್ ಹುದ್ದೆಯನ್ನು ರಂಗರಾಜ್‌ಗೆ ಇನಾಮು ನೀಡಿ ಕೃತಾರ್ಥನಾಗಿದ್ದಾನೆ!

ಸಿಎಂ ಸೀರೆ ರಾಜಕೀಯಕ್ಕೆ ಅಂಗನವಾಡಿ ಸಹಾಯಕಿ ಬಲಿ

ಕಳೆದ ವಾರ 'ಲಂಕೇಶ್'ದಲ್ಲಿ ಕಾರವಾರದಲ್ಲಿ ಸಿಎಂ ಯಡ್ಡಿ ನಡೆಸಿದ ಸೀರೆ ಶೋ ಬಗ್ಗೆ ಒಂದು ವರದಿ ಪ್ರಕಟವಾಗಿತ್ತಲ್ಲವೆ? ಆ ವರದಿಯಲ್ಲಿ ಹೆಂಗಸೊಬ್ಬಳು ಮಾಧ್ಯಮದವರ-ಜನಸಮೂಹದ ಮುಂದೆ ಶೋನಲ್ಲಿ ವಿತರಿಸಿದ ಸೀರೆಯೊಂದನ್ನು ಹಿಡಿದೆತ್ತಿ "....ಇದು ಕಳಪೆ ಸೀರೆ... ಸಿಎಂ ಸಾಹೇಬ್ರು ಸಭೆಯಾಗ ತೋರ್‍ಸಿದ್ರಲ್ಲರೀ ಅದು ಚೆಲೋ ಸೀರಿ... ಹೆಂಗಸ್ರಿಗೆ ಕೊಟ್ಟಿರೋದ ಹಾಳು ಸೀರೇರೀ...." ಎಂದು ಹೇಳುತ್ತಿದ್ದ ಫೋಟೋ ಸಹ ಅಚ್ಚಾಗಿತ್ತು.

ಸತ್ಯ ಹೇಳಿದ ತಪ್ಪಿಗೆ ಆ ಹೆಂಗಸೀಗ ಸಂಕಷ್ಟಕ್ಕೆ ಸಿಲುಕಿದ್ದಾರೆ; ಆ ಬಡಪಾಯಿ ಮೇಲೆ ಯಡ್ಡಿಯ ಹೆಡ್ಡ ಸರ್ಕಾರಿ ಯಂತ್ರ ಮುರಕೊಂಡು ಬಿದ್ದಿದೆ! ದೊರೆಯ ಬಾಗಿನ ದಾನದ ಅಸಲಿಯತ್ತು ಅನಾವರಣ ಮಾಡಿದ 'ಉದ್ಧಟತನ'ಕ್ಕೆ ಆಕೆಯ ಸರ್ಕಾರಿ ಚಾಕರಿಗೆ ಸಂಚಕಾರ ಬಂದಿದೆ!!



ಆಕೆ ಅಮೀನಾ ರಿಯಾಜ್ ಖಾನ್. ಮುಂಡಗೋಡದ ಇಂದಿರಾನಗರ ಏರಿಯಾದ ಅಂಗನವಾಡಿ ಸಹಾಯಕಿ. ಕಂಡದ್ದು ಕಂಡಂತೆ ಹೇಳುವ ಮಹಿಳೆ ಅಮಿನಾಬಿ ಸರ್ಕಾರ ಅಂಗನವಾಡಿ ಸಹಾಯಕರನ್ನು ಶೋಷಿಸುತ್ತಿರುವುದರ ವಿರುದ್ಧ ಸಿಡಿದೇಳುತ್ತಲೇ ಬಂದಾಕೆ. ಮೊದಲೇ ಸರ್ಕಾರದ ಗುಲಾಮಗಿರಿ ಧೋರಣೆ ಬಗ್ಗೆ ಅಸಮಾಧಾನ-ಅಸಹನೆಯಲ್ಲಿದ್ದ ಆಕೆಗೆ ಯಡ್ಡಿ ಫಂಕ್ಷನ್‌ನಲ್ಲಿ ಹಿಂಸೆಗೀಡಾಗಿದ್ದ ಹೆಂಗಸರು ತಮ್ಮನ್ನು ಕರೆತಂದಿದ್ದ ಅಂಗನವಾಡಿ ಕಾರ್ಯಕರ್ತೆಯರ ತರಾಟೆಗೆ ತೆಗೆದುಕೊಳ್ಳುತ್ತಿದ್ದಾಗ ಕಿರಿಕಿರಿಯಾಗಿ ಹೋಗಿತ್ತು. ಸಹಜವಾಗೇ ಸಿಟ್ಟು ಶೋ ಮಾಸ್ಟರ್ ಸಿಎಂ ಯಡ್ಡಿ ಮತ್ತವನ ಹೋಪ್‌ಲೆಸ್ ಸರ್ಕಾರದ ಮೇಲೆ ಮೂಡಿತ್ತು.

ಭಾಗ್ಯಲಕ್ಷ್ಮಿ-ಗೃಹಲಕ್ಷ್ಮಿಯರ ಒಟ್ಟುಗೂಡಿಸಿ ಜಿಲ್ಲಾ ಕೇಂದ್ರಕ್ಕೆ ಕರೆತರುವ ಹೊಣೆಯನ್ನು ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಅಂಗನವಾಡಿ ಸಹಾಯಕಿಯರಿಗೆ ಹೊರಿಸಿದ್ದರು. ಈ ಅಂಗನವಾಡಿ ಸಹಾಯಕಿಯರು ತಮ್ಮ ಅಂಗನವಾಡಿ ವ್ಯಾಪ್ತಿಯ ಮನೆ-ಮನೆಗೆ ತೆರಳಿ ಗೃಹಲಕ್ಷ್ಮೀ-ಭಾಗ್ಯಲಕ್ಷ್ಮಿಯರನ್ನು ಸಿಎಂ ಸಮಾರಂಭಕ್ಕೆ ಎಳೆದು ತರಲು ಒಂದು ವಾರದಿಂದ ಸತತ ಸಿದ್ಧತೆ ಮಾಡಿಕೊಂಡಿದ್ದರು. ಆನಂತರ ಬಸ್‌ಗಳಲ್ಲಿ 'ಫಲಾನುಭವಿಗಳನ್ನು' ತುಂಬಿಕೊಂಡು 100-175 ಕಿ.ಮೀ. ದೂರದ ಕಾರವಾರಕ್ಕೆ ಹೋಗಿದ್ದರು. ದೂರದೂರದಿಂದ ಕಾರವಾರ ತಲುಪುವಾಗಲೇ ಸುಸ್ತು ಹೊಡೆದುಹೋಗಿದ್ದ ಹೆಂಗಸರು ಮತ್ತವರ ಹಸುಗೂಸುಗಳು ಯಡ್ಡಿ ಮಹಾತ್ಮನಿಗಾಗಿ ಮೂರು ತಾಸು ಕಾದು ಹೈರಾಣಾಗಿ ಹೋಗಿದ್ದರು; ಯಡ್ಡಿ ಬಂದು ಮತ್ತೊಂದು ತಾಸು ಭೀಷಣ ಭಾಷಣ ಹೊಡೆದು ಸತಾಯಿಸಿದರು. ಮೇಲೆ ನಿಗಿನಿಗಿ ಸುಡುವ ಸೂರ್ಯ; ಕೆಳಗೆ ಕೆಂಡದಂತಾಗಿದ್ದ ಕಡಲತಡಿಯ ಮರಳು! ಹಸಿವು-ಬಾಯಾರಿಕೆ-ಸಂಕಟ ಬೇರೆ. ಕೊಟ್ಟ ಫಲಾವಂತೂ ತಿನ್ನುವಂತಿರಲಿಲ್ಲ. ಈ ಚಿತ್ರಹಿಂಸೆ ತಾಳಲಾರದೆ ಗೃಹಲಕ್ಷ್ಮಿಯರು ತಮ್ಮನ್ನು ಕರೆತಂದಿದ್ದ ಅಂಗನವಾಡಿ ಕಾರ್ಯಕರ್ತೆಯರ ಅಡಿಗಡಿಗೆ ಕಾಡತೊಡಗಿದ್ದರು; "....ನಿಮ್ಮ ಸೀರೆನೂ ಬ್ಯಾಡ... ಫಂಕ್ಷನ್ನೂ ಬ್ಯಾಡ.... ಬೇಗ ಮನೆಗೆ ಮುಟ್ಟಿಸಿ..." ಎಂದು ಬೈದು ಬೆವರಿಳಿಸತೊಡಗಿದ್ದರು.

ಯಾವಾಗ ಕಳಪೆ ಸೀರೆ ಕೈಗೆ ಬಂತೋ ಆಗ ಹೆಂಗಸರ ಸಹನೆಯ ಕಟ್ಟೆ ಒಡೆದುಹೋಯ್ತು! ಸಿಎಂ ಯಡ್ಡಿ, ಮಂತ್ರಿ ಕಾಗೇರಿ ಮತ್ತವರ ಮೋಸಗಾರ ಅಧಿಕಾರಿಗಳ ಕೋಪ-ಪಾಪ ಎದುರಿಗೆ ಸಿಕ್ಕಿದ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಪ್ರದರ್ಶಿಸಿದ್ದಾರೆ. ತಲೆ ರೋಸಿಹೋದ ಅಂಗನವಾಡಿ ಕಾರ್ಯಕರ್ತೆಯರು ಸಿಎಂ ಯಡ್ಡಿ ಮತ್ತು ತಮ್ಮನ್ನು ಈ ಸಂದಿಗ್ಧಕ್ಕೆ ಸಿಲುಕಿಸಿ ತಾವು ಹಾಯಾಗಿದ್ದ ಶಿಶು ಅಭಿವೃದ್ಧಿ ಇಲಾಖಾಧಿಕಾರಿಗಳಿಗೆ ಹಿಡಿಶಾಪ ಹಾಕಿದ್ದಾರೆ. ಮುಂಡಗೋಡದ ಅಮಿನಾಬಿ ಎಂಬ ಧಾಡಸಿ ಅಂಗನ ವಾಡಿ ಕಾರ್ಯಕರ್ತೆಯೊಬ್ಬಳು ಮಾತ್ರ ಧೈರ್ಯ ಮಾಡಿ ಮಾಧ್ಯಮದವರೆದುರು 'ಬೋಗಸ್ ಬಾಗಿನ ಭಾಗ್ಯ'ದ ಪುರಾಣ ಬಿಚ್ಚಿಟ್ಟಿದ್ದಾರೆ!!

ಅಮಿನಾಬಿ ಹೇಳಿದ್ದು ಪಕ್ಕಾ ಅಪ್ರಿಯ ಸತ್ಯ!! ಆಕೆಯ ಮಾತಿನಲ್ಲಿ ಸೀರೆ ರಗಳೆಯಷ್ಟೇ ಇರಲಿಲ್ಲ. ಅಂಗನವಾಡಿ ಸಹಾಯಕಿಯರನ್ನು ಸರ್ಕಾರ ಅದೆಷ್ಟು ಸಸಾರವಾಗಿ ದುಡಿಸಿಕೊಳ್ಳುತ್ತಿದೆ; ಅನ್ಯಾಯ ಮಾಡುತ್ತಿದೆ ಎಂಬುದನ್ನು ಅಮಿನಾಬಿ ಆಲವತ್ತುಕೊಂಡಿದ್ದರು. "............ಅಂಗನವಾಡ್ಯಾಗ ಮಕ್ಕ ಮುಕಳಿ ತೊಳಿಬೇಕ... ತಿಂದಿ ತಿನ್ನಿಸ್ಬೇಕ.... ಅಡಗಿ ಮಾಡಬೇಕ... ಮನಿಮನಿಗೆ ಹೋಗಿ ಸರ್ಕಾರದ ಸುದ್ದಿ, ಸಮಾಚಾರ ಮುಟ್ಟಸ್ಬೇಕ... ಸರ್ಕಾರದ ಕಾರ್ಯಕ್ರಮ ಇದ್ದರೆ ಮಂದಿ ಕರ್‍ಕೊಂಡ್ ಬರೋದ ನಾವ.... ನಮ್ಗ ಭತ್ತೆಯೇನ್ ಕೊಡಾಂಗಿಲ್ಲರಿ...." ಎಂದಾಕೆ ತಮ್ಮ ಮೇಲಾಗುತ್ತಿರುವ ದಬ್ಬಾಳಿಕೆ ಸ್ವಲ್ಪ ಜೋರಾಗೇ ಹೇಳಿದ್ದರು.

ಇದೇ ಈಗ ದೊಡ್ಡ ಅಪರಾಧವಾಗಿ ಅಮಿನಾಳ ಹೊಟ್ಟೆಪಾಡಿನ ಚಾಕರಿಗೆ ಕುತ್ತು ಬಂದಿದೆ. ಆಕೆ ಕಂಡದ್ದು ಹೇಳಿದ್ದು ಅಧಿಕಾರಿಶಾಹಿಯ ಕುಂಡೆಯುರಿಗೆ ಕಾರಣವಾಗಿದೆ! ಅಮಿನಾಳ 'ಮಾತು' ಬಿಜೆಪಿಯ ಮನುವಾದಿಗಳ ಕಣ್ಣು ಕೆಂಪಾಗಿಸಿದೆ. ಆಕೆ ಮುಸ್ಲಿಮಳಾಗಿರು ವುದರಿಂದ ಚಡ್ಡಿಗಳು ತಮ್ಮ ಹುಟ್ಟು ಗುಣದಂತೆ ಧರ್ಮಕಾರಣ ಶುರು ಹಚ್ಚಿಕೊಂಡಿದ್ದಾರೆ. ಸಂಘ ಪರಿವಾರದ ಸಿಎಂ ಟೀಕಿಸುವುವೆಂದರೇನು? ಅಕಟಕಟಾ!! ಅಮೀನಾಬಿ[illegible] ಬೀದಿಪಾಲಾಗಿಸಲೇಬೇಕೆಂದು ಅಧಿಕಾರಸ್ಥ ಬಿಜೆಪಿ ಭ[illegible] ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ತಾಕೀತು ಮಾಡುತ್ತಿ[illegible] ಸ್ಥಳೀಯ ಶಾಸಕ ವಿ.ಎಸ್. ಪಾಟೀಲ್ ಹಿಂಬಾಲ[illegible] ಅಮೀನಾಳನ್ನು ಸತಾಯಿಸಿ 'ಧರ್ಮೋತ್ಥಾನ' ಮಾ[illegible] ಹಠಕ್ಕೆ ಬಿದ್ದಿದ್ದಾರೆ. ಈ ಹಲ್ಕಾ ಕೆಲಸಕ್ಕೆಲ್ಲ ಜಿಲ್ಲಾ [illegible] ಕಾಗೇರಿ ಮಾಣಿಯ ಕುಮ್ಮಕ್ಕೂ ಇದೆಯೆಂಬ ಅನುಮಾ[illegible] ಮೂಡಿದೆ.

ಅಮಿನಾಬಿಗೆ ಶಿಶು ಅಭಿವೃದ್ಧಿ ಯೋಜನಾಧಿ[illegible] ಶೋಕಾಸ್ ನೋಟೀಸ್ ಕೊಟ್ಟೂ ಆಗಿದೆ! "ನವೆಂ[illegible] 19 ರಂದು ಮುಖ್ಯಮಂತ್ರಿ ಕಾರ್ಯಕ್ರಮದ ಹೊ[illegible] ಕಳಪೆ ಸೀರೆ ವಿತರಿಸಲಾಗಿದೆಯೆಂದು ಪತ್ರಿಕಾ ಹೇ[illegible] ಕೊಟ್ಟಿದ್ದಕ್ಕೆ ನಿಮಗೇಕೆ ಕೆಲಸದಿಂದ ವಜಾ ಮಾಡಬಾರದು[illegible] ಸರ್ಕಾರದ ಗೌರವಧನ ಪಡೆಯುವವರಾಗಿ ಹೀಗೆ ಹೇ[illegible] ಕೊಟ್ಟಿದ್ದು ತಪ್ಪು...." ಎಂದು ನೋಟೀಸ್‌ನಲ್ಲಿ ಬರೆಯಲಾ[illegible] ಈ ಜುಜುಬಿ ಪ್ರಕರಣವನ್ನು ಅದೆಷ್ಟು ಸೀರಿಯ[illegible] ಪರಿಗಣಿಸಲಾಗಿದೆಯೆಂದರೆ, ಜಿಲ್ಲಾ ಮಹಿಳಾ ಮತ್ತು ಮ[illegible] ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಹೊಳೆಹೊನ್[illegible] ಮೇಡಮ್‌ರೇ ಖುದ್ದು ಅಮಿನಾರ ಬೆನ್ನಿಗೆ ಬಿದ್ದಿ[illegible] ಅಧಿಕಾರ ಮದದ ಬಿಜೆಪಿಗಳ ಬಡಿವಾರಕ್ಕೆ ಅಮಾ[illegible] ಹೆಂಗಸು ಅಮಿನಾಬಿ ಕೆಲಸ ಕಳೆದುಕೊಳ್ಳಬೇ[illegible] ಬಂದಿರುವುದು ಅಮಾನುಷವೇ ಸರಿ!

ಆಕೆ ಅಭಿಪ್ರಾಯ ವ್ಯಕ್ತಪಡಿಸಿದ್ದಳೇ ವಿನಃ ಪ[illegible] ಹೇಳಿಕೆಯನ್ನೇನೂ ಬುದ್ಧಿಪೂರ್ವಕವಾಗಿ ಕೊಟ್ಟಿರಲಿಲ್ಲ. [illegible] ರಾಕ್ಷಸರ ದರ್ಬಾರಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ[illegible] ಹರಣವಾಗುತ್ತದೆ. ಸತ್ಯ ಹೇಳಿದವರಿಗೆ ಯಡ್ಡಿ ಆಡಳಿತ[illegible] ಶಿಕ್ಷೆ ಖಂಡಿತ! ಯಡ್ಡಿ-ಕಾಗೇರಿ-ಪಾಟೀಲ್ ಗುಬ್ಬಿ ಮೇ[illegible] ಬ್ರಹ್ಮಾಸ್ತ್ರ ಪ್ರಯೋಗಿಸಿ ಪೌರುಷ ಪ್ರದರ್ಶಿಸುತ್ತಿರುವು[illegible] ನಾಚಿಕೆಗೇಡು. ದುರ್ಬಲ ಘಾತುಕ ಸಿಎಂ ಪರಿವಾ[illegible] ಧಿಕ್ಕಾರವಿರಲಿ!!

● ನಹು[illegible]

ಭಜರಂಗ ದಳದ ಮಾಜಿ ಸಂಚಾಲಕ ಮಹೇಂದ್ರ
ಪರದೇಕೆ ಪೀಚೆ ಕ್ಯಾ ಹೈ

ಅಪ್ಪಟ ಕೋಮುವಾದಿಯಾದ ಮಹೇಂದ್ರ ಕುಮಾರ್ ಸದ್ಯದಲ್ಲೇ ಜಾತ್ಯತೀತವಾದಿಯ ಸೋಗು ಧರಿಸುವ ಸಿದ್ಧತೆಯಲ್ಲಿದ್ದಾನೆ... ಇಂತಹದ್ದೊಂದು ಬೋಂಗು ಸುದ್ದಿ ಈಗ ಚಿಕ್ಕಮಗಳೂರು ಜಿಲ್ಲೆಯ ತುಂಬಾ ಹರಿದಾಡುತ್ತಿದೆ.

ಈಗಾಗಲೇ ಮಹೇಂದ್ರ ಕುಮಾರ್ ಜಾತ್ಯತೀತ ಜನತಾದಳದ ತೆಕ್ಕೆಗೆ ಬೀಳುವ ಕುರಿತು ಅದರ ನಾಯಕ ಎಚ್.ಡಿ.ಕುಮಾರಸ್ವಾಮಿಯ ಜೊತೆ ಮಾತುಕತೆ ಮುಗಿಸಿದ್ದಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಬರುವ ಡಿಸೆಂಬರ್ 6 ರಂದು - ಚಡ್ಡಿಗಳು ರಣೋತ್ಸಾಹದಿಂದ ಬಾಬರಿ ಮಸೀದಿಯನ್ನು ಕೆಡವಿದ ದಿನದ 18ನೇ ವಾರ್ಷಿಕಾಚರಣೆ - 'ಸೆಕ್ಯೂಲರ್'ವಾದಿ ಎಂಬ ಬಿರುದು ಮಹೇಂದ್ರನಿಗೆ ಸಿಗಲಿದೆಯಂತೆ.

ಇತ್ತೀಚಿಗಿನ ತನಕ ಹಿಂದೂತ್ವವಾದಿ ಆರೆಸ್ಸೆಸ್‌ನ ಅಂಗವಾದ ಭಜರಂಗದಳದ ದಂಡನಾಯಕನಾಗಿ ಮೆರೆದಿದ್ದ ಮನುಷ್ಯ ಈ ಮಹೇಂದ್ರ ಕುಮಾರ್. ಮರದ ಮೇಲೆ ಕುಳಿತರೆ ಮರದ ಬಣ್ಣ, ಕಲ್ಲಿನ ಮೇಲೆ ಕುಳಿತರೆ ಕಲ್ಲಿನ ಬಣ್ಣಕ್ಕೆ ಹೊಂದಿಕೊಳ್ಳುವ ಊಸರವಳ್ಳಿಯ ಗುಣ ಈತನಲ್ಲಿದೆ. ಭಜರಂಗದಳದಲ್ಲಿ ಇದ್ದಷ್ಟು ದಿನ ಕೋಮುವಾದದ ಪಿತ್ಥ ನೆತ್ತಿಗೇರಿಸಿಕೊಂಡು ಕುದಿಯುತ್ತಿದ್ದ, ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಜೊತೆಗಿನ ಇಲ್ಲಿನ ಹಿಂದೂಗಳ ತಲೆತಲಾಂತರದ ಬಾಂಧವ್ಯವನ್ನು ಶತಾಯಗತಾಯ ನಿರಾಕರಿಸುತ್ತಿದ್ದ. ಮಸೀದಿ, ಇಗರ್ಜಿ, ಪ್ರಾರ್ಥನಾ ಮಂದಿರ, ಮತಾಂತರ, ಗೋಹತ್ಯೆ ನಿಷೇಧ, ಬುರ್ಖಾ, ಲವ್ ಜಿಹಾದ್ ನೆಲೆಯಲ್ಲಿ ಆಹಾರ ಕಂಡುಕೊಂಡಿದ್ದವನು ಈ ಮಹೇಂದ್ರ ಕುಮಾರ್.

ಈ ಎಲ್ಲ ಕಾರಣಗಳಿಂದಾಗಿ ಚಿಕ್ಕಮಗಳೂರಿನ ಮಟ್ಟಿಗೆ ಬಂಗಾರವಲ್ಲದಿದ್ದರೂ ಕಬ್ಬಿಣದಂತಿರುವ ಜೆಡಿಎಸ್ಸಿಗರಿಗೆ ಈತನ ಸಾಂಗತ್ಯ ಬೇಡವಾಗಿತ್ತು, ಆದರೂ ಈಗ ಮಹೇಂದ್ರ ಕುಮಾರನೆಂಬ ಹಿಂದೂತ್ವವಾದಿ ಜೆಡಿಎಸ್ ಸೇರುತ್ತಿರುವ ಸುದ್ದಿ ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ.

ಇದು ವದಂತಿಯೂ ಅಲ್ಲ,

ಗಾಳಿ ಸುದ್ದಿಯೂ ಅಲ್ಲ,

ಒಳ್ಳೆಯ ಸುದ್ದಿಯಂತೂ ಅಲ್ಲವೇ ಅಲ್ಲ,

ಮಹೇಂದ್ರನೇ ಇತ್ತೀಚಿಗೆ "ಬಿಜೆಪಿ ಎಂಬ ರಾಷ್ಟ್ರೀಯ ಪಕ್ಷ ಹಿಂದೂ ಧರ್ಮದ ತಳಹದಿ, ತತ್ವ ಸಿದ್ಧಾಂತಗಳನ್ನು ನಾಶ ಮಾಡಿದೆ. ಸಮಾಜವನ್ನು ಭಾವನಾತ್ಮಕವಾಗಿ ಕಿತ್ತು ತಿನ್ನುತ್ತಿರುವ ಬಿಜೆಪಿಯಿಂದ ಹಿಂದೂತ್ವದ ಏಳಿಗೆ ಸಾಧ್ಯವಿಲ್ಲ, ಹಾಗಾಗಿ ನಾನು ಈ ನಿರ್ಧಾರಕ್ಕೆ ಬರಬೇಕಾಗಿದೆ" ಎಂದು ಹೇಳಿಕೊಂಡಿದ್ದಾನೆ.



ಗುಹೆಯ ಸಮಾಧಿಯೊಳಗೆ ನಿಶ್ಚಿಂತೆಯಿಂದಿದ್ದ ಬಾಬಾ ಬುಡಾನ್‌ನನ್ನು ಹೊರತಳ್ಳಿ ಅಲ್ಲಿ ದತ್ತನನ್ನು ಸ್ಥಾಪಿಸಲು ಹೊರಟವರಲ್ಲಿ ಮಹೇಂದ್ರನ ಪಾತ್ರ ದೊಡ್ಡದು. ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲೇ ಇಲ್ಲದಿದ್ದ ಬಿಜೆಪಿಗೆ ಈ ವಿವಾದದಿಂದಾಗಿ 2004ರ ಬಳಿಕ ಈ ರಾಜಕೀಯ ಲಾಭ ಪಡೆಯಲು ಸಾಧ್ಯವಾಗಿದ್ದು. ಆಗ ಮಹೇಂದ್ರ ಮಿತ್ರದ್ವಯರಾದ ಸಿ.ಟಿ.ರವಿ ಮತ್ತು ಜೀವರಾಜ್ ಚುನಾವಣೆಯಲ್ಲಿ ಗೆದ್ದು ವಿಧಾನ ಸಭೆ ಸೇರಿದ್ದರು. ಅದೇ ವೇಳೆ ತನಗೂ ಭದ್ರಾವತಿ ಕ್ಷೇತ್ರದಿಂದ ಬಿಜೆಪಿ ಟಿಕೆಟು ಕೊಡಬೇಕೆಂದು ಪಕ್ಷದ ಮುಖಂಡರನ್ನು ಕೇಳಿದ್ದ ಮಹೇಂದ್ರ ಅವರಿಂದ ಮುಖಕ್ಕೆ ಉಗಿಸಿಕೊಂಡು ಚಿಕ್ಕಮಗಳೂರಿನಲ್ಲೇ ಇದ್ದು ಹಿಂದೂಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ಕಿಚ್ಚು ಹಚ್ಚುವ ಮತ್ತು ಇತರೆ ತಲೆಹರಟೆ ಕೆಲಸಗಳನ್ನು ಮಹೇಂದ್ರ ಮುಂದುವರೆಸಿದ್ದ.

ಆದರೆ ಕೊನೆಗೂ ಆತನ ಅದೃಷ್ಟ ಖುಲಾಯಿಸಿತ್ತು. ಹಿಂದೂತ್ವ ನಾಯಕರೊಂದಿಗೆ ಕಿತ್ತಾಡಿಕೊಂಡ ಮತ್ತೊಬ್ಬ ಹಿಂದೂತ್ವವಾದಿ ಪ್ರಮೋದ್ ಮುತಾಲಿಕ್‌ನನ್ನು ಭಜರಂಗ ದಳದ ನಾಯಕ ಸ್ಥಾನದಿಂದ ಕಿತ್ತು ಹಾಕಲಾಯಿತು. ಆಗ ಮುತಾಲಿಕ್ ತೆರವುಗೊಳಿಸಿದ್ದ ಸ್ಥಾನಕ್ಕೆ ವಕ್ಕರಿಸಿದವನೇ ಈ ಮಹೇಂದ್ರ ಕುಮಾರ್.

ಹೀಗೆ ಭಜರಂಗದಳದ ಸಂಚಾಲಕನಾದ ಮಹೇಂದ್ರ ದತ್ತಪೀಠ, ದತ್ತಮಾಲೆ, ದತ್ತಜಯಂತಿ ಎಂದೆಲ್ಲ ಜಪಮಾಡುತ್ತಾ ರಾಜ್ಯಾದ್ಯಂತ ಪ್ರವಾಸ ಮಾಡಿ ಜನರನ್ನು ಗುಂಪುಗೂಡಿಸುತ್ತಿದ್ದ. ಅಭ್ಯಾಸ ಶಿಬಿರಗಳನ್ನು ನಡೆಸಿ ಹಿಂದೂತ್ವದ ಕಾವನ್ನು ಹೆಚ್ಚಿಸತೊಡಗಿದ. ಈ ಪ್ರಕ್ರಿಯೆಯಲ್ಲಿ ಆತನ ಹೆಗಲಿಗೆ 16 ಕ್ರಿಮಿನಲ್ ಕೇಸುಗಳು ಏರಿದವು. ಏಕೆಂದರೆ ಬಿಜೆಪಿಗೆ ಬೇಕಿದದ್ದು ಅಧಿಕಾರವೇ ಹೊರತು ಹೋರಾಟವಲ್ಲ, ಅವರ ಉದ್ದೇಶಿತ ಸೃಷ್ಟಿ ಓಟ್ ಬ್ಯಾಂಕ್ ಹೊರತು ಹಿಂದೂತ್ವವಲ್ಲ. ಸಂಘಪರಿವಾರದ ಬ್ರಾಹ್ಮಣರ ಇಂತಹ ಲೆಕ್ಕಗಳೆಲ್ಲ ಪೆದ್ದು ಶೂದ್ರ ಮಹೇಂದ್ರನಿಗೆ ಅರ್ಥವಾಗಲೇ ಇಲ್ಲ.

ಎರಡು ವರ್ಷಗಳ ಹಿಂದೆ ಚಿಕ್ಕಮಗಳೂರು, ಮಂಗಳೂರು ಮತ್ತು ರಾಜ್ಯದ ನಾನಾ ಕಡೆಗಳಲ್ಲಿ ಕ್ರಿಶ್ಚಿಯನ್ನರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿಗಳು ನಡೆದವಲ್ಲ, ಅವುಗಳ ನೇತೃತ್ವ ವಹಿಸಿಕೊಂಡವನು ಇದೇ ಮಹೇಂದ್ರ. ಆದರೆ ಆ ದಾಳಿಗಳ ವಿರುದ್ಧ ರಾಜ್ಯಾದ್ಯಂತ ಜನರು ಬೀದಿಗಿಳಿದು ಹೋರಾಡಿದ್ದರಿಂದ ಸಹಜವಾಗಿಯೇ ಆಡಳಿತಾರೂಢ ಬಿಜೆಪಿಗರಿಗೆ ಸಂಕಟವಾಗಿತ್ತು. ಆಗ ಹಿಂದೂತ್ವವಾದಿ ಬಿಜೆಪಿಗಳೇ ಮಹೇಂದ್ರನ ಮೇಲೆ 12 ಪ್ರಕರಣಗಳನ್ನು ದಾಖಲಿಸಿ ಆತ ಕೆಲ ದಿನಗಳ ಕಾಲ ಕಂಬಿ ಏಣಿಸುವಂತೆ ಮಾಡಿದ್ದರು. 42 ದಿನಗಳ ಬಳಿಕ ಜಾಮೀನು ಪಡೆದು ಹೊರಬಂದ ಮಹೇಂದ್ರನ ಯೋಗಕ್ಷೇಮವನ್ನು ಚಡ್ಡಿಗಳು ವಿಚಾರಿಸಿಕೊಳ್ಳುವುದಿರಲಿ, ಆತ ಹೊರಬರುತ್ತಿದ್ದಂತೆ ಆತನನ್ನು ಭಜರಂಗ ದಳದ ಸಂಚಾಲಕ ಸ್ಥಾನದಿಂದಲೇ ಕಿತ್ತೊಗೆದರು ಖತರ್‌ನಾಕ್ ಚಡ್ಡಿಗಳು. ಅದಾದ ನಂತರ ಮಹೇಂದ್ರ ಕುಮಾರ್ ಜಿಲ್ಲೆಯ ಆಗುಹೋಗುಗಳಲ್ಲಿ ಸಂಪೂರ್ಣವಾಗಿ ಮೂಲೆಗುಂಪಾದ.

ಇವತ್ತು ಜೆಡಿಎಸ್ ಕದ ಬಡಿಯಲು ಸಿದ್ಧನಾ[illegible] ನಿಂತಿರುವ ಮಹೇಂದ್ರನನ್ನು ನಂಬಿದರೆ ಕೇಡು ತಪ್ಪಿದ್ದ[illegible] ಏಕೆಂದರೆ 'ಕೋತಿ ತಾನು ಕೆಡುವುದಲ್ಲದೇ ವನವನ[illegible] ಕೆಡಿಸಿತು' ಎಂಬಂತೆ ಆಗುವ ಅಪಾಯವಿದೆ. ಜಿಲ್ಲೆ[illegible] ಜೆಡಿಎಸ್‌ನಲ್ಲಿ ವೈ.ಎಸ್.ವಿ.ದತ್ತಾ, ಎಚ್.ಎಚ್.ದೇವರಾ[illegible] ಎಸ್.ಎಲ್.ಬೋಜೆಗೌಡ, ಧರ್ಮೇಗೌಡರಂತಹಘಟಾನುಘ[illegible]ಗಳಿದ್ದಾರೆ. ಇಲ್ಲಿ ಜೆಡಿಎಸ್ ಪಕ್ಷವನ್ನು ಕಟ್ಟಿ ಬೆಳೆಸ[illegible] ಇವರೆಲ್ಲ ಹೋರಾಡಿದ್ದಾರೆ. 1996ರಿಂದ ಚುನಾವಣೆಗಳ[illegible] ಜೆಡಿಎಸ್ ಧೂಳೀಪಟವಾಗುತ್ತಾ ಬಂದಿದ್ದರೂ ಅ[illegible] ಜಿಲ್ಲಾ ನಾಯಕರ ನಡುವೆ ಯಾವುದೇ ಎಡವಟ್ಟಾಗಲಿ[illegible] ನಾಯಕತ್ವದ ವಿಚಾರಬಂದಾಗ ಇಲ್ಲಿನ ಜೆಡಿಎಸ್ಸಿಗರು ತ[illegible] ನಡುವಿನ ಭಿನಾಭಿಪ್ರಾಯಗಳನ್ನೆಲ್ಲ ಮರೆತು ಒಂದಾಗುತ್ತಾ[illegible] ಇತ್ತೀಚೆಗೆ ನಿಧನ ಹೊಂದಿದ ಕೃಷ್ಣಮೂರ್ತಿ ಅವರು ಕಡೂ[illegible] ಕ್ಷೇತ್ರದಲ್ಲಿ ಕಾಂಗ್ರೆಸ್ ಸೇರಿಕೊಂಡಿದ್ದು ಜೆಡಿಎಸ್‌ಗೆ ಕೊ[illegible] ಹಿನ್ನಡೆಯಾಗಿತ್ತು.

ಅಧಿಕಾರ ಹಿಡಿಯುವ ಆಕಾಂಕ್ಷೆ ಹಿಂದಿನಿಂದಲ[illegible] ಮಹೇಂದ್ರನಲ್ಲಿ ಇದ್ದೇ ಇದೆ. ಆದರೆ ಆತನನ್ನು ಚೆನ್ನಾ[illegible] ಉಪಯೋಗಿಸಿಕೊಂಡ ಬಿಜೆಪಿ ಆತನಿಗೆ ಯಾವ ಅಧಿಕಾ[illegible]ವನ್ನೂ ನೀಡಲಿಲ್ಲ. ಕೇವಲ ತನ್ನ ವಿವಿಧ ಸಂಘಟನೆಗಳ[illegible] ಆತನನ್ನು ದುಡಿಸಿಕೊಂಡಿತ್ತು. ಜನರನ್ನು ಭಾವನಾತ್ಮಕವಾ[illegible] ಕೆರಳಿಸಿ ತನ್ನ ಓಟ್ ಬ್ಯಾಂಕ್ ಸೃಷ್ಟಿಸಿಕೊಳ್ಳಲು ಇಂಥ ಪ[illegible] ಶಿಖಾಮಣಿಗಳನ್ನು ಬಿಜೆಪಿ ಹಿಂದಿನಿಂದಲೂ ಬಳಸಿಕೊಂ[illegible] ಬಂದಿರುವುದು ಈಗ ರಹಸ್ಯವಾಗೇನೂ ಉಳಿದಿಲ್ಲ.

ಈಗ ಜಾತ್ಯತೀತ ಸೋಗನ್ನು ತೊಡಲು ಸಿದ್ಧನಾಗಿರು[illegible] ಮಹೇಂದ್ರನಿಗೆ ಜೆಡಿಎಸ್‌ನಂಥ ಪಕ್ಷದಲ್ಲಿ ಸ್ಥಾನಮಾ[illegible] ಸಿಗಬಹುದು. ಆತ ಬರಲಿರುವ ಗ್ರಾಮ ಪಂಚಾಯ[illegible] ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಲ್ಲಿ ಜೆಡಿಎ[illegible] ಪರವಾಗಿ ಸ್ಪರ್ಧಿಸಿ ಗೆಲ್ಲಬಹುದು. ಆನಂತರ ಹ[illegible] ಆಸ್ತಿಗಳನ್ನೂ ಮಾಡಿಕೊಳ್ಳಬಹುದು.

ಆದರೆ ಆರೆಸ್ಸೆಸ್ ಬುದ್ಧಿಯನ್ನು ಆತ ಬಿಟ್ಟು ಬರದಿದ್ದ[illegible] ಜೆಡಿಎಸ್ ಪಕ್ಷವು ಜಿಲ್ಲೆಯಲ್ಲಿ ಬಿಜೆಪಿಯ ಮತ್ತೊಂದ[illegible] ಮುಖವಾಗಲಿರುವುದು ಮಾತ್ರ ಸುಳ್ಳಾಗಲಿಕ್ಕಿಲ್ಲ.

ಅಷ್ಟಕ್ಕೂ ಕ್ರಿಶ್ಚಿಯನ್ನರ ಪ್ರಾರ್ಥನಾ ಮಂದಿರಗಳ ಮೇ[illegible] ದಾಳಿ ನಡೆಸಿದ್ದ ಈತ ಈಗ ಜೆಡಿಎಸ್ ಮನುಷ್ಯನಾದರ[illegible] ಕ್ರಿಶ್ಚಿಯನ್ ಸಮುದಾಯ ಈತನನ್ನು ಕ್ಷಮಿಸುತ್ತದೆಯೇ[illegible] ಮುಸ್ಲಿಂರ ವಿರುದ್ಧ ವಿನಾಕಾರಣ ದೌರ್ಜನ್ಯ ನಡೆಸಿರುವವನ[illegible] ಮುಸಲ್ಮಾನರು ಒಪ್ಪುತ್ತಾರೆಯೇ? ಜೆಡಿಎಸ್‌ನಲ್ಲಿ ಮಹೇಂ[illegible] ಕುಮಾರನಂತಹ ಹಿಂದೂತ್ವವಾದಿಗಳಿ ಸ್ಥಾನ ನೀಡು[illegible] ಮೊದಲು ಆ ಪಕ್ಷದ ನಾಯಕರು ಸ್ವಲ್ಪ ಯೋಚಿಸಲಿ.

● ಅಜೀಜ್ ಕಿರುಗುಂ[illegible]


ಮಹೇಶ್ ತೆಂಗಿನಕಾಯಿ ಎಂಬ ರಾಜಕೀಯ ಪುಢಾರಿಯನ್ನು ಬಾಲವಿಕಾಸ ಅಕಾಡೆಮಿಗೆ ಅಧ್ಯಕ್ಷನನ್ನಾಗಿಸಿರುವುದು ಖಂಡಿತವಾಗಿಯೂ ಪ್ರಜ್ಞಾವಂತರೆಲ್ಲ ವಿರೋಧಿಸಬೇಕಾದ ವಿಚಾರ. ಬಾಲವಿಕಾಸ ಅಕಾಡೆಮಿಗೆ ಬಿಜೆಪಿಯ ಪೀಡೆ ಅಡರಿಕೊಂಡಿದೆ. ಬಿಜೆಪಿ ಸರ್ಕಾರ ಆ ಮೂಲಕ ರಾಜ್ಯದ ಬಾಲರ ಭವಿಷ್ಯಕ್ಕೆ ಕೊಳ್ಳಿಯಿಕ್ಕಿದೆ. ಇದರ ವಿರುದ್ಧ ದನಿಯೆತ್ತದೇ ಹೋದರೆ ಬಿಜೆಪಿ ದರ್ಬಾರಿನಲ್ಲಿ ಎಲ್ಲವೂ ಅರ್ಥ ಕಳೆದುಕೊಳ್ಳುವುದು ನಿಶ್ಚಿತ.

ಬಾಲವಿಕಾಸ ಅಕಾಡೆಮಿ ಅಧ್ಯಕ್ಷಗಾದಿಗೆ ವಕ್ಕರಿಸಿತು ಬಿಜೆಪಿ ಪೀಡೆ!


ಮಹೇಶ್ ತೆಂಗಿಕಾಯಿ

ಅಧಿಕಾರಾರೂಢ ಬಿಜೆಪಿ ಮಂದಿ ಕಂಡಕಂಡಲ್ಲೆಲ್ಲಾ ತಮ್ಮವರದ್ದೇ ಪರೇಡು ನಡೆಸಲು ಪಣತೊಟ್ಟಹಾಗಿದೆ. ಈ ಪ್ರಕ್ರಿಯೆಯ ಹಿಂದೆ ಹಿಂದೂತ್ವದ ಅಮಲನ್ನು ಎಲ್ಲೆಡೆ ಹರಡುವ ಹುನ್ನಾರವಿರುವುದು ರಹಸ್ಯವೇನಲ್ಲ, ಇದಕ್ಕೆ ಈಗಾಗಲೇ ಶಿಕ್ಷಣ ರಂಗವೂ ಸೇರಿದಂತೆ ಆಯಕಟ್ಟಿನ ವಿಭಾಗಗಳೆಲ್ಲ ದಾಳಗಳಾಗಿವೆ. ಇದೀಗ ಮಹತ್ತರ ಆಶಯಗಳೊಂದಿಗೆ ಅಸ್ತಿತ್ವಕ್ಕೆ ಬಂದ ಬಾಲವಿಕಾಸ ಅಕಾಡೆಮಿ ಕೂಡಾ ಬಿಜೆಪಿ ತೆವಲಿಗೆ ಬಲಿಯಾಗಿದೆ.

ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದುಕೊಂಡು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದ ಶಂಕರ ಹಲಗತ್ತಿಯವರ ಅವಧಿ ಮುಗಿಯಲು ಇನ್ನೂ ಒಂದು ವರ್ಷವಿದೆ. ಆದರೆ ಕಳೆದ ತಿಂಗಳ 21ನೇ ತಾರೀಖಿನಂದು ಹುಬ್ಬಳ್ಳಿಯ ರಾಜಕೀಯ ಪುಢಾರಿ ಮಹೇಶ್ ತೆಂಗಿನಕಾಯಿ ಎಂಬಾತನನ್ನು ನೂತನ ಅಧ್ಯಕ್ಷನನ್ನಾಗಿಸಿ ಆದೇಶವೊಂದು ಹೊರಬಿದ್ದಿದೆ.


ಶಂಕರ ಹಲಗತ್ತಿ

ಇದರಿಂದಾಗಿ ಬಾಲವಿಕಾಸ ಅಕಾಡೆಮಿಯನ್ನು ಹಲವಾರು ಕನಸುಗಳೊಂದಿಗೆ ಸಲಹುತ್ತಾ ಬಂದಿರುವವರನೇಕರು ಕಂಗಾಲಾಗಿದ್ದಾರೆ. ಅಕಾಡೆಮಿಗೆ ರಾಜಕೀಯ ಪ್ರವೇಶವಾದುದನ್ನು ವಿರೋಧಿಸಿ ಕವಯಿತ್ರಿ ರೂಪಾ ಹಾಸನ ಹಾಗೂ ಅನ್ನಪೂರ್ಣ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೂ ನಡೆದಿದೆ. ಇದಲ್ಲದೆ ಸಾಹಿತಿ ಗಳಾದ ಪಾಟೀಲ ಪುಟ್ಟಪ್ಪ, ಚನ್ನವೀರ ಕಣವಿ, ಸಿದ್ದಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ್ ಮುಂತಾದವರೂ ಬಿಜೆಪಿ ಭಂಡತನವನ್ನು ಬಹಿರಂಗವಾಗಿ ವಿರೋಧಿಸಿದ್ದಾರೆ.

ಮಹೇಶ್ ತೆಂಗಿನಕಾಯಿ ಎಂಬ ರಾಜಕೀಯ ಪುಢಾರಿಯನ್ನು ಬಾಲವಿಕಾಸ ಅಕಾಡೆಮಿಗೆ ಅಧ್ಯಕ್ಷನನ್ನಾಗಿಸಿರುವುದು ಖಂಡಿತವಾಗಿಯೂ ಪ್ರಜ್ಞಾವಂತರೆಲ್ಲ ವಿರೋಧಿಸಬೇಕಾದ ವಿಚಾರ. ಯಾಕೆಂದರೆ ಕನಿಷ್ಠ ಹತ್ತು ವರ್ಷವಾದರೂ ಮಕ್ಕಳ ಪರ ಕೆಲಸ ಮಾಡಿದವರೇ ಅಧ್ಯಕ್ಷರಾಗಬೇಕೆಂದು ಅಕಾಡೆಮಿಯ ಬೈಲಾ ಹೇಳುತ್ತದೆ. ಆದರೆ ಈ ತೆಂಗಿನಕಾಯಿ ಆತನ ಮಕ್ಕಳ ಪರ 'ಹೋರಾಡಿ'ರಬಹುದಷ್ಟೆ. ಅದು ಬಿಟ್ಟರೆ ಈತನಿಗೆ ಅಕಾಡೆಮಿಯ ಅಧ್ಯಕ್ಷನಾಗಲು ಯಾವ ಯೋಗ್ಯತೆಯೂ ಇಲ್ಲ.

ಹಾಗಾದರೆ ಸದುದ್ದೇಶಗಳ ತಳಹದಿಯಲ್ಲಿ ಅಸ್ತಿತ್ವ ಪಡೆದುಕೊಂಡಿರುವ ಅಕಾಡೆಮಿಗೆ ಈ ಪುಢಾರಿಯನ್ನೇಕೆ ಅಧ್ಯಕ್ಷನನ್ನಾಗಿಸಲಾಯಿತು? ಇದು ಪ್ರಮುಖ ಪ್ರಶ್ನೆ. ಇದಕ್ಕೆ ಉತ್ತರ ಹುಡುಕುತ್ತಾ ಸಾಗಿದರೆ ರಾಜಕೀಯ ಉದ್ದೇಶಗಳ ಹೊರತಾಗಿ ಬೇರೇನೂ ಕಾಣಸಿಗುವುದಿಲ್ಲ. ಸದ್ಯ ಈತ ಹುಬ್ಬಳ್ಳಿ ಶಹರ ಅಧ್ಯಕ್ಷನಾಗಿರುವಾತ. ಲಾಗಾಯ್ತಿನಿಂದಲೂ ರಾಜಕೀಯ ಪುಢಾರಿಗಳ ಹಿಂದೆ ಅಡ್ಡಾಡುವುದನ್ನೇ ಕಾಯಕ ಮಾಡಿಕೊಂಡಿರುವ ತೆಂಗಿನಕಾಯಿಗೆ ಅದೇ ಸ್ವಾಮಿ ಸೇವೆ, ಲೋಕಸೇವೆ. ಅದರ ಬಲದಿಂದಲೇ ಶಹರದ ಅಧ್ಯಕ್ಷಗಾದಿ ಕೆರೆದುಕೊಂಡವನಿಗೆ ಎಮ್ಮೆಲ್ಲೆ ಆಗುವ ಪಿತ್ಥ ಕೂಡಾ ನೆತ್ತಿಗೇರಿದೆ. ಈ ಸಂಬಂಧ ತನ್ನ ಗುರು ಜಗದೀಶ್ ಶೆಟ್ಟರನ ಬಳಿ ಆಗಾಗ ಗೋಳಾಡುತ್ತಲೇ ಬಂದಿದ್ದ. ಈತನನ್ನು ಹ್ಯಾಗಾದರೂ ಸಾಗ ಹಾಕುವ ಐಡಿಯಾದಲ್ಲಿದ್ದ ಶೆಟ್ಟರನಿಗೆ ಅಕಾಡೆಮಿಯ ಅಧ್ಯಕ್ಷಗಾದಿ ಕಂಡಿದೆ. ತಕ್ಷಣ ಶಂಕರ ಹಲಗತ್ತಿಯವರನ್ನು ಕಿತ್ತೊಗೆದು ಮಹೇಶ ತೆಂಗಿನಕಾಯಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲಿಗೆ ಶೆಟ್ಟರನಿಗೆ ಅಮರಿಕೊಂಡಿದ್ದ ಪೀಡೆ ತೊಲಗಿದಂತಾಗಿದೆ. ಬಿಜೆಪಿ ಅಜೆಂಡಾ ಕೂಡಾ ಜಾರಿಯಾದಂತಾಗಿದೆ.

ಇದು ನೂತನ ಅಧ್ಯಕ್ಷ ತೆಂಗಿನಕಾಯಿಯ ನೈಜ ತಿರುಳು!

ಆದರೆ... ಬಾಲ ವಿಕಾಸ ಅಕಾಡೆಮಿ ಇವನಂಥ ಅವಿವೇಕಿಗಳಿಂದ ಪಡೆದುಕೊಂಡಿತಾದರೂ ಏನನ್ನು? ಇದು ಪ್ರಜ್ಞಾವಂತರನ್ನು ಕಾಡುತ್ತಿರುವ ಪ್ರಶ್ನೆ. ವಾಸ್ತವವಾಗಿ ಮಹೇಶ ತೆಂಗಿನಕಾಯಿಗೆ ಅಕಾಡೆಮಿಯ ಧ್ಯೇಯೋದ್ದೇಶಗಳಾಗಲಿ, ಇಲ್ಲಿನ ಎಳೆ ಮಕ್ಕಳ ಉದ್ಧಾರದ ಕುರಿತಾಗಲಿ ಅರಿವು-ಆಸಕ್ತಿಗಳಿಲ್ಲ, ನಿಗಮ ಮಂಡಳಿ ಲೆವೆಲ್ಲಿನ ಅಧಿಕಾರ ಸಿಕ್ಕಿದೆಯೆಂಬ ಅಹಂ ಮಾತ್ರ ಆತನದ್ದು.

ಈ ಅವಿವೇಕಿ ಅಧಿಕಾರ ವಹಿಸಿಕೊಂಡ ರೀತಿಯೇ ಅಕಾಡೆಮಿಯ ಭವಿಷ್ಯವನ್ನು ಸಾರಿ ಹೇಳುವಂತಿದೆ. ಯೋಜನಾ ಅಧಿಕಾರಿಗಳ ಕಚೇರಿಗೆ ಮಹೇಶ್‌ನನ್ನು ಅಧ್ಯಕ್ಷನನ್ನಾಗಿಸಿದ ಆದೇಶ ಫ್ಯಾಕ್ಸ್ ಮೂಲಕ ಬಂದಿತ್ತಷ್ಟೆ. ಅದರ ಮರುದಿನ ಹತ್ತುಗಂಟೆ ಸುಮಾರಿಗೆ ಒಂದಷ್ಟು ಮಂದಿ ಬಿಜೆಪಿ ಕಾರ್ಯಕರ್ತರು ಹಾಗೂ ಪೊಲೀಸರೊಂದಿಗೆ ಅಕಾಡೆಮಿಯ ಧಾರವಾಡದ ಮುಖ್ಯ ಕಚೇರಿಗೆ ದಾಂಗುಡಿಯಿಟ್ಟ ಮಹೇಶ ಅಧಿಕಾರ ವಹಿಸಿಕೊಂಡ! ಇದು ಆತನೊಳಗಿನ ಅಧಿಕಾರ ದಾಹವನ್ನು ಜಾಹೀರುಗೊಳಿಸಿದೆ.

ಅಷ್ಟಕ್ಕೂ ಅಕಾಡೆಮಿಯ ಆಶೋತ್ತರಗಳು ರಾಜಕೀಯರಹಿತವಾದದ್ದು. 2009 ರಲ್ಲಿ ಜೀವ ಪಡೆದ ಅಕಾಡೆಮಿ ಹಲವು ಸಮಾಜಮುಖಿ ಮನಸುಗಳ ದೂರದೃಷ್ಟಿಯ ಫಲ. ರಾಜ್ಯದ ಮಕ್ಕಳ ಭವಿಷ್ಯವನ್ನು ಎಳವೆಯಿಂದಲೇ ಚೆಂದಗೆ ರೂಪಿಸುವ ಹಾಗೂ ಅವರಿಗೆದುರಾಗುವ ಅಭದ್ರತೆಗಳಿಂದ ಪಾರು ಮಾಡುವುದು ಇದರ ಮೂಲ ಉದ್ದೇಶ. ಇದರೊಂದಿಗೇ ಮಕ್ಕಳ ಆಸಕ್ತಿ, ಹವ್ಯಾಸ, ಪ್ರತಿಭೆಗಳಿಗೂ ನೀರೆರೆದು ಪೋಷಿಸುವ ಕನಸು ಅಕಾಡೆಮಿಯ ತಳಹದಿಯಾಗಿದೆ.

ಇದಕ್ಕೆಲ್ಲ ಪೂರಕ ಮನಸ್ಥಿತಿ ಹೊಂದಿದ್ದವರು ಶಂಕರ ಹಲಗತ್ತಿ, ಅಕಾಡೆಮಿ ಸದಸ್ಯರೂ ಕೂಡಾ ಸರ್ವಾನುಮತದಿಂದ ಇವರನ್ನೇ ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಅದಾದ ಬಳಿಕ ಈ ಎರಡು ವರ್ಷಗಳಲ್ಲಿ ಹತ್ತು ಹಲವು ಹೊಸಾ ಕಾರ್ಯಕ್ರಮಗಳ ಮೂಲಕ ಹಲಗತ್ತಿಯವರು ಅಕಾಡೆಮಿಗೆ ಜೀವ ತುಂಬಿದ್ದಾರೆ. ಇನ್ನೂ ಅನೇಕ ಯೋಜನೆಗಳು ಅವರ ಮುಂದಿದ್ದವು. ಸದಸ್ಯರಲ್ಲೂ ಕೂಡಾ ಹೊಸತನದ ತಹತಹಿಕೆಯಿತ್ತು.


ಆದರೆ ರಾಜಕೀಯದ ರಾಡಿ ಅದೆಲ್ಲದರ ಮೇಲೆ ಹರಿದು ಕುಲಗೆಡಿಸಿದೆ. ಅಕಾಡೆಮಿಯ ತುಂಬಾ ಸಾಹಿತ್ಯಿಕ ಪರಿಸರದಲ್ಲಿ ಮಿಂದ ಮನಸ್ಸುಗಳೇ ಇರುವುದರಿಂದ ಅವು ರಾಜಕೀಯದಾಟಕ್ಕೆ ಒಗ್ಗುತ್ತಿಲ್ಲ, ಆದುದರಿಂದಲೇ ರೂಪಾ ಹಾಸನ ಹಾಗೂ ಅನ್ನಪೂರ್ಣ ಸದಸ್ಯತ್ವ ತಿರಸ್ಕರಿಸಿದ್ದಾರೆ. ಇನ್ನೂ ಕೆಲ ಮಂದಿ ಆ ಹಾದಿಯಲ್ಲಿದ್ದಾರೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವಿದೆ. ಮಹೇಶ ತೆಂಗಿನಕಾಯಿ ಎಂಬ ಪುಢಾರಿ ಅಕಾಡೆಮಿ ಅಧ್ಯಕ್ಷನಾಗಿದ್ದರ ವಿರುದ್ಧ ಹುಬ್ಬಳ್ಳಿ ಸೀಮೆಯ ಸಾಹಿತಿ-ಪ್ರಜ್ಞಾವಂತರನೇಕರು ಪ್ರತಿಭಟಿಸಿದ್ದಾರೆ. ಆದರೆ ರಾಜ್ಯದಲ್ಲಿ ಬುದ್ಧಿಜೀವಿಗಳು, ಸಾಮಾಜಿಕ ಕಾಳಜಿಯ ಇಮೇಜು ಹೊಂದಿರುವವರನೇಕರು ಬಾಯಿ ಹೊಲಿದುಕೊಂಡಂತೆ ತೆಪ್ಪಗಿದ್ದಾರೆ. ಇದು ನಿಜಕ್ಕೂ ವಿಪರ್ಯಾಸಕರ ಸಂಗತಿ.

ಒಟ್ಟಾರೆಯಾಗಿ ಬಾಲವಿಕಾಸ ಅಕಾಡೆಮಿಗೆ ಬಿಜೆಪಿಯ ಪೀಡೆ ಅಡರಿಕೊಂಡಿದೆ. ಬಿಜೆಪಿ ಸರ್ಕಾರ ಆ ಮೂಲಕ ರಾಜ್ಯದ ಬಾಲರ ಭವಿಷ್ಯಕ್ಕೆ ಕೊಳ್ಳಿಯಿಕ್ಕಿದೆ. ಇದರ ವಿರುದ್ಧ ದನಿಯೆತ್ತದೇ ಹೋದರೆ ಬಿಜೆಪಿ ದರ್ಬಾರಿನಲ್ಲಿ ಎಲ್ಲವೂ ಅರ್ಥ ಕಳೆದುಕೊಳ್ಳುವುದು ನಿಶ್ಚಿತ.


• ವರದಿಗಾರ

ಕಾರ್ಪೊರೇಟರ್ ಹೂವಪ್ಪ ಕುಡಿದು ಕಲ್ಲು ತೂರಿದ!


ಹೂವಪ್ಪ

ಹುಬ್ಬಳ್ಳಿ ಸೀಮೆಯ ಕಾರ್ಪೊರೇಟರುಗಳು ಪಕ್ಕಾ ಜನಕಂಟಕರಾಗುತ್ತಿದ್ದಾರೆ. ಚೇಲಾಗಿರಿ ನಡೆಸುವವರು, ಪುಡಿ ರೌಡಿಗಳೇ ಕಣಕ್ಕೆ ಧುಮುಕಿ ಧಮಕಿಗಳ ಮೂಲಕವೇ ಗೆಲ್ಲುವ ಪರಂಪರೆಯೊಂದು ಈ ಭಾಗದಲ್ಲಿ ಅವ್ಯಾಹತವಾಗಿರುವುದೇ ಇದಕ್ಕೆ ಕಾರಣ. ಈ ರೀತಿಯೇ ಆರಿಸಿ ಬಂದು ಈಗೆರಡು ವರ್ಷಗಳ ಹಿಂದೆ ದೇವಾಲಯದ ಜಾಗವನ್ನೇ ನುಂಗಲೆತ್ನಿಸಿ ಇಕ್ಕಿಸಿಕೊಂಡಿದ್ದ ಕಾರ್ಪೊರೇಟರ್ ಹೂವಪ್ಪ ದಾಯಗೋಡಿ ಅಧ್ವಾನ ಮಾಡಿಕೊಂಡಿದ್ದಾನೆ.

ಮೊನ್ನೆ ಶನಿವಾರ ರಾತ್ರಿ ತನ್ನ ಸಹೋದರನೊಂದಿಗೆ ಕುಡಿದು ಚಿತ್ತಾದ ಹೂವಪ್ಪ ಗ್ರಾಮದೇವತೆ ಟ್ರಸ್ಟ್ ಕಾರ್ಯಾಧ್ಯಕ್ಷ ಹನುಮಂತಪ್ಪ ಮಾರುತಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಭರಮಗೌಡರ ಮನೆ ಮೇಲೆ ಕಲ್ಲು ತೂರಾಟ ನಡೆಸಿದ್ದಾನೆ. ಜೊತೆಗೆ ಓಟು ಹಾಕಿ ಗೆಲ್ಲಿಸಿದ ಅನೇಕರ ಮನೆಗಳಿಗೂ ಕಲ್ಲು ತೂರಿ ಕಿಟಕಿ ಗಾಜು ಪುಡಿಗಟ್ಟಿ ದಾಂಧಲೆಯೆಬ್ಬಿಸಿದ್ದಾನೆ.



ಹೂವಪ್ಪ ಕುಡಿದ ಮತ್ತಿನಲ್ಲಿ ಈ ಕೆಲಸ ಮಾಡಿದ್ದರೂ ಅದಕ್ಕೆ ಬಲವಾದೊಂದು ಕಾರಣವಿದೆ. ಈತ ಈಗ್ಗೆ ಎರಡು ವರ್ಷದ ಹಿಂದೆ ಆದ ಅವಮಾನವೊಂದಕ್ಕೆ ಈ ಮೂಲಕ ಪ್ರತೀಕಾರ ತೀರಿಸಿಕೊಂಡಿರುವುದೂ ಸ್ಪಷ್ಟವಾಗಿದೆ.


೨೦೦೮ ಸಾಲಿನಲ್ಲೀತ ಪಾಲಿಕೆಗೆ ಬಿಜೆಪಿಯಿಂದ ಸದಸ್ಯನಾಗಿ ಆರಿಸಿಬಂದಿದ್ದ. ಆ ಸಂದರ್ಭದಲ್ಲಿ ಎಲ್ಲಾ ಪ್ರಭಾವಗಳನ್ನು ಒಟ್ಟುಗೂಡಿಸಿ ಮಾರುತಿ ದೇವಸ್ಥಾನ ಟ್ರಸ್ಟ್‌ಗೆ ಅಧ್ಯಕ್ಷನಾಗಿ ವಕ್ಕರಿಸಿಕೊಂಡಿದ್ದ. ಇದಕ್ಕೆ ಆತನ ಗೂಂಡಾಗಿರಿಯೇ ಮೂಲ ಮಾನದಂಡವಾಗಿತ್ತು. ಇದರ ಹಿಂದಿದ್ದ ದೇವಸ್ಥಾನದ ಆಸ್ತಿ ಹೊಡೆಯುವ ಮಸಲತ್ತು ಅಲ್ಪಾವಧಿಯಲ್ಲೇ ಜಾಹೀರಾಗಿತ್ತು.

ಟ್ರಸ್ಟ್‌ಗೆ ಸೇರಿದ್ದ 7 ಗುಂಟೆ ಬೆಲೆಬಾಳುವ ಭೂಮಿ ಮೇಲೆ ಕಣ್ಣಿಟ್ಟು ನುಂಗಲು ಹೊಂಚು ಹಾಕುತ್ತಿದ್ದ ಹೂವಪ್ಪ ಅಂತೂ ಮುಹೂರ್ತ ನಿಗದಿ ಮಾಡಿಬಿಟ್ಟಿದ್ದ. ಅದರನ್ವಯ 25-10-2010ರಂದು ಟ್ರಸ್ಟ್‌ನ ಭೂಮಿಯನ್ನು ಕೇವಲ 14 ಲಕ್ಷದ 40 ಸಾವಿರಕ್ಕೆ ಏಕಾಏಕಿ ಮಾರಿಬಿಟ್ಟಿದ್ದ. ವಾಸ್ತವವೆಂದರೆ ಆ ಕಾಲಕ್ಕೆ ಅದರ ಮಾರುಕಟ್ಟೆ ಬೆಲೆ ಎಪ್ಪತ್ತರಿಂದ ಎಂಬತ್ತು ಲಕ್ಷದಷ್ಟಿತ್ತು!

ಹೀಗೆ ಟ್ರಸ್ಟ್‌ನ ಆಸ್ತಿಯನ್ನು ಪುಟಗೋಸಿ ಬೆಲೆಗೆ ಮಾರಿದ ಹೂವಪ್ಪ ಅದನ್ನು ತನ್ನ ಹೆಸರಿಗೆ ವರ್ಗಾಯಿಸುವ ಸಂಚು ರೂಪಿಸದ. ಅದಾಗಲೇ ಹೂವಪ್ಪನ ಹಲಾಲುಕೋರತನ ಕಮಿಟಿ ಸದಸ್ಯರಿಗೆ ತಿಳಿದುಹೋಗಿತ್ತು, ತಕ್ಷಣ ಜಾಗೃತರಾದ ಸದಸ್ಯರುಗಳು ಈ ಭೂಮಿ ಹೂವಪ್ಪನ ಹೆಸರಿಗೆ ನೋಂದಣಿಯಾಗದಂತೆ ತಡೆದಿದ್ದರು. ಓಣಿಯ ತುಂಬಾ ಈ ವಿಚಾರ ಹಬ್ಬಿದ್ದೇ ತನ್ನ ಗೆಲುವಿಗೆ ಕಂಟಕವಾಗುತ್ತದೆಂದು ಕಂಗಾಲಾದ ಹೂವಪ್ಪ ಭೂಮಿಯನ್ನು ಟ್ರಸ್ಟ್‌ಗೆ ಮರಳಿ ಪಡೆದಿದ್ದ.

ಈ ದೇವಾಲಯದೆಡೆಗೆ ಜನರಲ್ಲೊಂದು ಭಯಭಕ್ತಿಯಿದೆ. ಅದರ ಭೂಮಿಯನ್ನೇ ನುಂಗಹೊರಟಿರುವ ಹೂವಪ್ಪನ ವಿರುದ್ಧ ಭಕ್ತ ಜನರ ನಡುವಲ್ಲೊಂದು ಆಕ್ರೋಶ ಮಡುಗಟ್ಟಿತ್ತಲ್ಲಾ? ಅದು ಆತನನ್ನು ಅಧ್ಯಕ್ಷಗಾದಿಯಿಂದ ಎಗರಿಸುವ ಮೂಲಕ ಪರ್ಯಾವಸಾನಗೊಂಡಿತು. ಆ ಜಾಗಕ್ಕೆ ಜನರೇ ತಂದು ಕೂರಿಸಿದ್ದು ಹಿರಿಯರಾದ ಶಂಕರಗೌಡರ ಭರಮಗೌಡರನ್ನು. ಅದರ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಹನುಮಂತಪ್ಪ ಹೂವಿ ನೇಮಿಸಲ್ಪಟ್ಟಿದ್ದರು.

ಇದರಿಂದ ಹೂವಪ್ಪ ಕುದ್ದು ಹೋಗಿದ್ದ.



ಆಗಿನಿಂದಲೂ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ. ಅದನ್ನು ಮೊನ್ನೆ ತನ್ನ ಸಹೋದರನ ವಿಠಲ, ಏಕನಾಥರೊಂದಿಗೆ ಕಂಠಮಟ್ಟ ಕುಡಿದು ಹನುಮಂತಪ್ಪ ಹೂವಿ ಮತ್ತು ಭರಮಗೌಡರ ಮನೆ ಮೇಲೆ ಕಲ್ಲು ತೂರುವ ಮೂಲಕ ತೀರಿಸಿಕೊಂಡಿದ್ದಾನೆ. ಈತನ ತೆವಲಿಗೆ ಬಡಬಗ್ಗರ ಮನೆ ಗಾಜುಗಳೂ ಪುಡಿಯಾಗಿವೆ.

ಈ ಬಗ್ಗೆ ಭರಮಗೌಡರ ಹಾಗೂ ಹನುಮಂತಪ್ಪ ಕೇಶ್ವಾಪುರ ಠಾಣೆಗೆ ತೆರಳಿ ದೂರು ನೀಡಿದರು. ಆದರೆ ಹೂವಪ್ಪ ಕಾರ್ಪೊರೇಟರ್ ಹಾಗೂ ಜಗದೀಶ ಶೆಟ್ಟರನ ಶಿಷ್ಯನೆಂಬ ಮುಲಾಜಿಗೆ ಬಿದ್ದ ಪೊಲೀಸರು ತೆಪ್ಪಗಾಗಿದ್ದಾರೆ. ಹೂವಪ್ಪ ಮಾಡಬಾರದ್ದು ಮಾಡಿ ಗೂಳಿಯಂತೆ ಅಡ್ಡಾಡುತ್ತಿದ್ದಾನೆ.

ಇಂಥಾ ವ್ಯವಸ್ಥೆಯಲ್ಲಿ ರೌಡಿಸಂ ವಿಜೃಂಭಿಸದೆ ಇನ್ನೇನಾದೀತು?

• ಹುಬ್ಬಳ್ಳಿಯಾಂವ

ಉತ್ತರ ಕನ್ನಡ

ಹಳ್ಳಿ ಅಖಾಡ ರೆಡಿ ಪುಢಾರಿಗಳ ಗಡಿಬಿಡಿ!

ಉತ್ತರಕನ್ನಡದ ಹಳ್ಳಿಗಾಡಿನಲ್ಲೀಗ ಗಾಂವಠಿ ಪಾಲಿಟಿಕ್ಸ್ ಗಲಾಟೆ-ಗುದುಮುರಿಗೆಯದೇ ಸದ್ದು-ಸುದ್ದಿ. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆ ತಾಪಮಾನ ಒಂದೇ ಸಮನೇ ಏರುತ್ತಿದೆ. ಅಸೆಂಬ್ಲಿ ಕದನಕ್ಕೆ ಸೆಮಿಫೈನಲ್ ನಂತಿರುವ ಈ ಗ್ರಾಮೀಣ ಗುದ್ದಾಟಕ್ಕೆ ಅಖಾಡವೇನೋ ಸಿದ್ಧವಾಗಿದೆ. ಆದರೆ ಆಡಳಿತಾರೂಢ ಬಿಜೆಪಿ ಮತ್ತು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್‌ನ 'ಹೇಡಿ ಹಿರಿಯರಿಗೆ' ಅಂಥ ಉತ್ಸಾಹ-ಉಮೇದಿಯೇನೂ ಇಲ್ಲದಾಗಿದೆ. ಎರಡೂ ಪಕ್ಷಗಳು ಆಂತರಿಕ ಗ್ಯಾಂಗ್‌ವಾರ್‌ನಿಂದ ಗಬ್ಬೆದ್ದು ಹೋಗಿರುವುದೇ ಇದಕ್ಕೆ ಕಾರಣ.

ಬೇಡಬೇಡವೆಂದರೂ ಸ್ಥಳೀಯಾಡಳಿತ ಚುನಾವಣೆ ಮಾರಿ ಅಷ್ಟೂ ಪಕ್ಷದ ಯಜಮಾನರ ಎದೆಯೇರಿ ಕುಳಿತುಬಿಟ್ಟಿದೆ! ದೊಡ್ಡವರು ಅನಿವಾರ್ಯವಾಗಿ ಅಖಾಡಕ್ಕೆ ಧುಮುಕಬೇಕಲ್ಲ ಎಂಬ ಬೇಸರದಲ್ಲಿದ್ದರೆ 'ಸಣ್ಣವರು' ಮಾತ್ರ ಟಿಪಿ-ರೆಢ್‌ಪಿ ಸದಸ್ಯರಾಗುವ ರಣೋತ್ಸಾಹದಲ್ಲಿ ಗಾಡ್‌ಫಾದರ್‌ಗಳಿಗೆ ದುಂಬಾಲು ಬಿದ್ದಿದ್ದಾರೆ. ಜಿಲ್ಲೆಯ ಕುಮಟಾ ಮತ್ತು ಹಳಿಯಾಳದಲ್ಲಿ ಜೆಡಿಎಸ್ ಎಮ್ಮೆಲ್ಲೆಗಳಿದ್ದಾರೆ. ಹಾಗಾಗಿ ಇಲ್ಲಿ ತ್ರಿಕೋನ ಕಾಳಗ ಏರ್ಪಡಬಹುದು. ಆದರೆ ಅಸಲಿ ಯುದ್ಧವೇನಿದ್ದರೂ ಅದು ಕಾಂಗ್ರೆಸ್-ಬಿಜೆಪಿ ನಡುವೆಯಷ್ಟೇ.

ಬಿಜೆಪಿ ಬಡಿವಾರ

ಪ್ರಪಾತದ ಅಂಚಿಗೆ ಹೋಗಿ ಬಚಾವಾಗಿರುವ ಭ್ರಷ್ಟ ಸಿಎಂ ಯಡ್ಡೀಜಿ ನೇತೃತ್ವದ ಬಿಜೆಪಿಗೆ ಈ ಹಳ್ಳಿ ಹಣಾಹಣಿ ಪ್ರತಿಷ್ಠೆಯ ಕದನದಂತಾಗಿದೆ. ಆದರೆ ಉತ್ತರ ಕನ್ನಡದಲ್ಲಿ ಮುಂಡಗೋಡಿನ 'ಲಿಂಗಾಯತ ಶಾಸಕ' ವಿ.ಎಸ್.ಪಾಟೀಲ್ ಎಂಬ ಲೋಪ್ರೊಫೈಲ್ 'ಪ್ಯಾದೆ' ಬಿಟ್ಟರೆ ಉಳಿದವರ್‍ಯಾರೂ ಯಡ್ಡಿಗೆ ನಿಷ್ಠರಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಮಾಣಿ ಎಂಬ ಗುಳ್ಳೆನರಿ, ಕ್ರಿಮಿನಲ್ ಕೋಮುವಾದಿ ಸಂಸದ ಅನಂತ್ಮಾಣಿ ಮತ್ತು ಭಟ್ಕಳದ ಮಾಜಿ ಮಂತ್ರಿ ಕಂ ಹಾಲಿ ಸಾಬೂನು ನಿಗಮದ ಅಧ್ಯಕ್ಷ ಶಿವಾನಂದ ನಾಯ್ಕಗೆ ಸ್ವಪ್ರತಿಷ್ಠೆಯೇ ಪಾಲಿಟಿಕ್ಸು! ಈ ಮೂವರಿಗೆ ಒಬ್ಬನ ತಲೆ ಕಂಡರೆ ಮತ್ತೊಬ್ಬನಿಗೆ ಆಗುವುದಿಲ್ಲ.

ಆದರೆ ಜಿಲ್ಲೆಯ ಬಿಜೆಪಿಯಲ್ಲಿ ಅಂತಿಮವಾಗಿ ನಡೆಯುವುದು ಶೂದ್ರ V/s ಬ್ರಾಹ್ಮಣ ಬಡಿದಾಟ. ಹಾಗಾಗಿ ಬ್ರಾಹ್ಮಣ ಸಮುದಾಯದ ಮಂತ್ರಿ ಕಾಗೇರಿ ಮತ್ತು ಎಂಪಿ ಅನಂತ್ಮಾಣಿ ಶೂದ್ರ (ದೀವರ) ಶಿವಾನಂದ ನಾಯ್ಕನ ಟಾರ್ಗೆಟ್ ಮಾಡಿಕೊಂಡು ಆಗಾಗ ಹೊಂದಾಣಿಕೆ ಮಾಡಿಕೊಳ್ಳುತ್ತಿರುತ್ತಾರೆ. ಈಗ ಬಂದಿರುವ ಗ್ರಾಸ್ ರೂಟ್ ಲೆವೆಲ್‌ನ ಜಿಪಂ-ತಾಪಂ ಎಲೆಕ್ಷನ್ ಸಂದರ್ಭ ಬಳಸಿಕೊಂಡು ಇಡೀ ಜಿಲ್ಲೆಯ ಬಿಜೆಪಿ ಮೇಲೆ ಹಿಡಿತ ಸಾಧಿಸಲು ಸಾಧ್ಯವೇ ಎಂದು ಕಾಗೇರಿ ಹೊಂಚುಹಾಕಿ ಸಂಚು ರೂಪಿಸುತ್ತಿದ್ದಾರೆ. ಎಂಪಿ ಅನಂತ್ಮಾಣಿ ಬ್ರಾಹ್ಮಣ ಸಾಮ್ರಾಜ್ಯ ಸ್ಥಾಪಿಸುವ ಹಿಡನ್ ಅಜೆಂಡಾ ಇಟ್ಟುಕೊಂಡು ಕಾಗೇರಿ ಹೆಗಲ ಮೇಲೆ ಕೈಹಾಕಿಕೊಂಡು ಓಡಾಡುತ್ತಿದ್ದಾರೆ. ಒಮ್ಮೆ ಹಿಂದಿನ ಆಶ್ರಯದಾತನೂ ಇಂದಿನ ಶತ್ರುವೂ ಆಗಿರುವ ಶಿವಾನಂದನಾಯ್ಕ ಎಂಬ ಪ್ರಬಲ ದೀವರ ಜಾತಿಯ ದುಷ್ಮನ್ ಅಳಿದರೆ ಮುಂದೆ ಕಾಗೇರಿ ನಿಭಾಯಿಸುವುದು ಅಷ್ಟು ಕಷ್ಟವಲ್ಲ ವೆಂಬ ದೂ(ದು)ರಾಲೋಚನೆ ಧೂರ್ತ ಅನಂತ್ಮಾಣಿಯದು.

ಜಿಪಂ-ತಾಪಂ ಬಿಜೆಪಿ ಟಿಕೆಟ್ ತಮಗೆ ಅನುಕೂಲಕರವಾಗಿ ಬಿಕರಿ ಮಾಡುವ ಒಪ್ಪಂದ ಕಾಗೇರಿ-ಅನಂತ್ಮಾಣಿ ಮಾಡಿಕೊಂಡಿದ್ದಾರೆ. ಅದರಂತೆ ಭಟ್ಕಳದಲ್ಲಿ ಶಿವಾನಂದ ನಾಯ್ಕ ಗ್ಯಾಂಗಿಗೆ ಒಂದೇಒಂದು ಸೀಟು ಸಿಗದಂತೆ ಮಾಡಲು ಈ ಮಾಣಿದ್ವಯರು ನಿರ್ಧರಿಸಿದ್ದಾರೆ. ಭಟ್ಕಳದಲ್ಲಿ ಶಿವಾನಂದ ನಾಯ್ಕನ ವಿರುದ್ಧ ಒಂದಿಷ್ಟು ಪುಂಡ-ಭಂಡ ದೀವರ ಪುಂಡರನ್ನೇ ಅನಂತ್ಮಾಣಿ ಎತ್ತಿಕಟ್ಟಿ ಆಟ ಆಡುತ್ತಿದ್ದಾನೆ. ಭಟ್ಕಳ ತಾಲ್ಲೂಕು ಬಿಜೆಪಿ ಅಧ್ಯಕ್ಷನಾಗಿದ್ದ ಶಿವಾನಂದ ನಾಯ್ಕರ ನಿಷ್ಠನೊಬ್ಬನ ವಿರುದ್ಧ ನೇರ ರಾಜ್ಯ ಅಧ್ಯಕ್ಷ ಈಶ್ವರಪ್ಪನಿಗೆ ಚಾಡಿ ಹೇಳಿ ಕಿತ್ತು ಆತನನ್ನು ಹಾಕಿಸಿದ್ದ ಅನಂತ್ಮಾಣಿ ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ನಾಯ್ಕ ಪಡೆಯನ್ನು ಮತ್ತೇಳದಂತೆ ಬಡಿದು ಹಾಕುವ ಹರಿತಕ್ಕೆ ಬಿದ್ದಿದ್ದಾರೆ. ಅದಕ್ಕೊಂದು ಸ್ಥಳೀಯ ಕಾಂಗ್ರೆಸ್ ಶಾಸಕ ಜೆ.ಡಿ.ನಾಯ್ಕರ ನೆರವೂ ಪಡೆಯುತ್ತಿದ್ದಾನೆ. ಈ ಜೆ.ಡಿ.ನಾಯ್ಕ ಕಳೆದ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ತನಗೆ ಅಸೆಂಬ್ಲಿ ಎಲೆಕ್ಷನ್‌ಗೆ ಹೆಲ್ಪ್ ಮಾಡಿದ್ದ ಬಿಜೆಪಿಯ ಅನಂತ್ಮಾಣಿ ಗೆಲುವಿಗೆ ಶ್ರಮಿಸಿದ ದೇಶಪಾಂಡೆ ಶಿಷ್ಯ ಅರ್ಥಾತ್ ಮ್ಯಾಗಿ ವಿರೋಧಿ.

ಈ ಕಾಗೇರಿ-ಅನಂತ್ಮಾಣಿಗಳು ಬ್ರಾಹ್ಮಣ ಪಾರುಪತ್ಯ ತರುವ ಅದೆಂಥದೇ ಸ್ಕೆಚ್ ಹಾಕಿದರೂ ಇಡೀ ಜಿಲ್ಲೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವುದು ಅಷ್ಟು ಸುಲಭವಲ್ಲ, ಏಕೆಂದರೆ ಬಿಜೆಪಿ ಮುಖಂಡರು ಎಂದೂ ಎರಡನೇ ಲೆವೆಲ್ ನಾಯಕರನ್ನು ತಯಾರು ಮಾಡಿದವರಲ್ಲ, ಇರುವ ಅಧಿಕಾರವೆಲ್ಲ ತಮಗೇ, ತಮ್ಮ ವಿಪ್ರ ಸಂಕುಲಕ್ಕೆ ದಕ್ಕಬೇಕೆಂಬ ದುರಾಸೆ ಈ ಕಾಗೇರಿ-ಅನಂತ್‌ಗೆ. ಮೀಸಲಾತಿ ಆಧಾರದಲ್ಲಿ ಸ್ಥಳೀಯಾಡಳಿತ ಎಲೆಕ್ಷನ್ ನಡೆಯುವುದು ಈ ಮಾಣಿಗಳ ತಲೆ ಬಿಸಿ ಮಾಡಿಬಿಟ್ಟಿದೆ. ಶೂದ್ರ ಸಮುದಾಯದಲ್ಲಿ ಬಿಜೆಪಿಗೆ ಅಭ್ಯರ್ಥಿಗಳೇ ಸಿಗುತ್ತಿಲ್ಲ, ಕಾಗೇರಿಗೆ ಆತನ ಶಿರಸಿ-ಸಿದ್ದಾಪುರದಲ್ಲೇ ದೊಡ್ಡ ವಿರೋಧ ಎದುರಾಗುತ್ತಿದೆ. ಈತನ ಜಾತಿಯತೆ ಸ್ವಾಹಾ, ಹೇತ್ಲಾಂಡಿತನದಿಂದ ಜನ ರೋಸತ್ತು ಹೋಗಿದ್ದಾರೆ.

ಹಾಗಾಗಿ ಎಂಪಿ-ಎಮ್ಮೆಲ್ಲೆ ಸೀಟನ್ನು 'ಧರ್ಮಕಾರಣ' ಕರಾಮತ್ತಿನಿಂದ ಗೆದ್ದಂತೆ ಜಿಪಂ-ತಾಪಂ ವಶಪಡಿಸಿಕೊಳ್ಳಲು ಬಿಜೆಪಿಯ ಭ್ರಷ್ಟ ಬ್ರಾಹ್ಮಣ ನೇತಾಗಳಿಗೆ ಸಾಧ್ಯವಾಗುತ್ತಿಲ್ಲ, ಹಾಗಾಗಿ ಬ್ರಾಹ್ಮಣರ ಮನೆಯ ಸಾಕುಪ್ರಾಣಿಗಳಂಥವರ ಹೆಕ್ಕಿ ತೆಗೆದು ಎಲೆಕ್ಷನ್‌ಗೆ ನಿಲ್ಲಿಸಿ ಹಣದ ಹೊಳೆ ಹರಿಸಲು ಕಾಗೇರಿ ಪಡೆ ಹಿಕಮತ್ತು ಹೆಣೆದಿರುವುದು ಬಿಜೆಪಿಯ ಶೂದ್ರ ವಲಯದಲ್ಲಿ ಚರ್ಚೆಯಾಗುತ್ತಿದೆ. ಕನಿಷ್ಠ ಐದು ಲಕ್ಷ ತಾಕತ್ತಿನ ಶೂದ್ರ ಕ್ಯಾಂಡಿಡೇಟ್‌ಗಳ ತಲಾಶ್‌ಗೆ ಕಾಗೇರಿ-ಅನಂತ್ಮಾಣಿ ಬಿದ್ದಿದ್ದಾರೆ. ಜತೆ ಐದೈದು ಲಕ್ಷ ಪಾರ್ಟಿ ಫಂಡ್‌ನಿಂದ ಕೊಡುವ ಮಾತಾಡುತ್ತಿದ್ದಾರೆ. ಕಾಗೇರಿ-ಅನಂತ್ಮಾಣಿ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಬಿಜೆಪಿ ಜಿಪಂ ಗದ್ದುಗೆ ಹಿಡಿಯುವುದು ಅನುಮಾನವೆಂದೇ ರಾಜಕೀಯ ಲೋಕದಲ್ಲಿ ವಿಶ್ಲೇಷಿಸಲಾಗುತ್ತಿದೆ.

ಹೇಗೆ ನೋಡಿದರೂ ಬಿಜೆಪಿಗೆ ಜಿಲ್ಲೆಯಲ್ಲಿ ತಾಕತ್ತಿಲ್ಲವೆಂಬುದು ಎಂಥವರಿಗೂ ಕಾಣಿಸುತ್ತದೆ. ಲೋಕಸಭೆ ಎಲೆಕ್ಷನ್‌ನಲ್ಲಿ ಬಿಜೆಪಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗಿಂತ ಹಿಂದಿತ್ತು. ಆದರೆ ಬೆಳಗಾವಿ ಜಿಲ್ಲೆಯ ಖಾನಾಪುರ-ಕಿತ್ತೂರರಲ್ಲಿದ್ದ ಲಿಂಗಾಯತರ ಓಟಿಂದ ಅನಂತ್ಮಾಣಿ ಅಯೋಗ್ಯನಾದರೂ ಅಜೇಯನೆನಿಸಿಕೊಂಡಿದ್ದ. ಹಾಗೆಯೇ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಎಮ್ಮೆಲ್ಲೆ ಎಲೆಕ್ಷನ್‌ನಲ್ಲಿ ಬಿಜೆಪಿಯ ಜಿಲ್ಲಾಧ್ಯಕ್ಷನಾಗಿದ್ದ ಅನಂತ್ಮಾಣಿ ಶಿಷ್ಯ ವಿನೋದ ಪ್ರಭು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದ. ತನ್ನ ಮನೆ ಮತಗಟ್ಟೆಯಲ್ಲೇ ಬಿಜೆಪಿಗೆ ಮತ ಹಾಕಿಸಲಾಗದ ಈ ಗತಿಗೇಡಿ ಚೆಡ್ಡಿ ಚತುರನನ್ನು ಈಗ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇರೆ ಮಾಡಲಾಗಿದೆ. ಹಿಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿದ್ದ ಸಜ್ಜನ-ಸರಳ ಶಶಿಭೂಷಣ ಹೆಗಡೆ ಎಂಬ ರಾಮಕೃಷ್ಣ ಹೆಗಡೆ ಮೊಮ್ಮಗನ ವಿರುದ್ಧ ಕೆಲಸ ಮಾಡಿದ್ದಕ್ಕೆ ಅನಂತ್ಮಾಣಿ ಮೊದ್ಮಣಿ ವಿನೋದಣ್ಣನಿಗೆ ಇನಾಮಾಗಿ ಗೂಟದ ಕಾರು ಕೊಡಿಸಿದ್ದಾರೆ.

ವಿನೋದಣ್ಣ ಕೆಂಪು ಗೂಟದ ಕಾರು ತಂದಿರುವುದರಿಂದ ಕುಮಟೆಯಲ್ಲೇನೂ ಬಿಜೆಪಿಗೆ ಪ್ರಯೋಜನವಿಲ್ಲ, ಅದೇರೀತಿ ಬ್ರಾಹ್ಮಣ ಸಮುದಾಯದ ಇನ್ನಿಬ್ಬರು ಜಿಲ್ಲೆಯಿಂದ ರಾಜ್ಯ ಮಟ್ಟದ ನಿಗಮ ಮಂಡಳಿ ಅಧ್ಯಕ್ಷರಾಗಿದ್ದಾರೆ. ಜನಬಳಕೆಯಿಲ್ಲದ ಚೆಡ್ಡಿಗಳಿವರು. ಒಬ್ಬ ಪಕ್ಕಾ ಶೂದ್ರ ಶತ್ರು ಸಚ್ಚಿದಾನಂದ ಹೆಗಡೆ. ಈತನಿಗೆ ಪಾನ ಸಂಯಮ ಮಂಡಳಿ ಸುಖ ಸಿಕ್ಕಿದೆ. ಇನ್ನೊಬ್ಬ ಅರಣ್ಯ ಅತಿಕ್ರಮಣ ಮಾಡಿಕೊಂಡು ದುಂಡಗಾಗಿರುವ 'ಪರಿಸರ ವ್ಯಾಧಿ' ಅನಂತ ಹೆಗಡೆ ಆಶೀಸರ. ಕಾಡಿನ ಮಕ್ಕಳ 'ಕಾಡುಪ ಚೆಡ್ಡಿ' ಆಶೀಸರನಿಗಾಗೇ ಪಶ್ಚಿಮ ಘಟ್ಟ ಕಾರ್ಯಪಡೆ ಎಂಬ ದಂಡಪಿಂಡ ಮಂಡಳಿಯನ್ನು ಬಿಜೆಪಿ ಸರ್ಕಾರ ಸ್ಥಾಪಿಸಿದೆ. ಅರಣ್ಯ ಭೂಗಳ್ಳ ಆಶೀಸರನಿಂದಾಗಲಿ, ಸಚ್ಚಿಯಿಂದಾಗಲಿ ಬಿಜೆಪಿಗೆ ಬಿಲ್ಲಿ ಲಾಭವೂ ಇಲ್ಲ, ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ಈ ಹೈಗರಿಗೆ ಕಿಮ್ಮತ್ತೂ ಇಲ್ಲ.

'ಅನರ್ಹ' ಆನಂದ ಅಸ್ನೋಟಿಕರ್‌ನ ಬಂಡಾಯ ಬಿಜೆಪಿಗೆ ಭರ್ಜರಿ ಹೊಡೆತ ಕೊಡಲಿದೆ ಕಾರವಾರದಲ್ಲಿ ಯಾವಾಗಲೂ ಬಿಜೆಪಿಗೆ ಬೇಸೆಂಬುದೇ ಇಲ್ಲ, ಅಂಕೋಲೆಯಲ್ಲಿರುವ ಬಿಜೆಪಿ ಬಲವನ್ನು ಅಸ್ನೋಟಿಕರ್ ಈ ಬಾರಿ ಕುಂದಿಸದೇ ಬಿಡಲಾರ! ಹಳಿಯಾಳ-ಜೊಯಿಡಾದಲ್ಲಿ ಬಿಜೆಪಿಯನ್ನು ಹಸಿಮದ್ದು ಸೂಡಿ ಹಿಡಿದು ಹುಡುಕಬೇಕಷ್ಟೇ. ಹೊನ್ನಾವರದಲ್ಲಿರುವ ಅವಕಾಶ ಶಿವಾನಂದ ನಾಯ್ಕ-ಅನಂತ್ಮಾಣಿ ಮೇಲಾಟದಿಂದ ಹಾಳಾಗಲಿದೆ. ಮುಂಡಗೋಡ ತಾಲ್ಲೂಕಲ್ಲಿ ಮಾತ್ರ ಅಲ್ಲಿಯ ಪಾಪದ ಪ್ರಾಣಿಯಂಥ ಲಿಂಗಾಯತ ಎಮ್ಮೆಲ್ಲೆ ವಿ.ಎಸ್.ಪಾಟೀಲನ ಫೇಸ್ ವ್ಯಾಲ್ಯೂ ಬಿಜೆಪಿಗೆ ನೆರವಾಗಲಿದೆ. ಈ ಸೂತ್ರ ಸಮೀಕರಣ ಲೆಕ್ಕಹಾಕಿರುವ ಜಿಲ್ಲೆಯ ಜನ ದಗಾಕೋರರ-ದಗಲ್ಬಾಜಿಗಳ ಬಿಜೆಪಿ ಜಿಪಂ ಗದ್ದುಗೆ ಹಿಡಿಯುವುದು ಸಾಧ್ಯವಿಲ್ಲವೆಂದೇ ಮಾತಾಡಿಕೊಳ್ಳುತ್ತಿದ್ದಾರೆ.

ಕಾಂಗ್ರೆಸ್ ಕಥೆ-ವ್ಯಥೆ

ಬಿಜೆಪಿಗೆ ಹೋಲಿಸಿ ನೋಡಿದರೆ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಜನಬೆಂಬಲವಿದೆ. ಜನರು ಸ್ವಯಂ ಘೋಷಿತ ಸಂಭಾವಿತರ ಬಿಜೆಪಿಯಭ್ರಷ್ಟಾ ಚಾರ-ಭಂಡಾಟದಿಂದ ಬೇಸರಗೊಂಡಿದ್ದಾರೆ. 'ದೇಶಭಕ್ತ' ಚೆಡ್ಡಿಗಳೇ ದನ ಕದ್ದು ಸಾಗಿಸುವುದು, ಬಡವರ ನ್ಯಾಯ ಬೆಲೆ ಅಂಗಡಿಯ ದವಸ-ಧಾನ್ಯ ಕದ್ದು ಮಾರುವುದು, ದೋ ನಂಬರ್ ದಂಧೆ ಮಾಡುವುದು ಕಂಡು ಕಂಗೆಟ್ಟುಹೋಗಿದ್ದಾರೆ. ಇದೆಲ್ಲ ಸರಿಯಾಗಿ ಎನ್‌ಕ್ಯಾಷ್ ಮಾಡಿಕೊಂಡು ಪಕ್ಷ ಕಟ್ಟುವ ಸಮರ್ಥ ನಾಯಕತ್ವ ಜಿಲ್ಲಾ ಕಾಂಗ್ರೆಸ್‌ನಲ್ಲಿ ಇಲ್ಲದಾಗಿದೆ. ಜಿಲ್ಲಾ ಕಾಂಗ್ರೆಸ್ ಮೂರ್‍ಮೂರು ಹೋಳಾಗಿಹೋಗಿದೆ. ಒಂದೆಡೆ ಕೆಪಿಸಿಸಿ ಮಾಜಿ ಅಧ್ಯಕ್ಷ ದೇಶಪಾಂಡೆ ಗ್ಯಾಂಗ್, ಇನ್ನೊಂದೆಡೆ ಎಐಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ಮ್ಯಾಗಿ ಪಡೆ, ನಡುವೆ ಮಾಜಿ ಸಿಎಂ 'ಬಂ' ಬಣ ನಿಂತು ಕಚ್ಚಾಡುತ್ತಿವೆ.


ದೇಶಪಾಂಡೆ-ವ್ಯಾಗಿ ಎಂಬ ಮನೆಮುರುಕರ ಐಲಾಟ ಕಾಂಗ್ರೆಸ್‌ಗೆ ಗಂಡಾಂತರ ತಂದಿದೆ. ದೇಶ-ರಾಜ್ಯ ಮಟ್ಟದ 'ದೊಡ್ಡ' ನಾಯಕರಂತೆ ಪೋಸು ಕೊಡುವ ಇವರಿಬ್ಬರ 'ಸಣ್ಣತನ' ಕಂಡು ನಿಷ್ಠಾವಂತ ಕಾಂಗ್ರೆಸ್ಸಿಗರಷ್ಟೇ ಅಲ್ಲ, ಉತ್ತರ ಕನ್ನಡಿಗರು ಕ್ಯಾಕರಿಸಿ ಉಗಿಯುತ್ತಿದ್ದಾರೆ. ಹಾಗೆ ನೋಡಿದರೆ ಮ್ಯಾಗಿ-ದೇಶಪಾಂಡೆ ಇಬ್ಬರೂ ಸಂಘಟನೆ ದೃಷ್ಟಿಯಿಂದ ನಾಲಾಯಕರೇ. ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷನಾದ ಬಳಿಕ ಮ್ಯಾಗಿ ಬೆಂಬಲಿಗರನ್ನೆಲ್ಲ ಗುಡಿಸಿ ಗುಂಡಾಂತರ ಮಾಡಿಬಿಟ್ಟರು. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋತ ಮ್ಯಾಗಿ ಹೇಡಿಯಂತೆ ರಾಜಕಾರಣದಿಂದಲೇ ಓಡಿಹೋಗಿ ಉತ್ತರಾಖಂಡದ ರಾಜ್ಯಪಾಲರ ಭವನ ಹೊಕ್ಕಿಕೊಂಡುಬಿಟ್ಟರು. ದೇಶಪಾಂಡೆ ಬಿಸಿಸಿಯಿಂದ ಎಐಸಿಸಿತನಕ ತನ್ನ ದಂಡಪಿಂಡ ಪಟಾಲಮ್‌ನ ಸದಸ್ಯರನ್ನೇ ತುಂಬಿಕೊಂಡಿದ್ದಾರೆ. ಹೆಸರಿಗಷ್ಟೇ ಮ್ಯಾಗಿ ಗುಂಪಿನ ನಾಲ್ಕೈದು ಮಂದಿಗೆ ಛಾನ್ಸ್ ಕೊಡಲಾಗಿದೆ.


ಗ್ರಾಮೀಣ ಸ್ಥಳೀಯಾಡಳಿತದ ಮಹತ್ವ ಚುನಾವಣೆ ಹೊಸ್ತಿಲಲ್ಲಿ ಬಂದು ನಿಂತಿರುವ ಹೊತ್ತಲ್ಲಿ ಕಾಂಗ್ರೆಸ್ ಕಾಗೆಗ ಕಿತ್ತಾಟ ತಾರಕ ತಲುಪಿಬಿಟ್ಟಿದೆ. ಉತ್ತರಾಖಂಡದಿಂದ ಬರುತ್ತಿರುವ ಪ್ರಚೋದಕ ಸಂದೇಶಗಳು ಮ್ಯಾಗಿ ಬಣವನ್ನು ಸೆಟೆದು ನಿಲ್ಲಿಸಿದೆ. ದೇಶಪಾಂಡೆ ಜಿಪಂ-ತಾಪಂ ಚುನಾವಣೆ ನೆಪದಲ್ಲಿ ಇಡೀ ಜಿಲ್ಲಾ ಕಾಂಗ್ರೆಸ್ ಕಬ್ಜಾ ಮಾಡಿಕೊಳ್ಳಲು ಸ್ಕೆಚ್ ಹಾಕಿಕೊಂಡು ಓಡಾಡುತ್ತಿದ್ದಾರೆ. ಆತ ಹೋದಲ್ಲೆಲ್ಲ ಮ್ಯಾಗಿ ಬಣದವರು ರ್‍ಯಾಂಬೋ ಕಾಳಗ ಮಾಡುತ್ತಿದ್ದಾರೆ. ಶಿರಸಿಯಲ್ಲಿ ಕೆಪಿಸಿಸಿ ಮಾಜಿ ಅಧ್ಯಕ್ಷರೆದುರೇ ದೊಡ್ಡ ಮಾರಾಮಾರಿ ಆಗಿಹೋಯ್ತು. ಪೊಲೀಸರು ಬೀಸಿದ ಲಾಠಿ ಏಟಿಗೆ ಮ್ಯಾಗಿಯ 'ಹೆಸರುವಾಸಿ' ಬಂಟ-ಮಂಗಳೂರು ಪೋರ್ಟ್ ಟ್ರಸ್ಟ್ ದೀಪಕ್ ಹೊನ್ನಾವರನ ಕಾಲು ಮುರಿದಿದೆ. ಸಿದ್ದಾಪುರದ ಹನ್ಮಂತ ನಾಯ್ಕನ ತಲೆ ಚೂರಾಗಿದೆ. ದೇಶಪಾಂಡೆಯ ರೌಡಿ ನಾಗರಾಜ ನಾರ್ವೇಕರ್‌ನ ಮೇಲೆ ಕ್ರಿಮಿನಲ್ ಕೇಸು ಬುಕ್ ಆಗಿದೆ.

ಅಲ್ಲಿಗೆ ಜಿಲ್ಲಾ ಕಾಂಗ್ರೆಸ್ ರಗಳೆ ರಾಜ್ಯ -ರಾಷ್ಟ್ರಮಟ್ಟದ ಕಾಂಗ್ರೆಸ್‌ನಲ್ಲಿ ಗುರುತಿಸಲ್ಪಟ್ಟಿದೆ! ದೇಶಪಾಂಡೆಯಂಥ ಮಾಸಿದ ಮಂಡೆಯ ಮುಖಂಡ ಎಲ್ಲ ಕಮಿಟಿಯಲ್ಲಿ ತನ್ನ ಚೇಲಾಗಳನ್ನೆಲ್ಲ ತುಂಬಿಕೊಂಡಿದ್ದು ದೊಡ್ಡ ತಪ್ಪೆಂದು ಎಲ್ಲರೂ ಹೇಳುತ್ತಿದ್ದಾರೆ. ಆತ ಡಿಸಿಸಿ ಅಧ್ಯಕ್ಷ ಪೀಠದಲ್ಲಿ ಪ್ರತಿಷ್ಠಾಪಿಸಿರುವ ಭೀಮಣ್ಣ ಕೆಲಸಕ್ಕೆ ಬಾರದ ಒಳ್ಳೆತನದವ. ಈತ 'ಬಂ' ಭಾವಮೈದುನೆಂಬುದು ಬಿಟ್ಟರೆ ಸ್ವಜಾತಿ ದೀವರಿಗೇ ಪರಿಚಯ ಇಲ್ಲದವ. ಮಜಾ ಎಂದರೆ 'ಬಂ' ಬೆಂಬಲಿಗರೇ ಈತ ದೇಶಪಾಂಡೆ ಗುಲಾಮನಂತಾಗಿದ್ದಾನೆಂದು ತಿರುಗಿಬಿದ್ದಿದ್ದಾರೆ. ಈತನ ಅಕ್ಕನ ಮಗನಾದ 'ಕುಬಂ' ಮಾವ ಉತ್ತರಕನ್ನಡ ಡಿಸಿಸಿ ಅಧ್ಯಕ್ಷನಾಗಿರುವುದಕ್ಕೆ ಕೆಪಿಸಿಸಿ ಅನುಮೋದನೆಯಿಲ್ಲ ಎಂದಬ್ಬರಿಸಿದ್ದಾನೆ! ಆದರೆ ಬಂ'ಗೆ ಚೋಳೆ ಮಾಡಿರುವ ದೇಶಪಾಂಡೆ ಡಿಸಿಸಿಗೆ ಭೀಮಣ್ಣನೇ ಪಕ್ಕಾ ಅಧ್ಯಕ್ಷನೆಂದು ಬೊಬ್ಬೆ ಹೊಡೆಯುತ್ತಿದ್ದಾನೆ. ದೇವರಾಯ ನಾಯ್ಕನೆಂಬ ಔಟ್ ಡೇಟೆಡ್ ಆಸಾಮಿಯನ್ನು ಡಿಸಿಸಿ ಅಧ್ಯಕ್ಷ ಮಾಡೇ ತೀರುತ್ತೇನೆಂದು ಮ್ಯಾಗಿ ಒಳಗೊಳಗೆ ಹಾರಾಡುತ್ತಿದ್ದಾರೆ.

ಈ ಮಾಜಿ ಎಂಪಿ ದೇವರಾಯಣ್ಣ, ಭೀಮಣ್ಣ, ಶಾಂತಣ್ಣಗಳೆಲ್ಲ ಜಿಲ್ಲಾ ಕಾಂಗ್ರೆಸ್‌ನಲ್ಲಿ ಉತ್ಸವಮೂರ್ತಿಗಳಷ್ಟೇ. ರಿಪೇರಿ ಆಗಬೇಕಿರುವುದು ಮ್ಯಾಗಿ ಮತ್ತು ದೇಶಪಾಂಡೆ. ಒಂಚೂರು ನಿಷ್ಠೆ-ನಿಯತ್ತು-ಮಾನ-ಮರ್ಯಾದೆಯಿಂದ ಈ ನಾಯಕರಿಬ್ಬರು ವರ್ತಿಸಿದರೆ ಜಿಪಂ-ತಾಪಂ ಯುದ್ಧ ಗೆಲ್ಲುವುದು ಕಾಂಗ್ರೆಸ್‌ಗೆ ಕಷ್ಟವೇನಲ್ಲ, ಪ್ರತಿ ಜಿಪಂ, ತಾಪಂ ಕ್ಷೇತ್ರದಲ್ಲಿ ಕಾಂಗ್ರೆಸ್ ಬಿಜೆಪಿಗಿಂತಲೂ ಬಲಾಢ್ಯವಾಗಿದೆ ಎಲ್ಲ ಕಡೆ ಸಮರ್ಥ ಕ್ಯಾಂಡಿಡೇಟ್‌ಗಳು ಕಾಂಗ್ರೆಸ್‌ಗಿದೆ; ಕಾರ್ಯಕರ್ತರಿದ್ದಾರೆ. ಈ ಛಾನ್ಸ್ ಹಾಳು ಮಾಡಿಕೊಂಡರೆ ಉತ್ತರ ಕನ್ನಡದಲ್ಲಿ ಕಾಂಗ್ರೆಸ್ ಈ ಜನ್ಮದಲ್ಲಿ ಉದ್ಧಾರವಾಗುವುದಿಲ್ಲ; ಮ್ಯಾಗಿ-ದೇಶಪಾಂಡೆಗೆ ಬರ್ಕತ್ ಆಗುವುದಿಲ್ಲ. ಹಾಗಂತ ನಿಷ್ಠಾವಂತ ಕಾಂಗ್ರೆಸಿಗರೇ ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ.


ಕಾಂಗ್ರೆಸ್-ಬಿಜೆಪಿ ಜಗಳಗಂಟರ ಕೋಳಿಗೆ ಎದುರಾಗಿ ಬೆಳೆಯುವ ಅಷ್ಟೂ ಅವಕಾಶ ಜೆಡಿಎಸ್‌ಗೆ ಜಿಲ್ಲೆಯಲ್ಲಿತ್ತು. ಆದರೆ ಆ ಪಕ್ಷ ಕುಮಟಾ-ಹಳಿಯಾಳ-ಯಲ್ಲಾಪುರಕ್ಕಷ್ಟೇ ಸೀಮಿತವಾಗಿದೆ. ಈ ತಾಲ್ಲೂಕುಗಳಲ್ಲೂ ಅಲ್ಲಿಯ ಶಾಸಕರಾದ ಸುನಿಲ್ ಹೆಗಡೆ, ದಿನಕರ್ ಶೆಟ್ಟಿ ಮತ್ತು ಜಿಲ್ಲಾಧ್ಯಕ್ಷ ಪ್ರಮೋದ ಹೆಗಡೆ 'ಮ್ಯಾಚ್ ಫಿಕ್ಸಿಂಗ್'ನಲ್ಲಿ ನಿರತರಾಗಿರುವ ಸುದ್ದಿಗಳಿವೆ. ಕಾಂಗ್ರೆಸ್-ಬಿಜೆಪಿ ಎರಡೂ ಜಗಳಗಂಟರ ತಂಡವೇ. ಇವರಲ್ಲಿ ಯಾರು ಜಗಳ ಕಡಿಮೆ ಮಾಡಬಹುದು? ಜಿಲ್ಲೆಯ ಗ್ರಾಮೀಣ ಭಾಗದತ್ತ ಯ.:ು ಹೆಚ್ಚು ಗಮನ ಹರಿಸಬಹುದು? ಉತ್ತರ ಕಾಣದ ಜಿಲ್ಲೆಯಂತಾಗಿರುವ ಈ ಸಮಸ್ಯೆಗಳ ಬೀಡನ್ನು ಯಾರು ಉದ್ಧಾರ ಮಾಡಬಹುದು? ಇದೆಲ್ಲ ಮತದಾರ ಮನಸ್ಸಿನಲ್ಲೇ ಲೆಕ್ಕಹಾಕುತ್ತಿದ್ದಾನೆ. ಒಂದಂತೂ ಖರೆ; ಜಿಪಂ-ತಾಪಂ ಚುನಾವಣೆ ಬಳಿಕ ಜಿಲ್ಲೆಯ ರಾಜಕಾರಣದ ದಿಕ್ಕು-ದೆಸೆ ಬದಲಾಗುವುದು ಗ್ಯಾರಂಟಿ.






































ಆಹಾರ ಇಲಾಖೆ

ವಿ. ಸೋಮಣ್ಣ ವಸೂಲಿ ಶುರು ಮಾಡಿದನಣ್ಣ!



ಹೆಗ್ಗಣ ಎಲ್ಲಿಗೇ ಹೋದರೂ ತಿನ್ನುವುದು ಹಾಗೂ ಬಿಲ ಕೊರೆಯುವುದೇ ಅದರ ನಿತ್ಯ ಕಾಯಕವಲ್ಲವೆ!

ಅದೇರೀತಿ ಈಗ ಆಹಾರ ಇಲಾಖೆ ಸಚಿವನಾಗಿ ಅವತರಿಸಿರುವ ವಿ. ಸೋಮಣ್ಣ ತಮ್ಮ ಸ್ವಭಾವಕ್ಕೆ ತಕ್ಕಂತೆ ಇಲಾಖೆಯಲ್ಲಿ ಬಿಲ ಕೊರೆದು ನುಂಗುವ ಕಾಯಕ ಶುರು ಮಾಡಿದ್ದಾನೆ.

ಸೋಮಣ್ಣನ ಕಾಕದೃಷ್ಟಿ ಮೊಟ್ಟಮೊದಲಿಗೆ ಇಲಾಖೆಯ ಫುಡ್ ಇನ್ಸ್‌ಪೆಕ್ಟರ್‌ಗಳ ಮೇಲೆ ಬಿದ್ದಿದೆ. ಇವರಿಂದ ತಲಾ ಒಂದೂವರೆ ಲಕ್ಷ ರೂಪಾಯಿ ವಸೂಲಿ ಮಾಡಿ ಸೋಮಣ್ಣನಿಗೆ ಒಪ್ಪಿಸಬೇಕೆಂಬ ಅನಧಿಕೃತ ಫರ್ಮಾನೊಂದು ಇಲಾಖೆಯ ಅಧಿಕಾರಿಗಳ ವಲಯದಲ್ಲೀಗ ಹರಿದಾಡುತ್ತಿದೆ.

ನಾಗಲಿಂಗಸ್ವಾಮಿ ಎನ್ನುವ ಫುಡ್ ಇನ್ಸ್‌ಪೆಕ್ಟರ್ ಸದ್ಯಕ್ಕೆ ವಸೂಲಿಯ ಉಸ್ತುವಾರಿ ವಹಿಸಿಕೊಂಡು ಓಡಾಡುತ್ತಿದ್ದಾನೆ. ಬೆಂಗಳೂರು ನಗರವೊಂದರಲ್ಲೇ ಆಹಾರ ಇಲಾಖೆಯ ಐದು ರೇಂಜುಗಳಿವೆ. ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಪಶ್ಚಿಮ ಹಾಗೂ ಸೆಂಟ್ರಲ್ ರೇಂಜುಗಳಲ್ಲಿ ತಲಾ ಒಬ್ಬೊಬ್ಬ ಉಪ ನಿರ್ದೇಶಕರುಗಳಿದ್ದಾರೆ. ಅವರ ಕೈಕೆಳಗೆ ತಲಾ ಹತ್ತು ಫುಡ್ ಇನ್ಸ್‌ಪೆಕ್ಟರ್‌ಗಳಂತೆ ಬೆಂಗಳೂರೊಂದರಲ್ಲೇ ಒಟ್ಟು 50 ಫುಡ್ ಇನ್ಸ್‌ಪೆಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ.

ಈ ನಾಗಲಿಂಗಸ್ವಾಮಿಯೂ ಅಂತಹ ಫುಡ್ ಇನ್ಸ್‌ಪೆಕ್ಟರ್‌ಗಳಲ್ಲಿ ಒಬ್ಬ. ಈತನೂ ಲಿಂಗಾಯತ ಜಾತಿಯ ಅಧಿಕಾರಿಯಾಗಿರುವ ಕಾರಣದಿಂದ ಸೋಮಣ್ಣ ಮಂತ್ರಿಯಾದ ತಕ್ಷಣ ಮಿಂಚಿನ ವೇಗದಲ್ಲಿ ಸಚಿವನ ಆಪ್ತವಲಯಕ್ಕೆ ತೂರಿಕೊಂಡಿದ್ದಾನೆ. ಕೇವಲ ದುಡ್ಡು ಮತ್ತು ಅಧಿಕಾರಕ್ಕಾಗಿಯೇ ರಾಜಕಾರಣಿಯಾಗಿರುವ ಸೋಮಣ್ಣನಿಗೆ ಆಹಾರ ಇಲಾಖೆಯಲ್ಲಿ ಯಾವ್ಯಾವ ರೀತಿ ದುಡ್ಡು ಹೊಡೆಯಬೇಕೆಂಬ ಐಡಿಯಾಗಳನ್ನು ಈ ನಾಗಲಿಂಗಸ್ವಾಮಿಯೇ ಧರ್ಮ ಬೋಧನೆ ಮಾಡುತ್ತಿದ್ದಾನೆ. ಅಂತಹ ಐಡಿಯಾಗಳ ಪೈಕಿ ಟ್ರಾನ್ಸ್‌ಫರ್ ಬೆದರಿಕೆ ಹಾಕಿ ಬೆಂಗಳೂರು ನಗರದ ಎಲ್ಲಾ 50 ಫುಡ್ ಇನ್ಸ್‌ಪೆಕ್ಟರ್‌ಗಳಿಂದ ತಲಾ ಒಂದೂವರೆ ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವ ಕೈಂಕರ್ಯವನ್ನು ನಾಗಲಿಂಗಸ್ವಾಮಿಗೇ ವಹಿಸಲಾಗಿದೆ.

ಇದರ ಒಟ್ಟು ಮೊತ್ತ 75 ಲಕ್ಷ ರೂಪಾಯಿಗಳಾಗುತ್ತದೆ.

ಈ ನಾಗಲಿಂಗಸ್ವಾಮಿ ತನ್ನ ಸಹೋದ್ಯೋಗಿ ಫುಡ್ ಇನ್ಸ್‌ಪೆಕ್ಟರ್‌ಗಳಿಗೆ "ಮಿನಿಸ್ಟ್ರಿಗೆ ಎಲ್ರೂ ಒಂದೂವರೆ ಲಕ್ಷ ಕೊಡಬೇಕು. ಇಲ್ಲಾಂದ್ರೆ ಟ್ರಾನ್ಸ್‌ಫರ್ ಗ್ಯಾರಂಟಿ" ಎಂದು ಬೆದರಿಸಿ ಹಣ ಎತ್ತುತ್ತಿದ್ದಾನೆ.

ಬೆಂಗಳೂರು ಹೊರತುಪಡಿಸಿದರೆ ರಾಜ್ಯದೆಲ್ಲೆಡೆ ಪ್ರತಿ ತಾಲ್ಲೂಕು ಜಿಲ್ಲಾ ಕೇಂದ್ರಗಳಲ್ಲೂ ಫುಡ್ ಇನ್ಸ್‌ಪೆಕ್ಟರ್‌ಗಳಿದ್ದಾರೆ. ಇಂಥವರ ಒಟ್ಟು ಸಂಖ್ಯೆ ಇನ್ನೂರಕ್ಕೂ ಜಾಸ್ತಿಯಿದೆ. ಅವರೆಲ್ಲರಿಗೆ ಮುಂದೆ ಟ್ರಾನ್ಸ್‌ಫರ್ ಬೆದರಿಕೆ ಹಾಕಿ ಡೀಲ್ ಸರಿಯಾಗಿ ಕುದುರಿಸಿಕೊಂಡರೆ ಕನಿಷ್ಠ ಎರಡರಿಂದ ಮೂರು ಕೋಟಿ ರೂಪಾಯಿಗಳಷ್ಟು ಲಂಚದ ಬೆಳೆ ತೆಗೆಯಬಹುದೆಂಬುದು ಸೋಮಣ್ಣನ ಲೆಕ್ಕಾಚಾರವಾಗಿರಬಹುದು.

ಭ್ರಷ್ಟ ರಾಜಣ್ಣನಿಗೆ ರಕ್ಷಣೆ

ಹಾಲಿ ಬೆಂಗಳೂರಿನ ಪಶ್ಚಿಮ ವಲಯದ ಡೆಪ್ಯೂಟಿ ಡೈರೆಕ್ಟರ್ ಆಗಿರುವ ಜಿ.ಕೆ. ರಾಜಣ್ಣ ಎಂಬುವನಿಂದ ಒಂದೇ ಏಟಿಗೆ 25 ಲಕ್ಷ ಕೀಳುವ ಡೀಲೊಂದರ ಮಾತುಕತೆ ನಡೆಯುತ್ತಿದೆ.

ಈ ರಾಜಣ್ಣ ಹಿಂದೆ ಮೈಸೂರಿನಲ್ಲಿದ್ದಾಗ ಯಾರಿಂದಲೋ 10 ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತರ ರೇಡಿಗೆ ಸಿಕ್ಕು ಸಸ್ಪೆಂಡಾಗಿದ್ದ. ದಾಳಿ ನಡೆದಾಗ ರಾಜಣ್ಣನ ಹತ್ತಿರ ಅಪಾರ ಆಸ್ತಿ ಹಣ ಸಿಕ್ಕಿಬಿದ್ದಿತ್ತು. ನಂತರ ತನಿಖೆಯಾಗಿ ಪ್ರಕರಣ ಕೋರ್ಟಿಗೆ ಹೋಗಿತ್ತು. ಕಳೆದವಾರ ತಾನೆ ವಿಚಾರಣೆ ಮುಗಿದು ರಾಜಣ್ಣನಿಗೆ ಮೂರು ವರ್ಷ ಶಿಕ್ಷೆ ಹಾಗೂ 15 ಸಾವಿರ ರೂಪಾಯಿ ದಂಡ ವಿಧಿಸಿ ಕೋರ್ಟ್ ತೀರ್ಪು ನೀಡಿದೆ.

ಆಶ್ಚರ್ಯ ಅಂದರೆ ಕೋರ್ಟ್ ತೀರ್ಪಿಗೆ ಸಚಿವ ಸೋಮಣ್ಣ ಕವಡೆ ಕಾಸಿನ ಗೌರವವನ್ನು ಕೊಡದೆ ರಾಜಣ್ಣನನ್ನು ಈಗಲೂ ಕೆಲಸದಲ್ಲಿ ಮುಂದುವರೆಯಲು ಬಿಟ್ಟಿದ್ದಾನೆ. ಅಷ್ಟೇ ಅಲ್ಲ, ಇದೇ ನಾಗಲಿಂಗಸ್ವಾಮಿ ಮುಂದೆ ನಿಂತು 25 ಲಕ್ಷ ರೂಪಾಯಿಗೆ ಡೀಲ್ ಕುದುರಿಸಿ ರಾಜಣ್ಣನ ತಲೆ ಉಳಿಸುವ ಪ್ರಯತ್ನ ನಡೆಸುತ್ತಿದ್ದಾನೆ.

ರಾಮೇಶ್ವರಪ್ಪನ ಹಗರಣ

ಕರ್ನಾಟಕದ ಕೆಎಎಸ್ ಪರೀಕ್ಷೆಗಳ ಹಗರಣಗಳ ಪೈಕಿ ಹಗರಣಗಳ ರಾಜನೆಂದೇ ಕುಖ್ಯಾತನಾಗಿದ್ದ ರಾಮೇಶ್ವರಪ್ಪ ಹಾಲಿ ಆಹಾರ ಇಲಾಖೆಯಲ್ಲಿ ಉಪ ನಿರ್ದೇಶಕನಾಗಿದ್ದಾನೆ. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯಾಗಿದ್ದ ಮೋನಪ್ಪ ಎಂಬ ಖದೀಮನನ್ನು ಶಾಮೀಲು ಮಾಡಿಕೊಂಡು ಈ ರಾಮೇಶ್ವರಪ್ಪ ತಾನು ಹಾಗೂ ತನ್ನ ಕುಟುಂಬದವರಿಗೇ ಮೊದಲ ರ್‍ಯಾಂಕ್‌ಗಳನ್ನು ಹಂಚಿಸಿಕೊಂಡಿದ್ದ.


ನಂತರ ಇದು ಎಲ್ಲರಿಗೂ ಗೊತ್ತಾಗಿ ಹಗರಣ ಹೊರಬಂತು. ರಾಮೇಶ್ವರಪ್ಪ ಅಷ್ಟರಲ್ಲಿ ಆಹಾರ ಇಲಾಖೆಗೆ ಸೇರಿಕೊಂಡಿದ್ದ. ಇವನ ವಿರುದ್ಧ ಇಲಾಖೆ ತನಿಖೆಯಾಗಿ ಈಗ ಅಂತಿಮ ಹಂತಕ್ಕೆ ಬಂದಿದೆ. ಕಾನೂನುಕ್ರಮ ತೆಗೆದುಕೊಳ್ಳುವುದಷ್ಟೇ ಬಾಕಿ ಇದೆ.

ಸಚಿವ ಸೋಮಣ್ಣ ಇಲ್ಲೂ ಕೈಹಾಕಿದ್ದಾನೆ. ಸೋಮಣ್ಣನ ಬ್ರೋಕರ್ ನಾಗಲಿಂಗಸ್ವಾಮಿ ಖದೀಮ ರಾಮೇಶ್ವರಪ್ಪನ ತಲೆ ಉಳಿಸಲು ಅನಾಮತ್ತು ಒಂದು ಕೋಟಿ ರೂಪಾಯಿಗೆ ಡೀಲ್ ಕುದುರಿಸುತ್ತಿದ್ದಾನೆ.

ಈ ಸೋಮಣ್ಣ ಬಹಳ ಲೆಕ್ಕಾಚಾರದ ಮನುಷ್ಯ. ಒಂದೇ ಒಂದು ನಿಮಿಷವನ್ನು ವ್ಯರ್ಥವಾಗಿ ಕಳೆಯುವವನಲ್ಲ. ಹಾಗಾಗಿ ಆಹಾರ ಇಲಾಖೆ ಸಚಿವನಾದ ತಕ್ಷಣ ತಮ್ಮ ವಸೂಲಿ ಕೆಲಸ ಪ್ರಾರಂಭಿಸಿದ್ದಾರೆ.

ಸ್ವಜಾತಿ ಬಾಂಧವ ನಾಗಲಿಂಗಸ್ವಾಮಿ ಎಂಬ ಮರಿ ಹೆಗ್ಗಣ ಸೋಮಣ್ಣನೆಂಬ ಬಲಿತ ಹೆಗ್ಗಣಕ್ಕೆ ಸರಿ ಜೋಡಿಯಾಗಿದೆ. ●

ಕಾರ್ಟೂನ್ ಕಾರ್ನರ್



ಮಂಗಳೂರು ಖಾಜಿ ಹಿಂಗೇಳಬಹುದೆ!

ಮಂಗಳೂರಿನ ಖಾಜಿಯೊಬ್ಬರು "ಏಸು ಕ್ರಿಸ್ತನೂ ದೈವಾಂಶಸಂಭೂತ" ಎಂಬ ಹೇಳಿಕೆ ಕೊಟ್ಟದ್ದೇ ಮತಾಂಧ ಮುಸ್ಲಿಮರ ಕಣ್ಣುಗಳನ್ನು ಕೆಂಪಗೆ ಮಾಡಿದೆಯಂತಲ್ಲಾ, "ಏಸುಕ್ರಿಸ್ತ ದೈವಾಂಶಸಂಭೂತನೋ ಅಲ್ಲವೋ, ಅದು ಕ್ರಿಸ್ತ ಧರ್ಮಕ್ಕೆ ಬಿಟ್ಟ ವಿಚಾರ. ಆದರೆ ಅಲ್ಲಾನ ಆರಾಧನೆ ಬಿಟ್ಟು ಏಸುವನ್ನು ದೈವತ್ವಕ್ಕೆ ಏರಿಸಿ ಮಾತನಾಡಿರುವುದು ಅಕ್ಷಮ್ಯ ಅಪರಾಧವಷ್ಟೇ ಅಲ್ಲ, ಅಜ್ಞಾನದ ಪರಮಾವಧಿ" ಎಂದು ಮತಾಂಧರು ಮೈಪರಚಿಕೊಂಡಿದ್ದಾರಂತಲ್ಲಾ. ಆದರೆ ಖಾಜಿಯವರ ಭಾಷಣ ಕೇಳಿಸಿಕೊಂಡ ನಿರ್ಲಿಪ್ತ ಮುಸ್ಲಿಮರು "ಏಸುವಿನ ಸಂದೇಶವೇ ಶಾಂತಿ, ಸಮಾಧಾನ, ಪ್ರೀತಿ, ಕರುಣೆ ಸಾರುವುದಾಗಿದೆ. ಇಂತಹ ಉದಾತ್ತ ಸಂದೇಶ ಸಾರಿದ ಮಹಾಮಹಿಮನ ಆದರ್ಶವಂತೂ ಅನುಕರಣೀಯ" ಎಂದಿರುವುದೇ ಮತಾಂಧರ ಮೈಯುರಿಗೆ ಕಾರಣವಾಗಿದೆಯಂತಲ್ಲಾ, ಥೂತ್ತೇರಿ!

*****


ಮತಾಂಧ ಮುಸ್ಲಿಮರ ಕೋಪ ಕೆರಳಲು ಇದ್ಯಾವುದೂ ಕಾರಣವಲ್ಲವಂತಲ್ಲಾ, ಸದರಿ ಖಾಜಿಯವರು "ಹಬ್ಬ ಹರಿದಿನಗಳು ಜನರಲ್ಲಿ ಪವಿತ್ರ ಭಾವನೆ ಉದ್ದೀಪಿಸಿ ಸಮಾನತೆ, ಸಂಘಜೀವನ, ಸೌಹಾರ್ದದ ವಾತಾವರಣ ನಿರ್ಮಿಸುತ್ತವೆ, ಬಡವ ಬಲ್ಲಿದ ಎಂಬ ತಾರತಮ್ಯ ಮೇಲ್‌ಕೀಳು ಎಂಬ ಭೇದ ಭಾವಗಳಿಗೆ ಆಸ್ಪದವಿರುವುದಿಲ್ಲ, ವಿಭಿನ್ನ ಸಂಸ್ಕೃತಿಯ ಜನರು ತಮ್ಮತನವನ್ನು ಇತರರಿಗೆ ಪರಿಚಯಿಸುವ ಕಲೆತು ಬಾಳುವ ಅಪೂರ್ವ ಅವಕಾಶ ದೊರಕುವುದು ಇಂತಹ ಸಂದರ್ಭದಲ್ಲಿ, ಈ ಉದ್ದೇಶದಿಂದಲೇ ಎಲ್ಲ ಧರ್ಮದ ಹಬ್ಬಗಳನ್ನು ಜಾತಿ ಧರ್ಮ ಮತದ ಚೌಕಟ್ಟಿಗೆ ಸೀಮಿತಗೊಳಿಸದೆ ವಿಶಾಲ ಮನೋಭಾವದಿಂದ ಆಚರಿಸಬೇಕು. ಕ್ರೈಸ್ತರ ಕ್ರಿಸ್‌ಮಸ್ ಹಬ್ಬವನ್ನು ಎಲ್ಲರೂ ಸಂಭ್ರಮದಿಂದ ಆಚರಿಸಬೇಕು" ಎಂದು ಹೇಳಿರುವುದು ಮತಾಂಧರ ದೃಷ್ಟಿಯಲ್ಲಿ ಅಜ್ಞಾನದ ಪರಮಾವಧಿಯಾಗುವುದಾದರೆ ಜ್ಞಾನದಪರಮಾವಧಿ ಯಾವುದೆಂಬುದು ಶಾಂತಿಪ್ರಿಯ ಮುಸ್ಲಿಮರ ಮರುಪ್ರಶ್ನೆಯಾಗಿದೆಯಂತಲ್ಲಾ, ಥೂತ್ತೇರಿ!

*****

ಮತಾಂಧ ಸಾಬಿಗಳ ಪ್ರಕಾರ ಖಾಜಿ ನೀಡಿದ ಸಂದೇಶಗಳನ್ನು ಪಾಲಿಸುವುದಾದರೆ ನವರಾತ್ರಿ ಹಬ್ಬದ ದಿನ ಮುಸ್ಲಿಮರು ಬ್ಯಾಂಡ್ ಬಾರಿಸುತ್ತ ಹುಲಿವೇಷ ಹಾಕಿ ಕುಣಿಯಬೇಕು. ಕೃಷ್ಣಜನ್ಮಾಷ್ಟಮಿ ದಿನ ಹಸುವಿನ ಮಾಂಸ ಮರೆತು ಹಾಲು ಮೊಸರಿನ ಗಡಿಗೆ ಆಟವಾಡಬೇಕು. ಕ್ರಿಸ್‌ಮಸ್ ದಿನ ಸಾಂತಕ್ಲಾಸನ ವೇಷ ಧರಿಸಿ ಮೆರವಣಿಗೆ ಹೋಗಬೇಕು. ಸಂಕ್ರಾಂತಿಯಂದು ಕರಿವಸ್ತ್ರ ವೇಷಧಾರಿಗಳಾಗಿ ಶಬರಿಮಲೆ ಏರಬೇಕು. ದೀಪಾವಳಿಯಂದು ಪಟಾಕಿ ಹಾರಿಸಿ, ಕಣ್ಣು ಕಳೆದುಕೊಳ್ಳಬೇಕು. ಇತರರಿಗೆ ಬಿಟ್ಟಿ ಉಪದೇಶ ನೀಡುವ ಖಾಜಿಯವರು ಮೊದಲು ಇದನ್ನು ಮಾಡಬೇಕು. ಅದಕ್ಕೆ ಸಿದ್ಧರಿದ್ದಾರಾ ಎಂದು ಕೆಣಕಿವೆಯಂತಲ್ಲಾ.

ಸದರಿ ಸಂದೇಶಗಳನ್ನು ಸಾರಿದ ಖಾಜಿ ವಿರೋಧಿಗಳನ್ನು ನೋಡಿದ ಮಂಗಳೂರಿನ ಜನಾರ್ದನ ಪೂಜಾರಿಯ ಜನ "ಇಡೀ ಮಂಗಳೂರು ಕಡೆಯ ಭಾಗವೆಲ್ಲಾ ಕೇಸರಿಮಯವಾಗಿ ಹೋಗಲು ಇಂತಹ ಮತಾಂಧ ಮುಸ್ಲಿಮರೆ ಕಾರಣ ಕಂಡ್ರೀ. ಧರ್ಮದ ಕಟ್ಟುನಿಟ್ಟಿನ ಆಚರಣೆಗಿಂತಲೂ ಬದುಕೇ ಮುಖ್ಯ ಎಂದು ಯಾವಾಗ ಇವರು ತಿಳಿಯುತ್ತಾರೋ ಆಗ ಮಾತ್ರ ನಮ್ಮ ಜನಾರ್ದನ ಪೂಜಾರಿ ಗೆಲ್ಲಬಲ್ಲರು" ಎಂದರಂತಲ್ಲಾ, ಥೂತ್ತೇರಿ!

*****



ಮತಾಂಧತೆಯ ಕುರುಡರ ಕಣ್ಣು ತೆರೆಸಲು ಕೆಲ ಉದಾಹರಣೆ ಕೊಡುವುದಾದರೆ, ಕರ್ನಾಟಕದ ಮುಸ್ಲಿಮರು ಎಲ್ಲಾ ಹಬ್ಬಗಳಿಗಿಂತ ದಸರೆಯನ್ನು ಬಹಳ ಮೆಚ್ಚುತ್ತಾರೆ. ಕೃಷ್ಣಜನ್ಮಾಷ್ಟಮಿ ದಿನ ತಮ್ಮ ಮುದ್ದು ಮಕ್ಕಳಿಗೆ ಕೃಷ್ಣನ ವೇಷವನ್ನು ಧರಿಸುತ್ತಾರೆ. ವಿಜಾಪುರದಲ್ಲಿ ನಡೆವ ಬಸವ ಜಯಂತಿ ಮೆರವಣಿಗೆಗೆ ಬುರುಖಾ ಧರಿಸಿದ ಮುಸ್ಲಿಂ ಮಹಿಳೆಯರೂ ಬಂದು ಸೇರುತ್ತಾರೆ. ಧರ್ಮಸ್ಥಳಕ್ಕೆ ಮನಿಯಾರ್ಡರ್ ಮಾಡುವ ಅಸಂಖ್ಯಾತ ಮುಸ್ಲಿಮರಿದ್ದಾರೆ. ಹಾಗೆಯೇ ಅಯ್ಯಪ್ಪನ ಕಪ್ಪು ಸಮವಸ್ತ್ರದ ಗುಂಪಿನಲ್ಲಿ ಅಲ್ಲಾನ ಭಕ್ತರೂ ಇರುತ್ತಾರೆ. ಮುಸ್ಲಿಮರೇ ಇಲ್ಲದ ಊರಲ್ಲಿ ಉರುಸ್ ನಡೆಯುತ್ತವೆ. ಗೋರಿಗಳ ಪೂಜೆಯೂ ನಡೆಯುತ್ತದೆ. ಕೇವಲ ಚೆಡ್ಡಿಗಳ ಮಂಗಾಟವನ್ನು ನೋಡಿ ಹಿಂದೂಗಳೆಲ್ಲಾ ಹೀಗೆಯೇ ಇರುತ್ತಾರೆಂದು ಭಾವಿಸುವ ಜನ, ತ್ವಾಕಾ ಮುಸ್ಲಿಮರಿಂದ ಸೌಹಾರ್ದತೆಯ ಸಂಸ್ಕೃತಿ ಕಲಿಯುವುದು ಒಳ್ಳೆಯದೆಂದು ಸಾರಾ ಅಬೂಬಕರ್ ಅಭಿಮಾನಿಗಳ ಆಶಯವಾಗಿದೆಯಂತಲ್ಲಾ , ಥೂತ್ತೇರಿ!!


*****

ಯಡ್ಡಿ ನಡೆಸಿರುವ ಆಡಳಿತ ವೈಖರಿ ಬಗ್ಗೆಯಾಗಲಿ, ನೆಲನುಂಗಿ ನೀರು ಕುಡಿದ ಬಗ್ಗೆಯಾಗಲಿ, ಮಕ್ಕಳು ಮರಿಗಳೆಲ್ಲಾ ಕಾಸು ಹೊಡೆದ ಬಗ್ಗೆಯಾಗಲಿ ಎಷ್ಟೇ ಬಾಯಿ ಬಡಿದುಕೊಂಡರೂ ಆರೆಸೆಸ್ ಎಂಬ ಸಂಘಟನೆ ವಾಜಪೇಯಿಯಂತಾಗಿದೆಯಂತಲ್ಲಾ. ಭಾರತದ ಮಾಜಿ ಪ್ರಧಾನಿಗಳಾದ ವಾಜಪೇಯಿ ಭೀಷ್ಮನಂತೆ ಮರಣಶಯ್ಯೆಯಲ್ಲಿ ಮಲಗಿರುವ ಜಾಗಕ್ಕೆ ಹೋಗಿ ಯಡ್ಡಿ ನಿಂತು ನಮಸ್ಕಾರ ಮಾಡಿ, ಕಡೆಗೆ ಕಾಲಿಗೆ ಬಿದ್ದು ನಮಸ್ಕಾರ ಮಾಡಿದಾಗಲೂ ವಾಜಪೇಯಿ ಇವರು ಯಾರೆಂದು ಗುರುತಿಸಲಿಲ್ಲವಂತೆ. ಅದು ಸಹಜ. ಸಾವಿಗಾಗಿ ಕಾಯುತ್ತ ಕುಳಿತ ಯಾರಿಗಾದರೂ ಬಂದೇ ಬರುವ ಸ್ಥಿತಿ. ಆದರೆ ಯಡ್ಡಿ ವಿಷಯದಲ್ಲಿ ಚೆಡ್ಡಿಗಳೂ ಕೂಡ ನಿರೀಂದ್ರಿಯರಂತೆ ವರ್ತಿಸುವುದನ್ನು ನೋಡಿದ ಇಜಾರದವರು "ಸಂಘದಿಂದ ಬಂದವರ ಕೈಗೆ ಸಿಕ್ಕಿರುವ ಮಾಣಿಕ್ಯವಾದ ಯಡ್ಡಿಯನ್ನು ಚೆಡ್ಡಿಗಳು ಅಧಿಕಾರದಲ್ಲಿರುವವರೆಗೂ ಟೀಕಿಸಲಾರರು. ಅಧಿಕಾರದಿಂದ ಬಿದ್ದಮೇಲೆಯೇ ಅವರ ಲಾಠಿ ಶಬ್ದ ಮಾಡುವುದು" ಎಂದರಂತಲ್ಲಾ, ಥೂತ್ತೇರಿ!!



ಅದ್ಯಾವ ಗಳಿಗೆಯಲ್ಲಿ ಮೊಯ್ಲಿ ಮಹಾತ್ಮ ರೋಸಯ್ಯನನ್ನು ಎಳೆದು ತಂದು ಕರ್ನಾಟಕದ ಶೆಟ್ಟರುಗಳಿಂದ ಸನ್ಮಾನ ಮಾಡಿಸಿದನೊ ಅವತ್ತೆ ರೋಸಯ್ಯನ ಬದುಕು ರಾಡಿಯಾಗಿ ರಾಜೀನಾಮೆ ಕೊಟ್ಟನಂತಲ್ಲಾ. ಕರ್ನಾಟಕದ ಚರಿತ್ರೆಯಲ್ಲಿ ಟಿಪ್ಪು ಪಾಲಿಗೆ ಹೇಗೆ ಪೂರ್ಣಯ್ಯನೊ, ಅದೇ ರೀತಿ ಕಾಂಗ್ರೆ ಪಾಲಿಗೆ ಆಂಧ್ರದ ಪೂರ್ಣಯ್ಯನಾಗಿ ವರ್ತಿಸಿದ ರೋಸಯ್ಯ, ಕಾಂಗ್ರೆ ಕಿರಾತಕರ ಕಿರುಕುಳ ತಾಳಲಾರದೆ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೆರೆದು, ಸೋನಿಯಾ ಪಾದದಡಿ ಮಡಗಿ, ಇನ್ನು ಮುಂದೆ ಶ್ರೀವಾಸವಿ ಕಿರಾಣಿ ಅಂಗಡಿ ಇಟ್ಟುಕೊಂಡು ಕಾಲಹಾಕುತ್ತೇನೆ ಎಂದನಂತಲ್ಲಾ!

ಇತ್ತ ಮುಖ್ಯಮಂತ್ರಿ ಅಮಲಿನಲ್ಲಿರುವ ಜಗನ್ ಎಂಬ ಹೈಲ್‌ಹೈಲ್ ಗಿರಾಕಿ, ಮೆಗಾಸ್ಟಾರ್ ಚಿರಂಜೀವಿಯಂತವನೇ ಹದಿನೆಂಟು ಎಮ್ಮೆಲ್ಲೆಗಳನ್ನು ಇಟ್ಟುಕೊಂಡು ಏಗುತ್ತಿರುವುದನ್ನು ನೋಡಿಯೂ ಕೂಡ, ಬೇರೆ ಪಾರ್ಟಿ ಕಟ್ಟಿ ಅದಷ್ಟು ಬೇಗ ಅಪ್ಪನ ಜೊತೆ ಮನೆ ಸೇರಿಕೊಳ್ಳುವ ತಯಾರಿ ನಡೆಸುವುದನ್ನು ನೋಡಿದ ತೆಲುಗರು "ಈ ರಾಜಶೇಖರ ರೆಡ್ಡಿ ಕೊಡುಕುಲುಕು ರಾಜ್ಯಂ ಲೇದು" ಎಂದರಂತಲ್ಲಾ, ಥೂತ್ತೇರಿ!!



ಲೋಕಾಯುಕ್ತಕ್ಕೆ ಹೆದರಿ ಸಿಎಂ ಮಗ ಪರಾರಿ

ರಾ. ಸೋಮನಾಥ್
rasomanath@gmail.com

ಮುಖ್ಯಮಂತ್ರಿ ಮಗ ವಿಜಯೇಂದ್ರ ನಾಪತ್ತೆಯಾಗಿದ್ದಾನೆ. ಇನ್ನೂ ಬಿಡಿಸಿ ಹೇಳಬೇಕೆಂದರೆ ತಲೆ ಮರೆಸಿಕೊಂಡಿದ್ದಾನೆ ಅರ್ಥಾತ್ ಪರಾರಿಯಾಗಿದ್ದಾನೆ!

ಯಾರೋ ವಂಚಕನೊಬ್ಬ ಪರಾರಿಯಾದರೇನೇ ಅದು ಸುದ್ದಿಯಾಗುತ್ತದೆ. ಕ್ರಿಮಿನಲ್ ಒಬ್ಬ ಅನಾಹುತ ಮಾಡಿ ನಾಪತ್ತೆಯಾದನೆಂದರೆ ಅದೇ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಅಂಥದ್ದರಲ್ಲಿ ಈ ರಾಜ್ಯದ ಮುಖ್ಯಮಂತ್ರಿಯ ಮಗನೇ ರಾತ್ರೋರಾತ್ರಿ ಪರಾರಿಯಾಗುತ್ತಾನೆಂದರೆ ಸರ್ಕಾರದ ಮಟ್ಟಿಗೆ ಅದಿನ್ನೆಂತಹ ಪೇಚಾಟವಾಗಬೇಡ?

ಕಟ್ಟಾ ಮಗ ಜಗ್ಗನನ್ನು ಕೆಐಎಡಿಬಿ ಹಗರಣದಲ್ಲಿ ಲೋಕಾಯುಕ್ತರು ಹಿಡಿದು ಜೈಲಿಗೆ ದಬ್ಬಿದಂತೆ ತನ್ನನ್ನೂ ಜೈಲಿಗೆ ಹಾಕುತ್ತಾರೆಂಬುದು ಖಾತರಿಯಾಗಿಯೇ ವಿಜಯೇಂದ್ರ ಎಸ್ಕೇಪ್ ಆಗಿದ್ದಾನೆಂಬುದು ಒಂದು ಮೂಲದ ಮಾಹಿತಿಯಾದರೆ, ಗಣಿ ಲಂಚ ಪ್ರಕರಣದಲ್ಲಿ ಅದೇ ಲೋಕಾಯುಕ್ತರು ತನ್ನ ಬೆನ್ನಿಗೆ ಬಿದ್ದದ್ದು ಗೊತ್ತಾಗಿ ವಿಜಯೇಂದ್ರ ಊರು ಬಿಟ್ಟಿದ್ದಾನೆಂಬುದು ಮತ್ತೊಂದು ವದಂತಿ.

ಇದೇನೇ ಇದ್ದರೂ ಸದ್ಯ ವಿಜಯೇಂದ್ರ ಭೂಗತನಾಗಿರುವುದಂತೂ ಸತ್ಯ.

ಮೊನ್ನೆ, ಅಂದರೆ ನವೆಂಬರ್ 29ರ ಸೋಮವಾರ ವಿಜಯೇಂದ್ರ ಮುಂಬೈ ಮೂಲಕ ಚೈನಾ ಪ್ರವಾಸಕ್ಕೆ ತೆರಳಬೇಕಿತ್ತು, ಅದು ಅರವತ್ತು ದಿನಗಳ ಫಾರಿನ್ ಟೂರ್ ಆಗಿತ್ತು, ಮೊದಲು ಚೈನಾ ಆನಂತರ ರಷ್ಯಾ ಪ್ರವಾಸ ಮುಗಿಸಿ ಅಲ್ಲಿಂದಲೇ ಅಮೆರಿಕಾ ಯಾತ್ರೆಗೂ ಹೋಗುವುದು ವಿಜಯೇಂದ್ರ ಉದ್ದೇಶವಾಗಿತ್ತು, ಆತುರಾತುರವಾಗಿ ಇಂಥದ್ದೊಂದು ಪ್ರವಾಸಕ್ಕೆ ಮುಂದಾದ ವಿಜಯೇಂದ್ರನ ಉದ್ದೇಶವೇ ವಿಚಿತ್ರವಾಗಿತ್ತು, ಅದು ಅರವತ್ತು ದಿನಗಳ ಫಾರಿನ್ ಟೂರು. ಅಪ್ಪನೇ ಮುಖ್ಯಮಂತ್ರಿ ಆಗಿರುವಾಗ ಮಗ ಡೀಲು ಪಾಲು ಮಾಡಿಕೊಂಡಿರುವುದನ್ನು ಬಿಟ್ಟು ಏಕಾಏಕಿ ವಿದೇಶಕ್ಕೆ ಹಾರುತ್ತಾನೆಂಬುದೇ ಅನೇಕ ಗುಮಾನಿಗಳನ್ನು ಹುಟ್ಟುಹಾಕಿತ್ತು,



ರಾತ್ರೋರಾತ್ರಿ ಎಸ್ಕೇಪ್

ಇಂತಹ ಅನುಮಾನವೆಲ್ಲ ಏನಕೇನ ಸಾಕಾರಗೊಂಡಂತೆ ನವೆಂಬರ್ 28ರ ಭಾನುವಾರ ರಾತ್ರಿಯೇ ವಿಜಯೇಂದ್ರ ಪರಾರಿಯಾಗಿದ್ದ. ಇತ್ತೀಚೆಗೆ ಬಯಲಾದ ಡಿನೋಟಿಫಿಕೇಷನ್ ಕರ್ಮಕಾಂಡಗಳು, ಭೂಕಬಳಿಕೆ ಮತ್ತು ಕೆಐಎಡಿಬಿ ಹಗರಣಗಳಲ್ಲಿ ವಿಜಯೇಂದ್ರನ ಕೈವಾಡದ ಬಗ್ಗೆ ಲೋಕಾಯುಕ್ತರ ಬಳಿ ಸ್ಪಷ್ಟ ಮಾಹಿತಿಗಳಿವೆ. ಜೆಡಿಎಸ್ ಮುಖ್ಯಮಂತ್ರಿ ಕುಟುಂಬದ ವಿರುದ್ಧವೇ ಲೋಕಾಯುಕ್ತಕ್ಕೆ ದೂರು ನೀಡಿದೆ. ಇನ್ನೆಲ್ಲಿ ಕಟ್ಟಾ ಮಗ ಜಗ್ಗನ ಹಾಗೆ ತಾನೂ ಅರೆಸ್ಟ್ ಆಗಬೇಕಾಗುತ್ತೋ ಎಂದು ಹೆದರಿ ವಿಜಯೇಂದ್ರ ತಲೆ ಮರೆಸಿಕೊಂಡಿದ್ದಾನಾ?

ಈ ತರದ ಗುಮಾನಿಗೆ ಇಂಬು ಕೊಟ್ಟಂತೆ ಭಾನುವಾರ ರಾತ್ರಿಯಿಂದಲೇ ವಿಜಯೇಂದ್ರ ಪರಾರಿಯಾಗಿದ್ದಾನೆ. ಅನೇಕಾನೇಕ ಹಗರಣಗಳಿಗೆ ಕೈಯಿಟ್ಟು ತನಗೆ ಕೆಟ್ಟ ಹೆಸರು ತಂದ ಮಕ್ಕಳನ್ನು ಹೊರಹಾಕಿದ್ದೇನೆಂದು ಮುಖ್ಯಮಂತ್ರಿ ಯಡ್ಡಿ ಹೇಳಿಕೊಳ್ಳಬಹುದು. ನಿನ್ನೆಮೊನ್ನೆಯ ತನಕ ಡಾಲರ್ಸ್ ಕಾಲೋನಿಯ ಮುಖ್ಯಮಂತ್ರಿ ನಿವಾಸದ ದವಳಗಿರಿಯೇ ವಿಜಯೇಂದ್ರನ ಅಧಿಕೃತ ನಿವಾಸವಾಗಿತ್ತು, ಯಡ್ಡಿಯ ಮತ್ತೊಬ್ಬ ಮಗಳು ಅರುಣಾ ಕೂಡ ಅಲ್ಲೇ ಇದ್ದಳು. ಮುಖ್ಯಮಂತ್ರಿ ಮನೆಯಿಂದ ವಿಜಯೇಂದ್ರನನ್ನು ಹೊರಹಾಕಿದ್ದೇ ಆಗಿದ್ದರೆ ಆತ ಶಿವಮೊಗ್ಗದ ವಿನೋಭ ನಗರದ ಮನೆಯಲ್ಲಿರಬೇಕಿತ್ತು, ಅಥವಾ ಹೊಸ ಮನೆಯನ್ನಾದರೂ ಮಾಡಬೇಕಿತ್ತು, ಕನಿಷ್ಠ ಸುಲ್ತಾನ್ ಪಾಳ್ಯದ ರಾಘವೇಂದ್ರನ ಮನೆಯಲ್ಲೋ, ವಿಜಯನಗರದ ಉಮಾ ದೇವಿಯ ಮನೆಯಲ್ಲೋ ವಿಜಯೇಂದ್ರ ಕಾಣಿಸಬೇಕಿತ್ತು,

ಮಾವನ ಜಯನಗರದ ಮನೆಯಲ್ಲೂ ವಿಜಯೇಂದ್ರ ಕಾಣಿಸುತ್ತಿಲ್ಲ, ಕುಮಾರಕೃಪಾ ಗೆಸ್ಟ್ ಹೌಸಿನ ಪ್ರತ್ಯೇಕ ಕೋಣೆಗೂ ಬರುತ್ತಿಲ್ಲ, ಹಾಗಾದರೆ ವಿಜಯೇಂದ್ರ ಏಕಾಏಕಿ ಎಲ್ಲಿಗೆ ಹೋದ, ಏನಾದ?

ಕೆಐಎಡಿಬಿಗೆ 10 ಕೋಟಿ ನಾಮ

ಬೇನಾಮಿ ಸಂಪತ್ತು

ಲೋಕಾಯುಕ್ತದ ಮೂಲಗಳೇ ಹೇಳುವಂತೆ ಈ ಎಲ್ಲಾ ಘಟನೆಗಳ ಹಿಂದಿನ ಹಕೀಕತ್ತೇ ಬೇರೆ ಇದೆ. ಅದು ಕೆಐಎಡಿಬಿಯ ಗೋಲ್‌ಮಾಲ್ ಪುರಾಣ. ಹೇಗೆ ಕಟ್ಟಾ ಮಗ ಜಗ್ಗ ಲೋಕಾಯುಕ್ತಕ್ಕೆ ಕೆಐಎಡಿಬಿ ಕರ್ಮಕಾಂಡದಲ್ಲಿ ಸಿಕ್ಕುಬಿದ್ದನೋ ಅದಕ್ಕಿಂತಲೂ ಅಸಹ್ಯವಾಗಿ ವಿಜಯೇಂದ್ರ ಸಿಕ್ಕಿಬಿದ್ದಿದ್ದಾನೆ. ಸೆಪ್ಟೆಂಬರ್ 22ರಂದು ಲೋಕಾಯುಕ್ತ ಎಸ್‌ಪಿ ಮಧುಕರ ಶೆಟ್ಟರಿಗೆ ಸೆರೆಸಿಕ್ಕ ಸಂತೋಷ್ ಅಲಿಯಾಸ್ ಸಂಪತ್ ಹೇಳಿಕೇಳಿ ವಿಜಯೇಂದ್ರನ ಬೇನಾಮಿಯಾಗಿದ್ದ, ಬೆನ್ನಲ್ಲೇ ಕಟ್ಟಾ ಮಗನನ್ನೂ ಲೋಕಾಯುಕ್ತ ಪೊಲೀಸರು ಹಿಡಿದು ಹಾಕಿದ್ದರಲ್ಲ, ಇದಕ್ಕೆ ಪೂರಕಗೇ ವಿಜಯೇಂದ್ರನ ಕರ್ಮಕಾಂಡಗಳು ಒಂದೊಂದಾಗಿ ಬೆಳಕಿಗೆ ಬರಲಾರಂಭಿಸಿತು. ಈ ಪೈಕಿ ವಿಜಯೇಂದ್ರ ಮತ್ತು ರಾಘವೇಂದ್ರ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಸಿಂಗಳ್ಳಿಯ ಸರ್ವೆ ನಂಬರ್ 64ರ ಪ್ರಕರಣದಲ್ಲಿ, ಜಾಲ ಹೋಬಳಿಯ ಸಿಂಗಳ್ಳಿಯ ಸರ್ವೆ ನಂಬರ್ 64ರಲ್ಲಿದ್ದ 2.4 ಎಕರೆ ಸರ್ಕಾರಿ ಭೂಮಿಗೆ ಹಸನ್‌ಸಾಬ್ ಎಂಬಾತನೇ ಖಾತೆದಾರನೆಂಬಂತೆ ಕಳ್ಳದಾಖಲೆ ಸೃಷ್ಟಿಸಲಾಯಿತು. ಯಾವುದೋ ಕಾಲಕ್ಕೆ ಈ ಭೂಮಿಯನ್ನು ಹಸನ್‌ಸಾಬ್ ಹೆಸರಿಗೆ ಮಂಜೂರು ಮಾಡಿದಂತೆ ದಾಖಲೆ ಸೃಷ್ಟಿಸಲಾಗಿತ್ತು.



ಹೀಗೆ ಸೃಷ್ಟಿಸಿದ ಕಳ್ಳ ದಾಖಲೆಯನ್ನೇ ಮುಂದಿಟ್ಟುಕೊಂಡು ಅದಕ್ಕೆ ಕೆಐಎಡಿಬಿಯಿಂದ ಪರಿಹಾರ ಕಲ್ಪಿಸುವಂತೆ ಸಂಪತ್ ಕೈಚಳಕ ತೋರಿಸಿದ್ದ, ತಮಾಷೆ ಎಂದರೆ ಯಾವ ಹಸನ್‌ಸಾಬ್ ಹೆಸರಲ್ಲಿ ದಾಖಲೆ ಸೃಷ್ಟಿಸಿದ್ದರೋ ಆ ಹಸನ್ ಸಾಬ್ ಸತ್ತು ಎಷ್ಟೋ ವರ್ಷಗಳಾಗಿದ್ದವು. ಇಂತಹ ನಕಲಿ ದಾಖಲೆಯನ್ನು ಮುಂದಿಟ್ಟುಕೊಂಡು ನಕಲಿ ಹಸನ್‌ಸಾಬ್‌ನನ್ನು ಹುಟ್ಟುಹಾಕಿದ್ದರಲ್ಲಿ ಸಂಪತ್ ಜೊತೆ ವಿಜಯೇಂದ್ರನದ್ದೂ ಪಾಲಿತ್ತು.

ಸಿಂಗಳ್ಳಿಯ ಈ 2.4 ಎಕರೆಗೆ ಕೆಐಎಡಿಬಿಯ 1.4 ಕೋಟಿ ರೂಪಾಯಿಗಳ ಪರಿಹಾರವನ್ನು ಮುಂಜೂರು ಮಾಡಿತ್ತು. ಬರಿ ಇಷ್ಟೇ ಆದರೆ ವಿಜಯೇಂದ್ರನ ಮಟ್ಟಿಗೆ ಅದು ಯಾವ ಮಹಾ ದುಡ್ಡು. ಅದಕ್ಕೆ ಸಂಪತ್ ಮತ್ತು ವಿಜಯೇಂದ್ರ ಸೇರಿಕೊಂಡು ಎಂತಹ ಖತರ್‌ನಾಕ್ ತಂತ್ರ ಬಳಸುತ್ತಾರೆಂದರೆ 1.4 ಕೋಟಿ ಎಂದಿದ್ದ ಚೆಕ್ಕನ್ನು 11.40 ಕೋಟಿ ಎಂದು ತಿದ್ದುಬಿಟ್ಟರು.

ಫೋರ್ಜರಿ

ಅಂದರೆ ಚೆಕ್‌ನಲ್ಲಿನ ಅಂಕಿಯ ಹಿಂದೆ ಮತ್ತು ಮುಂದೆ ಒಂದು ಮತ್ತು ಸೊನ್ನೆಗಳನ್ನು ಸೇರಿಸುವುದು. ಅಲ್ಲಿಗೆ ಒಂದು ಕೋಟಿ ಇದ್ದದ್ದು ಹನ್ನೊಂದು ಕೋಟಿ ಆಗುತ್ತದೆ. ನಾಲ್ಕು ಲಕ್ಷವಿದ್ದದ್ದು ನಲವತ್ತು ಲಕ್ಷವಾಗುತ್ತದೆ. 1.4 ಕೋಟಿಗೆ ಬದಲಾಗಿ ಹನ್ನೊಂದು ಕೋಟಿ ನಲವತ್ತು ಲಕ್ಷದಷ್ಟು ಬೃಹತ್ ಮೊತ್ತದ ಕೆಐಎಡಿಬಿ ನಿಧಿ ಈ ಮೂಲಕ ಸಂಪತ್- ವಿಜಯೇಂದ್ರರ ಕೈಸೇರುತ್ತದೆ.

ಈ ರೀತಿ ಕೆಐಎಡಿಬಿಯನ್ನು ದೋಚಿ ಲಪಟಾಯಿಸಿದ 11.40 ಕೋಟಿಯಲ್ಲಿ ಅಸಲಿ ಮೊತ್ತವಾದ 1.4 ಕೋಟಿ ಕಳೆದು ಉಳಿಕೆ 10 ಕೋಟಿಯನ್ನು ಸಂಪತ್ ತನ್ನ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಾನೆ. ಸಂಪತ್‌ನ ಸಹಕಾರ ನಗರದ ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯಿಂದ, ಬಾಗಲೂರಿನ ಕೆನರಾ ಬ್ಯಾಂಕ್ ಖಾತೆಯಿಂದ, ಗಾಂಧಿನಗರದ ಕಾರ್ಪೊರೇಶನ್ ಬ್ಯಾಂಕ್ ಮತ್ತು ಸಹಕಾರ ನಗರದ ಕೆನರಾ ಬ್ಯಾಂಕ್‌ನ ವಿವಿಧ ಖಾತೆಗಳ ಮೂಲಕ ಇದೇ ದುಡ್ಡು ವಿಜಯೇಂದ್ರ ಮತ್ತು ರಾಘವೇಂದ್ರರ ಖಾತೆಗೆ ವ್ಯವಸ್ಥಿತವಾಗಿ ಜಮೆಯಾಗುತ್ತದೆ.

ಅಲ್ಲಿಗೆ ಸಿಂಗಳ್ಳಿ ಸರ್ವೆ ನಂಬರ್ 60ರ ಕೆಐಎಡಿಬಿ ಪರಿಹಾರದ ಗೋಲ್ ಮಾಲ್ ದುಡ್ಡು ಮುಖ್ಯಮಂತ್ರಿ ಪುತ್ರರಾದ ರಾಘು ಮತ್ತು ವಿಜಯೇಂದ್ರರ ಪಾಲಾಯಿತೆಂದೇ ಅರ್ಥ. ಇದು ಬೇನಾಮಿ ಸಂಪತ್ ಬಾಯಿಬಿಟ್ಟ ಸತ್ಯ. ಇದೇ ಆಧಾರದ ಮೇಲೆ ಸಂಪತ್‌ನ ಬ್ಯಾಂಕ್ ಖಾತೆ ದಾಖಲೆಗಳನ್ನು ಪರಿಶೀಲಿಸಿದ ಲೋಕಾಯುಕ್ತ ಪೊಲೀಸರಿಗೆ ಈ ಪ್ರಕರಣದಲ್ಲಿ ವಿಜಯೇಂದ್ರ ಮತ್ತು ರಾಘವೇಂದ್ರರ ಕೈವಾಡವಿರುವ ಬಗ್ಗೆ ಸ್ಪಷ್ಟ ಸಾಕ್ಷ್ಯಾಧಾರಗಳು ಸಿಕ್ಕವು.

ಮೊದಲೆ ಸರ್ಕಾರಿ ಭೂಮಿ, ಅದಕ್ಕೆ ಖಾತೆದಾರನನ್ನಾಗಿ ಸೃಷ್ಟಿಸಿದ್ದು ಸತ್ತ ಹಸನ್‌ಸಾಬ್‌ನನ್ನು. ಸಾಲದ್ದಕ್ಕೆ ಕೆಐಎಡಿಬಿಯ ಚೆಕ್ಕನ್ನೇ ತಿದ್ದಲಾಗಿತ್ತು, ಫೋರ್ಜರಿ, ವಂಚನೆ, ಸರ್ಕಾರಿ ದುಡ್ಡಿನ ಲೂಟಿ ಇತ್ಯಾದಿ ಪ್ರಕರಣಗಳಲ್ಲಿ ಕಟ್ಟಾ ಮಗ ಜಗ್ಗನಂತೆ ಮುಖ್ಯಮಂತ್ರಿ ಮಕ್ಕಳಾದ ವಿಜಯೇಂದ್ರ ಮತ್ತು ರಾಘವೇಂದ್ರ ಕೂಡ ಆರೋಪಿಗಳಾಗಿದ್ದರು. ಇದೇ ಹೊತ್ತಿಗೆ ಒಂದರಮೇಲೊಂದು ಹಗರಣಗಳು ಬಯಲಾದವಲ್ಲಾ, ಯಡ್ಡಿಯ ಕುರ್ಚಿಯೇ ಅಲ್ಲಾಡಲಾರಂಭಿಸಿದಾಗ ತನ್ನ ವಿರುದ್ಧ ಲೋಕಾಯುಕ್ತ ಕುಣಿಕೆ ರೆಡಿ ಮಾಡಿಕೊಂಡ ಸುದ್ದಿ ವಿಜಯೇಂದ್ರನ ಕಿವಿಗೆ ಬಿತ್ತು.

ಸ್ಪೀಕರ್ ಅನುಮತಿ ಇಲ್ಲದೆ

ಏಕೆಂದರೆ ರಾಘವೇಂದ್ರನನ್ನು ಬಂಧಿಸಬೇಕೆಂದರೆ ಲೋಕಾಯುಕ್ತ ಲೋಕ ಸಭೆಯ ಸ್ಪೀಕರ್ ಅನುಮತಿ ಕೇಳಬೇಕು. ಮುಖ್ಯಮಂತ್ರಿ ಯಡ್ಡಿಯನ್ನು ಬಂಧಿಸಬೇಕೆಂದರೂ ಅದಕ್ಕೆ ವಿಧಾನಸಭೆಯ ಸ್ಪೀಕರ್ ಮತ್ತು ರಾಜ್ಯಪಾಲರ ಅನುಮತಿ ಬೇಕು. ಆದರೆ ವಿಜಯೇಂದ್ರ ಜನಪ್ರತಿನಿಧಿಯಲ್ಲ.... ಸ್ಪೀಕರ್ ಅನುಮತಿಯಿಲ್ಲದೇ ಸಲೀಸಾಗಿ ಬಂಧಿಸಬಹುದಾದದ್ದು ವಿಜಯೇಂದ್ರನನ್ನು ಮಾತ್ರ. ಈ ನಿಟ್ಟಿನಲ್ಲೇ ಲೋಕಾಯುಕ್ತ ಎಸ್.ಪಿ. ಮಧುಕರ್ ಶೆಟ್ಟಿ ವಿಜಯೇಂದ್ರನ ಬಂಧನಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಇದು ಮುಖ್ಯಮಂತ್ರಿಯ ಗಮನಕ್ಕೆ ಬರಲು ಎಷ್ಟು ಹೊತ್ತು. ತಕ್ಷಣವೇ ಮಗನಿಗೆ ಎಸ್ಕೇಪಾಗುವಂತೆ ಸೂಚಿಸಿದ್ದಾರೆ. ಜೊತೆಗೆ ಮಕ್ಕಳು ಮಾಡಿದ ಅನಾಚಾರದಿಂದಲೇ ತನಗೆ ಕೆಟ್ಟ ಹೆಸರು ಬಂತೆಂದೂ ಮಕ್ಕಳನ್ನು ಮನೆಯಿಂದ ಹೊರದಬ್ಬಿದ್ದೇನೆಂದೂ ಹೇಳಿಕೆ ಬೇರೆ ಕೊಟ್ಟಿದ್ದರಲ್ಲ, ಈ ಎಲ್ಲಾ ಅಪಾಯದ ವಾಸನೆ ಹಿಡಿದೇ ವಿಜಯೇಂದ್ರ ನವೆಂಬರ್ 29 ರ ಸೋಮವಾರ ಬೆಳಗ್ಗೆ ಮುಂಬಯಿ ಮೂಲಕ ದೇಶ ಬಿಡಲು ಅಣಿಯಾಗಿದ್ದ. ಆದರೆ ಅಷ್ಟರಲ್ಲೇ ಲೋಕಾಯುಕ್ತರಿಗೆ ವಿಜಯೇಂದ್ರ ದೇಶ ಬಿಡುವ ಮಾಹಿತಿ ಸಿಕ್ಕಾಗಿತ್ತು, ತಕ್ಷಣವೇ ವಿಜಯೇಂದ್ರನ ವೀಸಾ ತಡೆ ಹಿಡಿಯುವಂತೆ ಮತ್ತು ಬುಕ್ಕಾಗಿದ್ದ ಏರ್ ಟಿಕೆಟ್ಟನ್ನು ರದ್ದುಪಡಿಸುವಂತೆ ಟ್ರಾವಲ್ ಏಜೆಂಟ್ ಮತ್ತು ವಿದೇಶಾಂಗ ಇಲಾಖೆಯ ಅಧಿಕಾರಿಗಳ ಮೂಲಕ ಲೋಕಾಯುಕ್ತರು ಒತ್ತಡ ಹಾಕಿದ್ದಾರೆ.

ಯಾವತ್ತು ತನ್ನ ಏರ್ ಟಿಕೆಟ್ ಮತ್ತು ವೀಸಾ ರದ್ದಾಗುವ ಸೂಚನೆ ಸಿಕ್ಕಿತೋ; ನವೆಂಬರ್ 28 ರ ಭಾನುವಾರ ರಾತ್ರಿಯೇ ವಿಜಯೇಂದ್ರ ಭೂಗತನಾಗಿದ್ದ. ಮುಖ್ಯಮಂತ್ರಿ ಮನೆಯಿಂದ ಮಕ್ಕಳನ್ನು ಹೊರದಬ್ಬಿದ ನೆಪದಲ್ಲೇ ವಿಜಯೇಂದ್ರನೂ ಕಣ್ಮರೆಯಾಗಿಬಿಟ್ಟ. ಹಾಗಿಲ್ಲದೇ ಹೋಗಿದ್ದರೆ ಈ ಹೊತ್ತಿಗಾಗಲೇ ಆತ 60 ದಿನಗಳ ಸುದೀರ್ಘ ಪ್ರವಾಸಕ್ಕೆಂದು ಚೈನಾ-ರಷ್ಯಾಕ್ಕೆ ಹಾರಬೇಕಿತ್ತು, ಕನಿಷ್ಠ ತನ್ನದೇ ಪ್ರತ್ಯೇಕ ಮನೆಯನ್ನಾದರೂ ಹಿಡಿಯಬೇಕಿತ್ತು, ಮಾವನ ಮನೆಯಲ್ಲಾಗಲಿ, ಪತ್ನಿಯ ತವರಾದ ಜಮಖಂಡಿಯಲ್ಲಾಗಲಿ, ಶಿವಮೊಗ್ಗದ ವಿನೋಭಾನಗರದ ಮನೆಯಲ್ಲಾಗಲಿ ವಿಜಯೇಂದ್ರ ಕಾಣಿಸಲೇಬೇಕಿತ್ತು,

ಭಾರತಿಶೆಟ್ಟಿಯ ಮನೆಯಲ್ಲಿ

ನವೆಂಬರ್ 28 ರ ರಾತ್ರಿಯಿಂದ ವಿಜಯೇಂದ್ರ ಏನಾದ ಎಲ್ಲಿಗೆ ಹೋದ ಎಂಬುದೇ ಯಾರಿಗೂ ಗೊತ್ತಿಲ್ಲ, ಇದರರ್ಥ ಲೋಕಾಯುಕ್ತರ ಬಲೆಯಿಂದ ಬಚಾವಾಗಲು ಆತ ಎಸ್ಕೇಪಾಗಿದ್ದಾನೆ ಎಂದೇ ಅರ್ಥ ತಾನೆ?



ಮತ್ತೊಂದು ಮಾಹಿತಿಯಂತೆ ನವೆಂಬರ್ 27 ರ ಶನಿವಾರವೇ ಲೋಕಾಯುಕ್ತ ಪೊಲೀಸರ ಒಂದು ತಂಡ ಮುಖ್ಯಮಂತ್ರಿ ಮಗ ವಿಜಯೇಂದ್ರನನ್ನು ವಿಚಾರಣೆ ಮಾಡಿ ಯಾವುದೇ ಕಾರಣಕ್ಕೂ ದೇಶ ಬಿಡದಂತೆ ತಾಕೀತು ಮಾಡಿತ್ತು, ಜೊತೆಗೆ ಆತನ ವೀಸಾ ರದ್ದುಗೊಳಿಸುವಂತೆ ಲೋಕಾಯುಕ್ತರಿಂದ ಅಧಿಕೃತ ಪತ್ರವೂ ರವಾನೆಯಾಗಿತ್ತು, ಆಗಿನ್ನೂ ಮುಖ್ಯಮಂತ್ರಿ ನಿವಾಸವಾದ ಧವಳಗಿರಿಯಲ್ಲೇ ಇದ್ದ ವಿಜಯೇಂದ್ರ ಇದರಿಂದ ಕಂಗೆಟ್ಟು ಭಾನುವಾರ ರಾತ್ರಿಯೇ ತನ್ನ ಲಗೇಜ್ ಸಮೇತ್ ಕಣ್ಮರೆಯಾಗಿದ್ದಾನೆ.

ಬಿಜೆಪಿಯ ಕೆಲ ನಾಯಕರೇ ಹೇಳುವಂತೆ ಸದ್ಯ ಆತ ದೆಹಲಿಯ ರಾಘವೇಂದ್ರನ ಮನೆಯಲ್ಲಿ ಅವಿತಿದ್ದಾನೆ. ಇನ್ನೂ ಕೆಲವರ ಪ್ರಕಾರ ಸಿಎಂ ಯಡ್ಡಿಯ ಪರಮಾಪ್ತೆ ಭಾರತಿಶೆಟ್ಟಿಯ ಮನೆಯಲ್ಲಿ ಅಡಗಿ ಕುಳಿತಿದ್ದಾನೆ. ಮತ್ತೊಂದೆಡೆ ಲೋಕಾಯುಕ್ತ ಎಸ್.ಪಿ. ಮಧುಕರ್ ಶೆಟ್ಟಿ ಮುಖ್ಯಮಂತ್ರಿ ಮಗನ ಜಾಡು ಹಿಡಿದು ಬಲೆ ಹಿಡಿದು ಕಾಯುತ್ತಿದ್ದಾರೆ.

ಮುಖ್ಯಮಂತ್ರಿಯೊಬ್ಬನಿಗೆ ಎಂಥಾ ಗತಿ ಬಂತಲ್ಲವೆ?

ಸ್ಪೆಷಲ್ ಡಿಸಿ ರಾಮಾಂಜನೇಯ ಪುರಾಣ


ಎರಡೆರಡು ದೇವರ ಹೆಸರಿಟ್ಟುಕೊಂಡರೂ ಮಾಮೂಲಿ ...ನವಲ್ಲಿರುವ ಮಿನಿಮಮ್ ಒಳ್ಳೆಯತನವನ್ನು ಕಲಿತಿರದಿದ್ದ ...ಂಗಳೂರಿನ ಸ್ಪೆಷಲ್ ಡಿಸಿ ರಾಮಾಂಜನೇಯ ಈಗ ...ನ್ನೊಬ್ಬ ದೇವರಾದ ಶ್ರೀಕೃಷ್ಣ ಪರಮಾತ್ಮನ ಜನ್ಮಸ್ಥಾನವನ್ನು ...ರಿಕೊಂಡಿದ್ದಾನೆ.

2008 ರಲ್ಲಿ ಸ್ಪೆಷಲ್ ಡಿಸಿಯಾಗಿ ಬಂದ ರಾಮಾಂಜ...ಯ ಅವತ್ತಿನಿಂದಲೂ ಪುರುಸೊತ್ತಿಲ್ಲದಂತೆ ಎರಡೂ ...ಗಳಿಂದಲೂ ಲಂಚದ ಅಮೇಧ್ಯ ಹಣವನ್ನು ಬಾಚಿ...ನ್ನುತ್ತಿದ್ದ. ಅಂದಹಾಗೆ ಈ ಖದೀಮ ತನ್ನ ಏಜೆಂಟರ ಮೂಲಕ ಜನರಿಂದ, ರಿಯಲ್ ಎಸ್ಟೇಟ್ ಕುಳಗಳಿಂದ ...ಚದ ಹಣ ಕೀಳುವಾಗ 'ದೇವಸ್ಥಾನ ಕಟ್ಟಿಸಲು ಈ ... ಬೇಕು' ಎನ್ನುವ ಕತೆ ಕಟ್ಟುತ್ತಿದ್ದುದೇ ವಿಶೇಷ.

ಆನೇಕಲ್ ತಾಲ್ಲೂಕಿನ ಬೊಮ್ಮಸಂದ್ರ ಗ್ರಾಮ ಪಂಚಾ...ತಿಯ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿಯ ದೂರಿನ ...ರೆಗೆ ಲೋಕಾಯುಕ್ತರ ಬಲೆಗೆ ಬಿದ್ದಿರುವ ...ಮಾಂಜನೇಯನ ಬಾಯನ್ನು ಸರಿಯಾಗಿ ಬಿಡಿಸಿದ್ದೇ ...ದರೆ. ಕನಿಷ್ಠ ಐನೂರು ಕೋಟಿ ರೂಪಾಯಿಗಳಿಗೂ ...ಚ್ಚಿನ ಭೂಹಗರಣಗಳು, ಡಿನೋಟಿಫಿಕೇಷನ್ ದಂಧೆ, ...ಕ್ರಮ ಭೂಪರಿವರ್ತನೆಯ ಡೀಲ್‌ಗಳು, ಗ್ರೀನ್‌ಬೆಲ್ಟ್ ...ತ್ತುವರಿ ದಂಧೆ ಬೆಳಕಿಗೆ ಬರುವ ಸಾಧ್ಯತೆಯಿದೆ.


ಬೆಂಗಳೂರಿನ ಅಕ್ರಮ ಭೂವಹಿವಾಟಿನ ಬ್ರಹ್ಮಾಂಡ ...ಷ್ಟಾಚಾರದ ಕಿಂಗ್‌ಪಿನ್ ಈ ರಾಮಾಂಜನೇಯನೇ ಆಗಿದ್ದ. ...ಕೆಂದರೆ ಇವನು ಹೊಂದಿದ್ದ ವಿಶೇಷ ಜಿಲ್ಲಾಧಿಕಾರಿಯೆಂಬ ...ಹುದ್ದೆ, ಆ ಅಧಿಕಾರಕ್ಕಿರುವ ತಾಕತ್ತೇ ...ಅಂಥದ್ದು.

ಅನಾಮತ್ತು 8 ಕೋಟಿ ರೂಪಾಯಿ ...ತ್ತು ಈ ಹುದ್ದೆಗೆ ಬಂದು ಕುಳಿತಿದ್ದ ಈ ರಾಮಾಂಜನಿ ಅಂದರೆ ಆ ಹುದ್ದೆಯ ಮಹತ್ವ ಎಷ್ಟೆಂದು ನೀವೂ ಅಂದಾಜಿಸ...ಬಹುದು. ಈ ರಾಮಾಂಜನಿ ಪರಪ್ಪನ ಅಗ್ರಹಾರ ಜೈಲಿಗೆ ಹೋದ ತಕ್ಷಣವೇ ಕಟ್ಟಾ ಜಗ್ಗ, ಕಬಡ್ಡಿ ಬಾಬು, ಸಚಿವ ನಾರಾಯಣಸ್ವಾಮಿ ಜೈಲಿಗೇ ಹೋಗಿ ...ನೇಟಿ ಮಾಡಿ ಬಂದಿರುವುದನ್ನು ನೋಡಿದರೆ ಸಾಕು, ಈ ಭೂಗಳ್ಳರ ಗ್ಯಾಂಗ್‌ಗೆ ರಾಮಾಂಜನಿ ಎಷ್ಟು ಮುಖ್ಯವೆಂಬುದು ಗೊತ್ತಾಗುತ್ತದೆ.











ಹರಾಜ್‌ನಲ್ಲಿ ಡಿಸಿ ಹುದ್ದೆ ಪಡೆದ

ಹಾಲಿ ಹಿರಿಯ ಕೆಎಎಸ್ ಅಧಿಕಾರಿಯಾಗಿರುವ ರಾಮಾಂಜನಿ 1995-96 ರಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಕೇಂದ್ರ ಸ್ಥಾನಿಯ ಸಹಾಯಕನಾಗಿದ್ದ. ನಂತರ ಕೆಲಕಾಲ ಉತ್ತರ ಕನ್ನಡ ಹಾಗೂ ಬಳ್ಳಾರಿಯಲ್ಲಿ ತಹಶೀಲ್ದಾರನಾಗಿದ್ದ. ಈ ಸಾಧಾರಣ ಹುದ್ದೆಗಳಲ್ಲಿದ್ದಾಗ ರಾಮಾಂಜನೇಯನೂ ಸಾಧಾರಣ ಮಟ್ಟದ ಕಳ್ಳನಾಗಿದ್ದ ಅಷ್ಟೆ. ಆಮೇಲೆ ಮತ್ತೆ ಬೆಂಗಳೂರು ನಗರ ಡಿಸಿ ಕಚೇರಿಯ ಹೆಚ್‌ಕ್ಯೂಎ ಆಗಿ ವಕ್ಕರಿಸಿದ. ನಂತರ ಪ್ರಮೋಷನ್ ಗಿಟ್ಟಿಸಿ ಬೆಂಗಳೂರು ದಕ್ಷಿಣ ಹಾಗೂ ದೊಡ್ಡಬಳ್ಳಾಪುರಕ್ಕೆ ಎಸಿಯಾದ. ಕೆಲಕಾಲ ಬಿಡಿಎ ನಲ್ಲಿ ಭೂಸ್ವಾಧೀನಾಧಿಕಾರಿಯಾಗಿಯೂ ಕೆಲಸ ಮಾಡಿದ್ದ. ಅಂದರೆ ಕಳೆದ ಎಂಟತ್ತು ವರ್ಷಗಳಿಂದ ಬೆಂಗಳೂರಿನ ವಲಯದಲ್ಲೇ ಅಧಿಕಾರದಲ್ಲಿದ್ದ ರಾಮಾಂಜನಿಗೆ ರೆವಿನ್ಯೂ ಆಫೀಸರ್‌ಗಳಿಗಿರುವ ಅಧಿಕಾರ, ಹಣ ಮಾಡುವ ದಾರಿಗಳೆಲ್ಲಾ ಚೆನ್ನಾಗಿ ಅರ್ಥವಾಗಿದ್ದವು. ತಾನಿದ್ದ ಹುದ್ದೆಗಳಲ್ಲಿ ಚೆನ್ನಾಗಿ ಮೇಯ್ದು ದುಡ್ಡು ಬಾಚಿಕೊಂಡ ರಾಮಾಂಜನಿ 2008 ರ ಜುಲೈನಲ್ಲಿ ಬೆಂಗಳೂರಿಗೆ ಸ್ಪೆಷಲ್ ಡಿಸಿಯಾಗಿ ಬಂದ. ಅದಕ್ಕೆ ಅವನು ತೆತ್ತ ಹಣ 8 ಕೋಟಿ ರೂಪಾಯಿಗಳು!

ಹರಾಜಿನಲ್ಲಿ ಕೂಗಿ ಖರೀದಿಸಿದ್ದ ಹುದ್ದೆ ಅದು!!

ಇದೇ ಸ್ಪೆಷಲ್ ಡಿಸಿ ಜಾಗದ ಮೇಲೆ ಕಣ್ಣಿಟ್ಟಿದ್ದ ನಾಗರಾಜ್ ಎಂಬ ಇನ್ನೊಬ್ಬ ಆಗಿನ ರೆವಿನ್ಯೂ ಮಂತ್ರಿಗೆ ಏಳು ಕೋಟಿ ರೂಪಾಯಿಗಳ ಆಫರ್ ನೀಡಿದ್ದ. ಆದರೆ ರಾಮಾಂಜನಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ 8 ಕೋಟಿ ಹರಾಜ್ ಕೂಗಿದ. ಹಾಗಾಗಿ ಸ್ಪೆಷಲ್ ಡಿಸಿ ಹುದ್ದೆ ಅವನಿಗೇ ಸಿಕ್ಕಿತು. ಆಶ್ಚರ್ಯ ಅಂದರೆ ಈ ಹಣ ಒಂದು ವರ್ಷದ ಅವಧಿಗಾಗಿ ತೆತ್ತ ಫೀಜು ಮಾತ್ರ. ಈ ವರ್ಷ ಇದೇ ಪೋಸ್ಟಿನಲ್ಲಿ ಮುಂದುವರೆಯಲು ಮತ್ತೆ 8 ಕೋಟಿ ರೂಪಾಯಿಯನ್ನು ಸಿಎಂ ಯಡ್ಡಿಯ ಸುಪುತ್ರ ವಿಜಯೇಂದ್ರನಿಗೆ ಕೊಟ್ಟಿದ್ದಾನೆ ರಾಮಾಂಜನಿ. ಅದೇಕೋ ಏನೋ ರೆವಿನ್ಯೂ ಸಚಿವ ಕರುಣಾಕರ ರೆಡ್ಡಿಗೆ ರಾಮಾಂಜನಿ ಬಗ್ಗೆ ಒಲವಿರಲಿಲ್ಲ, ಹಾಗಾಗಿ ಅವನನ್ನು ಕಿತ್ತು ಬೇರೆ ಅಧಿಕಾರಿ ತರಲು ರೆಡ್ಡಿ ಬಯಸಿದ್ದ. ಕರುಣಾಕರ ರೆಡ್ಡಿಯ ಬ್ರೋಕರ್‌ಗಳಾದ ಸರ್ವಣ್ಣ, ಶರತ್ ಹಾಗೂ ಗೌಡ ಎಂಬುವರು ಬೇರೆ ಆಫೀಸರ್‌ಗಳ ಹತ್ತಿರ ಅದಾಗಲೇ ಡೀಲು ಕುದುರಿಸಿಕೊಂಡಿದ್ದರು. ಇದರ ವಾಸನೆ ಹಿಡಿದ ರಾಮಾಂಜನಿ ತಕ್ಷಣ ಸಚಿವ ಅಶೋಕನ ನೆಂಟ ರವಿಯ ಮೂಲಕ ಸಿಎಂ ಯಡ್ಡಿ ಮಕ್ಕಳೊಂದಿಗೆ ಡೀಲ್ ಕುದುರಿಸಿ ಈ ಬಾರಿ ಹತ್ತು ಕೋಟಿ ಕೊಟ್ಟು ತನ್ನ ಜಾಗ ಉಳಿಸಿಕೊಂಡಿದ್ದ.



ನೆನಪಿಡಿ. ಈ ಮೊತ್ತಕ್ಕೆ ಕೇವಲ ಒಂದು ವರ್ಷದ ವಾರಂಟಿ ಮಾತ್ರ ನಂತರ ವರ್ಗಾ ಆಗಬಾರದೆಂದರೆ ಮತ್ತೆ 10 ಕೋಟಿ ಮಡಗಬೇಕು!

ಯಾವ್ಯಾವ ಡೀಲು ಎಷ್ಟೆಷ್ಟು ದುಡ್ಡು!

ಕಳೆದ ವಾರ ತಾನೇ ಬನಶಂಕರಮ್ಮ ದೇವರಿಗೆ 50 ಲಕ್ಷ ರೂಪಾಯಿ ಬೆಲೆಯ ವಜ್ರದ ಕಿರೀಟ ಹಾಕಿಸಿರುವ ರಾಮಾಂಜನಿ "ನನಗೆ ಇನ್ನು ದುಡ್ಡು ಬೇಡ" ಎನ್ನುವ ಸ್ಥಿತಿ ತಲುಪಿದ್ದ ಎಂದು ಅವನ ಕಚೇರಿಯ ಜನರೇ ಹೇಳುತ್ತಿದ್ದಾರೆ. ಅಂದರೆ ಅಷ್ಟು ಅಗಾಧ ಪ್ರಮಾಣದಲ್ಲಿ ರಾಮಾಂಜನಿ ಹಣ ಲೂಟಿ ಮಾಡಿದ್ದ.

ಇವನು ಬಿಡಿಎನಲ್ಲಿ ಭೂಸ್ವಾಧೀನಾಧಿಕಾರಿಯಾಗಿದ್ದಾಗ ಬಿಡಿಎ ಬಡಾವಣೆ ನಿರ್ಮಾಣದ ನೋಟಿಫಿಕೇಶನ್ ಹಾಗೂ ಡಿನೋಟಿಫಿಕೇಷನ್ ಡೀಲ್‌ಗಳಲ್ಲೇ ಹತ್ತಾರು ಕೋಟಿ ರೂಪಾಯಿ ದೋಚಿಕೊಂಡಿದ್ದ. ಬಿಡಿಎ ವಿಶ್ವೇಶ್ವರಯ್ಯ ಬಡಾವಣೆಗಾಗಿ ಒಂದು ಸಾವಿರ ಎಕರೆಗೂ ಹೆಚ್ಚು ರೈತರ ಭೂಮಿ ನೋಟಿಫೈ ಮಾಡಿದಾಗ ಅನೇಕರು ಆಕ್ಷೇಪಣಾ ಅರ್ಜಿ ಹಾಕಿದ್ದರು. ಆಗಲೇ ಶಿವಸ್ವಾಮಿ ರೆವಿನ್ಯೂ ಲೇಔಟ್‌ನ ಜಾಗಕ್ಕೆ ಸಂಬಂಧಿಸಿದಂತೆ ಹಿಂದಿನ ಭೂಮಾಲೀಕ ಯಾದಳಂ ಶೆಟ್ಟಿಯ ಜೊತೆ ಡೀಲು ಕುದುರಿಸಿಕೊಂಡ ರಾಮಾಂಜನಿ ಸಾವಿರಾರು ರೆವಿನ್ಯೂ ಸೈಟ್‌ದಾರರಿಗೆ ಅನ್ಯಾಯ ಮಾಡಿದ್ದ. ಇವನು ಬಿಡಿಎನಲ್ಲಿದ್ದಾಗಲೇ ಎಟಿಪಿಎಲ್ ಲ್ಯಾಂಡ್ ಡೀಲ್, ನಗರ ನಾಗೇಶ್ವರ ದೇವಾಲಯದ ನಾಲ್ಕೆಕರೆ ಭೂಮಿಯ ಡೀಲ್‌ಗಳನ್ನು ಕುದುರಿಸಿ ಕೋಟ್ಯಂತರ ರೂಪಾಯಿ ಲಪಟಾಯಿಸಿದ್ದ. ಸ್ಪೆಷಲ್ ಡಿಸಿಯಾಗಿ ಬಂದಮೇಲೆ ಕೆ.ಆರ್. ಪುರಂನ ಕ್ಯಾಲಸಹಳ್ಳಿಯ ಸರ್ವೆ ನಂಬರ್ 11 ಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ ಹೋರಾಟಗಾರರಿಗೆ ಮಂಜೂರಾಗಿದ್ದ ಹತ್ತಾರು ಎಕರೆ ಜಮೀನನ್ನು ಅಕ್ರಮವಾಗಿ ರಾಮಗೌಂಡರ್ ಎಂಬುವವನ ಹೆಸರಲ್ಲಿ ಮ್ಯೂಟೇಶನ್ ಕೊಡಿಸಿಕೊಟ್ಟಿದ್ದ. ಹಾಲಿ ಕೆ.ಆರ್. ಪುರಂ ತಹಶೀಲ್ದಾರ್ ವೆಂಕಟೇಶನೂ ಇದರಲ್ಲಿ ಶಾಮೀಲಾಗಿದ್ದಾನೆ. ಹಿಂದಿನ ಜಿಲ್ಲಾಧಿಕಾರಿ ಕೃಷ್ಣೇಗೌಡ ಈ ಜಮೀನನ್ನು ಸರ್ಕಾರದ ವಶಕ್ಕೆ ಪಡೆದಿದ್ದರೆ ನಂತರ ಸ್ಪೆಷಲ್ ಡಿಸಿಯಾದ ರಾಮಾಂಜನಿ ಇದೇ ಸರ್ಕಾರಿ ಭೂಮಿಯನ್ನು ರಿಯಲ್ ಎಸ್ಟೇಟ್ ಖದೀಮರ ಕೈಗೆ ಒಪ್ಪಿಸಿದ್ದಾನೆ.


ಗೃಹ ಸಚಿವ ಅಶೋಕ್‌ನ ನೆಂಟನೂ ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿಯ ಪರಾಜಿತ ಅಭ್ಯರ್ಥಿ ರವಿ, ಕಟ್ಟಾ ಜಗ್ಗ ಮುಂತಾದವರೊಂದಿಗೆ ನೂರಾರು ಲ್ಯಾಂಡ್ ಡೀಲ್‌ಗೆ ಕೈಹಾಕಿದ್ದ ರಾಮಾಂಜನೇಯ ಕೇವಲ ಭ್ರಷ್ಟ ಮಾತ್ರ ಅಲ್ಲ, ಕ್ರಿಮಿನಲ್ ಹಿನ್ನೆಲೆಯವನೂ ಹೌದು. ಪಾವಗಡ ತಾಲ್ಲೂಕಿನ ದೊಡ್ಡಹಳ್ಳಿಯವನಾದ ರಾಮಾಂಜನಿಗೆ ನೆರೆಯ ಆಂಧ್ರದ ಪೆನುಗೊಂಡ ಏರಿಯಾದ ಕ್ರಿಮಿನಲ್ ಗ್ಯಾಂಗ್‌ಗಳೊಂದಿಗೆ ಲಿಂಕ್ ಇದೆ.

ಲೋಕಾಯುಕ್ತ ಪೊಲೀಸರು ರಾಮಾಂಜನಿಯ ಸಂಪೂರ್ಣ ಚರಿತ್ರೆಯನ್ನು ಜಾಲಾಡಿದರೆ ಬೆಚ್ಚಿಬೀಳಿಸುವ ಇನ್ನಷ್ಟು ಸಂಗತಿ ಹೊರಬೀಳುವುದು ಖಚಿತ.

ದೇವಸ್ಥಾನ ಕಟ್ಟಿಸುವ ಭ್ರಷ್ಟ ಅಧಿಕಾರಿಗಳು

ಬನಶಂಕರಮ್ಮನಿಗೆ ವಜ್ರದ ಕಿರೀಟ ಕೊಟ್ಟದ್ದು





ಸತ್ಯಮೂರ್ತಿ

ರೂಪಕ್ ಕುಮಾರ್ ದತ್ತ, ಮಧುಕರ್ ಶೆಟ್ಟಿ ಎಂಬ ಪ್ರಚಂಡರು

ಲೋಕಾಯುಕ್ತ ಸಂಸ್ಥೆಯ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಹಾಗೂ ಎಸ್‌ಪಿಯಾಗಿ ಕಾರ್ಯ ನಿರ್ವಹಿಸುತ್ತಿರುವ ರೂಪಕ್ ಕುಮಾರ್ ದತ್ತ ಮತ್ತು ಮಧುಕರ್ ಶೆಟ್ಟಿಯವರ ಕರ್ತವ್ಯನಿಷ್ಠೆ ನಿಜಕ್ಕೂ ಮೆಚ್ಚುವಂತಿದೆ. ಕೇವಲ ಪ್ರಾಮಾಣಿಕತೆ ಮಾತ್ರವಲ್ಲ, ಚಾಕಚಕ್ಯತೆ ಹಾಗೂ ಬುದ್ಧಿವಂತಿಕೆಯಿಂದಲೂ ಇವರು ಕೆಲಸ ಮಾಡುತ್ತಿರುವುದರಿಂದ ಅನೇಕ ಭ್ರಷ್ಟ ಅಧಿಕಾರಿಗಳಿಗೆ ಒಮ್ಮೆ ಸಿಕ್ಕಿಬಿದ್ದ ನಂತರ ಪಾರಾಗುವ ಸಾಧ್ಯತೆಗಳು ಕಡಿಮೆಯಾಗುತ್ತಿವೆ.




ಈ ಸ್ಪೆಷಲ್ ಡಿಸಿ ರಾಮಾಂಜಿನಪ್ಪನ ಕೇಸನ್ನೇ ಗಮನಿಸಿ. ಈ ಥರದ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾಗ ಕಟ್ಟಾ ಜಗ್ಗ, ಸಚಿವ ನಾರಾಯಣಸ್ವಾಮಿ, ರಿಯಲ್ ಎಸ್ಟೇಟ್ ದಂಧೆಯ ಕಬಡ್ಡಿ ಬಾಬು ಮುಂತಾದವರೆಲ್ಲಾ ಜೈಲಿಗೇ ಎಂಟ್ರಿ ಹಾಕಿ ರಾಮಾಂಜನಿಯನ್ನು ಮಾತಾಡಿಸಿ ಬಂದರು. ಅದೇ ಸಮಯಕ್ಕೆ ರಾಮಾಂಜನಿಯ ಜಾಮೀನು ಅರ್ಜಿಯೂ ಹೈಕೋರ್ಟ್ ಮುಂದೆ ಬಂತು.

ಲೋಕಾಯುಕ್ತ ಪೊಲೀಸರು 'ಗಣ್ಯರ ಜೈಲಿನ ಭೇಟಿಯನ್ನೇ ಕೋರ್ಟ್‌ನಲ್ಲಿ ಮುಂದಿಟ್ಟು "ಆರೋಪಿ ಎಷ್ಟು ಪ್ರಭಾವಶಾಲಿ ಎಂಬುದು ಇದರಿಂದ ಗೊತ್ತಾಗುತ್ತದೆ. ಈತನಿಗೆ ಜಾಮೀನು ಕೊಟ್ಟರೆ ತನ್ನ ಪ್ರಭಾವ ಬಳಸಿ ಸಾಕ್ಷ್ಯ ನಾಶ ಮಾಡುವ ಸಾಧ್ಯತೆಯಿದೆ, ಆದ್ದರಿಂದ ಜಾಮೀನು ನೀಡಬಾರದು" ಎಂದು ವಾದಿಸಿಬಿಟ್ಟರು.

ಯಾವುದು ರಾಮಾಂಜನಿಗೆ ದೊಡ್ಡಸ್ತಿಕೆಯ ವಿಚಾರವಾಗಿತ್ತೋ ಕೊನೆಗೆ ಅದೇ ಅವನ ಜಾಮೀನಿಗೆ ಅಡ್ಡಿಯಾಗುವಂತೆ ಲೋಕಾಯುಕ್ತ ಅಧಿಕಾರಿಗಳು ಬಳಸಿಕೊಂಡಿದ್ದಾರೆ.

ಇದು ಜಾಣತನದ ಕೆಲಸ.

ಕಟ್ಟಾ ಜಗದೀಶನ ಕೇಸ್‌ನಲ್ಲೂ ಅವನು ವಾರಗಟ್ಟಲೆ ಜೈಲಿನಲ್ಲೇ ಕೊಳೆಯುವಂತೆ ಮಾಡಲಾಗಿತ್ತು, ದಾಳಿ ನಡೆಸಿ ಜಗ್ಗನನ್ನು ಹಿಡಿದಾಗ ವಾಟರ್ ಪ್ರೂಫ್ ಆಪರೇಷನ್ ಅನ್ನು ಯೋಜಿಸಿದ್ದರು ದತ್ತ ಹಾಗೂ ಮಧುಕರ್. ರಾಮಾಂಜನೇಯ ಸಿಕ್ಕಿಬಿದ್ದ ಬೆನ್ನಲ್ಲೇ ಇನ್ನೊಬ್ಬ ಕೆಎಎಸ್ ಅಧಿಕಾರಿ ಎಸ್.ಎಂ. ನೀಲಕಂಠನೂ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾನೆ.



ಬೆಂಗಳೂರಿನಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿದ್ದ ನೀಲಕಂಠ ತನ್ನ ಏಜೆಂಟರ ಮೂಲಕ ಲಂಚದ ಹಣ ವರ್ಗಾಯಿಸಿಕೊಳ್ಳುತ್ತಿದ್ದಾಗ ಸಿಕ್ಕಿಬಿದ್ದ.

ದೇವನಹಳ್ಳಿ ವ್ಯಾಪ್ತಿಯ ಚಿಕ್ಕಜಾಲದ ಭ್ರಷ್ಟ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಹರ್ಷ ಹಾಗೂ ಪಿಎಸ್‌ಐ ಸಿದ್ದರಂಗಸ್ವಾಮಿಯ ಲಂಚದ ಡೀಲ್ ಒಂದರಲ್ಲಿ ಸಿಕ್ಕಿಬಿದ್ದರು. ಹದಿಮೂರು ಮಂದಿ ತಿಮಿಂಗಿಲ ನೌಕರರ ಮೇಲೆ ಒಂದೇ ದಿನ ಮುಗಿಬಿದ್ದು ಕೋಟಿಗಟ್ಟಲೆ ಆಸ್ತಿ ಸೀಜ್ ಮಾಡಿದ್ದೂ ಇದೇ ಟೀಂ.

ಒಟ್ಟಾರೆ ಕಳೆದ ಮೂರ್ನಾಲ್ಕು ತಿಂಗಳಿಂದ ಕರ್ನಾಟಕ ಲೋಕಾಯುಕ್ತ ಪೊಲೀಸರೇ ನಿಜವಾದ ಹೀರೋಗಳಾಗಿದ್ದಾರೆ.

ಚಿಕ್ಕಮಗಳೂರು ಕಳ್ಳ ಪೋಲೀಸರ ಗಾಂಜಾ ಗಿಲೀಟು!



ಪೊಲೀಸು ಮಂದಿ ಹಣ ಹೊಡೆದುಕೊಳ್ಳುವ ಸಲುವಾಗಿ ಹೊಸಾ ದಾರಿ, ದಂಧೆ, ದಗಲ್ಬಾಜಿಗಳ ತಲಾಷು ನಡೆಸುತ್ತಲೇ ಇರುತ್ತಾರೆ. ಚಿಕ್ಕಮಗಳೂರಿನ ಮೂವರು ಪೊಲೀಸರು ಕೂಡಾ ಹಣ ಪೀಕಲು ನೂತನವಾದುದೊಂದು ಐಡಿಯಾ ಹುಡುಕಿ ತದುಕಿಸಿಕೊಂಡಿದ್ದಾರೆ.

ಸದ್ಯ ಚಿಕ್ಕಮಗಳೂರು ಬಸವನಹಳ್ಳಿ ಠಾಣೆಯ ಪಿಎಸ್ಸೈ ನಾರಾಯಣ್, ಹೆಡ್‌ಕಾನ್‌ಸ್ಟೇಬಲ್ ಚಂದ್ರು ಹಾಗೂ ಕಾನ್‌ಸ್ಟೇಬಲ್ ಮೋಹನ್ ಎಂಬ ತ್ರಿಮೂರ್ತಿಗಳ ಹೊಸಾ ಆವಿಷ್ಕಾರ ಗಾಂಜಾ ಗಿಲೀಟು! ಈ ಅವಿವೇಕಿಗಳು ಆದ್ಯಾರದ್ದೋ ಸುಳ್ಳು ಕೇಸು ಆಧರಿಸಿ ನಿರುಪದ್ರವಿಯೊಬ್ಬನ ಮನೆಯಲ್ಲಿ ತಾವೇ ಗಾಂಜಾ ಇಟ್ಟು ಆತನನ್ನು ಠಾಣೆಗೆ ಎಳೆದೊಯ್ದು ಹಿಂಸೆ ನೀಡಿದ್ದಾರೆ. ಒಂದು ದಿನ ಪೂರ್ತಿ ಠಾಣೆಯಲ್ಲಿ ಕೊಳೆಸಿದ್ದಾರೆ. ಇದೀಗ ಈ ಮೂವರೂ ಮನೆಯ ದಾರಿ ಹಿಡಿದಿದ್ದಾರೆ!

ಮೊನ್ನೆ ಶನಿವಾರದಂದು ರಾತ್ರಿ ನಗರದ ವಿಜಯಾಪುರ ನಿವಾಸಿ ಸುಂದರೇಶ್ ಎಂಬಾತನ ಮನೆಗೆ ಈ ಪೊಲೀಸ್ ತ್ರಿಮೂರ್ತಿಗಳು ಏಕಾಏಕಿ ನುಗ್ಗಿದ್ದರು. ಹಾಗೆ ಬಂದವರು ತಾವೇ ತಂದಿದ್ದ ಗಾಂಜಾ ತುಂಬಿದ್ದ ಬಾಕ್ಸ್‌ವೊಂದನ್ನು ಮನೆಯೊಳಗಿಟ್ಟರು. ಏನು ನಡೆಯುತ್ತಿದೆ ಎಂಬುದು ತಿಳಿಯದೆ ಕಂಗಾಲಾಗಿದ್ದ ಸುಂದರೇಶ್‌ನನ್ನು ಗಾಂಜಾ ಬಾಕ್ಸ್‌ನ ಸಮೇತ ಜೀಪಿಗೆ ತುರುಕಿದ ಪೊಲೀಸರು ಆತನನ್ನು ಲಾಕಪ್ಪಿಗೆ ಹಾಕಿದರು. ಈ ಸುಂದರೇಶ್ ಗಾಂಜಾ ವ್ಯಾಪಾರ ನಡೆಸುತ್ತಿದ್ದ ಅಂತೆಲ್ಲ ಬಿಂಬಿಸಲೆತ್ನಿಸಿದರು.

ಈ ವಿಚಾರ ಖಾಲಿ ಕುಳಿತಿದ್ದ ಈ ಭಾಗದ ಭಜರಂಗಿಗಳಿಗೆ ಗೊತ್ತಾದದ್ದೇ ಮರುದಿನ ಬೀದಿಗಿಳಿದು ಪ್ರತಿಭಟನೆ ನಡೆಸಿದವು. ಈ ಸಂದರ್ಭದಲ್ಲಿ ಅಮಾಯಕ ಸುಂದರೇಶ್‌ನನ್ನು ಸುಳ್ಳು ಆಪಾದನೆ ಹೊರಿಸಿ ಜೈಲಲ್ಲಿಟ್ಟ ಬಗ್ಗೆ ಆಕ್ರೋಶ ವ್ಯಕ್ತವಾಯಿತು. ಅಲ್ಲದೇ ಈ ಕುರಿತು ಜಿಲ್ಲಾ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವೂ ಕೇಳಿಬಂತು.

ಇದಾದದ್ದೇ ಎಸ್ಪಿ ವಿಕಾಸ್ ಕುಮಾರ್ ಈ ಬಗ್ಗೆ ವಿಚಾರಿಸುವ ಸಂಬಂಧ ಅಖಾಡಕ್ಕಿಳಿದರು. ಸುಂದರೇಶ್ ಹಾಗೂ ಆತನನ್ನು ಜೈಲಿಗೆ ತುರುಕಿದ ಪಿ.ಎಸ್ಸೈ ನಾರಾಯಣ್, ಚಂದ್ರು ಹಾಗೂ ಮೋಹನ್‌ರನ್ನೂ ವಿಸ್ತೃತ ವಿಚಾರಣೆಗೊಳಪಡಿಸಿದರು. ಆಗ ಬಿಚ್ಚಿಕೊಂಡದ್ದು ಅಸಲೀ ವಿಚಾರ!

ಪ್ರಸ್ತುತ ಗಾಂಜಾ ಮಾಥಾಟದ ಸುಳ್ಳು ಕೇಸಲ್ಲಿ ಸಿಲುಕಿಕೊಂಡಿರುವ ಸುಂದರೇಶ್‌ಗೂ ಇಲ್ಲಿನ ಮರದ ವ್ಯಾಪಾರಿ ಮಲ್ಲೇಶ್ ಎಂಬಾತನಿಗೂ ಈ ಹಿಂದೆ ಮರದ ವಿಚಾರದಲ್ಲೊಂದು ಕಿರಿಕ್ಕು ನಡೆದಿತ್ತು, ಇದು ಗಲಾಟೆ ಹೊಡೆದಾಟಗಳ ಹಂತವನ್ನೂ ತಲುಪಿತ್ತು. ಈ ಹಿನ್ನೆಲೆಯಲ್ಲಿ ಕುದ್ದು ಹೋಗಿದ್ದ ಸುಂದರೇಶ್ ಅಕ್ರಮ ಮರದ ವ್ಯಾಪಾರ ನಡೆಸುತ್ತಿದ್ದಾನೆಂದು ಮಲ್ಲೇಶನ ವಿರುದ್ಧ ಕಂಪ್ಲೇಂಟ್ ಮಾಡಿದ್ದ. ಈ ಆಪಾದನೆಯಲ್ಲಿ ಹುರುಳಿದ್ದ ಕಾರಣ ಪೊಲೀಸ್ ತನಿಖೆಯೂ ನಡೆದು ಅಕ್ರಮ ಮರಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

ಇದರಿಂದಾಗಿ ಮಲ್ಲೇಶ್ ಸುಂದರೇಶನ ವಿರುದ್ಧ ಆಕ್ರೋಶಗೊಂಡಿದ್ದ. ಆತನಿಗೊಂದು ಗತಿಕಾಣಿಸಬೇಕೆಂಬ ತಹತಹಿಕೆಯಲ್ಲಿದ್ದ. ಈತ ಹೇಳಿಕೇಳಿ ವ್ಯಾಪಾರಿ. ಹಲವಾರು ಅಕ್ರಮಗಳನ್ನು ಹಣದ ಮೂಲಕ ಥಂಡಾ ಹೊಡೆಸುವ ಕಲೆಯೂ ಈತನಿಗೆ ಸಿದ್ಧಿಸಿದೆ. ಅಂಥಾದ್ದರಲ್ಲಿ ತನ್ನ ಏರಿಯಾದ ಪೊಲೀಸರ ಹಸಿವಿನ ಅರಿವಿಲ್ಲದೇ ಇರಬಹುದೇ?

ಅದರಲ್ಲೂ ಹಣಕ್ಕಾಗಿ ಸದಾ ಬಾಯಗಲಿಸಿಕೊಂಡು ಬರಗೆಟ್ಟವರಂತೆ ಓಡಾಡುವ ಎಎಸ್ಸೈ ನಾರಾಯಣ, ಹೆಡ್‌ಕಾನ್‌ಸ್ಟೇಬಲ್ ಚಂದ್ರು ಹಾಗೂ ಕಾನ್‌ಸ್ಟೇಬಲ್ ಮೋಹನ್‌ರ ಬಗ್ಗೆ ಮಲ್ಲೇಶನಿಗೆ ಚೆನ್ನಾಗಿ ಗೊತ್ತಿತ್ತು. ಇವರೊಂದಿಗೆ ನೇರವಾಗಿ ಡೀಲ್ ಮಾಡಿಕೊಂಡ ಮಲ್ಲೇಶ ತನ್ನ ವ್ಯಾಪಾರಕ್ಕೆ ಕುತ್ತಾದ ಸುಂದರೇಶನಿಗೊಂದು ಗತಿ ಕಾಣಿಸುವಂತೆ ಸುಪಾರಿ ಕೊಟ್ಟ. ಹಾಗೆ ಸುಪಾರಿ ಪಡೆದುಕೊಂಡ ಈ ಅವಿವೇಕಿ ಪೊಲೀಸರು ಸುಂದರೇಶನ ಮನೆಗೆ ನುಗ್ಗಿ ತಾವೇ ಗಾಂಜಾ ಬಾಕ್ಸ್ ಇಟ್ಟು ಆತನನ್ನು ಬಂಧಿಸಿ ದುಷ್ಟತನ ಮೆರೆದಿದ್ದಾರೆ.

ಸಮಾಧಾನದ ಅಂಶವೆಂದರೆ ಇಷ್ಟೆಲ್ಲಾ ಗಾಂಜಾ ಗಿಮಿಕ್ಕುಗಳು ಎಸ್ಪಿ ವಿಕಾಸ್ ಕುಮಾರ್‌ಗೆ ಚೆನ್ನಾಗಿ ಮನದಟ್ಟಾಗಿದೆ. ಅದರನ್ವಯ ಈ ಬಗ್ಗೆ ವಿಸ್ತೃತ ತನಿಖೆ ನಡೆಸಲು ವೃತ್ತ ನಿರೀಕ್ಷಕ ಸಿದ್ದಯ್ಯರನ್ನು ನೇಮಿಸಿದ್ದಾರೆ. ಜೊತೆಗೆ ಘಟನೆ ನಡೆದ ದಿನದೊಪ್ಪತ್ತಲ್ಲೇ ಮೂವರು ಕಳ್ಳ ಪೊಲೀಸರನ್ನು ಅಮಾನತುಗೊಳಿಸಿ ಮನೆಗಟ್ಟಿದ್ದಾರೆ.

ಇನ್ನು ಗಾಂಜಾದ ವಿಚಾರಕ್ಕೆ ಬಂದರೆ ಈ ಪೊಲೀಸು ಮಂದಿ ಸುಂದರೇಶನ ಮೇಲೆ ಹೊರಿಸಿರುವ ಆರೋಪ ಸುಳ್ಳಾಗಿರಬಹುದು. ಆದರೆ ನಗರ ಹಾಗೂ ಜಿಲ್ಲೆಯ ತುಂಬಾ ಗಾಂಜಾ ಅವ್ಯಾಹತವಾಗಿ ಹರಿದಾಡುತ್ತಿರುವುದು ಸುಳ್ಳಲ್ಲ. ಇಲ್ಲಿನ ಡಾಬಾಗಳು, ಸೈಕಲ್ ಶಾಪ್‌ಗಳಲ್ಲೆಲ್ಲಾ ಈ ದಂಧೆ ವಿಪರೀತವಾಗಿ ವಿಜೃಂಭಿಸುತ್ತಿದೆ. ಇನ್ನೂ ಗಂಭೀರ ವಿಚಾರವೆಂದರೆ, ಚಿಕ್ಕಮಗಳೂರು ಜೈಲಿನೊಳಗೂ ಎಗ್ಗಿಲ್ಲದೆ ಗಾಂಜಾ ಸರಬರಾಜಾಗುತ್ತಿದೆ.

ಕಳೆದ ಬಾರಿ ಕಳಸದ ಬಾಳೂರಿನ ಗೊಂಡಾರಣ್ಯದಲ್ಲಿ ಎಕರೆಗಟ್ಟಲೆ ಗಾಂಜಾ ಬೆಳೆದದ್ದು, ಅದನ್ನು ಅರಣ್ಯ ಇಲಾಖೆ ನಾಶಪಡಿಸಿದ್ದು ಗಾಂಜಾ ದಂಧೆಯ ವಿರಾಟ್ ರೂಪಕ್ಕೊಂದು ನಿದರ್ಶನ . ಇಂದಿಗೂ ಈ ಭಾಗದಲ್ಲಿ ಗಾಂಜಾ ಬೆಳೆಯಲಾಗುತ್ತಿದೆ. ಇದು ಶಾಲಾಕಾಲೇಜುಗಳಿಗೂ ಸರಬರಾಜಾಗುತ್ತಿದೆ. ಸದ್ಯ ಚಿಕ್ಕಮಗಳೂರಿನ ನೇತಾಜಿ ಆಟದ ಮೈದಾನ ಹಾಗೂ ಮೂಡಿಗೆರೆಯ ಹೊಯ್ಸಳ ಕ್ರೀಡಾಂಗಣ ಗಾಂಜಾ ದಂಧೆಯ ಕಾರಸ್ಥಾನಗಳಾಗಿ ಬದಲಾಗಿವೆ.

ಇವೆಲ್ಲ ಜಿಲ್ಲಾ ಪೊಲೀಸರಿಗೆ ಗೊತ್ತಿಲ್ಲವೆಂದೇನಲ್ಲ. ಆದರೆ ಅವರಲ್ಲನೇಕರು ಯಾವ್ಯಾವುದ್ಯಾವುದೋ ಮರ್ಜಿಗೆ ಬಿದ್ದಂತಿದೆ. ಆ ಕಾರಣದಿಂದಲೇ ಯಾರೋ ಅಮಾಯಕರನ್ನ ಹಿಡಿದು ಬೀಗುತ್ತಿದ್ದಾರೆ. ಪತ್ರಿಕೆಗಳಲ್ಲಿ ಮಿಂಚುತ್ತಿದ್ದಾರೆ. ಇದು ದುರಂತ.

ಇಷ್ಟೆಲ್ಲಾ ಗಾಂಜಾ ವ್ಯವಹಾರ ಆಸುಪಾಸಲ್ಲೇ ನಡೆಯುತ್ತಿದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ಪೊಲೀಸರು ಅಮಾಯಕನ ಬೇಟೆಗೆ ಹೋಗಿ ಸಿಕ್ಕುಬಿದ್ದಿರುವುದು ವಿಪರ್ಯಾಸ. ಜಿಲ್ಲಾ ಪೊಲೀಸರು ಖಾಕಿಯ ಘನತೆ ಅರಿತು ಬದುಕುವುದ್ಯಾವಾಗ? ●

ಡಿಸಿಪಿ ನಂಜುಂಡಸ್ವಾಮಿ ಇನ್ನೂ ತೊಲಗಿಲ್ಲ!

ನಿಜ, ಯಡಿಯೂರಪ್ಪ ಮಾತ್ರವಲ್ಲ, ಯಾವ ಮುಖ್ಯಮಂತ್ರಿ ಕತ ಮರೆತರೂ ಆಡಳಿತ ವ್ಯವಸ್ಥೆ ಹದಗೆಡುತ್ತದೆ. ಕಪಟ ಪೊಲೀಸರು, ಅಧಿಕಾರಿ ಎಲ್ಲರ ಅವಧಿಯಲ್ಲೂ ಇರುತ್ತಾರೆ. ಆದರೆ ಅದಕ್ಕೆಲ್ಲಾ ಆಯಾ ಕಾಲಕ್ಕೆ ಹಾಕಬೇಕಾದದ್ದು ಆಳುವವರ ಕರ್ತವ್ಯ. ಆದರೆ ಸ್ವತಃ ಬ್ರೇಕು ಸವೆದ ಡಕೋಟಾ ಗಾಡಿಯಂತಾಗಿರುವ ಯಡ್ಡಿ ಸರ್ಕಾರದಲ್ಲಿ ಯಾವುದೂ ಸರಿಯಾ ಪೊಲೀಸ್ ಇಲಾಖೆಯೂ ಇದಕ್ಕೆ ಹೊರತಾಗಿಲ್ಲ.

ಅಧಿಕಾರಿಗಳ ಗುಪ್‌ಗುಪ್ ಚೆಂಗಲಾಟಗಳು, ಐಲು, ಭ್ರಷ್ಟತನ ನೇರವಾಗಿ ತಿಳಿಯದಿದ್ದರೆ ಹಾಳು ಬಿದ್ದೋಗಲಿ. ತೀರಾ ಮಾಧ್ಯಮ ಎಚ್ಚರಿಸಿದ ಬಳಿಕವಾದರೂ ಕ್ರಮ ಕೈಗೊಳ್ಳದಿದ್ದರೆ ಏನೆನ್ನಬೇಕು? ಯಡಿಯೂರಪ್ಪ ಕೂಡಾ ಅಂತಹುದೊಂದು ದುಷ್ಟ ನಿರ್ಲಿಪ್ತತೆಯ ಅಪ್ಪಿಕೊಂಡಿದ್ದಾರೆ. ಅದಕ್ಕೆ ನಗರ ಸಶಸ್ತ್ರ ಪೊಲೀಸ್ ಬಲದ ಡಿ ನಂಜುಂಡಸ್ವಾಮಿಯೆಂಬ ಅವಿವೇಕಿಯೇ ಸಾಕ್ಷಿ!



ಈತ ಉಡಾಫೆ, ಒಣ ಹೀ ಯಿಸಂ ಹಾಗೂ ಅಖಂಡ ದುಷ್ಟತ ಮೇಲೆ ಖಾಕಿ ಧರಿಸಿದ ಆಸಾಮಿ. ತನ್ನ ಕೈಕೆಳಗಿನ ಪೊಲೀಸರನ್ನು ಕ ಸೌಜನ್ಯದಿಂದ ನಡೆಸಿಕೊಳ್ಳುವವನೂ ನಾಗರುಬಾವಿಯಲ್ಲಿ ಕಟ್ಟಿಸಿದ ತನ್ನ ಬಂ ಕೆಲಸ ಕಾರ್ಯಗಳಿಗೆ 20 ಮ ಪೊಲೀಸರನ್ನು ಬಳಸಿಕೊಂಡಿದ್ದು ಆ ಕ್ರೂರತನಕ್ಕೆ ಸ್ಪಷ್ಟ ಉದಾಹರಣೆ.

ಈ ರೀತಿ ಪೊಲೀಸರನ್ನು ಉ ಅಧಿಕಾರಿಗಳು ಖಾಸಗಿ ಕೆಲ ಬಳಸಿಕೊಳ್ಳುವುದು ತಪ್ಪು. ಆದರೆ ಇದು ತಪ್ಪೆಂದು ಬೆಂಗಳೂರಿನ ಉ ಪೊಲೀಸ್ ಅಧಿಕಾರಿಗಳಿಗಾಗಲಿ ಯಡಿಯೂರಪ್ಪನ ಸರ್ಕಾರಕ್ಕಾಗಲಿ ಅನ್ನಿ ಇಲ್ಲ; ಈತನ ಲೀಲೆಗಳು ರಾಜ್ಯದ ತುಂಬೆಲ್ಲಾ ಜಾಹೀರಾದ ಬಳಿಕವೂ!

ಇಂಥಾ ನಂಜುಂಡ 2005ರಲ್ಲಿ ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆ ಭಾಗವಾಗಿ ಕೊಸೋವೊಗೆ ಹೋಗಿ ಹನ್ನೊಂದು ತಿಂಗಳು ಇದ್ದು ಬಂ ಹಾಗೆ ಹೋಗಿ ಬಂದವನಿಗೆ ತಾನೊಬ್ಬ ಮಹಾನ್ ಸಾಧಕನೆಂಬ ಭ ಅಮರಿಕೊಂಡಿತ್ತು. ಇದು ಯಾವ ಪರಿ ಮಿತಿ ಮೀರಿತೆಂದರೆ, ತನ್ನ ಕ್ವಾಟ್ರಸ್ ಕಾಂಪೌಂಡಿನಲ್ಲಿ ತನ್ನದೇ ಚಿತ್ರ ಬರೆಸಿಕೊಂಡು ನಾನಾ ಸ್ಲೋಗನ್ನು ಬ ತೆವಲು ತೀರಿಸಿಕೊಂಡಿದ್ದ!

ಇವೆಲ್ಲಾ ಮಾಧ್ಯಮಗಳ ಮೂಲಕ ಜಾಹೀರಾಗಿತ್ತು.

ಇಂಥಾ ಅಪ್ರಾಡಿ ಅಮಾನತುಗೊಂಡಿರಬಹುದು, ಇಲ್ಲವೇ ವರ್ಗಾ ಆಗಿರಬಹುದೆಂದುಕೊಳ್ಳುತ್ತಿದ್ದೀರೇನೋ? ಆದರೆ ಆತನಿನ್ನೂ ಡಿಸಿಪಿ ಆಗಿದ್ದುಕೊಂ ತಣ್ಣಗೆ ತನ್ನ ದೌಲು, ದಗಲ್ಬಾಜಿ ಮುಂದುವರೆಸುತ್ತಿದ್ದಾನೆ!

ತೀರಾ ಜವಾಬ್ದಾರಿಯುತ ಹಿರಿಯ ಅಧಿಕಾರಿಗಳೇ ಈ ಅವಿವೇಕಿಗಳಾದರೆ ಇನ್ನು ಸಣ್ಣಮಟ್ಟದ ಪೊಲೀಸರು ಕಳ್ಳ ದರೋಡೆಕೋರರಾಗದೆ ಇನ್ನೇನಾದಾರು? ಇಂಥಾ ಅಧಿಕಾರಿಗಳಿಗೆ ಸಣ್ಣದೊಂ ಶಿಕ್ಷೆಯ ಬಿಸಿ ಮುಟ್ಟಿಸುವ ಯೋಗ್ಯತೆಯೂ ಸರ್ಕಾರಕ್ಕಿಲ್ಲವೆಂದಾದ ಮೇ ಪೊಲೀಸ್ ಇಲಾಖೆ ಹಾದಿ ತಪ್ಪದಿರುತ್ತದೆಯೇ?


ದರೋಡೆಕೋರ ಇನ್‌ಸ್ಪೆಕ್ಟರ್ ಎಸ್ಕೇಪ್!

ಆಳುವವರೇ ಅವಿವೇಕಿಯಾದರೆ ಒಂದಿಡೀ ವ್ಯವಸ್ಥೆ ಹೇಗೆ ಎಕ್ಕುಟ್ಟಿ ಹೋಗುತ್ತದೆಂಬುದಕ್ಕೆ ಕರ್ನಾಟಕ ರಾಜ್ಯ ತಾಜಾ ಉದಾಹರಣೆ. ಮುಖ್ಯಮಂತ್ರಿಯೆನ್ನಿಸಿಕೊಂಡಿರುವ ಯಡಿಯೂರಪ್ಪ ಅಖಂಡ ಭೂಗಳ್ಳತನ ನಡೆಸಿ, ಅದನ್ನ ದಕ್ಕಿಸಿಕೊಳ್ಳುವ ಧಾವಂತದಲ್ಲಿದ್ದಾರೆ. ಆತನಿಗೆ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ಯೋಚಿಸಲೂ ಪುರುಸೊತ್ತಿಲ್ಲ, ಇನ್ನು ಗೃಹ ಖಾತೆ ಹಳೇ ಭೂಗಳ್ಳ ಆರ್. ಅಶೋಕ್ ಕೈಲಿದೆ. ವಿಷಯ ಹೀಗಿರುವಾಗ ಪೊಲೀಸು ಇಲಾಖೆಯೇ ಹಾದಿಬಿಟ್ಟರೆ ಕೇಳೋರ್‍ಯಾರು?

ಈ ವಿಚಾರ ಪ್ರಸ್ತಾಪಿಸಲು ಕಾರಣವಿದೆ. ಯಾಕೆಂದರೆ ಯಡ್ಡಿ ಸಾಮ್ರಾಜ್ಯದಲ್ಲಿ ಪೊಲೀಸರೇ ದರೋಡೆಕೋರರಾಗುವ, ಕಚ್ಚೆ ಹರುಕರಾಗುವ ಪ್ರಕರಣಗಳು ಸರದಿಯಂತೆ ಜಾಹೀರಾಗುತ್ತಿವೆ. ಸದ್ಯ ಬೆಂಗಳೂರಿನ ಮೈಕೋ ಲೇಔಟ್ ಠಾಣಾ ಇನ್‌ಸ್ಪೆಕ್ಟರ್ ಜನಾರ್ದನ್ ಎಂಬಾತ ದರೋಡೆಕೋರರಿಂದಲೇ ದರೋಡೆ ನಡೆಸಿ ತಗುಲಿಕೊಂಡಿದ್ದಾನೆ. ತನಿಖೆಯಿಂದ ತಪ್ಪಿಸಿಕೊಳ್ಳಲೋಸುಗ ತಲೆ ತಪ್ಪಿಸಿಕೊಂಡು ಸುದ್ದಿಯಲ್ಲಿದ್ದಾನೆ.

ಇದು ಬೆಂಗಳೂರಿನ ತುಂಬಾ ನಾಯಿಕೊಡೆಯಂತೆ ವ್ಯಾಪಿಸಿಕೊಂಡಿರುವ ಮುತ್ತೂಟ್ ಫೈನಾನ್ಸ್ ಶಾಖೆಯಲ್ಲಿ ನಡೆದ ದರೋಡೆಯೊಂದಕ್ಕೆ ಸಂಬಂಧಿಸಿದ ರಗಳೆ. ಇದೇ ವರ್ಷ ಜೂನ್ ಹದಿನೆಂಟನೇ ತಾರೀಖು ಮುತ್ತೂಟ್ ಮಿನಿ ನಿಧಿ ಲಿಮಿಟೆಡ್‌ನ ತಾವರೆಕೆರೆ ಶಾಖೆಯಲ್ಲಿ ಕಳವು ಯತ್ನವೊಂದು ನಡೆದಿತ್ತು. ಅದೇ ದಿನ ಶಾಖೆಯ ವ್ಯವಸ್ಥಾಪಕ ರವೀಂದ್ರ ಶೆಟ್ಟಿ ಕೂಡಾ ನಿಗೂಢವಾಗಿ ಕಾಣೆಯಾಗಿದ್ದರು. ಆತ ಈ ಕ್ಷಣದವರೆಗೂ ಪತ್ತೆಯಾಗಿಲ್ಲ!

ಈ ಕಳವು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಾತ ಮೈಕೋ ಲೇಔಟ್ ಇನ್‌ಸ್ಪೆಕ್ಟರ್ ಜನಾರ್ದನ್. ಬಲು ಬಿರುಸಿನ ಕಾರ್ಯಾಚರಣೆ ನಡೆಸಿದ ಈತ ಕೆಲ ದಿನಗಳಲ್ಲೇ ಕಳ್ಳ ನಿರ್ಮಲ್ ರಾಜ್‌ಕುಮಾರ್ ಮತ್ತು ಆತನ ಸಹಚರರನ್ನು ವಶಕ್ಕೆ ತೆಗೆದುಕೊಂಡಿದ್ದ. ಆದರೆ ಈ ಕಾರ್ಯಾಚರಣೆಯ ಹಿಂದಿದ್ದದ್ದು ಪಕ್ಕಾ ಹಣಬಾಕತನ! ಯಾಕೆಂದರೆ ಜನಾರ್ದನ್ ದರೋಡೆಕೋರ ನಿರ್ಮಲ್ ರಾಜ್ ಅಂಡ್ ಗ್ಯಾಂಗನ್ನು ಏಳು ದಿನಗಳ ಕಾಲ ಅಕ್ರಮವಾಗಿ ಬಂಧನದಲ್ಲಿರಿಸಿಕೊಂಡಿದ್ದ. ಹಾಗಂತ ಈ ಅವಧಿಯಲ್ಲೀತ ಯಾವ ಘನಂಧಾರಿ ವಿಚಾರಣೆಯನ್ನೂ ನಡೆಸಿಲ್ಲ, ನಿಗೂಢವಾಗಿ ಕಾಣೆಯಾದ ರವಿಚಂದ್ರ ಶೆಟ್ಟಿಯ ಬಗೆಗೂ ವಿಚಾರಿಸಿಲ್ಲ, ಬದಲಾಗಿ ದರೋಡೆಕೋರರಿಂದಲೇ 3.45 ಲಕ್ಷ ರೂ.ಗಳನ್ನು ದರೋಡೆ ನಡೆಸಿ ಅವರನ್ನು ಬಿಡುಗಡೆಗೊಳಿಸಿದ!



ಜನಾರ್ದನ್‌ನ ಹಣಬಾಕತನ ಎಷ್ಟು ವಿಪರೀತವಿದೆ ನೋಡಿ. ನಿರ್ಮಲ್ ರಾಜ್ ಅಂಡ್ ಗ್ಯಾಂಗನ್ನು ಎಳೆತಂದು ಡೀಲು ಕುದುರಿಸಿದಾಗ ಖದೀಮರ ಕಡೆಯಿಂದ ಹಣವಿಲ್ಲ ಎಂಬ ಉತ್ತರ ಬಂದಿದೆ. ದುಷ್ಟ ಜನಾರ್ದನ್ ಮುತ್ತೂಟ್ ಫೈನಾನ್ಸ್‌ನಿಂದ ದರೋಡೆ ಮಾಡಿದ್ದ ಎರಡೂವರೆ ಕೆ.ಜಿ ಚಿನ್ನಾಭರಣವನ್ನು ಮಾರಿ ಹಣ ಕೊಡುವಂತೆ ಸೂಚಿಸಿದ್ದಾನೆ. ಬಿಡುಗಡೆಗಾಗಿ ತಹತಹಿಸುತ್ತಿದ್ದ ದರೋಡೆಕೋರರು ಕದ್ದ ಚಿನ್ನಾಭರಣ ಮಾರಿ ಬಂದ ಹಣವನ್ನು ಜನಾರ್ದನ್ ಕೈಗಿಟ್ಟು ಬಚಾವಾಗಿದ್ದಾರೆ.

ಹೀಗೆ ಜನಾರ್ದನ್ ಕಪ್ಪ ತೆಗೆದುಕೊಂಡು ಬಿಟ್ಟು ಕಳಿಸಿದ ನಿರ್ಮಲ್ ರಾಜ್ ಕುಮಾರ್ ಕುಖ್ಯಾತ ದರೋಡೆಕೋರ. ಈತ ತನ್ನದೇ ಗುಂಪು ಕಟ್ಟಿಕೊಂಡು ಬೆಂಗಳೂರಿನಾದ್ಯಂತ ಕಾರ್ಯಾಚರಣೆಗಿಳಿದಿರುವ ಅನಾಹುತಕಾರಿ. ತೀರಾ ಕೆದುಕುತ್ತಾ ಹೋದರೆ ಇದೇ ನಿರ್ಮಲ್ 2009 ರಲ್ಲಿ ಮುತ್ತೂಟ್ ಫೈನಾನ್ಸ್ ಶಾಖೆಯೊಂದಕ್ಕೆ ಕನ್ನ ಹಾಕಿದ್ದ ವಿಚಾರ ಬೆಳಕಿಗೆ ಬರುತ್ತದೆ.

ಮುತ್ತೂಟ್ ಮಿನಿ ನಿಧಿ ಲಿಮಿಟೆಡ್‌ನ ನ್ಯೂತಿಪ್ಪಸಂದ್ರ ಗಿರವಿ ಅಂಗಡಿ ಶಾಖೆಯಲ್ಲಿ 2009 ರ ಜೂನ್ 2 ರಂದು ದೊಡ್ಡ ಪ್ರಮಾಣದ್ದೊಂದು ದರೋಡೆ ನಡೆದಿತ್ತು. ದರೋಡೆಕೋರರು ಅದೆಷ್ಟು ಚಾಣಾಕ್ಷತನ ಉಪಯೋಗಿಸಿದ್ದರೆಂದರೆ, ಶಾಖಾ ವ್ಯವಸ್ಥಾಪಕ ಐಸಾಕ್ ವಿ. ಜಾನ್ ಎಂಬಾತನನ್ನು ಪವಾಡಸದೃಶವಾಗಿ ಅಪಹರಿಸಿ ಮಳಿಗೆಯ ಕೀ ಗುಚ್ಛವನ್ನು ಕಿತ್ತುಕೊಂಡಿತ್ತು. ನಂತರ ಈ ಗುಂಪು ನೀಟಾಗಿ ದೋಚಿಕೊಂಡಿದ್ದು ಅಖಂಡ ನಲವತ್ತು ಕೆ.ಜಿ.ಯಷ್ಟು ಚಿನ್ನಾಭರಣಗಳನ್ನು!

ಈ ಮಹಾ ದರೋಡೆ ನಡೆಸಿದಾತ ಬೇರ್‍ಯಾರೂ ಅಲ್ಲ, ಇದೇ ನಿರ್ಮಲ್ ರಾಜ್‌ಕುಮಾರ್. ಈ ಪ್ರಕರಣದಲ್ಲಿ ಈತ ತನ್ನ ಅನೇಕ ಸಹಚರರೊಂದಿಗೆ ಪೊಲೀಸರಿಗೆ ತಗುಲಿಕೊಂಡಿದ್ದ. ನಂತರ ಜೈಲು ಪಾಲಾದ ಈ ಗ್ಯಾಂಗು ಜಾಮೀನು ಪಡೆದು ಹೊರ ಬಂದಿತ್ತು. ಆದರೆ ವೃತ್ತಿ ಬದಲಿಸಲಿಲ್ಲ, ಅದೆಲ್ಲಕ್ಕಿಂತಲೂ ಮುಖ್ಯವಾಗಿ ಮತ್ತೆ ಮುತ್ತೂಟ್ ಫೈನಾನ್ಸ್‌ನ ಮಳಿಗೆಗಳಿಗೇ ಕನ್ನ ಹಾಕಲು ಶುರುವಿಟ್ಟಿತು. ಇದೇ ಪ್ರಕರಣದಲ್ಲಿ ಮತ್ತೆ ಪೊಲೀಸರಿಗೆ ತಗುಲಿಕೊಂಡಿತು. ಆದರೆ ಈ ಕೇಸು ಹಣಬಾಕ ಜನಾರ್ದನ್ ಕೈಸೇರಿ ನಿರ್ಮಲ್ ರಾಜ್ ಹೇಗೋ ಬಚಾವಾಗಿ ಬಿಟ್ಟ.

ಆದರೆ ದರೋಡೆಕೋರ ನಿರ್ಮಲ್ ರಾಜ್ ಮತ್ತು ಕಳ್ಳ ಪೊಲೀಸಪ್ಪ ಜನಾರ್ದನ್‌ನ ನಸೀಬು ಏಕಕಾಲಕ್ಕೆ ಕೈಕೊಟ್ಟಂತಿದೆ. ಇತ್ತ ನಿರ್ಮಲ್ ಹಣ ಕೊಟ್ಟು ಬಿಡುಗಡೆ ಹೊಂದಿ ಕನ್ನ ಹಾಕಲು ಹೊಂಚು ಹಾಕುತ್ತಿದ್ದ, ಇನ್ನೊಂದೆಡೆ ದರೋಡೆಕೋರರಿಂದಲೇ ಹಣ ನುಂಗಿದ್ದ ಜನಾರ್ದನ್ ನಿರುಮ್ಮಳವಾಗಿ ಹೊಟ್ಟೆ ನೀವಿಕೊಳ್ಳುತ್ತಿದ್ದ.

ಆದರೆ ಕೇಂದ್ರ ಅಪರಾಧ ವಿಭಾಗದ ಪೊಲೀ ನಗರದಲ್ಲಿ ಪದೇಪದೇ ನಡೆಯುತ್ತಿರುವ ದರೋಡೆ ಪ್ರಕರ ತನಿಖೆ ನಡೆಸಲು ತಣ್ಣಗೆ ಅಖಾಡಕ್ಕಿಳಿದಿದ್ದರು. ಅವರ ಈ ನಿರ್ಮಲ್ ರಾಜ್‌ಕುಮಾರ್ ಅನಾಯಾಸ ತಗುಲಿಕೊಂಡಿದ್ದ. ಈತನನ್ನು ಒಂದು ರೌಂಡು ರುಬ್ಬಿ ಬೆಚ್ಚಿಬೀಳಿಸುವ ಸತ್ಯಗಳು ಹೊರಬಿದ್ದಿದ್ದವು. ಅದಕ್ಕಿಂತ ಮುಖ್ಯವಾಗಿ ಇನ್‌ಸ್ಪೆಕ್ಟರ್ ಜನಾರ್ದನ್ ಪಟ್ಟಂಪ ಬೆತ್ತಲಾಗಿದ್ದ!

ನಿರ್ಮಲ್ ರಾಜ್ ಸಿಸಿಬಿ ಪೊಲೀಸರ ವರ್ಸ ತಡ ಲಾರದೆ ಜನಾರ್ದನ್ ಕೈಗೆ ಕಪ್ಪ ಇಟ್ಟು ಬಚಾವಾಗಿ ಎಳೆಎಳೆಯಾಗಿ ಒದರಿದ್ದ. ಇದಲ್ಲದೆ ಇನ್ನೊಂದು ಭಯ ವಿಚಾರವೂ ಈ ತನಿಖೆಯ ವೇಳೆ ಜಾಹೀರಾಗಿ ಇದರಿಂದಾಗಿ ಜನಾರ್ದನ್ ಪಕ್ಕಾ ಕಳ್ಳ ಪೊಲೀಸ್ ವಿಚಾರ ಸಿಸಿಬಿ ಪೊಲೀಸರಿಗೆ ಮನವರಿಕೆಯಾಗಿತ್ತು.

ನಿರ್ಮಲ್‌ನನ್ನು ನಿವಾಳಿಸಿ ಬಿಡುವಂಥ ಮ ದರೋಡೆಕೋರ ಜಗನ್ನಾಥ್‌ನನ್ನು ಕೂಡಾ ಈ ಜನಾರ್ದ ಹಣ ಪಡೆದು ಬಿಡುಗಡೆಗೊಳಿಸಿದ್ದ! ಈ ಜಗನ್ನಾ ಕೂಡಾ ಜೀವನ್‌ಭೀಮಾನಗರದ ಮುತ್ತೂಟ್ ಫೈನಾ ಶಾಖೆಯಲ್ಲಿ ದರೋಡೆ ನಡೆಸಿದ್ದ. ಈತನನ್ನು ಬಂಧಿ ದಗಲ್ಬಾಜಿ ಜನಾರ್ದನ್ ಜಗನ್ನಾಥನ ತಾಯಿಯಿ ನಲವತ್ತೈದು ಸಾವಿರ ಪಡೆದು ಬಿಡುಗಡೆಗೊಳಿಸಿದ್ದ.

ಇಷ್ಟೆಲ್ಲಾ ಭಾನಗಡಿಗಳು ಸ್ಪಷ್ಟವಾಗುತ್ತಲೇ ವ ಗುರುವಾರ ನಗರ ಪೊಲೀಸ್ ಕಮಿಷನರ್ ಜನಾರ್ದನ್ ಅಮಾನತುಗೊಳಿಸಿದ್ದರು. ಇದು ತಿಳಿಯುತ್ತಲೇ ಕ ಎಣಿಸುವುದು ಗ್ಯಾರಂಟಿಯೆಂದರಿತ ಕಳ್ಳ-ಪೊಲೀಸ್ ಜ ರ್ದನ್ ತನ್ನ ಠಾಣೆಯಿಂದ ಹೊರಬಂದಿದ್ದಾನೆ. ಇದಾದ ಆತನ ಸೆಲ್ ಕೂಡಾ ಸ್ವಿಚ್ ಆಫ್ ಆಗಿದೆ!

ಅಲ್ಲಿಗೆ ಜನಾರ್ದನ್ ಎಸ್ಕೇಪ್ ಆಗಿರುವ ಸ್ಪಷ್ಟವಾಗಿದೆ. ಈ ಪ್ರಕರಣ ಯಡಿಯೂರಪ್ಪನ ಆಡಳಿತ ಪೊಲೀಸ್ ಇಲಾಖೆ ಹಾದಿ ಬಿಡುತ್ತಿರುವುದಕ್ಕೆ ಯೆಂಬಂತಿದೆ. ಇಂಥಾ ಅವಿವೇಕಿ ಪೊಲೀಸರಿಂದ ಜನ ರಕ್ಷಿಸುವವರ್‍ಯಾರು?


ದರೋಡೆ ಮತ್ತು ಜೋಡಿ ಕೊಲೆಗೆ ಕಾರಣರ್‍ಯಾರು?!

ವಡ್ಗಲ್ ರಂಗಸ್ವಾಮಿ ಆಸ್ತಿಗೆ ರಾಮದಾಸ್ ಭಂಟರ ಕೆಣ್ಣು!


ಕೆಂಪಣ್ಣ

ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ನಡೆಸಿ ದುಂಡ ದುಡ್ಡಲ್ಲೇ ಶಾಸಕನಾದ ಎ.ರಾಮದಾಸ್ ಸಚಿವನಾದ ...ಲೆ ಆತನ ಕೆಲವು ಭಂಟರಿಗೆ ಇನ್ನಿಲ್ಲದ ಬಲ ಬಂದು ...ವು ರೀತಿಯ ಅಡ್ಡಕಸುಬುಗಳಿಗೆ ಕೈಹಾಕುತ್ತಿದ್ದಾರೆ. ...ಪರೇ ವಡ್ಗಲ್ ರಂಗಸ್ವಾಮಿ ಬೆಟ್ಟದ ಸಾವಿರಾರು ...ಭೂಮಿ ಮತ್ತು ಅದರಲ್ಲಿ ಹುದುಗಿರುವ ನೂರಾರು ...ಟಿಯ ಕಲ್ಲು ಕ್ವಾರೆಗಳನ್ನ ತಮ್ಮ ವಶಕ್ಕೆ ತೆಗೆದುಕೊಳ್ಳುವ ...ಚುತಕ್ಕೆ ಬಿದ್ದಿದ್ದಾರೆ. ಅವರ ದುರಾಸೆಯ ಸಂಚು ...ಯುತ್ತಿರುವಾಗಲೇ ಇತ್ತೀಚೆಗೆ ಇಲ್ಲಿ ಜೋಡಿ ಕೊಲೆಗಳಾಗಿ ...ಮುತ್ತಲಿನ ಊರುಗಳ ಜನರು ಮಾತ್ರವಲ್ಲದೇ ಸಾಕ್ಷಾತ್ ...ಲ್ ರಂಗಸ್ವಾಮಿಯೇ ಬೆಚ್ಚಿ ಬೀಳುವಂತೆ ಮಾಡಿಬಿಟ್ಟಿದೆ.

ವಡ್ಗಲ್ ರಂಗಸ್ವಾಮಿ ದೇವಸ್ಥಾನ ಮೈಸೂರು ಜಿಲ್ಲೆ ...ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯಲ್ಲಿರುವ ...ತ್ತಮುತ್ತಲ ಹಳ್ಳಿಗಳ ಜನರ ನಂಬಿಕೆಯ ಸ್ಥಳ. ಸುತ್ತಲೂ ...ಗುಡ್ಡಗಳಿಂದ, ಹಲವಾರು ಗಿಡಮೂಲಿಕೆಗಳನ್ನೊಳ ...ಂಡ, ಕೋಟಿಗಟ್ಟಲೆ ಬೆಲೆಬಾಳುವ ಕಲ್ಲುಗಣಿ ಸಂಪತ್ತನ್ನು ...ದುಗಿಸಿಕೊಂಡಿರುವ ಬೆಟ್ಟಗಳ ಮೇಲೆ ದೇವಸ್ಥಾನ ಇದೆ. ...ವಾಸಿಗರು ಮತ್ತು ಭಕ್ತಾದಿಗಳಿಂದ ವರ್ಷಕ್ಕೆ ಲಕ್ಷಗಟ್ಟಲೆ ...ಣಿಕೆ ಹಣ ಹರಿದುಬರುತ್ತದೆ. ಇಷ್ಟೆಲ್ಲ ...ಪತ್ತುಗಳ ಮೇಲೆ ಕಣ್ಣಿರುವುದರಿಂದಲೇ ...ದ ವಾರ ಅಮಾಯಕರಾದ ಅತ್ತಹಳ್ಳಿಯ ...ಲಿಗ ಸಮುದಾಯದ ಸುಬ್ಬೇಗೌಡ ಮತ್ತು ...ಮ್ಮನಹುಂಡಿಯ ಕುರುಬ ಸಮುದಾಯದ ...ಸಪ್ಪ ಎಂಬಿಬ್ಬರು ಬಡ ಭಕ್ತರು ನ.18ರ ...ಳಗಿನ ನಸುಕಿನಲ್ಲಿ ನಿಗೂಢವಾಗಿ ಕೊಲೆಯಾಗಿ ...ಹೋಗಿದ್ದಾರೆ.



ಕೊಲೆಯಾದ ಸುಬ್ಬೇಗೌಡ

... ದೇವಸ್ಥಾನಕ್ಕೆ ಹರಕೆ ಹೊತ್ತು ಬರುವ ...ಲವು ಭಕ್ತರು ಅಲ್ಲೇ ರಾತ್ರಿ ಮಲಗಿ ...ಹೋಗುವ ವಾಡಿಕೆಯಿದೆ. ಅದೇರೀತಿ ಮಲ ...ಬಹುದಾದ ಈ ಇಬ್ಬರನ್ನೂ ಕಲ್ಲಿನಿಂದ ತಲೆ ಜಜ್ಜಿ ...ಮುಗಿಸಲಾಗಿದೆ. ಅಲ್ಲೇ ಪಕ್ಕದಲ್ಲಿದ್ದ ಮುದುಕಿಯೊಬ್ಬರ ...ನೆಗೆ ಹೋಗಿ ದುಡ್ಡು ಕಿತ್ತುಕೊಂಡಿದ್ದಾರೆ. ಪೂಜಾರಿ ...ನೆಗೂ ಹೋಗಿ ದಾಳಿ ಮಾಡಲು ಪ್ರಯತ್ನ ನಡೆದಿದೆ. ...ವಸ್ಥಾನದ ಹುಂಡಿಯನ್ನು ಒಡೆಯಲು ಪ್ರಯತ್ನ ...ತೆದಿದೆಯಾದರೂ, ಒಡೆದಿಲ್ಲ.

... ಸುಬ್ಬೇಗೌಡ ಮತ್ತು ದಾಸಪ್ಪ ಎಂಬಿಬ್ಬರ ಕೊಲೆ ...ಲ್ನೋಟಕ್ಕೆ ದರೋಡೆ ಎಂಬಂತೆ ಕಂಡುಬಂದರೂ, ...ಂದರ್ಭಿಕ ಘಟನಾವಳಿಗಳು ಇವು ಕೇವಲ ದರೋಡೆಗಾಗಿ ...ದ ಕೊಲೆಗಳಲ್ಲ ಎಂಬ ಭಾವನೆಯನ್ನು ಯಾರಿಗಾದರೂ ...ಮೂಡಿಸುತ್ತವೆ. ಆದರೆ ಇಂತಹ ಘೋರ ಘಟನೆಯನ್ನು ...ಗೆ ತನಿಖೆ ಮಾಡುವುದು ಬಿಟ್ಟು ಸರ್ಕಲ್ ಇನ್ಸ್‌ಪೆಕ್ಟರ್ ...ಜೇಂದ್ರ ಪ್ರಸಾದ್ ಮತ್ತು ಬನ್ನೂರಿನ ಸೋಮಾರಿ ಎಸ್ಸೈ ...ಜಪ್ಪನಂತಹ ಪೊಲೀಸ್ ಅಧಿಕಾರಿಗಳು ಕುಂಟು ಕಾರಣ ...ಗಳನ್ನು ಹೇಳುತ್ತಾ ಕಾಲ ತಳ್ಳುತ್ತಿದ್ದಾರೆ. ಕಳೆದ ವರ್ಷಗಳಲ್ಲಿ ...ಶ್ರೀರಂಗಪಟ್ಟಣ ಮತ್ತು ಕರಿಗಟ್ಟ ದೇವಸ್ಥಾನಗಳಲ್ಲಿ ನಡೆದ ...ರೋಡೆಗಳಂತೆ ಇದೂ ನಡೆದಿದೆ ಎಂದು ನೆಪ ಹೇಳಿ ...ಂಡು ಇವರುಗಳು ಕೈ ತೊಳೆದುಕೊಂಡಿದ್ದಾರೆ.

ಆದರೆ ಅಸಲಿಯತ್ತೇ ಬೇರೆ ಇದ್ದಂತಿದೆ. ಇದು ಗೊತ್ತಿ...ರೂ ಸರಿಯಾಗಿ ತನಿಖೆ ನಡೆಸದೆ ಇರುವುದು ಯಾಕೆಂದು ...ಹೊಸದಾಗಿ ಚಾರ್ಜ್ ತೆಗೆದುಕೊಳ್ಳಲಿರುವ ಎಸ್‌ಪಿ ಮನೀಷ್ ...ರ್ಕರ್ ಹುಡುಕಬೇಕಿದೆ. ವಡ್ಗಲ್ ರಂಗನಾಥ ದೇವಸ್ಥಾನದ ...ತ್ತ ಸಾಕಷ್ಟು ರಗಳೆಯ ಕಥೆಗಳಿವೆ. ರಂಗನಾಥ ದೇವರು ...ತ್ತಹಳ್ಳಿ, ಬೇವಿನಹಳ್ಳಿ, ಕಲ್ಯಾಣಿ, ಕಿರುಗಾವಲು, ...ಗೂರು, ಬನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ... ದೆವ್ವ-ಪೀಡೆ ಬಿಡಿಸಿಕೊಡುವ ದೇವರು ಎಂದು ...ಸಿದ್ದಾರೆ. ಆದರೆ ದೆವ್ವ ಬಿಡಿಸುವ ಅದೇ ಸನ್ನಿಧಿಯಲ್ಲೇ ...ವು ಭೂತಗಳು ಸೇರಿಕೊಂಡಿರುವುದು ಸೋಜಿಗದ ...ಗತಿಯಾಗಿದೆ.

ಆದರೆ ಜನರ ನಂಬಿಕೆಯಿಂದಲೇ ದೇವರ ಹೆಸರು ...ತ ಬೆಳೆದಿದೆ. ಹಾಗೆಯೇ ದೇವಸ್ಥಾನಕ್ಕೆ 1928ರಲ್ಲಿ ...ಹಾಯ ಹಾಕಿ ಒಂದಷ್ಟು ನೆರಳು ಮಾಡಿದ ಮೇಲೆ ...ಮಂಟಪ, ಗೋಪುರ ಅಂತೆಲ್ಲಾ ಶ್ರೀಮಂತ ಭಕ್ತರು ... ಬರುವ ಲಾಭವನ್ನ ಹೆಚ್ಚಿಸಿದ್ದಾರೆ. ಜಾತ್ರೆ, ಪೂಜೆ ...ಲ್ಲಾ ಹೊಸ ಹೊಸ ಅವತಾರಗಳನ್ನ ಪೂಜಾರಿಗಳೇ ...ಹುಟ್ಟಿಸಿಕೊಂಡು, ವಸೂಲಿಯಿಂದ ಬಂದ ಕಮಾಯಿಗಳನ್ನ ...ಷ್ಟು ಜೇಬಿಗೆ ಇಳಿಸಿಕೊಂಡಿರುವುದನ್ನ ವಿಶೇಷವಾಗಿ ...ಹೇಳಬೇಕಾಗಿಲ್ಲ, ಇದಕ್ಕೆ ಮಾಂತ್ರಿಕ ಎಂದು ಹೇಳಿಕೊಳ್ಳುತ್ತಲೇ ...ಕೊಬ್ಬಿರುವ ದೊಡ್ಡೇಗೌಡನ ಕೊಪ್ಪಲಿನ ಮಹದೇವ ಸ್ವಾಮಿಯೇ ಸಾಕ್ಷಿ.


ರಾಮದಾಸ್

ಒಡ್ಗಲ್ ರಂಗನಾಥ ಸ್ವಾಮಿಗೆ ವಾರ್ಷಿಕ ಲಕ್ಷಗಟ್ಟಲೇ ಹಣ ಹರಿದು ಬರುತ್ತದೆ. ಇದೆಲ್ಲವನ್ನ ಏಳೂರು ನಾಡಗೌಡ ಎನಿಸಿಕೊಳ್ಳುವ ಬನ್ನೂರು ಪುರಸಭಾ ಸದಸ್ಯ ಬಿ.ಸಿ.ಪಾರ್ಥಸಾರಥಿ ನುಂಗಿ ನೀರು ಕುಡಿದಿದ್ದಾನೆ. ತಾನು ತಿಂದು ತೇಗಿದ ಮೇಲೆ ಅತ್ತಹಳ್ಳಿಯ ಎಂ.ಕೆ. ಕೆಂಪಣ್ಣ ಎಂಬ ಕರೆಂಟ್ ಕಳ್ಳನನ್ನ ಜೊತೆಗಿಟ್ಟುಕೊಂಡಿದ್ದಾನೆ. ಈ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದ್ದರೂ ಸುಮಾರು 30 ವರ್ಷಗಳ ದೇವಸ್ಥಾನದ ಆದಾಯವನ್ನ ಮುಜರಾಯಿ ಇಲಾಖೆಗೆ ಗೋಲಕದ ಹಣ, ಭಕ್ತರ ಕಾಣಿಕೆ ಮತ್ತಿತರೇ ಹಣವನ್ನ ನೀಡದೆ ವಂಚಿಸಿದ್ದಾರೆಂದರೆ ಇವರ ನುಂಗಾಟ ಎಷ್ಟಿರಬೇಡ?!

ಹೆಚ್.ಡಿ.ಕೋಟೆ ಮೂಲದ ನಾಗ ರಾಜು ಎಂಬ ದಲಿತ ವ್ಯಕ್ತಿ 20 ವರ್ಷಗಳ ಹಿಂದೆ ಇದೆ ದೇವಸ್ಥಾನಕ್ಕೆ ಹರಕೆ ಹೊತ್ತುಕೊಂಡು ಬಂದವ ದೇವಸ್ಥಾನವನ್ನ ಕಸಗುಡಿಸಿ ಸೇವೆ ಮಾಡಿದ್ದಾನೆ. ಇಷ್ಟಕ್ಕೆ ಸುಮ್ಮನಿರದ ಈತ ತನ್ನ ಹೆಂಡತಿ, ಮಕ್ಕಳು ಬೀದಿಯಲ್ಲಿದ್ದರೂ ನೋಡದೇ ದೇವ ಸ್ಥಾನಕ್ಕೆ ತನ್ನ ಶ್ರಮದಾನದಿಂದ ಸುಮಾರು 1.5 ಕಿ.ಮೀ. ರಸ್ತೆಯನ್ನು ಮಾಡಿದ್ದಾನೆ. ಅಷ್ಟರಮಟ್ಟಿಗೆ ಈತನ ಭಕ್ತಿ ಪ್ರಾಮಾಣಿಕವಾಗಿಯೇ ಇತ್ತು, ಇದು ಹಣ ಮೇಯುತ್ತಿದ್ದ ತ್ರಿಮೂರ್ತಿ ಖದೀಮರಿಗೂ ಸಹಜವಾಗಿಯೇ ಗೌರವ ಬರುವಂತೆ ಮಾಡಿದೆ. ದೇವಸ್ಥಾನಕ್ಕೆ ಬರುವ ಭಕ್ತರಿಗೂ ಗೌರವ ಮೂಡಿಸಿ ಮಾದರಿಯಾಗಿದ್ದಾನೆ.

ಆದರೆ, ನಾಗರಾಜು ದಿನಕಳೆದಂತೆ ತಾನು ದೈವ ಸ್ವರೂಪಿ, ಆಲದಮರದ ಬ್ರಹ್ಮಜ್ಞಾನಿ, ಕಾಲಜ್ಞಾನಿ, ಸ್ವಾಮೀಜಿ ಎಂದೆಲ್ಲ ಹೇಳಲು ಶುರುಮಾಡಿದ್ದಾನೆ. ಇದು ಸಹಜವಾಗಿ ರಂಗನಾಥನ ಪ್ರಸಾದವನ್ನ ಎಗ್ಗಿಲ್ಲದೆ ಮೇಯುತ್ತಿದ್ದ ನಾಡಗೌಡ, ಬಿ.ಸಿ.ಪಾರ್ಥಸಾರಥಿ ಮತ್ತು ಬಿಜೆಪಿಯಿಂದ ಜಿಲ್ಲಾ ಪಂಚಾಯತ್ ಸದಸ್ಯನಾಗಿರುವ ಅತ್ತಹಳ್ಳಿಯ ಎಂ.ಕೆ. ಕೆಂಪಣ್ಣ, ನಕಲಿ ಮಾಂತ್ರಿಕ ದೊಡ್ಡೇಗೌಡನ ಕೊಪ್ಪಲಿನ ಮಹದೇವ ಸ್ವಾಮಿಗಳ ಜಂಘಾಬಲವನ್ನ ಉಡುಗಿಹೋಗುವಂತೆ ಮಾಡಿದೆ.

ದಲಿತ ನಾಗರಾಜು ತಾನು ಸ್ವಾಮೀಜಿ ಗೆಟಪ್ಪಿನಲ್ಲಿ ಕಾಣಿಸಿಕೊಂಡು ಕಾಯಕ ಮಾಡಿದರೆ ದೇವರು ಮೆಚ್ಚುತ್ತಾನೆಂದು ಹೇಳಿ ಕೆಲಸದಲ್ಲಿ ಅನ್ಯ ಕೋಮಿನವರನ್ನೂ ತೊಡಗಿಸಿ ಕಲ್ಲುಮಣ್ಣುಗಳಿಂದ ಒಂದು ಆಶ್ರಮ ಕಟ್ಟಿಸಿದ್ದಾನೆ. ಸುತ್ತಮುತ್ತಲಿನ ಊರಿನ ಪ್ರಬಲ ಜಾತಿ ಯಾದ ಒಕ್ಕಲಿಗರೂ ಸೇರಿದಂತೆ ಎಲ್ಲರೂ ಮೆಚ್ಚುವ ಒಂದಷ್ಟು ಕೆಲಸ ಮಾಡಿಸಿದ್ದಾನೆ. ಇವೆಲ್ಲವೂ ದೇವರ ಹೆಸರಿನಲ್ಲಿ ತಿಂದು ತೇಗಿದ್ದ ಖದೀಮರಿಗೆ ಉರಿ ತರಿಸಿದೆ. ಸ್ವತಃ ದಲಿತರಿಂದಲೇ ನಿತ್ಯ ದಾಸೋಹ ಮಾಡಲು ಭವನವನ್ನ ಕಟ್ಟಿಸಿದ್ದು ಇನ್ನೂ ಕಣ್ಣುಕೆಂಪಗೆ ಮಾಡಿದೆ. ಅಲ್ಲಿಂದ ಶುರು ವಾಯಿತು ದಲಿತ ನಾಗರಾಜುವಿಗೆ ನಿತ್ಯ ಕಿರುಕುಳ.

ನಾಗರಾಜುವಿನ ಹೂ ಮಾರುತ್ತಿದ್ದ ಹೆಣ್ಣುಮಗಳಾದ ನಾಗಮ್ಮಳನ್ನ ನಾಪತ್ತೆ ಮಾಡಿ ಮುಗಿಸಲಾಗಿದೆ. ಇದನ್ನ ಈ ಜಾತಿವಾದಿ ಪುಂಡರುಗಳಾದ ಜಿಲ್ಲಾ ಪಂಚಾಯತ್ ಸದಸ್ಯ ಅತ್ತಹಳ್ಳಿಯ ಎಂ.ಕೆ. ಕೆಂಪಣ್ಣ, ಬಿ.ಸಿ.ಪಾರ್ಥಸಾರಥಿ, ನಕಲಿ ಮಾಂತ್ರಿಕ ಮಹದೇವಸ್ವಾಮಿ ಮಾಡಿಸಿದ್ದಾರೆಂಬ ಆರೋಪಗಳಿವೆ. ಇದಕ್ಕೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲ ಮತ್ತು ಪೊಲೀಸರಿಗೆ ದೂರು ಕೊಟ್ಟರೂ ಪ್ರಯೋಜನವಾಗಿಲ್ಲ. ನಾಗರಾಜುವಿನ ಮಾತು ವೈಜ್ಞಾನಿಕವಲ್ಲದಿದ್ದರೂ ಆತ ಹೇಳುತ್ತಿದ್ದ ಮಾತುಗಳು ಈ ಕಳ್ಳರಿಗಿಂತ ಉತ್ತಮ ಎನಿಸಿ ಸವರ್ಣಿಯ ಚನ್ನೇಗೌಡ ಮುಂತಾದ ಹುಡುಗರು ಸಹ ಶಿಷ್ಯರಾದರು. ಇದು ಈ ಜಾತಿವಾದಿ ಕಿಡಿಗೇಡಿಗಳಿಗೆ ಮತ್ತಷ್ಟು ಉರಿ ತರಿಸಿದೆ. ತಮ್ಮ ಜಾತಿಯ ಜನರನ್ನ ಎತ್ತಿ ಕಟ್ಟಿ ಮಾದಿಗ ಜಾತಿಯವನನ್ನ ಸ್ವಾಮೀಜಿ ಎಂದು ಒಪ್ಪಿಕೊಳ್ಳಲಾರದೆ ಜಿ.ಪಂ. ಸದಸ್ಯ ಎಂ.ಕೆ. ಕೆಂಪಣ್ಣ ಎಂಬ ಬಿಜೆಪಿ ಮನುಷ್ಯ ತನ್ನ ಗೂಂಡಾಪಡೆಯನ್ನ ಬಿಟ್ಟು ನಾಗರಾಜುನನ್ನು ಕೊಲ್ಲುವ ಹಲವು ಪ್ರಯತ್ನಗಳನ್ನ ಮಾಡಿದ್ದಾನಂತೆ. ಆದರೆ ಹೊಸ ಸ್ವಾಮೀಜಿ ಅವೆಲ್ಲವುಗಳಿಂದ ಬಚಾವಾಗುತ್ತಲೇ ಬಂದಿದ್ದಾನಂತೆ.


ಕಾನೂನಿನಪ್ರಕಾರ ದೇವರ ಹುಂಡಿ ಹಣ ಮತ್ತು ಭಕ್ತರ ಕಾಣಿಕೆ ಹಣದ ಲೆಕ್ಕವನ್ನ ಮುಜರಾಯಿ ಇಲಾಖೆ ಪಡೆದುಕೊಳ್ಳಬೇಕೆಂದು ನಾಗರಾಜು ಸರ್ಕಾರಿ ಅಧಿಕಾರಿಗಳಿಗೆ ಒತ್ತಾಯಿಸಿದರೆ, ಹುಂಡಿಕಳ್ಳರು ತಮ್ಮ ಅಕ್ರಮ ಟ್ರಸ್ಟ್ ಹೆಸರನ್ನೇ ಬದಲಿಸಿದ್ದಾರೆ. ಅಷ್ಟೇ ಅಲ್ಲದೆ ಪಾರ್ಥಸಾರಥಿ ಸಂಬಂಧಿ ತಹಶೀಲ್ದಾರ್ ಎಂ.ಕೆ. ಸವಿತಾಳ ಜಾತಿ ಪ್ರೇಮದಿಂದ ಈ ಕಳ್ಳರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಇವರ ಮೇಲೆ ಸರಿಯಾಗಿ ತನಿಖೆ ನಡೆದರೆ ಕೆಂಪಣ್ಣನೆಂಬ ಚೆಡ್ಡಿ ಚತುರ ಸೇರಿದಂತೆ ಆತನ ಪಟಾಲಂಗೆ ಶಿಕ್ಷೆಯಾಗುವುದು ಶತಸ್ಸಿದ್ಧ. ಈ ಸುಳಿವನ್ನ ಅರಿತ ಜೋಡಿಕಳ್ಳರು ತಹಶೀಲ್ದಾರರ ಮೂಲಕ ಸ್ವಾಮೀಜಿಗೆ ಕಿರುಕುಳ ನೀಡಲು ಕಾರಣರಾಗಿದ್ದಾರೆ. ಜೊತೆಗೆ ದಲಿತರೇ ಉಚಿತವಾಗಿ ನಿರ್ಮಿಸಿದ ದಾಸೋಹ ಭವನ ಉದ್ಘಾಟನೆಯನ್ನ 144 ಸೆಕ್ಷನ್ ಹಾಕಿಸಿ ಕೆಂಪಣ್ಣ ಮತ್ತು ಪಾರ್ಥಸಾರಥಿ ಎಂಬ ಜೋಡಿ ಕಳ್ಳರು ತಮ್ಮ ರಾಜಕೀಯವನ್ನ ಬಳಸಿ ತಡೆದಿದ್ದಾರೆ ಎಂಬ ಆರೋಪಗಳಿವೆ.

ಕೆಂಪಣ್ಣ ಬಿಜೆಪಿಯ ಜಿ.ಟಿ. ದೇವೇಗೌಡನ ಬಣವಾದರೂ, ಇತ್ತೀಚೆಗೆ ರಾಮದಾಸ್ ಸಚಿವನಾದ ಮೇಲೆ ಆತನ ಬೆಂಬಲಿಗನಂತೆ ಪೋಸು ನೀಡುತ್ತಾ ಅಮಾಯಕರಿಗೆ ನಿತ್ಯ ಉಪದ್ರವ ನೀಡುತ್ತಿದ್ದಾನೆ. ತನ್ನ ಗಾಡ್‌ಫಾದರ್ ರಾಮದಾಸ್ ಎನ್ನುವ ಈತ ತಾನು ಏನು ಮಾಡಿದರೂ ದಕ್ಕಿಸಿಕೊಳ್ಳುವ ದರ್ಪದಲ್ಲಿ ಗೂಂಡಾಗಿರಿ ಮಾಡುತ್ತಿರುವುದು ಹಲವರಲ್ಲಿ ಅನುಮಾನ ತರಿಸಿದೆ. ಅದೇ ರೀತಿ ಇತ್ತೀಚಿನ ದಿನಗಳಲ್ಲಿ ನಾಗರಾಜುವಿಗೆ ಕಿರುಕುಳ ನೀಡುತ್ತಿದ್ದ ಈತ, ಈಗ ಅಮಾಯಕರನ್ನ ಕೊಲೆ ಮಾಡಿಸಿ ಇದನ್ನ ದಲಿತ ಸ್ವಾಮೀಜಿ ಮೇಲೆ ಎತ್ತಿಕಟ್ಟಿ, ಆತನನ್ನ ಬೆಟ್ಟದಿಂದಲೇ ಓಡಿಸುವ ಷಡ್ಯಂತ್ರ ನಡೆಸುತ್ತಿದ್ದಾನೆಂಬುದು ಹಲವರ ಅಭಿಪ್ರಾಯವಾಗಿದೆ.

ಇದೇನೇ ಇದ್ದರೂ 19ರಂದು ಎರಡು ಅಮಾಯಕರ ಕೊಲೆಗಳಾಗಿದ್ದರೂ ಕೆಂಪಣ್ಣ ನಡೆದುಕೊಂಡ ರೀತಿ ಮಾತ್ರ ಹಲವರಿಗೆ ಅನುಮಾನಗಳು ಹುಟ್ಟಿಸಿವೆ. ಅಂದು ಕೊಲೆಗಳಾದ ಜಾಗಕ್ಕೆ ತನ್ನ ಗುರು ಸಚಿವ ರಾಮದಾಸ್ ಬರುವಂತೆ ನೋಡಿಕೊಂಡಿದ್ದಾನೆ. ಸಚಿವರ ಎದುರೇ ನಾಗರಾಜುವನ್ನ ಇಲ್ಲಿಂದ ಓಡಿಸಲು ಆದೇಶವಾಗುವವರೆಗೂ ಶವಗಳನ್ನ ಕದಲಲು ಬಿಡುವುದಿಲ್ಲ ಎಂದು ಧಮಕಿ ಹಾಕಿದ್ದಾನೆ. ಇದೆಲ್ಲ ಒಂದೆಡೆಯಾದರೆ ಮತ್ತೊಂದೆಡೆ ಕೆಂಪಣ್ಣನ ಬೆಂಬಲಿಗರಾದ ಕಲ್ಲುಗಳ್ಳ ಆರ್ಮುಗಂ, ಚಿಕ್ಕಣ್ಣ, ಜಯಶಂಕರ್ ಎಂಬುವವರು ಅರಣ್ಯ ಇಲಾಖೆಯ ಕಾಡಿನೊಳಗೆ ಗಣಿಗಾರಿಕೆ ನಡೆಸಬಾರದೆಂದು ನಿಯಮವಿದ್ದರೂ ರಂಗನಾಥನ ಬುಡಕ್ಕೆ ಕನ್ನಹಾಕಿ ತಿಜೋರಿ ತುಂಬಿಸಿಕೊಳ್ಳುತ್ತಿದ್ದಾರೆ. ವೆಂಕಟಾಚಲಪತಿ ಎಂಬುವ ಕಲ್ಲುಗಳ್ಳ ಅವಧಿ ಮುಗಿದಿದ್ದರೂ ಕೆಂಪಣ್ಣ ಮತ್ತವರ ಪಟಲಾಂ ಜೊತೆ ಸೇರಿ ಕಲ್ಲುಗಳ್ಳತನ ಎಗ್ಗಿಲ್ಲದೆ ನಡೆಸುತ್ತಿದ್ದಾನೆ.

ಸ್ವಾಮೀಜಿಯ ಹಿಂದೆ ಸಾಹಿತಿ ಎಚ್.ಗೋವಿಂದಯ್ಯ ಸಹ ಇದ್ದಾರೆ. ಬೇರೆಲ್ಲಾ ಸ್ವಾಮೀಜಿಗಳಷ್ಟು ಈತ ಕೆಟ್ಟಿಲ್ಲ ಎನ್ನುವುದು ನಿಜವಾದರೂ, ಮೌಢ್ಯ, ಕಾಲಜ್ಞಾನ ಇತ್ಯಾದಿಗಳನ್ನು ಜನರಿಗೆ ತುಂಬುವ ಮೂಲಕ ತನ್ನದೇ ರೀತಿಯ 'ಸೇವೆ' ಸಲ್ಲಿಸುತ್ತಿರುವುದಕ್ಕೆ ಕಡಿವಾಣ ಹಾಕಬೇಕಿದೆ. ಆದರೆ ಕೊಲೆಗಳ ಹಿಂದೆ ಇರುವುದು ಯಾರೆಂಬುದು ನಿಜಕ್ಕೂ ಪತ್ತೆಯಾಗುವುದು ಅತ್ಯಗತ್ಯ. ದೇವರ ಹೆಸರಿನಲ್ಲಿ ತಮ್ಮ ಅಧಿಕಾರ ಸ್ಥಾಪಿಸಲು ಹೊರಟಿರುವ ಸ್ಥಾಪಿತ ಹಿತಾಸಕ್ತಿಗಳಿಗೂ ಮೂಗುದಾರ ಬೀಳದಿದ್ದರೆ ಇದು ಮತ್ತೊಂದು ಲೂಟಿಯ ತಾಣ ಆಗುವುದರಲ್ಲಿ ಆಶ್ಚರ್ಯವಿಲ್ಲ.

• ಲಕ್ಷ್ಮಣ್ ಚೀರನಹಳ್ಳಿ


ನಾಗರಾಜು

ಸ್ಪಷ್ಟೀಕರಣ

ಹಲವಾರು [illegible] ತಪ್ಪು [illegible] (ಡಿಸೆಂಬರ್ 8, 2010)ರ [illegible] ಪುಟದಲ್ಲಿ ಒಂದೆರಡು ತಪ್ಪುಗಳು ಕಾಣಿಸಿಕೊಂಡಿದ್ದವು. ಅವುಗಳಲ್ಲಿ ಒಂದು ಸಾಣೇಹಳ್ಳಿ ಮಠದ ಸ್ವಾಮಿಗಳ ಫೋಟೋ ಬದಲಿಗೆ [illegible] ಪ್ರಕಟಗೊಂಡಿದ್ದು. ಹಾಗೆಯೇ ಅವರ ಹೆಸರನ್ನೂ ತಪ್ಪಾಗಿ ಪ್ರಕಟಿಸಲಾಗಿತ್ತು. ಆದ್ದರಿಂದ ಅವುಗಳನ್ನು [illegible] ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಸ್ವಾಮಿಗಳ ಜನಪರ ಮತ್ತು ಪ್ರಗತಿಪರ ನಿಲುವುಗಳ ಬಗ್ಗೆ ನಮ್ಮ [illegible] ದಾಖಲಿಸಿದ್ದೇವೆ.

* * * * * * *


ನಮ್ಮ ಆಗಸ್ಟ್ 18, 2010 ರ ಸಂಚಿಕೆಯಲ್ಲಿ 'ಬಾಗಲಕೋಟೆ: ನಿರಾಣಿ, ಕಾರಜೋಳ ಸಾಮ್ರಾಜ್ಯದಲ್ಲಿ ದಲಿತರು ಕಾಲಕಸ' ಎಂಬ ವರದಿ ಪ್ರಕಟಗೊಂಡಿತ್ತು.


ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ತುಂಬಾ ಸರಳ ಮತ್ತು ಸಜ್ಜನ ಎಂದು ಅವರನ್ನು ಬಲ್ಲವರು ಹೇಳುತ್ತಾರೆ. ಆದರೆ ಅವರ ಜಿಲ್ಲೆಯಾದ ಬಾಗಲಕೋಟೆಯಲ್ಲಿ ಇತ್ತೀಚೆಗೆ ದಲಿತರ ವಿರುದ್ಧ ಹಲವಾರು ಪ್ರಕರಣಗಳು, ಬಹಿಷ್ಕಾರಗಳು ಜರುಗಿವೆ. ಇದನ್ನೆಲ್ಲ ನಿರಾಣಿ ಅವರ ಗಮನಕ್ಕೆ ತರುವ ಮೂಲಕ ಅವರು ಎಲ್ಲ ಜಾತಿ, ಪಂಗಡದ ಜನರ ಹಿತರಕ್ಷಣೆಯನ್ನು ಕಾಪಾಡಲಿ ಎಂಬುದೇ ನಮ್ಮ ಉದ್ದೇಶವಾಗಿತ್ತು. ಯಾವುದೇ ಪೂರ್ವಾಗ್ರಹಪೀಡಿತ ನಮ್ಮ ವರದಿಯಿಂದ ನಿರಾಣಿ ಅವರು ನೊಂದುಕೊಳ್ಳಕೂಡದು.

ನಿರಾಣಿ ಅವರ ವಿರುದ್ಧ ನಮಗೆ ವೈಯಕ್ತಿಕ ದ್ವೇಷವಾಗಲಿ, ಅಸಹನೆಯಾಗಲಿ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾ ಅವರು ಎಲ್ಲ ಸಮುದಾಯಗಳ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲಿ ಎಂದು ಆಶಿಸುತ್ತೇವೆ.

• ಸಂ


ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಸ್ವಾಮಿಗಳು


ನಿರಾಣಿ



ಕಳೆದ ಶತಮಾನದ 40-50ರ ದಶಕವು ನಮ್ಮ ದೇಶದ ಮಟ್ಟಿಗೆ ಮಹಾಸಂಕ್ರಮಣದ ಕಾಲ. ಆ ದಿನಗಳಲ್ಲಿ ಅಂಬೇಡ್ಕರರೊಡನೆ ಹತ್ತಿರದಿಂದ ಒಡನಾಡಿದ ನಾಮದೇವ ನಿಮ್ಗಾಡೆ, ತಮ್ಮ ಗುರು-ಸ್ಫೂರ್ತಿ- ಸಲಹಾಕಾರ-ಆಪದ್ಭಾಂಧವ ಎಲ್ಲವೂ ಆಗಿದ್ದ ಬಾಬಾಸಾಹೇಬ್ ಅವರನ್ನು ಹೆಜ್ಜೆಹೆಜ್ಜೆಗೂ ನೆನಪಿಸಿ ಕೊಂಡಿದ್ದಾರೆ. ತಮ್ಮ ಯಶಸ್ಸಿನ ರೂವಾರಿ ಅವರೇ ಎಂದು ಆ ಹುಲಿ ನಡೆದ ಜಾಡಿನಲ್ಲಿ ನಡೆಯುತ್ತಾರೆ. ಉಳಿದ ದಲಿತ ಆತ್ಮಕಥೆಗಳಲ್ಲಿರುವಂತೆಯೇ ಇಲ್ಲೂ ನಿಮ್ಗಾಡೆ ತಾವು ಎದುರಿಸಿದ ಅಸ್ಪೃಶ್ಯತೆಯ ಅವಮಾನ, ಜಾತೀಯತೆಯ ಕ್ರೌರ್ಯಗಳು, ಮಾನವೀಯ ಅನುಕಂಪದ ಸಹಾಯಗಳು ಇವನ್ನೆಲ್ಲ ನೆನೆದು ದಾಖಲಿಸುತ್ತಲೇ, ಅಂಬೇಡ್ಕರ್ ಅವರ ವ್ಯಕ್ತಿತ್ವ-ವೈಯಕ್ತಿಕ ಜೀವನದ ಬಗೆಗೊಂದು ಆಪ್ತ ಮತ್ತು ಖಾಸಾ ಆದ ಫಸ್ಟ್‌ಹ್ಯಾಂಡ್ ನೋಟವೊಂದನ್ನು ಕೊಟ್ಟಿದ್ದಾರೆ. ಆ ಪುಸ್ತಕದ ಬಗೆಗೆ ಹೆಚ್ಚು ಬರೆಯುವುದಕ್ಕಿಂತ ಅದರ ಇಣುಕುನೋಟವನ್ನು ಕೊಡುವುದು ಸೂಕ್ತ. ಅದರಲ್ಲೂ ಮತ್ತೆಮತ್ತೆ ಬರುವ ಅಂಬೇಡ್ಕರ್ ಕುರಿತಾದ ಘಟನೆಗಳ ಸಾರಸಂಗ್ರಹ ಇಲ್ಲಿದೆ..

ಅಂಬೇಡ್ಕರ್‌ವಾದಿಯ ಕಣ್ಣಲ್ಲಿ
ಬಾಬಾಸಾಹೇಬ್

ವಿಶೇಷ ಲೇಖನ

• ಡಾ. ಎಚ್. ಎಸ್. ಅನುಪಮಾ

`In The Tiger`s Shadow'
The autobiography of an Ambedkarite
NAVAYANA Publishing
155, 2nd floor, shahpur jat,
New Delhi - 110049

ಮಧ್ಯಪ್ರದೇಶದ ಸಾತಗಾಂವ್ ಎಂಬ ಹಳ್ಳಿಯ ಮಹಾರ್ ಕೇರಿಯಲ್ಲಿ 1920ನೇ ಇಸವಿಯ 'ಮಳೆಗಾಲದ ಯಾವುದೋ ಒಂದು ದಿನ' ಹುಟ್ಟಿದ ನಾಮದೇವನೆಂಬ ಹುಡುಗನೊಬ್ಬ, ತನ್ನ 14ನೇ ವರ್ಷಕ್ಕೆ ಶಾಲೆ ಸೇರಿ ಓದಿ, ಪದವೀಧರನಾಗಿ, ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಕ್ಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಹೋಗಿ, ನಂತರ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ನಾಮದೇವ್ ನಿಮ್ಗಾಡೆಯಾಗಿ ಬೆಳೆದ ಕತೆಯೇ 'ಇನ್ ದ ಟೈಗರ್ಸ್ ಶಾಡೋ.'

ಉಳಿದ ದಲಿತ ಆತ್ಮಕಥೆಗಳಲ್ಲಿರುವಂತೆಯೇ ಇಲ್ಲೂ ನಿಮ್ಗಾಡೆ ತಾವು ಎದುರಿಸಿದ ಅಸ್ಪೃಶ್ಯತೆಯ ಅವಮಾನ, ಜಾತೀಯತೆಯ ಕ್ರೌರ್ಯಗಳು, ಮಾನವೀಯ ಅನುಕಂಪದ ಸಹಾಯಗಳು ಇವನ್ನೆಲ್ಲ ನೆನೆದು ದಾಖಲಿಸುತ್ತಲೇ, ಅಂಬೇಡ್ಕರ್ ಅವರ ವ್ಯಕ್ತಿತ್ವ-ವೈಯಕ್ತಿಕ ಜೀವನದ ಬಗೆಗೊಂದು ಆಪ್ತ ಮತ್ತು ಖಾಸಾ ಆದ ಫಸ್ಟ್‌ಹ್ಯಾಂಡ್ ನೋಟವೊಂದನ್ನು ಕೊಟ್ಟಿದ್ದಾರೆ. ಕಳೆದ ಶತಮಾನದ 40-50ರ ದಶಕವು ನಮ್ಮ ದೇಶದ ಮಟ್ಟಿಗೆ ಮಹಾಸಂಕ್ರಮಣದ ಕಾಲ. ಆ ದಿನಗಳಲ್ಲಿ ಅಂಬೇಡ್ಕರರೊಡನೆ ಹತ್ತಿರದಿಂದ ಒಡನಾಡಿದ ನಾಮದೇವ ನಿಮ್ಗಾಡೆ, ತಮ್ಮ ಗುರು-ಸ್ಫೂರ್ತಿ-ಸಲಹಾಕಾರ-ಆಪದ್ಭಾಂಧವ ಎಲ್ಲವೂ ಆಗಿದ್ದ ಬಾಬಾಸಾಹೇಬ್ ಅವರನ್ನು ಹೆಜ್ಜೆಹೆಜ್ಜೆಗೂ ನೆನಪಿಸಿಕೊಂಡಿದ್ದಾರೆ. ತಮ್ಮ ಯಶಸ್ಸಿನ ರೂವಾರಿ ಅವರೇ ಎಂದು ಆ ಹುಲಿ ನಡೆದ ಜಾಡಿನಲ್ಲಿ ನಡೆಯುತ್ತಾರೆ.

ಆ ಪುಸ್ತಕದ ಬಗೆಗೆ ಹೆಚ್ಚು ಬರೆಯುವುದಕ್ಕಿಂತ ಅದರ ಇಣುಕುನೋಟವನ್ನು ಕೊಡುವುದು ಸೂಕ್ತ. ಅದರಲ್ಲೂ ಮತ್ತೆಮತ್ತೆ ಬರುವ ಅಂಬೇಡ್ಕರ್ ಕುರಿತಾದ ಘಟನೆಗಳ ಸಾರಸಂಗ್ರಹ ಇಲ್ಲಿದೆ..

* * * *

'ಅಹಿಂಸೆಯೆಂಬ ತತ್ವವನ್ನು ಗಾಂಧಿ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಆದರೆ ಬುದ್ಧನ ಅಹಿಂಸಾ ತತ್ವ ಪರಿಪೂರ್ಣ' ಎಂಬುದು ಅಂಬೇಡ್ಕರ್ ಅಭಿಪ್ರಾಯ. ಹೀಗೆ ಹೇಳುತ್ತಾ ಬುದ್ಧನ ಅಹಿಂಸಾಮಾರ್ಗದ ಒಂದು ಉಪದೇಶ ಉದಾಹರಿಸುತ್ತಾರೆ:

ಒಮ್ಮೆ ಸೇನಾ ದಂಡನಾಯಕನೊಬ್ಬ ಬುದ್ಧನ ಬಳಿ ಬಂದು ಕೇಳುತ್ತಾನೆ 'ದೇವ, ನಾನೊಂದು ಪ್ರಬಲ ಸೇನೆಯ ನಾಯಕ. ನಮ್ಮ ನೆಲ ರಕ್ಷಿಸುತ್ತೇವೆಂದು ಪಣ ತೊಟ್ಟಿದ್ದೇವೆ. ಆದರೆ ನಾನೀಗ ಅಹಿಂಸೆಯ ವ್ರತದಲ್ಲಿ ನಂಬಿಕೆಯಿಟ್ಟು ತುಂಬ ಗೊಂದಲಗೊಂಡಿದ್ದೇನೆ. ನೆರೆ ರಾಜ್ಯದವರು ನಮ್ಮ ಮೇಲೆ ದಾಳಿ ಮಾಡಿದ್ದೇ ಆದರೆ ನಾನೇನು ಮಾಡಬೇಕು?' ಬುದ್ಧ ಉತ್ತರಿಸುತ್ತಾನೆ 'ತಪ್ಪಿತಸ್ಥನನ್ನು ಶಿಕ್ಷಿಸುವುದು ಅಪರಾಧವಲ್ಲ. ನೀನು ನ್ಯಾಯವನ್ನು ಪಾಲಿಸುತ್ತಿದ್ದೀ ಅಷ್ಟೇ. ಮೊದಲು ಶಾಂತಿಯುತ ವಿಧಾನಗಳನ್ನು ಪರೀಕ್ಷಿಸು. ಅದು ಸಫಲವಾಗದಿದ್ದರೆ ನ್ಯಾಯದ ನಿಯಮಾವಳಿಯಂತೆ ನಡೆದುಕೋ. ಪ್ರಪಂಚದಲ್ಲಿ ಒಳ್ಳೆಯದು ತುಂಬ ಕಮ್ಮಿಯಿದೆ ಮತ್ತು ಕೆಟ್ಟದ್ದು ಹೇರಳವಾಗಿದೆ. ಒಳಿತಿನ ರಕ್ಷಣೆಗಾಗಿ ನಿನ್ನ ಬಳಿ ಸಾಧ್ಯವಿರುವ ಎಲ್ಲ ಉಪಾಯವನ್ನೂ ಬಳಸಿಕೊಳ್ಳಬೇಕು.'

ಇಂಥ ಅಹಿಂಸಾತತ್ವ ನಂಬಿದ್ದರಿಂದಲೇ ಅಂಬೇಡ್ಕರ್ ಅನ್ಯಾಯ ಸಹಿಸುತ್ತಿರಲಿಲ್ಲ. ಕೆಳಜಾತಿ ಹೆಣ್ಣುಮಕ್ಕಳ ಮೇಲೆ ಮೇಲ್ಜಾತಿಯವರಿಂದ ಅತ್ಯಾಚಾರವಾಗುತ್ತಿದೆ ಎಂಬ ವಿಷಯ ಕಿವಿಗೆ ಬಿದ್ದರೆ ಕೆಂಡಮಂಡಲವಾಗುತ್ತಿದ್ದರು. 'ನಾನೇನಾದರೂ ತರುಣನಾಗಿದ್ದರೆ ಅವರನ್ನೆಲ್ಲ ಬಂದೂಕಿನಿಂದ ಸುಟ್ಟು ಬರುತ್ತಿದ್ದೆ' ಎನ್ನುತ್ತಿದ್ದರು. ಒಮ್ಮೆ ಕೆಲವರು ತಮ್ಮ ಮೇಲಾದ ದೌರ್ಜನ್ಯದ ಬಗ್ಗೆ ಹೇಳಿಕೊಳ್ಳಲು ತುಂಬ ದೂರದಿಂದ ಅಂಬೇಡ್ಕರ್ ಬಳಿ ಬಂದರು. ಅವರು ಹೇಳಿದ್ದನ್ನೆಲ್ಲ ಕೇಳಿದ ಅಂಬೇಡ್ಕರ್ 'ನಿಮ್ಮ ಮೇಲೆ ಹಲ್ಲೆಯಾದರೆ ಹೇಡಿಗಳಂತೆ ನನ್ನ ಬಳಿ ಏಕೆ ಓಡಿಬಂದಿರಿ? ಹರೋಗೆ ತೋ ಮರೋಗೆ. ಅನ್ಯಾಯದ ವಿರುದ್ಧ ಅಲ್ಲೇ ಏಕೆ ಪ್ರತಿಭಟಿಸಲಿಲ್ಲ. ನೆನಪಿಡಿ, ಯಾವಾಗಲೂ ಕುರಿಮೇಕೆಗಳನ್ನು ಬಲಿ ಕೊಡಲಾಗುವುದೇ ಹೊರತು ಹುಲಿಸಿಂಹಗಳನ್ನಲ್ಲ. ನೀವು ಸಿಂಹಗಳಾಗಬೇಕು.'

* * * *

ಅಂಬೇಡ್ಕರ್ ಭೇಟಿಗೆ ಒಬ್ಬರು ಬಂದಾಗ ನಡೆದ ಸಂಭಾಷಣೆ:

'ನಿಮ್ಮ ಹೆಸರೇನು?'

'ಮಿ. ಸಿಂಗ್.'

'ಓಹ್, ಸಿಂಗ್ ಎಂದರೆ ಸಿಂಹ ಅಲ್ಲವೇ? ನನಗಂತೂ ಸಿಂಹವೆಂದರೆ ತುಂಬ ಹೆದರಿಕೆ. ಇರಲಿ, ಸಿಂಹ ನನ್ನನ್ನು ಹುಡುಕಿಕೊಂಡು ಬಂದ ಕಾರಣವೇನು?'

'ನಾನು ನಿಮ್ಮ ದರ್ಶನಕ್ಕೆ ಬಂದೆ.'

'ನಾನು ದರ್ಶನ ಕೊಡುವವನಲ್ಲ ಮಿ. ಸಿಂಗ್. ನಾನು ಸಾಮಾನ್ಯ ಮನುಷ್ಯ. ನನ್ನ ತಾಯ್ತಂದೆಯರೂ ಸಾಮಾನ್ಯ ಮನುಷ್ಯರೇ. ಹಾಗೆ ನೀವು ದರ್ಶನ ಮಾಡಬಯಸಿದರೆ ಆಶೀರ್ವದಿಸಲು ಕೈ ಮೇಲೆತ್ತಿ ಕುಳಿತ ಹಾಗೂ ನಮಸ್ಕಾರ ಸ್ವೀಕರಿಸಲು ಕಾಲು ಮುಂಚಾಚಿ ಕುಳಿತ ಬಹಳಷ್ಟು ರಾಜಕಾರಣಿಗಳಿದ್ದಾರೆ. ಅವರ ಬಳಿ ಹೋಗಿ. ದರ್ಶನಕ್ಕೆ ನನ್ನ ಬಳಿ ಬರಬೇಡಿ. ನನ್ನಿಂದ ನಿಮಗೇನಾಗಬೇಕು? ನನಗೇನಾದರೂ ಕೆಲಸವಿದೆಯೆ ಹೇಳಿ.'

* * * *

ಸಂಸತ್ತಿನಲ್ಲೊಮ್ಮೆ ಶೆಡ್ಯೂಲ್ ಕ್ಯಾಸ್ಟ್ ಕಮಿಷನ್ ರಿಪೋರ್ಟ್ ಸರಿಯಿಲ್ಲ ಎಂದ ಅಂಬೇಡ್ಕರರಿಗೆ, ನೆಹರೂ ಸಂಪುಟದ್ದಾಗಿದ್ದ ಗೃಹಮಂತ್ರಿ ಕೆ.ಎನ್.ಕಟ್ಜು ಅವರು 'ಡಾ. ಅಂಬೇಡ್ಕರ್ ಅದನ್ನು ಸರಿಯಾಗಿ ಓದಿರಲಿಕ್ಕಿಲ್ಲ. ಬರಿಯ ಕವರ್ ಪೇಜ್ ಮಾತ್ರ ನೋಡಿರಬೇಕು' ಎನ್ನುತ್ತಾರೆ. ಅದಕ್ಕೆ ಅಂಬೇಡ್ಕರ್ 'ಇದು ಕಮಿಷನ್ ರಿಪೋರ್ಟಿನಂತಿಲ್ಲ. ಯಾರೋ ನೌಕರ ಬರೆದ ರಿಪೋರ್ಟಿನಂತಿದೆ. ಕಟ್ಜು ಅವರೇ, ನಾನು ಈ ರಿಪೋರ್ಟಿನ ಕವರ್ ಪೇಜನ್ನಷ್ಟೇ ಓದಿರಬೇಕು ಎಂದಿರಿ, ನಾನು ಕವರ್ ಟು ಕವರ್ ಓದಿರುವೆ. ನನ್ನ ಓದುವ ಹವ್ಯಾಸ ನಿಮಗೆ ತಿಳಿದಂತಿಲ್ಲ. ನಿಮ್ಮ ತಾತ ಮುತ್ತಾತಂದಿರು, ಮಕ್ಕಳು ಮೊಮ್ಮಕ್ಕಳು ಓದುವುದನ್ನೆಲ್ಲ ಸೇರಿಸಿದರೂ ನಾನು ಓದಿದಷ್ಟು ಆಗುವುದಿಲ್ಲ ತಿಳಿದಿರಲಿ' ಎಂದುತ್ತರಿಸುತ್ತಾರೆ.



* * * *

'ಮಿ. ಸಿಂಗ್, ನೀವು ನಮ್ಮ ರಿಪಬ್ಲಿಕನ್ ಪಾರ್ಟಿ ಸೇರುತ್ತಿರುವುದೇನೋ ತುಂಬ ಸಂತೋಷದ ವಿಷಯ. ಆದರೆ ಯಾವಾಗ ನಮಗೆ ಕೈಕೊಟ್ಟು ಹೋಗುತ್ತೀರಿ ಎಂದೂ ಮೊದಲೇ ತಿಳಿಸಿಬಿಟ್ಟರೆ ಒಳ್ಳೆಯದು.' ಇದು ಪಂಜಾಬಿನ ಒಬ್ಬರು ಅಂಬೇಡ್ಕರರ ರಿಪಬ್ಲಿಕನ್ ಪಕ್ಷ ಸೇರುತ್ತೇನೆಂದು ಕರೆ ಮಾಡಿ ತಿಳಿಸಿದಾಗ ಅವರು ಪ್ರತಿಕ್ರಿಯಿಸಿದ ರೀತಿ.

* * * *

ಅಂಬೇಡ್ಕರರನ್ನು ಅಮೆರಿಕದ ಪತ್ರಕರ್ತನೊಬ್ಬ ಭೇಟಿಯಾಗಲು ಬಯಸುತ್ತಾನೆ. ಎಷ್ಟೊತ್ತಿಗೆ ಬರಲಿ ಎಂದು ಕೇಳಿದರೆ 'ಎಷ್ಟೊತ್ತಿಗೆ ಬೇಕಾದರೂ ಬನ್ನಿ' ಎನ್ನುತ್ತಾರೆ. ಆತ ನಡುರಾತ್ರಿಯ ವೇಳೆ ಬಂದರೂ ಅವರ ಬಂಗಲೆಯ ದೀಪ ಉರಿಯುತ್ತಿರುತ್ತದೆ. 'ಈ ವೇಳೆಗೆ ಉಳಿದ ನಾಯಕರೆಲ್ಲ ಮಲಗಿರಬಹುದು ಡಾ. ಅಂಬೇಡ್ಕರ್, ನೀವು ಮಾತ್ರ ಇನ್ನೂ ಎಚ್ಚರವಾಗೇ ಇದ್ದೀರಲ್ಲ?' ಎಂಬ ಅವನ ಪ್ರಶ್ನೆಗೆ 'ಆ ನಾಯಕರ ಅನುಯಾಯಿಗಳು ಎಚ್ಚೆತ್ತಿದ್ದಾರೆ. ಹಾಗಾಗಿ ಅವರು ಸುಖನಿದ್ರೆ ಮಾಡಬಹುದು. ಆದರೆ ನನ್ನ ಜನ ಇನ್ನೂ ನಿದ್ರಿಸುತ್ತಿದ್ದಾರೆ, ಆದ್ದರಿಂದ ನಾನು ಯಾವಾಗಲೂ ಎಚ್ಚರವಾಗಿರಬೇಕಾಗಿದೆ' ಎಂದು ಉತ್ತರಿಸುತ್ತಾರೆ.

* * * *

ಅವರ ಮನೆ 'ರಾಜಗೃಹ' ಹೊರಗಿನಿಂದ ನೋಡಲು ಎಲ್ಲ ಉನ್ನತ ದರ್ಜೆಯ ಮಂತ್ರಿಗಳ ಬಂಗಲೆಯಂತೇ ಇದ್ದರೂ ಒಳಗೆ ಹಲವು ವ್ಯತ್ಯಾಸಗಳು ಎದ್ದು ಕಾಣುತ್ತಿದ್ದವು. 'ರಾಜಗೃಹ' ಯಾವಾಗಲೂ ಸಹಾಯ ಕೇಳಿ ಬಂದ ದೀನದಲಿತರಿಂದ ತುಂಬಿರುತ್ತಿತ್ತು ಇನ್ನೊಂದು ಎದ್ದುಕಾಣುವ ವ್ಯತ್ಯಾಸ ಪುಸ್ತಕಗಳು. ತನ್ನ ಬಂಗಲೆಯ ಹೆಚ್ಚೂಕಮ್ಮಿ ಎಲ್ಲಾ ಕೋಣೆಗಳ ಕಪಾಟುಗಳನ್ನೂ ಪುಸ್ತಕಗಳಿಂದ ತುಂಬಿಸಿದ್ದರು. ಕಪಾಟುಗಳ ಗಾಜಿನ ಬಾಗಿಲ ಸಂಖ್ಯೆಯು ಗುರುತುಗಳಿದ್ದವು. 33000 ಅಪರೂ[...] ಅಮೂಲ್ಯ ಪುಸ್ತಕಗಳ ಒಡೆಯರಾಗಿದ್ದ ಅವರ ಬಹು[...] ಪುಸ್ತಕಗಳು ಮುಂಬಯಿಯಲ್ಲಿದ್ದರೆ, ಉಳಿ[...] ದೆಹಲಿಯಲ್ಲಿದ್ದವು. ರಾಜಕಾರಣದಿಂದ ಕೋಳಿ ಸಾಕಣೆಯ[...] ಕಟ್ಟಡ ವಿನ್ಯಾಸದಿಂದ ಕೃಷಿ ಆರ್ಥಿಕತೆಯ ತನಕ, ಸ[...] ಸಿದ್ಧಾಂತದಿಂದ ಬೌದ್ಧ ಧರ್ಮದ ತನಕ, ಪರಮ[...] ಶಕ್ತಿಯಿಂದ ಕಲ್ಲಿದ್ದಲು ಗಣಿ ಮಾಹಿತಿಯ ತನಕ - [...] ಅವರ ಬಳಿಯ ಸಂಗ್ರಹದಲ್ಲಿ ಎಲ್ಲ ಪುಸ್ತಕಗಳಿಗೂ ಸ್ಥಾ[...] ಅಲ್ಲದೇ ಅವನ್ನೆಲ್ಲ ಓದಿ, ನೆನಪಿನಲ್ಲಿಟ್ಟುಕೊಂಡು, ಬೇಕಾ[...] ಉಲ್ಲೇಖಿಸಿ, ಯಾವ ವಿಷಯದ ಬಗೆಗಾದರೂ ನಿರ[...] ವಾಗಿ ಮಾತಾಡಬಲ್ಲ ಜ್ಞಾನ ಹೊಂದಿದ್ದರು. '[...] ಬಿಡುವಿಲ್ಲದ ಓದಿನಿಂದ ಹೇಗೆ ರಿಲ್ಯಾಕ್ಸ್ ಮಾಡುವಿ[...]' ಎಂದು ಕೇಳಿದರೆ 'ಒಂದು ವಿಷಯದಿಂದ ಸಂಪೂ[...] ಭಿನ್ನವಾದ ಇನ್ನೊಂದು ವಿಷಯದ ಬಗೆಗೆ [...] ಶುರುಮಾಡುವುದು ನಿಜವಾಗಿ ರಿಲ್ಯಾಕ್ಸ್ ಮಾಡಿ[...]' ಎನ್ನುತ್ತಿದ್ದರು.

* * * *

ಅಂಬೇಡ್ಕರರ ತಂದೆ ತುಂಬ ಧಾರ್ಮಿಕ ಮ[...] ಅವರಿಂದ ಅಂಬೇಡ್ಕರ್ ಹಿಂದೂ ಪುರಾಣದ ಕತೆ[...] ಭಜನೆಗಳು, ನೀತಿಗಳನ್ನೆಲ್ಲ ಪೂರಾ ತಿಳಿದಿದ[...] ಅಂಬೇಡ್ಕರರಿಗೆ ಮ್ಯಾಟ್ರಿಕ್ಯುಲೇಷನ್ ಪಾಸಾದ ದಲಿತ ಹು[...] ಎಂದು ಸನ್ಮಾನ ಮಾಡುವೆವೆಂದು ಹೇಳಿದಾಗ ಅ[...] ಬೇಡವೆಂದೇ ಅವರ ತಂದೆ ಹೇಳಿದ್ದರಂತೆ. ಕೊನೆ[...] ಸನ್ಮಾನ ಸಮಾರಂಭ ಏರ್ಪಾಡಾಗುತ್ತದೆ. ಆಗ ಗುರುಗಳ[...] ಕೇಳುಸ್ಕರ್ ಅಂಬೇಡ್ಕರ್ ಅವರಿಗೆ ಗೌತಮ ಬುದ್ಧನ ಬ[...] ಪುಸ್ತಕ ನೀಡುತ್ತಾರೆ. ಅಲ್ಲಿಂದ ಅಂಬೇಡ್ಕರ್ ಅವರ [...] ಧರ್ಮದೊಂದಿಗಿನ ಒಡನಾಟ ಶುರುವಾಗಿ ನಂತರ ಅದ[...] ಆಸಕ್ತಿ ಬೆಳೆಯುತ್ತಲೇ ಹೋಯಿತು.

ಅವರ ಪ್ರಕಾರ 'ಬುದ್ಧ ಒಬ್ಬ ವಿಜ್ಞಾನಿ. ತನ್ನ[...] ಸಾಕ್ಷಿ ಪುರಾವೆ ಇಲ್ಲದ ವಿಷಯದ ಬಗೆಗೆ ಅವನು ಏ[...] ನಾಡಲಿಲ್ಲ. ಹಾಗಾಗಿಯೇ ಬುದ್ಧ 'ಇಷ್ಟು ದಿನಗಳಲ್ಲಿ[...] ಪ್ರಪಂಚ ಸೃಷ್ಟಿಯಾಯಿತು' ಎಂಬಂತಹ ಸುಳ್ಳನ್ನು ಹೇಳ[...] ಈ ಜಗತ್ತನ್ನು ಯಾರು ಸೃಷ್ಟಿಸಿದರು ಎಂಬ ಬಗ್ಗೆ ನಾನೇ[...] ಹೇಳಲಾರೆ ಎಂದೇ ಹೇಳಿದ. ಆತ್ಮ ಅಥವಾ ದೇ[...] ಇದ್ದಾನೆಯೋ ಎಂಬುದೂ ಅವನಿಗೆ ಮು[...] ಪ್ರಶ್ನೆಯಾಗಿರಲಿಲ್ಲ. ಅವೈಜ್ಞಾನಿಕವಾದದ್ದನ್ನು ಆತ ನಂಬಲಿ[...] ಈ ನಂಬಿಕೆ ಅಂಬೇಡ್ಕರ್ ಅವರಿಗೂ ಇತ್ತು. ಒ[...] ಸಂಸತ್ತಿನಲ್ಲಿ ಯಾರೋ 'ದೇವರು ನಿಮ್ಮ ಆತ್ಮ[...] ಕಾಪಾಡಲಿ' ಎಂದರಂತೆ. ಅದಕ್ಕೆ ಅಂಬೇಡ್ಕರ್ 'ನಿ[...] ಸ್ವಲ್ಪ ಕಷ್ಟವಿದೆ. ನನಗೆ ದೇ[...] ಮತ್ತು ಆತ್ಮ ಎರಡರ[...] ನಂಬಿಕೆಯಿಲ್ಲವಲ್ಲ' ಎಂದರಂ[...]

* * * *

ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ಹೊರಟು, ರಾಕ್‌ಫೆಲ್ಲರ್ ಫೌಂಡೇಷನ್ನಿನ ಸ್ಕಾಲರ್‌ಶಿಪ್ ದೊರಕಿಸಿಕೊಂಡ[...] ನಿಮ್ಗಾಡೆ ಒಂದು ಕ್ಯಾರೆಕ್ಟರ್ ಸರ್ಟಿಫಿಕೇಟ್ ಬೇಕೆಂದು ಅಂಬೇಡ್ಕರ್ ಬಳಿ ಕೇಳುತ್ತಾರೆ. ಆಗವರು 'ಅರೆ, ಮನುಷ್ಯನ ಕ್ಯಾರೆಕ್ಟರ್ ಆರು ತಿಂಗಳಿಗೊಮ್ಮೆ ಬದಲಾಗುತ್ತಿರುತ್ತದಂತಲ್ಲ?! ನಿ[...] ಕ್ಯಾರೆಕ್ಟರ್ ಸರ್ಟಿಫಿಕೇಟ್ ಹೇಗೆ ಕೊಡಲಿ? ನಾನದನ್ನು ಇನ್ನೂವರೆಗೂ ಯಾರಿಗೂ ಕೊಟ್ಟಿಲ್ಲ' ಎಂದು ಗ[...] ಮಾಡುತ್ತಾರೆ. ಕೊನೆಗೆ ಅಲ್ಲೇ ಸರಿದುಹೋಗುತ್ತಿದ್ದ ಸ[...] ಅಂಬೇಡ್ಕರ್ 'ನಿಮ್ಗಾಡೆ ಒಳ್ಳೆಯ ವಿದ್ಯಾರ್ಥಿಯಲ್ಲ[...] ಅವರಿಗೆ ನೀವು ಕ್ಯಾರೆಕ್ಟರ್ ಸರ್ಟಿಫಿಕೇಟ್ ಕೊಡಬಹು[...]' ಎಂದು ತಮಾಷೆಯಾಗಿ ಹೇಳುತ್ತಾರೆ. ಅಂತೂ ಇವರಿ[...] ಸಿಗುತ್ತದೆ. 'ಮಹಾರಾಷ್ಟ್ರದ ಗೌರವಾನ್ವಿತ ಮಹಾರ್ ಸ[...] ದಾಯದ ಸನ್ನಡತೆಯ ವ್ಯಕ್ತಿ ಇವರು' ಎಂದು ಅ[...] ಸಹಿ ಹೊತ್ತ ಸರ್ಟಿಫಿಕೇಟ್ ಪುಸ್ತಕದಲ್ಲಿ ಅಚ್ಚಾಗಿರುವುದ[...] ನೋಡಬಹುದು.

* * * *

'ವಿಧಾನಸಭೆ ಸದಸ್ಯನಾಗುವುದು ತುಂಬ ಸಾಧಾ[...] ಸಂಗತಿ ನಿಮ್ಗಾಡೆ. ನೀನು ಇನ್ನೂ ಓದಬೇಕು, ನ[...] ಸಮುದಾಯಕ್ಕೆ ಮಾದರಿ ವಿಜ್ಞಾನಿಯಾಗಬೇಕು. ಸಾಮಾ[...] ವಾಗಿ, ಆರ್ಥಿಕವಾಗಿ ದುರ್ಬಲರಾದ ನಾವು ಎಲ್ಲ ಕ್ಷೇ[...] ಗಳಲ್ಲೂ ಮುನ್ನಡೆ ಸಾಧಿಸಬೇಕು. ರಾಜಕಾರಣ ಮ[...] ಅಧಿಕಾರದ ಆಮಿಷಕ್ಕೆ ಬಲಿಯಾಗಬೇಡ. ವಿನೋ[...] ಓದಿ, ಒಂದು ಸಣ್ಣ ಸಂಬಳದ ಉದ್ಯೋಗ ಪಡೆಯುವು[...] ತೃಪ್ತನಾಗದೇ, ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಓ[...] ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಎಲ್ಲ ಮಾಡಬೇ[...] ನೀನು. ಪದವಿಗಳು ನಮ್ಮ ಮೆಟ್ಟಿಲುಗಳು. ಆದರೆ ಓದಿದ ಕೂಡಲೇ ಬಹಳ ಜನರು ಓದು, ತಮ್ಮ ಸಮು[...]

...ಎಲ್ಲವನ್ನು ಮರೆತುಬಿಡುತ್ತಾರೆ. ನಾನೂ ಕೂಡಾ ಅವಿದ್ಯಾವಂತ, ...ಸಾಮಾನ್ಯ ಮನುಷ್ಯನಿಗಾಗಿ ಏನೂ ಮಾಡಲಿಲ್ಲವಲ್ಲ ಎಂದು ...ಆಗ ಅನಿಸುತ್ತಿದೆ. ನಾನು ಮತ್ತಷ್ಟು ಸಮಯವನ್ನು ಅನಕ್ಷರಸ್ಥ ...ಅಸ್ಪೃಶ್ಯರಿಗಾಗಿ ಮೀಸಲಿಡಬೇಕಿತ್ತು.'

- ಇದು ನಿಮ್ಗಾಡೆಯವರಿಗೆ ಅನಾಯಾಸವಾಗಿ ಮಹಾರಾಷ್ಟ್ರ ವಿಧಾನಸಭಾ ಸ್ಥಾನಕ್ಕೆ ಟಿಕೆಟ್ ದೊರಕುವ ಅವಕಾಶ ಬಂದು, ಅವರು ಬಾಬಾ ಬಳಿ ಸಲಹೆ ಕೇಳಿದಾಗ ಹೇಳಿದ ಮಾತು.

ಇನ್ನೊಮ್ಮೆ ಅಂಬೇಡ್ಕರರು 1952ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗ ನಿಮ್ಗಾಡೆ ಅವರ ಪರವಾಗಿ ಚುನಾವಣಾ ಪ್ರಚಾರಕ್ಕೆ ಮುಂಬಯಿಗೆ ಹೋಗುವ ಇಚ್ಛೆ ವ್ಯಕ್ತಪಡಿಸುತ್ತಾರೆ. ಆಗ ಅದಕ್ಕೆ ಸುತರಾಂ ಒಪ್ಪದ ಅಂಬೇಡ್ಕರ್ 'ವಿದ್ಯಾರ್ಥಿಗಳ ಓದು-ಸಮಯ ಬಲಿಕೊಟ್ಟು ಚುನಾವಣೆ ಗೆಲ್ಲುವ ಆಸೆ ನನಗಿಲ್ಲ. ಉತ್ತಮ ವಿದ್ಯಾರ್ಥಿಗಳು ಇಂಥವಕ್ಕೆಲ್ಲ ಸಮಯ ಹಾಳುಮಾಡಬಾರದು' ಎನ್ನುತ್ತಾರೆ.

'ಹುಶಾರಾಗಿರು ಮತ್ತು ಕಠಿಣಶ್ರಮ ಪಡು. ನಿನ್ನ ಸ್ವಂತ ಸಂಶೋಧನಾ ಕೆಲಸಕ್ಕೆ ಸಾಕಷ್ಟು ಸಮಯ ಕಲ್ಪಿಸಿಕೋ. ಉಳಿದ ದಿನ ಸಮಯ ಸಿಗದಿದ್ದರೆ, ರಜಾದಿನಗಳಲ್ಲಾದರೂ ಕೆಲಸ ಮಾಡು. ಇನ್ನೂ ಹೆಚ್ಚಿನ ಪದವಿ ಗಳಿಸಬೇಕು. ನಿಧಾನವಾದರೂ ಪರವಾಗಿಲ್ಲ. ಆಳನೀರಿನಲ್ಲಿ ಮುಳುಗಿದ ಅಂಬುಗಾರನ ಹಾಗೆ ನಿಧಾನವಾಗಿಯಾದರೂ ಆಚೆ ತೀರದಲ್ಲಿ ಮೇಲೇಳಬೇಕು.' ಇದು ಶಿಕ್ಷಣವೆಂಬ ಶಕ್ತಿಯ ಬಗೆಗೆ ಅವರಿಗಿದ್ದ ಅಚಲ ವಿಶ್ವಾಸ.

* * * *

'ನನಗೆಷ್ಟೇ ವೈಜ್ಞಾನಿಕ ದೃಷ್ಟಿಯಿದ್ದರೂ ಎರಡು ಕುರುಡು ನಂಬಿಕೆಗಳು ನನಗೂ ಇವೆ. ಮೊದಲನೆಯದು- ನನ್ನ ತಾಯ್ತಂದೆಯರ ಚೇತನ ನನ್ನ ಮೇಲೆ ಸದಾ ಸುಳಿದಾಡುತ್ತಾ ಇರುತ್ತದೆ ಹಾಗೂ ಅದು ನನ್ನನ್ನು ಅಪಾಯದಿಂದ ಪಾರುಮಾಡುತ್ತದೆನ್ನುವುದು. ಎರಡನೆಯದು ಬುದ್ಧದೇವ ನನ್ನನ್ನು ರಕ್ಷಿಸುವನೆನ್ನುವುದು. ನನ್ನ ನಂಬಿಕೆ ಬುದ್ಧನನ್ನು ದೇವರೆಂದು ನಂಬುವಂತೆ ಮಾಡಿದೆ. ನಂಬಿಕೆಯೇ ಇಲ್ಲದೇ ಮಾನವ ಸರಿಯಾದ ದಾರಿ ಹೇಗೆ ಕಂಡುಕೊಳ್ಳಬಲ್ಲ? ದಾರಿ ತಿಳಿಯದವನ ಗತಿ ಕತ್ತಲಲ್ಲಿ ತಡವರಿಸುತ್ತ ನಡೆಯುತ್ತಿರುವಂತೆ.'

??????

ತಮ್ಮ ಮೊದಲ ಮಗುವಿಗೆ ಭೀಮರಾವ್ ಎಂದು ಹೆಸರಿಡುವ ನಿಮ್ಗಾಡೆ ಮಗುವನ್ನು ಅಂಬೇಡ್ಕರ್ ಬಳಿಗೊಯ್ಯುತ್ತಾರೆ. ಅಂಬೇಡ್ಕರ್ 'ಹೆಸರಿನಲ್ಲೇನಿದೆ? ಇಲ್ಲಿ ಪಾತ್ರೆ ತಿಕ್ಕಲು ಲಕ್ಷ್ಮಿ ಬರುತ್ತಾಳೆ. ಸುಭಾಶ್ಚಂದ್ರ ಹೇರ್ ಕಟಿಂಗ್ ಸಲೂನ್ ಇದೆ. ಶಿವಾಜಿ ಬ್ರಾಂಡ್ ಬೀಡಿಯಿದೆ.'

'ನಾವು ಭಾರತೀಯರು ಮಕ್ಕಳು ಹುಟ್ಟಿದ ಮೇಲೆ ಅವರಿಗೆ ಬಟ್ಟೆ ಹೊಲಿಯುತ್ತೇವೆ, ವಿದೇಶದಲ್ಲಿ ಹಾಗಲ್ಲ ಮಗು ಬರುವ ಮೊದಲೇ ಎಲ್ಲ ತಯಾರಿ ಮಾಡಿಕೊಂಡಿರುತ್ತಾರೆ. ನನ್ನ ಸ್ವಂತ ಅನುಭವವನ್ನೇ ಹೇಳಬೇಕೆಂದರೆ ವಿದೇಶದಿಂದ ಓದು ಮುಗಿಸಿ ವಾಪಸಾದ ಮೇಲೂ ಜಾತಿಯ ಕಾರಣದಿಂದ ಲಾಯರ್ ವೃತ್ತಿ ಕಷ್ಟವಾಯಿತು. ಬರಿಯ ನುಚ್ಚಿನ ಅನ್ನ ಉಂಡು ಬದುಕುತ್ತಿದ್ದೆವು. ನಾನೂ ದುರ್ಬಲನಾದೆ. ನನ್ನ ಮಗುವೊಂದು ಕಾಯಿಲೆ ಬಂದು ತೀರಿಕೊಂಡಿತು. ಅದರ ಅಂತ್ಯಸಂಸ್ಕಾರ ಮಾಡಲು ಹಣಕ್ಕೆ ಬಹಳ ತೊಂದರೆಯಾಯಿತು. ನಂತರ ಹೆಂಡತಿ ರಮಾ ತೀವ್ರ ಅಸ್ವಸ್ಥಗೊಂಡಳು. ವೈದ್ಯರು ಇನ್ನೊಂದು ಮಗುವಾದರೆ ಅವಳ ಜೀವಕ್ಕೆ ಅಪಾಯ ಎಂದರು. ನಾವು ಬ್ರಹ್ಮಚರ್ಯ ಪಾಲಿಸತೊಡಗಿದೆವು. ನನ್ನ ಬಳಿ ಸಾಧ್ಯವಾದ ಪ್ರಯತ್ನವನ್ನೆಲ್ಲ ಮಾಡಿದೆ. ಆದರೆ ನಮ್ಮೆಲ್ಲ ಪ್ರಯತ್ನ, ಚಿಕಿತ್ಸೆ ಫಲಿಸದೇ ಅವಳು ನನ್ನ ಬಿಟ್ಟೇ ಹೋದಳು.' ಇಷ್ಟು ಹೇಳುತ್ತ ಅಂಬೇಡ್ಕರ್ ಗದ್ಗದಿತರಾಗಿ ಕಣ್ಣೀರಿಡುತ್ತಾರೆ. ರಾಜಕೀಯ ವಿರೋಧಿಗಳನ್ನು ಸಿಂಹವಾಗಿ ಎದುರಿಸಿದ ಮನುಷ್ಯ ತನ್ನ ಗತಿಸಿದ ಹೆಂಡತಿಯ ನೆನಪಿನಲ್ಲಿ ಅಸಹಾಯಕರಾಗುತ್ತಾರೆ.

* * * *

'ನನಗೀಗ ವಯಸ್ಸಾಗುತ್ತಿದೆ. ಸಲಹೆ ಕೊಡುವುದಕ್ಕಿಂತ ಹೆಚ್ಚೇನೂ ಮಾಡಲಾರೆ. ಆದರೆ ನನಗೆ ತೀರಿಸಬೇಕಾದ ದೊಡ್ಡ ಮೊತ್ತದ ಸಾಲ ಇದೆ ಎಂದರೆ ನೀನು ಅಚ್ಚರಿಗೊಳ್ಳಬಹುದು. ಹೌದು, ನನಗೆ 22 ಲಕ್ಷ ಸಾಲವಿದೆ. ಈ ಆರೋಗ್ಯ ಸುಧಾರಿಸಿದ ಮೇಲೆ ಮತ್ತೆ ಲಾ ಪ್ರಾಕ್ಟೀಸ್ ಶುರುಮಾಡಿ ಸಾಲ ತೀರಿಸಬೇಕು.'

ಅಂಬೇಡ್ಕರ್ ಹೀಗೆ ಹೇಳಿದಾಗ ತರುಣ ನಿಮ್ಗಾಡೆಗೆ ಬರುತ್ತಿದ್ದದ್ದು ಬರಿಯ 240 ರೂ. ಸಂಬಳ. ಅವರ ಸಾಲದ ಮೊತ್ತ ಕೇಳಿ ಕಂಗಾಲಾಗುತ್ತಾರೆ. ಮುಂಬಯಿಯ ಸಿದ್ಧಾರ್ಥ ಕಾಲೇಜು, ಔರಂಗಾಬಾದಿನ ಮಿಲಿಂದ ಕಾಲೇಜಿನ ಸಂಸ್ಥಾಪಕರಾಗಿದ್ದ ಅಂಬೇಡ್ಕರ್ ಅವುಗಳಿಗಾಗಿ ಹಾಗೂ ಚುನಾವಣೆಗಳಿಗಾಗಿ ಹಣ ಖರ್ಚು ಮಾಡಿರುತ್ತಾರೆ. ಅಲ್ಲದೇ ದೊಡ್ಡ ಮೊತ್ತವನ್ನು ಪುಸ್ತಕಗಳಿಗಾಗಿ ಖರ್ಚುಮಾಡಿರುತ್ತಾರೆ. ಒಮ್ಮೆ ಮುಸ್ಲಿಮ್ ಜಮೀನ್ದಾರರ ಮನೆಗೆ ಹೋದಾಗ ಅಲ್ಲಿ ಬಂಗಾರದ ಅಕ್ಷರಗಳ ಕುರಾನ್ ನೋಡಿ ಅದನ್ನು ಎಷ್ಟು ಇಷ್ಟಪಡುತ್ತಾರೆಂದರೆ, ಆ ಪುಸ್ತಕಕ್ಕೆ 8000 ರೂ. ಕೊಟ್ಟು ಖರೀದಿಸಿಯೇಬಿಡುತ್ತಾರೆ!

* * * *

ತನ್ನ ಸ್ವಭಾವದಂತೆಯೇ ಬುದ್ಧ ಧರ್ಮದ ಬಗೆಗೆ ಪೂರ್ಣ ತಿಳಿದುಕೊಳ್ಳುವವರೆಗೆ ಅವರು ಬೌದ್ಧರಾಗಲಿಲ್ಲ. ಅದರ ಬಗ್ಗೆ ಅಪಾರವಾಗಿ ಓದಿ, ಮಾಹಿತಿ ಸಂಗ್ರಹಿಸಿ, ವಿಸ್ತಾರವಾದ ಬೌದ್ಧ ಧರ್ಮದ ಸಾರವನ್ನೆಲ್ಲ ಸುಲಭ ಗ್ರಾಹ್ಯವಾಗುವಂತೆ ಸಂಗ್ರಹಿಸಿ 'ಬುದ್ಧ ಮತ್ತು ಧಮ್ಮ' ಪುಸ್ತಕ ಬರೆದು, ಅಕಸ್ಮಾತ್ ತಾನು ಬದುಕಿಲ್ಲದಿದ್ದರೆ ಅದರ ಪ್ರಕಟಣೆಗೆ ಹಸ್ತಪ್ರತಿ ಎಲ್ಲಿದೆಯೆಂದು ಹೆಂಡತಿ ಸವಿತಾಗೆ ತಿಳಿಸಿ, ನಂತರವೇ ಮತಾಂತರ ಹೊಂದುತ್ತಾರೆ. ಅವರೇ ಹೇಳುವಂತೆ 'ನಾನು ಟೆಂಟಿನ ಸೆಂಟ್ರಲ್ ಪೋಲ್ ಹಾಗೆ ನಿಂತಿದ್ದೇನೆ. ನಾನು ಇಲ್ಲವಾದದ್ದೇ ಟೆಂಟ್ ಬಿದ್ದುಹೋಗಬಾರದು. ಅದಕ್ಕಾಗಿ ಭವಿಷ್ಯದ ಜನಾಂಗವು ಸುರಕ್ಷಿತವಾಗಲು ಪರ್ಯಾಯವೊಂದನ್ನು ಕಂಡುಹಿಡಿದಿದ್ದೇನೆ. ನನ್ನ ಸ್ಥಾನದಲ್ಲಿ ಬೌದ್ಧ ಧರ್ಮ ನಿಲ್ಲಬೇಕು.'

ಉದಾತ್ತ ಆಶಯಗಳಿದ್ದರೂ ಭವಿಷ್ಯದ ದಾರಿ ಹೇಗಿರಬೇಕೆಂಬುದರ ಬಗ್ಗೆ ತನ್ನ ಅನುಯಾಯಿಗಳಲ್ಲಿ ತಲೆಯೆತ್ತಿದ್ದ ಭಿನ್ನಮತದ ಬಗೆಗೆ ಅರಿವಿದ್ದ ಅವರು 'ಟೆಂಟ್-ಸೆಂಟ್ರಲ್ ಪೋಲ್' ರೂಪಕವನ್ನು ಬಳಸಿ ಈ ಮಾತು ಹೇಳಿದ್ದರು.

* * * *


ನಿಮ್ಗಾಡೆಯವರ ಈ ಪುಸ್ತಕವು ಹೇಳುವ ದೊಡ್ಡ ನೀತಿ: ಶಿಕ್ಷಣವೆಂಬುದು ಕೇವಲ 50 ವರ್ಷಗಳ ಅಂತರದಲ್ಲಿ ಸಾವಿರಾರು ವರ್ಷಗಳಿಂದ ತರಲಾಗದ ಬದಲಾವಣೆಯನ್ನು ಹೇಗೆ ಸಾಧ್ಯಗೊಳಿಸಿತು ಎಂಬುದು. ಎರಡು ತಲೆಮಾರುಗಳ ಅಂತರದಲ್ಲಿ ಕುಟುಂಬವೊಂದರ ಆರ್ಥಿಕ-ಸಾಮಾಜಿಕ ಸ್ಥಾನಮಾನವನ್ನೇ ಬದಲಾಯಿಸಿದ್ದು ಶಿಕ್ಷಣ. ಕಿಟಕಿಯ ಹೊರಗಿನಿಂದಲೇ ಪಾಠ ಕೇಳಿಸಿಕೊಂಡು, ಪಾಸಾದ ಖುಷಿಗೆ ಮೇಷ್ಟ್ರ ಕಾಲು ಮುಟ್ಟಿ ನಮಸ್ಕರಿಸಲಾಗದ ಅಸ್ಪೃಶ್ಯ ಹುಡುಗನೊಬ್ಬ ವಿಜ್ಞಾನಿಯಾಗಿ ಹೊಮ್ಮಿದ್ದು ಶಿಕ್ಷಣವೆಂಬ ಮಾಯೆಯಿಂದಲೇ. ಅವರ ಮೂವರು ಮಕ್ಕಳು ಎಳೆವಯಸಿನಲ್ಲೇ ಅಮೆರಿಕದ ಸ್ಕಾಲರ್‌ಶಿಪ್ ಗಳಿಸಿ ಶಿಕ್ಷಣ ಪಡೆದು ಈಗ ವಿಜ್ಞಾನಿ-ವೈದ್ಯರಾಗಿದ್ದಾರೆ. ಪೂರ್ವಿಕರು ಅನುಭವಿಸಿದ್ದ ಅವಮಾನ, ಕೀಳರಿಮೆಗಳೆಲ್ಲ ಇಂದು ಅವರಿಗೆ ಇತಿಹಾಸವಾಗಿದೆ.

ಶಿಕ್ಷಣವೇ ಶಕ್ತಿ ಎಂಬ ಮಾತು ಅಕ್ಷರಶಃ ನಿಜವಾದ ಈ ಜೀವಂತ ಉದಾಹರಣೆಯು, ತಳಸಮುದಾಯಗಳಲ್ಲಿ ಶಿಕ್ಷಣದ ಹಂಬಲ ಹುಟ್ಟಿಸಿದ್ದೇ ಆದಲ್ಲಿ ನಿಮ್ಗಾಡೆಯವರ ಬರಹದ ಶ್ರಮ ಸಾರ್ಥಕವಾದಂತೆಯೇ. ಸಾಮಾಜಿಕ ನ್ಯಾಯಕ್ಕಾಗಿ ಈ 60 ವರ್ಷಗಳಲ್ಲಿ ತೆಗೆದುಕೊಂಡ ಕ್ರಮಗಳ ಹೊರತಾಗಿಯೂ ದೊಡ್ಡ ಜನಸಮುದಾಯ ಇನ್ನೂ ಅವಕಾಶ ವಂಚಿತವಾಗಿರುವಾಗ ಅಂಬೇಡ್ಕರ್ ಹಾಗೂ ಅವರ ಚಿಂತನೆಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ, ಹರಡುವ ಅವಶ್ಯಕತೆ ಇಂದು ಹಿಂದೆಂದಿಗಿಂತ ಹೆಚ್ಚಿದೆ. ಈ ನಿಟ್ಟಿನಲ್ಲಿ ಅಂಬೇಡ್ಕರ್ ವಿಚಾರಧಾರೆಯ ಪುನರಾವಲೋಕನಕ್ಕೆ ಇಂಥ ಅನುಭವ-ಆತ್ಮಕಥನಗಳು ಉಪಯುಕ್ತವಾಗುತ್ತವೆ. ●

ಕೆರೆಗೆ ಹಾರವಾದವರು ಯಾರು?


▶▶ 2

ಸಮೀಕರಣ ಗೆದ್ದಿದೆಯೇ ವಿನಃ ಬಿಹಾರದಲ್ಲಿ ಜಾತಿ ಸೋತೂ ಇಲ್ಲ, ಅಭಿವೃದ್ಧಿ ಗೆದ್ದೂ ಇಲ್ಲ. ನಗರ ಪ್ರದೇಶಗಳ ಮಧ್ಯಮ ವರ್ಗ ಹಾಗೂ ಕೆಲವು ಕಡೆ ಮಹಿಳೆಯರ ಮಟ್ಟಿಗೆ ಜಾತಿ ಮೀರಿದ ಓಟುಗಳು ಚಲಾಯಿಸಲ್ಪಟ್ಟಿರಬಹುದು. ಆದರೆ ಅದರ ಪ್ರಮಾಣ ಶೇ.3ಕ್ಕಿಂತ ಹೆಚ್ಚಿಲ್ಲ ಎಂಬುದನ್ನು ಈಗಾಗಲೇ ನೋಡಿದ್ದೇವೆ.



ಎರಡನೆಯದು ಮತ್ತು ಅತಿ ಮುಖ್ಯವಾದದ್ದು ನಿತೀಶ್ ಬಿಹಾರದ ಅಭಿವೃದ್ಧಿ ಮಾಡುತ್ತಿದ್ದಾರೆ ಮತ್ತು ಉತ್ತಮ ಆಡಳಿತ ಕೊಡುತ್ತಿದ್ದಾರೆ ಎಂಬ ವಾದ. ಅವರದ್ದು ಸಮಾಜವಾದಿ ಹಿನ್ನೆಲೆಯಾದ್ದರಿಂದ ಕರ್ನಾಟಕದ ಕೆಲವು ಸಮಾಜವಾದಿಗಳು ಸಹ "ಬಿಹಾರವನ್ನು ನೋಡಿ, ಅಲ್ಲಿ ನಮ್ಮ ಸಮಾಜವಾದಿ ಸರ್ಕಾರ ಶೇ.11ರಷ್ಟು ಅಭಿವೃದ್ಧಿ ದರವನ್ನು ಸಾಧಿಸಿದೆ. ಇದು ಕಾಂಗ್ರೆಸ್-ಬಿಜೆಪಿ-ಕಮ್ಯುನಿಸ್ಟ್ ಸರ್ಕಾರಗಳಿರುವ ರಾಜ್ಯಗಳಿಗಿಂತಲೂ ಹೆಚ್ಚು" ಎಂದೆಲ್ಲಾ ವಾದಿಸುತ್ತಿದ್ದಾರೆ. ಆದರೆ ಈ ಅಭಿವೃದ್ಧಿ ಮಾದರಿ ಏನು? ಅದು ಕಾಂಗ್ರೆಸ್-ಬಿಜೆಪಿ-ಕಮ್ಯುನಿಸ್ಟ್‌ಗಿಂತ ಹೇಗೆ ಭಿನ್ನ ಎಂಬ ಪ್ರಶ್ನೆಯನ್ನು ಹಾಕುವ ಗೋಜಿಗೆ ಯಾರೂ ಹೋಗಿಲ್ಲ. ವಾಸ್ತವದಲ್ಲಿ ಇಂದು ಯಾವುದೇ ರಾಜ್ಯದ ಯಾವುದೇ ಪಕ್ಷಗಳ ಸರ್ಕಾರ ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ ವಿಶ್ವಬ್ಯಾಂಕ್ ಪ್ರಣೀತವಾದ ಮಾರುಕಟ್ಟೆ ಪರ ಜನದ್ರೋಹಿ ಮತ್ತು ದೇಶದ್ರೋಹಿ ಅಭಿವೃದ್ಧಿ ಮಾದರಿ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ 2004ರಲ್ಲಿ ಇಂಥಾ ಅಭಿವೃದ್ಧಿ ಮಾದರಿಯನ್ನು 'ಇಂಡಿಯಾ ಶೈನಿಂಗ್' ಅಭಿವೃದ್ಧಿ ಮಾದರಿ ಎಂದು ಬಣ್ಣಿಸಿಕೊಂಡು ಇನ್ನಿಲ್ಲದಂತೆ ನೆಲಕಚ್ಚಿದ್ದು ಎಲ್ಲರೂ ತಿಳಿದ ಸಂಗತಿ.

ಹಾಗಿದ್ದಲ್ಲಿ ನಿತೀಶ್ ಕುಮಾರ್ ನೇತೃತ್ವದ ಬಿಹಾರದ ಎನ್‌ಡಿಎ ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ ಅದಕ್ಕಿಂತ ಭಿನ್ನವಾಗಿದೆಯೇ? ಬಿಹಾರ ಈ ದೇಶದ ಅತ್ಯಂತ ಹಿಂದುಳಿದ ರಾಜ್ಯ. ಬಿಹಾರದ ಶೇ.80ಕ್ಕೂ ಹೆಚ್ಚು ಗ್ರಾಮೀಣ ಜನರು ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದಾರೆ. ಶೇ.70ಕ್ಕಿಂತಲೂ ಹೆಚ್ಚು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಕೈಗಾರಿಕೆಯಲ್ಲೂ ಅತ್ಯಂತ ಹಿಂದುಳಿದಿರುವ ರಾಜ್ಯ. ಹೀಗಾಗಿ ಅಲ್ಲಿನ ನಗರಗಳಲ್ಲೂ ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಆದ್ದರಿಂದಲೇ ಲಾಗಾಯ್ತಿನಿಂದಲೂ ಬಿಹಾರದ ಕೂಲಿಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಪಂಜಾಬ್, ಹರಿಯಾಣ, ಮುಂಬೈ ಇನ್ನಿತರ ಕಡೆಗಳಿಗೆ ಕೂಲಿ ಕೆಲಸವನ್ನರಸುತ್ತಾ ವಲಸೆ ಹೋಗುತ್ತಾ ಬಂದಿದ್ದಾರೆ. ಇದಕ್ಕೆಲ್ಲಾ ಪ್ರಧಾನ ಕಾರಣ ಬಿಹಾರದ ಊಳಿಗಮಾನ್ಯ ಸಮಾಜ ರಚನೆ. ಅಂದರೆ ಬಿಹಾರದ ಸಮಾಜವನ್ನು ಮೇಲ್ಜಾತಿಗಳಿಗೆ ಸೇರಿದ ಭೂಮಾಲೀಕರು ನಿಯಂತ್ರಿಸುತ್ತಾರೆ. ಹೀಗಾಗಿ ಯಾವುದೇ ಅಭಿವೃದ್ಧಿ ಯೋಜನೆಗಳು ಇಲ್ಲಿ ಕೆಳಹಂತದವರೆಗೆ ಮುಟ್ಟುವುದೇ ಇಲ್ಲ. ಎಲ್ಲಿಯ ತನಕ ಸಮಾಜದಲ್ಲಿ ಈ ಪಾಳೆಗಾರಿ ಶಕ್ತಿಗಳು ನಾಶವಾಗುವುದಿಲ್ಲವೋ ಅಲ್ಲಿಯತನಕ ಪಂಚಾಯತ್ ರಾಜ್ ಇರಬಹುದು ಅಥವಾ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಇರಬಹುದು ಅವುಗಳು ಅಸ್ತಿತ್ವದಲ್ಲಿರುವ ಪಾಳೆಗಾರಿ ಶಕ್ತಿಗಳ ಅಧಿಕಾರವನ್ನು ಇನ್ನಷ್ಟು ಹೆಚ್ಚಿಸುತ್ತಿರುತ್ತವೆಯೇ ವಿನಃ ಅದನ್ನು ಮುರಿಯುವುದಿಲ್ಲ.



2005-09ರ ನಿತೀಶ್ ಅವಧಿಯಲ್ಲಿ ಬಿಹಾರದ ಅಭಿವೃದ್ಧಿ ದರ ಶೇ.11ಕ್ಕಿಂತಲೂ ಹೆಚ್ಚಿತ್ತು ಎಂದು ಇಂದು ಸಂಭ್ರಮಿಸಲಾಗುತ್ತಿದೆ. ಆದರೆ ಅದರಲ್ಲಿ ಶೇ. 90ರಷ್ಟು ಬಿಹಾರಿಗಳಿಗೆ ಬದುಕು ಕೊಡಬೇಕಾದ ಕೃಷಿಯ ಪಾಲೆಷ್ಟು? ಇದೇ ಅವಧಿಯಲ್ಲಿ ಕೃಷಿ ಬೆಳೆದದ್ದು ಕೇವಲ ಶೇ.4.5ರಷ್ಟು. ಕೈಗಾರಿಕೆ ಬೆಳೆದದ್ದು ಶೇ.8ರಷ್ಟು. ಎಲ್ಲಕ್ಕಿಂತ ಹೆಚ್ಚು ಬೆಳೆದಿರುವುದು ಸೇವಾ ಕ್ಷೇತ್ರ. ಅದರಲ್ಲಿ ಕಟ್ಟಡ ನಿರ್ಮಾಣ ಮತ್ತು ರಸ್ತೆ ನಿರ್ಮಾಣದ ಅಭಿವೃದ್ಧಿ ಶೇ.8ರಿಂದ ಶೇ. 35.8ಕ್ಕೆ ಜಿಗಿದಿದೆ. ಇದಕ್ಕೆ ಸಂಪೂರ್ಣ ಹಣ ಒದಗಿಸುತ್ತಿರುವುದು ಸರ್ಕಾರವೇ! ಈ ಅವಧಿಯಲ್ಲಿ ಸರ್ಕಾರವು ತನ್ನ ಯೋಜನಾ ವೆಚ್ಚದ ಶೇ.30ರಷ್ಟನ್ನು ರಸ್ತೆ ನಿರ್ಮಾಣದ ಮೇಲೆಯೇ ಖರ್ಚು ಮಾಡಿದೆ. ಇದರಲ್ಲಿ ಬಹುಪಾಲು ವೆಚ್ಚವಾಗುತ್ತಿರುವುದು ರಾಜಧಾನಿ ಪಾಟ್ನಾದ ಸುಂದರೀಕರಣಕ್ಕೆ. ನಿತೀಶ್ ಬಂದಮೇಲೆ ಪಾಟ್ನಾದಲ್ಲಿ ಹಲವು ನೂರು ಕೋಟಿ ರೂ.ಗಳ ವೆಚ್ಚದಲ್ಲಿ ರೋಡಿನ ಮೇಲೆ ಓವರ್ ಬ್ರಿಡ್ಜ್‌ಗಳನ್ನು ನಿರ್ಮಿಸಲಾಗಿದೆ. ಇದೇ ಅವಧಿಯಲ್ಲಿ 6800 ಕಿಮೀ ರಸ್ತೆಯನ್ನು ಮತ್ತು 1600 ಸೇತುವೆಗಳನ್ನು ಪುನರ್‌ನಿರ್ಮಿಸಲಾಗಿದೆ.

ಹಾಗೆಯೇ ಸರ್ಕಾರದ ಉದಾರೀಕೃತ ತೆರಿಗೆ ನೀತಿಗಳಿಂದಾಗಿ ಪಾಟ್ನಾ ಮತ್ತು ಇತರ ನಗರಗಳಲ್ಲಿ ವಿಲಾಸಿ ವಸ್ತುಗಳ ಮೇಲೆ ವೆಚ್ಚ ಮಾಡಬಲ್ಲ ಒಂದು ಕನ್ಸ್ಯೂಮರಿಸ್ಟ್ ಮಧ್ಯಮವರ್ಗ ಸೃಷ್ಟಿಯಾಗುತ್ತಿದೆ. ಇದು ಬಿಹಾರದ ಆರ್ಥಿಕತೆಯನ್ನು ಪುನರ್‌ರೂಪಿಸುತ್ತಿದೆ. ನಿತೀಶರ ಆರ್ಥಿಕತೆಯಲ್ಲಿ ಡ್ರೈವಿಂಗ್ ಸೀಟಿನಲ್ಲಿ ಕೂತಿರುವುದು ಈ ಮೇಲ್‌ಮಧ್ಯಮ ವರ್ಗವೇ ವಿನಃ ಗ್ರಾಮೀಣ ರೈತಕೂಲಿಯಲ್ಲ. ಈ ಗ್ರಾಹಕ ವರ್ಗಕ್ಕೆ ಅನುಕೂಲಕರವಾದ ಆರ್ಥಿಕ ನೀತಿಗಳನ್ನು ಜಾರಿಗೆ ತಂದಿರುವುದರಿಂದಲೇ ಇದೇ ಅವಧಿಯಲ್ಲಿ ಬಿಹಾರದಲ್ಲಿ ಖಾಸಗಿ ವಾಹನಗಳಲ್ಲಿ ಶೇ.39ರಷ್ಟು ಹೆಚ್ಚಳವೂ, ಕಮರ್ಷಿಯಲ್ ವಾಹನಗಳಲ್ಲಿ ಶೇ. 56ರಷ್ಟು ಹೆಚ್ಚಳವೂ ಕಂಡುಬಂದಿದೆ. ರೆಸ್ಟುರೆಂಟ್ ಮತ್ತು ಹೋಟೆಲ್ ಉದ್ಯಮದ ಅಭಿವೃದ್ಧಿಯ ದರ ಶೇ. 9 ಮಾತ್ರ ಇದ್ದದ್ದು ನಿತೀಶ್ ಅವಧಿಯಲ್ಲಿ ಶೇ. 18ಕ್ಕೆ ತಲುಪಿದೆ. ಪ್ರತಿ ಸಾವಿರ ಜನರಿಗೆ ಮೊಬೈಲ್ ಕನೆಕ್ಷನ್ ಇರುವವರ ಸಂಖ್ಯೆ ರಾಷ್ಟ್ರೀಯ ಸರಾಸರಿ ಶೇ. 60 ಇದ್ದರೆ ಅದು ಬಿಹಾರದಲ್ಲಿ ಮಾತ್ರ ಶೇ.94ಕ್ಕೇರಿತು. ಭಾರತಿ ಏರ್‌ಟೆಲ್‌ನ ಒಂದು ಅಂದಾಜಿನ ಪ್ರಕಾರ ಇಡೀ ಭಾರತದಲ್ಲೇ ಟಾಕ್‌ಟೈಮಿನಲ್ಲಿ ಅತಿಹೆಚ್ಚು 'ಅಭಿವೃದ್ಧಿ'ಯಾಗಿರುವುದು ಬಿಹಾರಿನಲ್ಲಿ.

ಈ ಎಲ್ಲಾ ಕಾರಣದಿಂದ ಬಿಹಾರದ ಒಟ್ಟಾರೆ ಆಂತರಿಕ ಉತ್ಪತ್ತಿಯಲ್ಲಿ ಮೊಬೈಲ್ ಸೇವೆ, ಹೋಟೆಲ್, ಕಟ್ಟಡ-ರಸ್ತೆ ನಿರ್ಮಾಣ ಇನ್ನಿತರ ಕ್ಷೇತ್ರಗಳನ್ನು ಪ್ರತಿನಿಧಿಸುವ ಸೇವಾ ಕ್ಷೇತ್ರದ ಪಾಲು 2001ರಲ್ಲಿ ಶೇ.51 ಇದ್ದದ್ದು 2008ರಲ್ಲಿ ಶೇ. 60ನ್ನು ತಲುಪಿತು. ಇದರಲ್ಲಿ ಕಟ್ಟಡ ಮತ್ತು ರಸ್ತೆ ನಿರ್ಮಾಣದ ಪಾಲು ಇದೇ ಅವಧಿಯಲ್ಲಿ ಎರಡು ಪಟ್ಟು ಹೆಚ್ಚಾಯಿತು. ಆ ಕ್ಷೇತ್ರದಲ್ಲಿ ಸರ್ಕಾರಿ ಹೂಡಿಕೆ ಹಿಂದೆಂದಿಗಿಂತ ಹೆಚ್ಚಾದದ್ದೇ ಇದಕ್ಕೆಲ್ಲ ಕಾರಣ.

ಸರ್ಕಾರಕ್ಕೆ ಈ ಹಣವನ್ನು ನೀಡಿದ್ದು ವಿಶ್ವಬ್ಯಾಂಕ್. 2007-08ರಲ್ಲಿ ರಾಜ್ಯಕ್ಕೆ 225 ಮಿಲಿಯನ್ ಡಾಲರ್ ಶರತ್ತಿನ 'ರಾಜ್ಯ ಅಭಿವೃದ್ಧಿ' ಸಾಲವನ್ನು ಮತ್ತು ಕೋಸಿ ನದಿ ಹುಚ್ಚೇರಿ ಉಕ್ಕಿ ಹರಿದಾಗ ಮತ್ತೆ 400 ಮಿಲಿಯನ್ ಡಾಲರ್ ಸಾಲವನ್ನು ಕೊಟ್ಟ ವಿಶ್ವಬ್ಯಾಂಕ್ ರಾಜ್ಯದ ಆರ್ಥಿಕತೆಯನ್ನು ಇದೇ ನಿಟ್ಟಿನಲ್ಲಿ ಬೆಳೆಸಬೇಕೆಂದು ತಾಕೀತು ಮಾಡಿತ್ತು. ಕೃಷಿಯಿಂದ ರೈತರನ್ನು ನಗರದ ಕಡೆಗೆ ವಲಸೆ ಎಬ್ಬಿಸುವ ಮತ್ತು ವೆಚ್ಚ ಮಾಡಬಲ್ಲ ನಗರದ ಮಧ್ಯಮವರ್ಗದ ಅಗತ್ಯಗಳನ್ನು ಆಧರಿಸಿ ಆರ್ಥಿಕತೆಯನ್ನು ಬೆಳೆಸುವ ಮಾರುಕಟ್ಟೆ ಪ್ರಣೀತ ವಿಶ್ವಬ್ಯಾಂಕಿನ ನೀತಿಯನ್ನು ನಿತೀಶ್ ಚಾಚೂತಪ್ಪದಂತೆ ಬಿಹಾರದಲ್ಲಿ ಪಾಲಿಸುತ್ತಿದ್ದಾರೆ.

ಆದರೆ ಇದೇ ಅವಧಿಯಲ್ಲಿ ರಾಜ್ಯದ ಆದಾಯದಲ್ಲಿ ಕೃಷಿಯ ಪಾಲು ಶೇ.13ರಷ್ಟು ಕುಸಿಯಿತು. ರಾಜ್ಯದ ಶೇ.75ರಷ್ಟು ಜನರು ಆಧರಿಸಿರುವ ಕೃಷಿ ಕ್ಷೇತ್ರದ ಆದಾಯ ಕುಸಿಯಿತು ಎಂದರೆ ರೈತನ ಬದುಕು ಬೀದಿಪಾಲಾಯಿತು ಎಂದರ್ಥ.

ಇದು ನಿತೀಶ್‌ಕುಮಾರರ ಅಭಿವೃದ್ಧಿ ಮಾದರಿ. ಗ್ರಾಮ ಬಿಹಾರದ ಪಾಳೆಗಾರಿ ಸಂಬಂಧವನ್ನು ಕಿಂಚಿತ್ತೂ ಮಾರ್ಪಡಿಸದೆ ರೈತರನ್ನು ಬರ್ಬಾದ್ ಮಾಡಿ ವಲಸೆ ಕಾರ್ಮಿಕರನ್ನಾಗಿಸುವ ನೀತಿ. ಬಿಹಾರವನ್ನು ಎನ್‌ಆರ್‌ಐಗಳ, ಮೇಲ್‌ಮಧ್ಯಮವರ್ಗದ ಸ್ವರ್ಗವನ್ನಾಗಿಸುವ ಅಭಿವೃದ್ಧಿ. ಬಡರೈತಾಪಿಯ ಸಮಾಧಿಯ ಮೇಲೆ ದೇಶದ ಮತ್ತು ವಿದೇಶದ ವಿಲಾಸಿವರ್ಗಗಳಿಗೆ ಮತ್ತು ಬಂಡವಾಳಿಗರಿಗೆ ಅಮರಾವತಿಯನ್ನು ಕಟ್ಟಿಕೊಡುವ ನೀತಿ. ಚಂದ್ರಬಾಬು ನಾಯ್ಡು, ಬುದ್ಧದೇವ ಭಟ್ಟಾಚಾರ್ಯ ಹಾಗೂ ನರೇಂದ್ರ ಮೋದಿಗಳು ಜಾರಿ ಮಾಡಿದ ಜನವಿರೋಧಿ ಅಭಿವೃದ್ಧಿಯನ್ನೇ ನಿತೀಶರು 'ಸಮಾಜವಾದದ' ಹೆಸರಲ್ಲಿ ಜಾರಿಗೆ ತರುತ್ತಿದ್ದಾರೆ, ಅಷ್ಟೆ.

ಇದನ್ನು ಅಭಿವೃದ್ಧಿ ಎನ್ನಬಹುದೇ? ಬರಲಿರುವ ದಿನಗಳಲ್ಲಿ ಬಿಹಾರದಲ್ಲೂ ಸಿಂಗೂರು, ನಂದಿಗ್ರಾಮಗಳು ಹುಟ್ಟಿಕೊಳ್ಳಲಿವೆ. ಮಾಧ್ಯಮಗಳ ಅಬ್ಬರ ಎಷ್ಟು ದಿನ ಇದನ್ನು ಮುಚ್ಚಿಡಲು ಸಾಧ್ಯ? ಅಧಿಕಾರದಲ್ಲಿರುವ ಎಲ್ಲಾ ವಾದ್ಯಗಳು ರೈತಾಪಿಗಳ ಮರಣಮೃದಂಗವನ್ನು ಬಾರಿಸುತ್ತಾ ವಿಶ್ವಬ್ಯಾಂಕಿನ ಹಾಡನ್ನೇ ಬೇರೆಬೇರೆ ದನಿಗಳಲ್ಲಿ ಹಾಡುತ್ತಿದ್ದರೂ, ಕೆಲವು ಹಿತಾಸಕ್ತಿಗಳು ಅದನ್ನೇ ಸಮಾಜವಾದದ ಸುಪ್ರಭಾತವೆಂದು ಎಷ್ಟು ದಿನ ನಂಬಿಸಲು ಸಾಧ್ಯ? ●

ಶ್ರೇಣೀಕೃತ ಸಹನಶೀಲತೆಯೇ ಅಥವಾ ಸಮಾನತೆಯ ನೆಲೆಯಲ್ಲಿ ಸಹಬಾಳ್ವೆಯೇ?

ರಾಷ್ಟ್ರೀಯ ಭಾವೈಕ್ಯತೆ, ಸದ್ಭಾವನೆ, ಸಹನಶೀಲತೆ ಮತ್ತು ಶಾಂತಿಯುತ ಸಹಬಾಳ್ವೆಯ ಕಲ್ಪನೆಗಳು ಒಂದಲ್ಲ ಒಂದು ಆಚರಣೆಯ ರೂಪದಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತಿವೆ. ಈ ಕಲ್ಪನೆಗಳು ನಮ್ಮಲ್ಲಿ ಇವೆಯೇ ಇಲ್ಲವೇ ಎಂಬ ಚರ್ಚೆಗಿಂತ, ನಮಗೆ ಈ ಕಲ್ಪನೆಗಳು ಎಷ್ಟರಮಟ್ಟಿಗೆ ಅರ್ಥವಾಗಿವೆ ಎಂಬುದನ್ನು ಸಮಾಲೋಚಿಸಬೇಕಾಗಿದೆ. ಏಕೆಂದರೆ ಯಾವುದೇ ಕಲ್ಪನೆಗಳು ಅರ್ಥವಾಗದೆ ಅವುಗಳ ಅಸ್ತಿತ್ವದ ಬಗ್ಗೆ ಚರ್ಚಿಸುವುದು ಹಿಪಾಕ್ರಸಿಯಲ್ಲದೇ ಮತ್ತೇನೂ ಅಲ್ಲ.

ಈ ಹಿನ್ನೆಲೆಯಲ್ಲಿ ನಾವಿಂದು ಕೆಲವು ಮೂಲಭೂತ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ಭಾವೈಕ್ಯತೆ ಒಂದು ಮೌಲ್ಯ, ಅದನ್ನು ರಾಷ್ಟ್ರೀಯ ಎಂಬ ಚೌಕಟ್ಟಿನೊಂದಿಗೆ ಸೇರಿಸಿಕೊಂಡು ಏಕೆ ವ್ಯಾಖ್ಯಾನಿಸಬೇಕು? ಮೌಲ್ಯಗಳಿಗೆ ಸೀಮಿತ ಚೌಕಟ್ಟುಗಳನ್ನು ಹಾಕಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ವೈಯಕ್ತಿಕ/ಜನತೆಯಾಗಿ ನಾವು ಹೇಗೆ ಸಹನಶೀಲರಾಗಿದ್ದೇವೆ? ನಮ್ಮ ಸಮಾಜೋ-ಆರ್ಥಿಕ, ರಾಜಕೀಯ ವ್ಯವಸ್ಥೆಗಳು ಹೇಗೆ ಸಹನಶೀಲವಾಗಿವೆ? ಈ ಪ್ರಶ್ನೆಗಳಿಗೆ ಚಿಕಿತ್ಸಕ ಕಣ್ಣುಗಳಿಂದ ಉತ್ತರಗಳನ್ನು ಪಡೆಯಲು ಸಾಧ್ಯವಾದರೆ, ಮೇಲ್ಕಾಣಿಸಿದ ಕಲ್ಪನೆಗಳ ಲೇಬಲ್‌ಗಳಲ್ಲಿ ನಮ್ಮ ಮನೋಭೂಮಿಕೆಯ ಮೇಲೆ ಹಾಸಿದ ಪರದೆಯನ್ನು ಕಿತ್ತೆಸೆದು ಹೊಸ ಮನುಷ್ಯರಾಗುವ ಸಾಧ್ಯತೆಗಳನ್ನು ತೆರೆಯಬಹುದು.

ನಮ್ಮ ಅರ್ಥವ್ಯವಸ್ಥೆಯನ್ನು ಅವಲೋಕಿಸಿದರೆ, ನಮ್ಮ ಸಮಾಜವು ಶ್ರೀಮಂತ ವರ್ಗ, ಭೂಮಾಲೀಕ ವರ್ಗದವರ ಪರವಾಗಿ ಹೆಚ್ಚು ಸಹನಶೀಲ, ಬಡವರ್ಗ ಸಣ್ಣ ಹಿಡುವಳಿದಾರ ಮತ್ತು ಸಣ್ಣ ಕೈಗಾರಿಕೋದ್ಯಮಿಗಳ ಪರ ಕನಿಷ್ಠ ಸಹನಾಶೀಲವಾಗಿದೆ. ಪರಿಣಾಮವಾಗಿ ನಮ್ಮ 'ಇಂಡಿಯಾ'ದಲ್ಲಿ ಪ್ರತಿ ವರ್ಷ ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ನೂರಾರು ಭಿಕ್ಷುಕರ ಸಾವು ಕನ್ನಡನಾಡಿನಲ್ಲಿ ಸಹಜಸಾವು ಎಂದು ಪರಿಗಣಿಸಲ್ಪಡುತ್ತದೆ. ಆದರೂ ಭಾರತ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಮೇಲೇರುತ್ತಿದೆ ಎಂದು ಪ್ರಭುತ್ವಗಳು ಕೊಚ್ಚಿಕೊಳ್ಳುತ್ತಿವೆ.

ನಮ್ಮ ಸಾಮಾಜಿಕ ರಚನೆಗಳ ಕಡೆ ಕಣ್ಣುಹಾಯಿಸಿದರೆ ಈ ಸಮಾಜ 'ಭೂಸುರ'ರಾದ ಬ್ರಾಹ್ಮಣರ ಪರ ಹೆಚ್ಚು, ಕೆಳಜಾತಿಗಳೆಂದು ಸೃಷ್ಟಿಸಲ್ಪಟ್ಟವರ ಬಗ್ಗೆ ಕನಿಷ್ಠ ಸಹನಾಶೀಲವಾಗಿದೆ. ಉದಾಹರಣೆಗೆ ಪುರಿಯ 'ಜಗದ್ಗುರು' ಶಂಕರಾಚಾರ್ಯ ಕೆಲವು ವರ್ಷಗಳ ಹಿಂದೆ ಅದೂ ನಾಗರಿಕ ಸಂವಿಧಾನ ರಚನೆಯಾದ ಬಳಿಕ "ಅಸ್ಪೃಶ್ಯತೆ ಹಿಂದೂ ಸಮಾಜದ ಅವಿಭಾಜ್ಯ ಅಂಗ" ಎಂದು ಪ್ರವಚನ ನೀಡಿದಾಗ ಮಾಧ್ಯಮಗಳಲ್ಲಿ ಅದು ಹೆಚ್ಚು ಪ್ರಚಾರ ಪಡೆಯಿತೇ ವಿನಃ ನಮ್ಮ ಸಮಾಜ ಮತ್ತು ಪ್ರಭುತ್ವ ಜಗದ್ಗುರುವಿನ ನಿಲುವನ್ನು ಖಂಡಿಸಲಿಲ್ಲ, ಆತನಿಗೆ ಯಾವುದೇ ಶಿಕ್ಷೆಯೂ ಆಗಲಿಲ್ಲ, ಆದರೆ ಡಾ. ಬಂಜಗೆರೆ ಜಯಪ್ರಕಾಶ್ 'ಆನುದೇವ ಹೊರಗಣವನು' ಎಂಬ ಸಂಶೋಧನೆ ಕೃತಿಯಲ್ಲಿ ಬಸವಣ್ಣ ಮಾದಾರ ಜಾತಿಗೆ ಸೇರಿದವನಿರಬಹುದು ಎಂಬ ನಿಲುವನ್ನು ವ್ಯಕ್ತಪಡಿಸಿದಾಗ ತೀವ್ರ ಅಸಹನೆ ನಮ್ಮ ಸಮಾಜದ ಮೇಲ್ವರ್ಗದಲ್ಲುಂಟಾಗಿ ಕೃತಿಯನ್ನೇ ನಿಷೇಧಿಸುವ ಮಟ್ಟಕ್ಕೆ ಹೋಯಿತು.

ಧಾರ್ಮಿಕ ನೆಲೆಯಲ್ಲಿ ನೋಡುವುದಾದರೆ ನಮ್ಮ ಸಾಮಾಜಿಕ ರಚನೆಗಳು ಬ್ರಾಹ್ಮಣ್ಯ ಪ್ರಣೀತ ಹಿಂದೂತ್ವವಾದದ ಬಗ್ಗೆ ಹೆಚ್ಚು ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಕನಿಷ್ಠ ಸಹನಶೀಲವಾಗಿದೆ. ಕ್ಷುಲ್ಲಕ ಕಾರಣಗಳಿಗಾಗಿ ಮುಸ್ಲಿಮರ ಮೇಲೆ ಸಂಸ್ಕೃತಿ ರಕ್ಷಕರ ದಾಳಿಗಳು. ಗೋಹತ್ಯೆ ನಿಷೇಧ ರಾಜಕಾರಣ..... ಮೊದಲಾದವುಗಳನ್ನು ಸಮಚಿತ್ತದಲ್ಲಿ ಗ್ರಹಿಸಿ ನೋಡಿ.

ಲಿಂಗ ಸಮಾನತೆಯ ನೆಲೆಯಲ್ಲಿ ತರ್ಕಿಸಿದರೆ, ನಮ್ಮ ಸಮಾಜಪುರುಷ ಪ್ರಧಾನ ವ್ಯವಸ್ಥೆಯ ಪರ ಹೆಚ್ಚು ಸ್ತ್ರೀ ಸಮುದಾಯದ ಪರ ಕನಿಷ್ಠ ಸಹನಶೀಲವಾಗಿದೆ. ಸಹನೆಯನ್ನು ಸ್ತ್ರೀ ಮೌಲ್ಯ ಎಂದು ಚಿತ್ರೀಕರಿಸಲಾಗಿದೆ. ಮೌಲ್ಯಗಳಿಗೆ ಸ್ತ್ರೀ-ಪುರುಷ ಎಂಬ ಲಿಂಗಭೇದವಿರಬಹುದೇ?! ಸನ್ಯಾಸಿನಿ ನಿವೇದಿತಾಳ ವಿವಾಹ ಪ್ರಕರಣ, ಕಾಸರಗೋಡಿನ ರಿಯಾನಳ ಬುರ್ಖಾ ಪ್ರಕರಣ, ಶ್ರುತಿ ಪ್ರಕರಣ ಮತ್ತು ಶುದ್ಧ ವಿಮರ್ಶೆಯಿಂದ ವಂಚಿತರಾದ ಭಾರತದಲ್ಲಿ ಅತೀ ಹೆಚ್ಚು ಓದುಗರನ್ನು ಹೊಂದಿರುವ ಜನಪ್ರಿಯ ಕಾದಂಬರಿಕಾರ ಎಂದು ಘೋಷಿಸಲ್ಪಟ್ಟ ಎಸ್.ಎಲ್. ಭೈರಪ್ಪನವರ ತೆವಲು ಅಲ್ಲ 'ಕವಲು' ಕಾದಂಬರಿ ಇವುಗಳನ್ನು ಉದಾಹರಣೆಗಳಾಗಿ ಚರ್ಚಿಸಿ ನೋಡಿ.

ನಮ್ಮ ಸಾಂಸ್ಥಿಕ ರಚನೆಗಳನ್ನು ವಿಶ್ಲೇಷಿಸಿದರೆ, ಪ್ರಭುತ್ವದ ಸಂಸ್ಥೆಗಳು ಮೇಲ್ವರ್ಗದ ಜಾತಿಗಳ ಮತ್ತು ಶ್ರೀಮಂತರ ಪರ ಹೆಚ್ಚು ಸಹನಾಶೀಲವಾಗಿದೆ. ಜಾಗತೀಕರಣ ನೀತಿಗಳ ನಂತರ ಪ್ರಭುತ್ವ ಜನಸೇವೆಯ ಹೆಸರಿನಲ್ಲಿ ಉಳ್ಳವರ ಸೇವೆಯಲ್ಲಿ ಕೃತಾರ್ಥವಾಗಿದೆ. ನಮ್ಮ ಪೊಲೀಸ್ ವ್ಯವಸ್ಥೆ ಉಳ್ಳವರ ರಕ್ಷಣೆಯೇ ಪ್ರಭುತ್ವದ ಆದ್ಯ ಕರ್ತವ್ಯ ಎಂಬ ನಲೆಯಲ್ಲಿ ಬಹುತೇಕ ಪ್ರಕರಣಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ನಮ್ಮ ಕರ್ನಾಟಕ ಘನ ಸರ್ಕಾರದ ಕ್ಯಾಬಿನೆಟ್ ಮಂತ್ರಿ ವಿರುದ್ಧ ಸುಮಾರು 9 ಸಲ ಜಾಮೀನುರಹಿತ ವಾರೆಂಟ್ ಹೊರಡಿಸಿದರೂ, ಅವರು ನಮ್ಮ ಪೊಲೀಸರ ಕಣ್ಣಿಗೆ ಕಾಣಿಸುತ್ತಿಲ್ಲವಂತೆ! ಪ್ರಾಮಾಣಿಕ ಅಧಿಕಾರಿಗಳಾಗಿರುವುದು ನಮ್ಮಲ್ಲಿ ಅಪರಾಧ ಎಂಬಂತೆ ಬಿಂಬಿತವಾಗಿದೆ. ಪ್ರಾಮಾಣಿಕರಾದ ತಪ್ಪಿಗೆ ನಿರಂತರ ವರ್ಗಾವಣೆ ಅಥವಾ ಮಾನಸಿಕ/ದೈಹಿಕ ಕಿರುಕುಳಕ್ಕೆ ಒಳಗಾಗುವುದು ಅವರುಗಳಿಗೆ ಸಹಜವಾದುದು ಎಂದು ಭಾವಿಸಲಾಗಿದೆ! ಬೇಲೆಕೇರಿ ಬಂದರಿನ ಪ್ರಕರಣದಲ್ಲಿ ಅರಣ್ಯಾಧಿಕಾರಿ ಗೋಕುಲವರನ್ನು ನೆನಪಿಸಿಕೊಳ್ಳಿ.



ಈ ಮೇಲಿನ ವಿಶ್ಲೇಷಣೆಯನ್ನು ಚೌಕಟ್ಟಾಗಿ ಭಾವಿಸಿ ನೋಡಿದರೆ, ಶ್ರೇಣೀಕೃತವಾಗಿ ಸಹನಶೀಲವಾದ ಸಮಾಜದಲ್ಲಿ ಸಹನಶೀಲತೆಯ ಬಗ್ಗೆ ಹೇಗೆ ಸಂವಾದದಲ್ಲಿ ತೊಡಗಬೇಕು? ಎಂಬ ಪ್ರಶ್ನೆ ಮುಖ್ಯವಾದುದು. ಸಮಾಜೋ ಆರ್ಥಿಕ ಸಂಪನ್ಮೂಲಗಳನ್ನು ಮತ್ತು ರಾಜಕೀಯ ಅಧಿಕಾರವನ್ನು ನಿಯಂತ್ರಿಸುವ 'ಪ್ರತಿಷ್ಠಿತ ವರ್ಗಗಳು' ಅನಾಗರಿಕರಂತೆ ನಡೆದುಕೊಳ್ಳುತ್ತ, ಸಾರ್ವಜನಿಕವಾಗಿ ತಮ್ಮನ್ನು ಸಹನೆಯ ಅವತಾರವಂತೆ ಆತ್ಮಸಾಕ್ಷಿರಹಿತವಾಗಿ ಪ್ರತಿಪಾದಿಸುತ್ತಿದ್ದಾರೆ. ಉದಾಹರಣೆಗೆ ಕೇಸರಿ ಭಯೋತ್ಪಾದನೆಯ ಮೇಲಿನ ಸಂಸತ್ತಿನ ಚರ್ಚೆಯನ್ನು ಅವಲೋಕಿಸಿ.

ಭಾರತೀಯ ಸಂದರ್ಭದಲ್ಲಿ ಸಹನಶೀಲತೆಯ ಕೊರತೆ ಮಾತ್ರ ಸಮಸ್ಯೆ ಅಲ್ಲ ಆದರೆ ಸಹನಶೀಲತೆ ಶ್ರೇಣೀಕೃತಗೊಂಡಿರುವುದು ಮೂಲ ಸಮಸ್ಯೆ ಬಡವರ ವಿರುದ್ಧದ, ಕೆಳಜಾತಿಗಳ ವಿರುದ್ಧದ ಮತ್ತು ಸ್ತ್ರೀಯರ ವಿರುದ್ಧದ ಅಸಹನೆಗಳು ನಮ್ಮಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ಅಸಹಜಗಳನ್ನು ಸಹಜ ಎಂದು ಬಿಂಬಿಸಲಾಗಿದೆ. ಆದರೆ ಕಲ್ಪಿತ ಏಕಘನಾಕೃತಿಯ (monolithic) ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧದ ಅಸಹನೆ ಬಹಿರಂಗವಾಗಿ ಮತ್ತು ಹಿಂಸಾತ್ಮಕವಾಗಿ ವ್ಯಕ್ತವಾಗುತ್ತದೆ. ಇವೆರಡು ರೀತಿಯ ಅಸಹನೆಗಳು ಏಕಕಾಲದಲ್ಲಿ ಪ್ರವಹಿಸುವುದರಿಂದ ಒಳನೋಟಕ್ಕೆ ಮಾತ್ರ ಗ್ರಹಿತವಾಗುತ್ತದೆ. ವಸಾಹತುಶಾಹಿ ಮಧ್ಯಸ್ಥಿಕೆಯ ಮೂಲಕ ಜಾತಿ ಆಧಾರಿತ ಶ್ರೇಣೀಕೃತ ಸಮಾಜ ಆಧುನಿಕತೆಯೊಂದಿಗೆ ಸಂಪರ್ಕಕ್ಕೆ ಬಂತು ಆದರೆ ಈ ಸಂಪರ್ಕ ಸಮಷ್ಟಿ ಚಿಂತನೆಯ ನೆಲೆಯಲ್ಲಿ ತೆರೆದುಕೊಳ್ಳಲಿಲ್ಲ, ಈ ಸಂದರ್ಭಗಳಲ್ಲಿ ಆಧುನಿಕತೆ ಕ್ರಾಂತಿಕಾರಿಯಾಯಿತೇ ವಿನಾಃ ಆಧುನಿಕ ಮೌಲ್ಯಗಳು ಮುಖ್ಯವಾಗಿ ನಾಗರಿಕತ್ವದ ಕಲ್ಪನೆ ಮನೋಭೂಮಿಕೆಯನ್ನು ಪ್ರಭಾವಿಸಲಿಲ್ಲ, ನಮ್ಮ ಸಮಾಜದ ಮೇಲುಜಾತಿ ಮತ್ತು ಶ್ರೀಮಂತ ವರ್ಗ ಆಧುನಿಕತೆಯ ಸಂದರ್ಭಗಳ (ಅಂದರೆ ಹೊರನೋಟದಲ್ಲಿ) ಭೌತಿಕ ಸಂಪನ್ಮೂಲಗಳನ್ನು ಹೇರಳವಾಗಿ ಏಕಸ್ವಾಮ್ಯಗೊಳಿಸಿಕೊಂಡು ಅನುಭವಿಸುತ್ತಿದ್ದಾರೆ. ಆಧುನಿಕತೆ ಪ್ರತಿಪಾದಿಸುವ ಮೌಲ್ಯಗಳನ್ನು ಮನೋಭೂಮಿಕೆಯಲ್ಲಿ ಆಂತರೀಕರಣ (ಇಂಟರ್ನಲೈಝೇಷನ್) ಗೊಳಿಸಿಕೊಳ್ಳಲಿಲ್ಲ, ಅವರು ಸಂದರ್ಭಗಳಲ್ಲಿ ಹೆಚ್ಚು ಆಧುನಿಕರಾದರು ಮತ್ತು ಮನೋಭೂಮಿಕೆಯಲ್ಲಿ ಹೆಚ್ಚು ಶ್ರೇಣೀಕೃತಗೊಂಡರು. ಪರಿಣಾಮ ನಾಗರಿಕ ಮನುಷ್ಯತ್ವದಿಂದ ಅವರು ದೂರವಾದರು.

ಆಧುನಿಕತೆಯ ಸತ್ವವೇ ವೈಜ್ಞಾನಿಕ ದೃಷ್ಟಿಕೋ ಇವು ಕೆಳಸ್ತರದಿಂದ ಬಂದ ಮಾನವತಾವಾದಿಗಳ ಜ್ಯೋತಿಬಾ ಫುಲೆ, ನಾರಾಯಣಗುರು, ಅಂಬೇಡ್ ಪೆರಿಯಾರ್ ಮೊದಲಾದವರಲ್ಲಿ ಮೂಡಿತು. ಪ್ರಸ್ತು ದೇಹಗಳಿಗೆ ಆಧುನಿಕತೆ ಬಂದಿದೆ, ಮನಸ್ಸುಗಳಿಗೆ ಆಧುನಿ ಬರಲು ಯಾವ ರೀತಿಯಲ್ಲಿ ನಾಗರಿಕ ಸಮಾಜ ಕ್ರಿಯಾ ಶೀಲವಾಗಬೇಕು ಮತ್ತು ಜೀವವಿರೋಧಿ ಸಾಂಪ್ರದಾಯಿ ಮನೋಭೂಮಿಕೆಯನ್ನು ಭಗ್ನಗೊಳಿಸಿ ಜೀವ ಪ್ರೇಮಿ ಮನೋಭೂಮಿಕೆಯನ್ನು ಹೇಗೆ ಮರುಸೃಷ್ಟಿಸಬೇ ಎಂಬುದನ್ನೇ ನಮ್ಮ ಮುಂದಿರುವ ಮೂಲಭೂ ಸವಾಲು.


ವಿಮರ್ಶಾತ್ಮಕ ಜನತಾಂತ್ರಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದರ ಮೂಲಕ, ಸಾಂದರ್ಭಿಕ ಆಧುನಿಕತೆಯ ಮರೆಯಲ್ಲಿರುವ ಶ್ರೇಣೀಕೃತ ಮನೋಭೂಮಿಕೆಗಳನ್ನು ಎಲ್ಲಾ ನೆಲೆಗಳಲ್ಲೂ ಸಾಂವಿಧಾನಿಕ ಮಾರ್ಗಗಳ ಮೂಲಕ ಬಲವಾಗಿ ಬಹಿರಂಗೊಳಿಸಬೇಕು. ಆಧುನಿಕತೆಯನ್ನು ಅದರ ಮಾರುಕಟ್ಟೆಯ ತರ್ಕಕ್ಕೆ ಬದಲಾಗಿ ಮೌಲ್ಯಗಳ ನೆಲೆಯಲ್ಲಿ ಆಕರ್ಷಕಗೊಳಿಸಬೇಕು. ಎಲ್ಲಾ ಧರ್ಮಗಳಲ್ಲಿರುವ ಫ್ಯಾಸಿಸ್ಟ್ ಧೋರಣೆಗಳನ್ನು ಏಕಕಾಲದಲ್ಲಿ ಖಂಡಿಸುತ್ತಾ ಒಟ್ಟಂದದ ನೆಲೆಯಲ್ಲಿ ಆಧುನಿಕ ಸಮಾಜವನ್ನು ಮರುರಚಿಸುವ ಸಂಕ್ರಮಣ ಕಾಲದಲ್ಲಿ ನಾವಿದ್ದೇವೆ. "ಸಹೋದರತೆಯಿಲ್ಲದೆ ರಾಷ್ಟ್ರವಿಲ್ಲ" ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ರಚನೆಗಳು ಬದಲಾಗದೆ ಭಾವೈಕ್ಯತೆ, ಸಹನಶೀಲತೆ ಸದ್ಭಾವನೆ ಮೊದಲಾದ ಕಲ್ಪನೆಗಳ ಬಗ ಮಾತನಾಡುವುದು ಹಸಿದವನ ಮುಂದೆ ಧಾರ್ಮಿಕ ಪ್ರವಚನ ನೀಡಿದಂತೆ. ಜನತಾಂತ್ರಿಕ ಮನಸ್ಸಿನ ದಾರ್ಶನಿಕ ರೂಸೋರವರ ಮಾತುಗಳು ಈ ಸಂದರ್ಭದಲ್ಲಿ ಮಹತ್ವಪೂರ್ಣವಾಗಿವೆ, "ಸ್ವಾತಂತ್ರ್ಯವಿಲ್ಲದೇ ದೇಶಪ್ರೇಮವಿಲ್ಲ, ಸದ್ಗುಣವಿಲ್ಲದೆ ಸ್ವಾತಂತ್ರ್ಯವಿಲ್ಲ, ನಾಗರಿಕರಿಲ್ಲದೆ ಸದ್ಗುಣವಿಲ್ಲ, ನಾಗರಿಕರನ್ನು ಸೃಷ್ಟಿಸಿದರೆ ನಮಗೆಲ್ಲವೂ ಲಭಿಸಿದಂತೆ, ನಾಗರಿಕರಿಲ್ಲದಿದ್ದರೆ, ರಾಜ್ಯದ ಆಡಳಿತಗಾರರಿಂದ ಹಿಡಿದು ಕಟ್ಟಕಡೆಯ ವ್ಯಕ್ತಿಯವರೆಗೆ ಚಾರಿತ್ರ್ಯ ಗುಣಗಳಲ್ಲಿ ಕೀಳಾದ ಗುಲಾಮರು ಮಾತ್ರ ಉಳಿಯುತ್ತಾರೆ."

ಭಾರತವನ್ನು ರಾಷ್ಟ್ರವೆಂಬ ಸೀಮಿತ ಚೌಕಟ್ಟಿನಲ್ಲಿ ಬಂಧಿಸುವ ಬದಲು ನಾಗರಿಕತೆ ಎಂಬ ವಿಶಾಲ ನೆಲೆಯಲ್ಲಿ ಮುಕ್ತಗೊಳಿಸಲು, ಭಾರತೀಯ ನಾಗರಿಕರೆಲ್ಲರೂ ತಮ ಅನನ್ಯತೆಗಳನ್ನು ಉಳಿಸಿಕೊಂಡು ಒಂದಾಗಬೇಕು. ಪ್ರೀತಿಯ ಗಂಗೆ ಅಂತರಂಗದ ಕಣಿವೆಯಲ್ಲಿ ಹರಿಯಬೇಕು ಸಮಾನತೆಯ ನೆಲೆಯಲ್ಲಿ ಸಹಬಾಳ್ವೆ ಸಾಕಾರಗೊಳ್ಳಬೇಕು

ವಿದ್ಯಾಧರ ರೈ ಎಂ.ಆರ್. ಮಡಿಕೇರಿ ಮತ್ತು
ಐವನ್ ಎಫ್. ಲೋಬೋ, ಪುತ್ತೂರು

ಪರದೆಯ ಹಿಂದೆ

ದರ್ಗಾದ ಎರಡು ಘನ ಗಂಭೀರಮೀನಾರುಗಳ
ಮುಂದೆ ಸಾಲು ಸಾಲು ಮನೆಗಳು
ಬಾಗಿಲಿಗೆ ಕಟ್ಟಿದ ಗೋಣಿ ತಟ್ಟಿನ ಪರದೆಗಳು
ಬಣ್ಣಗಳಿಲ್ಲ ಚಿತ್ತಾರಗಳಿಲ್ಲ, ಭಣಗುಟ್ಟುವ
ಗೋಣಿಚೀಲದ ತಟ್ಟುಗಳು ಅವಳ ಬದುಕಿನ
ಬಣ್ಣವನ್ನು ಸಾರಿ ಸಾರಿ ಹೇಳುತ್ತಿದ್ದವು.
ಹಬ್ಬ ಹುಣ್ಣಿಮೆ ಬಂದಾಗ ಒಳಬಾಗಿಲಿಗೆ
ಅಮ್ಮಿ ಕಟ್ಟುತ್ತಿದ್ದಳು ಕಸೂತಿ ಹಾಕಿದ
ಚಿತ್ತಾರದ ರಂಗುರಂಗಿನ ಬಾಗಿಲ ಪರದೆಗಳು
ಅದಕ್ಕೆ ಇಳಿಬಿಟ್ಟ ಬಣ್ಣ ಬಣ್ಣದ ಕುಚ್ಚುಗಳು
ನಾನೂ ಕ್ರೋಶಾದಲಿ ಹೆಣೆದಿದ್ದೆ
ಹಲವು ಬಣ್ಣದ ದಾರಗಳ ಚಿತ್ತಾಕರ್ಷಕ ಪರದೆ



ನನಗೇನು ಗೊತ್ತಿತ್ತು ಮುಂದೊಂದು ದಿನ
ಈ ಪರದೆಯೇ ನನ್ನ ಮುಖಕ್ಕೆ
ಮರೆ ಮಾಡುವ ನಖಾಬ್ ಆಗುತ್ತದೆ ಎಂದು?
ಮೊದಲ ಬಾರಿ ಈ ಹಿಜಾಬು ಧರಿಸಿದಾಗ
ಶಕೆಯಿಂದ ಸಿಡಿಮಿಡಿಸಿ ತಲೆ ಸುತ್ತು ಬಂದು
ನನಗರಿವಿಲ್ಲದಂತೆಯೇ ಕಿತ್ತು ಬಿಸಾಕಿದ್ದೆ,
ಬುದ್ಧಿ ಹೇಳಿದ ಬಂಧು ಬಾಂಧವರು
ಇದು ನಮ್ಮ ಧರ್ಮದ ಪವಿತ್ರ ಉಡುಪು
ಇದು ಅಲ್ಲಾಹ್‌ನಿಗೆ ಸುತಾರಾಂ ಇಷ್ಟವಿಲ್ಲ,
ನನ್ನ ಮತ್ತೇ ಪರದೆಯ ಹಿಂದೆ ದೂಡಿದರು.
ಬುರ್ಖಾದ ಜಾಳಿಗೆ ನನ್ನ ಕಣ್ಣನ್ನು ಮುಚ್ಚಿದಾಗ
ಇಡೀ ಲೋಕವೇ ಕಪ್ಪಾಗಿ ಕಂಡಿತ್ತು ನನಗೆ
ಸಾಕಿದ ಬೆಕ್ಕು, ನಾಯಿಗಳಿಗೆ ಹೋಗಲಿ,
ಶಾಲೆಯ ಸೀತೆಗೂ ನಾನು ಅಪರಿಚಿತಳಾಗಿದ್ದೆ,
ಆಗ ಸಹಚರರೆಲ್ಲ ದೂರವಾದಂತೆ ಭಾಸವಾಗಿತ್ತು,
ನನ್ನ ಜಗತ್ತಿನಲ್ಲಿ ಕತ್ತಲಾವರಿಸಿದಂತಾಗಿತ್ತು,
ಪರದೆ ನನ್ನ ಸುತ್ತಲೂ ಬೇಲಿ ತನ್ನಷ್ಟಕ್ಕೇ ನಿರ್ಮಿಸಿತ್ತು,
ರಕ್ಷಣೆಯ ಪಹರೆಯಲಿ ಕ್ರೂರ ಕನಸಿನ ಗೋಡೆ
ಸುಟ್ಟು ಕರಕಲಾಗಿ, ಲೋಕವೇ ಕಪ್ಪಾಗಿ ಕಮರಿತ್ತು,
ಬೇಸಿಗೆ ಬಿಸಿಲಿಗೆ ಬೆವರಿನ ತೊಪ್ಪೆಯಾಗಿ
ಯಮಯಾತನೆಗೆ ಉಸಿರುಗಟ್ಟುವ ಹಿಂಸೆಯಾಗಿತ್ತು,
ಪಹರೆ ಗೋಡೆಗಳ ಮಧ್ಯೆ ಚಹರೆ ಮುಸುಕಿನಲಿ
ಬುರ್ಖಾ ಹೊದ್ದು ಮಾಂಸದ ಮುದ್ದೆಯಾಗಿದ್ದೆ,
ಜೀವಪೋಷಕ ಧಾತುವಿನ ಸತುವು ನಾನು
ಪೋಷಿಸಬಲ್ಲೆ ಲೋಕವನು ಸಾಯಿಸಲು ತಿಳಿದಿಲ್ಲ,
ಜೀವನದಿಯಾಗಿ ಹರಿದು ತಪ್ತ ಆತ್ಮಗಳಿಗೆ
ತಂಪನ್ನೆರೆದು ಅಮೃತ ಸಿಂಚನಗೈದವಳು ನಾನು,
ಶತಮಾನಗಳಿಂದ ಕಾದು ಕೆಂಪಾದ ಧರೆಗೆ
ಮಳೆಯ ಸಿಂಚನವಾಗಿ ತಣ್ಣಗಾಗಿಸಿದವಳು.
ನನಗೆ ಗೊತ್ತಿದೆ ಬದುಕುವುದು ಹೇಗೆಂದು
ನಿರ್ಬಂಧಗಳ ಸರಹದ್ದು ಮೀರುವುದು ಹೇಗೆಂದು.

• ಡಾ. ಕೆ.ಷರೀಫಾ

ಕಿವಿ ಕಿತ್ತು ಮೂಗರುಕರ ಸುದ್ದಿ ಮಾತಾಡದೇ ಬ್ಯಾಡ ಬಿಡ್ಲ

ಬಿಸಿಲು ಹಿತವಾಗುವ ಕಾಲ ಕಾಲಿಕ್ಕಿತು. ಇನ್ನೇನು ...ಲ ಕುಯ್ಯಬೇಕು, ಮೆದೆ ಹಾಕಬೇಕು, ಕಣಮಾಡ ...ಕೆಂಬ ರೇಜಿಗೆ ಕೆಲಸಗಳ ಬಗ್ಗೆ ಯೋಚಿಸಬೇಕಿತ್ತು, ...ವೆಲ್ಲವನ್ನು ಸಂಭ್ರಮದಿಂದ ಮಾಡುವ ಕಾಲ ಹೊರಟು ...ೋಗಿ, ಎಲ್ಲವನ್ನೂ ಬಲವಂತವಾಗಿ ಮಾಡಬೇಕಿತ್ತು, ...ದೇನಾದರೂ ಆಗಲಿ, ಇತ್ತೀಚೆಗೆ ತರಿದ ಮಳೆಗೆ ಸಿಕ್ಕಿದ ...ಗಿ ತೆನೆ ಮೊಳಕೆ ಬಂದಿದ್ದವು. ಅಂತ ರಾಗಿ ಕೂದು ...ದೆ ಹಾಕುವುದೂ ಒಂದೆ, ದನಗಳಿಗೆ ಹಾಕುವುದೂ ...ಂದೇ ಎಂದು ಕಾಳಮಾವ ಯೋಚಿಸುತ್ತಿದ್ದಾಗ ಕುಚೋದ್ಯ ...ಗಿ ನಗಾಡಿದ ಸೀರ,

...ಬ ಯ ಲು ಸೀ ಮೆ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಎಡೂರಪ್ಪ ದ್ಯಾವೇಗೌಡನ ಆಸ್ತಿ ಅಳಿಯಕ್ಕೆ ...ಂಟಿದ್ದನಂತೆ" ಎಂದ.

"ಆಸ್ತಿ ಆಳಿಯದಕಿಂತ ಅವುನ ಕೂದ್ಲ ಒಂದೊಂದೇ ...ತಗಂಡು ಕೂತಗಳ್ಳಿ. ನಿನಿಗೇನು ಸುಂಕಿರ್ಲ ಅತ್ತಗೆ" ...ಂದ ಕಾಳಮಾವ.

"ಅದೂ ತಾನು ಸಿಗಾಯ್ಕಂಡನಲ್ಲ ಅದ್ಕೆ ಅವುರ್ನೂ ...ಗಸನ ಅಂತ ವಂಟಿರಬೇಕು."

"ಅವುನು ಸೇಡಿನ ರಾಜಕಾರಣಿ ಕಣೊ ಸೀರ ಮಾವ. ...ೇಡು ಮಡಿಕಂಡಿರೊ ಮನ್ಸ ನೆಮ್ಮದಿಯಾಗಿರಕ್ಕಾದತೆ, ...ಳ್ಳೆ ಕ್ಯಲಸ ಮಾಡಕ್ಕಾದತೆ" ಎಂದ ಉಗ್ರಿ.

"ಬ್ಯಾರೆ ಮಾತಾಡಿರ್ಲ ಅತ್ತಗೆ" ಎಂದ ಕಾಳಮಾವ.

"ಕುಮಾರಸ್ವಾಮಿ ಇಟಗಂಡಿದ್ದೋಳು ಮಗ ಎತ್ತಿಗಂಡು ...ಮನಿಗೆ ಬಂದ್ಲಂತೆ ಕಣಮಾವ. ಮಗಂತೂ ಕುಮಾರಸ್ವಾಮಿ ...ಾಯಿಲಿ ಬಿದ್ದಂಗದೆ" ಎಂದಳು ಜುಮ್ಮಿ.

"ಕುಮಾರಸ್ವಾಮಿ ಯಾರ್ನ ಇಟಗಂಡಿದ್ದ?"

"ರಾಧಿಕೆ ಅಂತ ಸಿನುಮ ಆಗುಟ್ರ ಮಡಿಕಂಡಿದ್ನಂತೆ. ...ವುಳು ಬಸುರ್ಯಾದ ಮ್ಯಾಲೆ ತಾಳಿ ಕಟ್ಟಿದ್ನಂತೆ. ಈಗ ...ಣ್ಣುಮಗಾಗ್ಯದೆ ಕಣಮಾವ."

"ಅದ್ಯಾವಾಗ ಮಡಿಕಂಡಿದ್ದಾ? ಇಂತ ಸುಳ್ಳುನೂ ...ಹೇಳ್ತರೇನ್ಲೆ?"

"ಮುಕ್ಯಮಂತ್ರಿಯಾದನಲ್ಲಾ ಆಗ ಮಡಿಕಂಡಿದ್ದನಂತೆ. ...ಈ ಉಗ್ರಿ ಆಗ ಬಂದು ಹೇಳತಿದ್ರೆ ನೀನು ನಂಬಲೇಯಿಲ್ಲ, ...ನಾವ್ಯಲ್ಲ ದ್ಯಾವೇಗೌಡನ ಮಕ್ಕಳ ಮ್ಯಾಲೆ ವಟ್ಟೆ ಕಿಚ್ಚಿಗೆ ...ಮಾತಾಡ್ತಿವಿ ಅಂತಿದ್ದೆ ನೀನು. ಈಗ ಮಗಿನ ಸಮೇತ ...ಂದವುಳೆ ಗೊತ್ತೆ?"

"ನಿಜವೇನ್ಲ ಉಗ್ರಿ?"

"ಊ ಕಣ ಮಾವ. ಕದ್ದುಮುಚ್ಚಿ ಬಾಳದ್ಯಾಕೆ ಅಂತ ...ಅವುಳೆ ಬಂದು ಹೇಳಿಕಂಡವುಳೆ. ಅಂತೂ ಕುಮಾರಣ್ಣನಿಗೀಗ ...ಇಬ್ಬರೆಡ್ತಿರು."

"ಏನೆ ಆಗ್ಲಿ ಇಂತವ್ಯಲ್ಲ ಕೇಳಕ್ಕೆ ಹೇಸಿಗಾಯ್ತದೆ ಕಂದ್ಯ. ...ಅವುನಿಗಿರೋ ಹೆಡತಿ ಏನಾಗಿದ್ಲಪ್ಪ? ಕೈತ್ವಳಕಂಡು ...ಮುಟ್ಟಂಗವುಳೆ. ಅಂತ ಹೆಡತಿ ಬುಟ್ಟು ಸಿನುಮಾದೊಳ ...ಟಗಂಡ ಅಂದ್ರೆ ಏನೇಳನಾ?"

"ಅಂತಾ ದ್ಯಾವೇಗೌಡ್ನೆ ಸುಮ್ಮನಾದ. ನಿನಿಗೇನು ಬುಡು ಹೋಗಲತ್ತಗೆ."

"ಬುಡದೆ ಇನ್ನೇನು ನಾನು ತಂದು ಸ್ವಸೆ ಮಾಡಿಕಳಕ್ಕಾದತ್ತಾ, ಅದಲ್ಲ ನಾನೇಳದು. ಬ್ಯಾರೆ ಜನಕೆ ಬುದ್ದಿ ಹೇಳಬೇಕಾದ್ರೆ ನಿಂದು ನ್ಯಟ್ಟಗಿರಬೇಕು ತಾನೆ?"

"ನ್ಯಟ್ಟಗಿರೊವತ್ತಿಗೆ ಹಿಂಗಾದುದ್ದು, ರಾಜಕಾರಣದಲ್ಲಿ ಯಲ್ಲವನೂ ಅಂಗೆಯಿರದು. ಯಲ್ಲಾರು ಮಡಿಕಂಡಿರತರೆ. ಇವುನು ಮದಿವಾದ ಅಷ್ಟೆಯ."

"ಅದ್ಯಾರು ಮಡಿಕಂಡಿದ್ದರ್ಲ?" ಎಂದಳು ಜುಮ್ಮಿ.

"ಯಾರು ಮಡಿಕಂಡಿಲ್ಲ ಅಂತ ಕೇಳೇ ಮೂರ್ನಾಕೆಸರೇಳಬವುದು. ಆದ್ರೆ ಯಾವತ್ತಿನ ಕಾಲ್ದಲ್ಲೂ ಇದ್ಯಲ್ಲ ಇದ್ದಿದ್ದೆಯಾ. ಅಧಿಕಾರ ಬಂದೇಟಿಗೆ ಆದರ ಬಡಕ ಜನ ಹತ್ರಕೆ ಬತ್ತರೆ, ಬೇಕಾದೊಟು ದುಡ್ಡಿರತದೆ, ಏನು ಬೇಕಾದ್ರು ಮಾಡ್ತರೆ, ಎಲ್ಲಿ ಬೇಕಾದ್ರು ಇದ್ದು ಬತ್ತರೆ. ಅವುರ ಕತೆ ಒಂದೊಂದಲ್ಲ" ಎಂದ ಉಗ್ರಿ.

"ಬುಡಿರ್ಲ ಆ ಸುದ್ದಿಯಾ" ಎಂದ ಕಾಳಮಾವ ರೋಸಿದವನಂತೆ.

"ಯಾವ ಸುದ್ದಿ ಬುಡಬೇಕು ದ್ವಡಪ್ಪ? ಸುದ್ದಿ ಬುಟ್ಟು ಸೈಲೆಂಟಾಗಿ ಕುತಗಳಕ್ಕಾಯ್ತದಾ ನೀನೇ ಹೇಳು" ಎನ್ನುತ್ತಾ ವಾಟಿಸ್ಗೆ ಬಂದ.

"ಕುಮಾರಣ್ಣ ಕಟಗಂಡಿರೋಳ ಸುದ್ದಿ ಮಾತಾಡ್ತಾಯಿದ್ದೊ ಕಂದ್ಯ."

"ಅದು ಹಳೆ ಮ್ಯಾಟ್ರು ಕಣಕ್ಕ, ಹೊಸದೇನಾರ ಇದ್ರೆ ಹೇಳಿ."

"ಕೈ ತ್ವಳಕಂಡು ಮುಟ್ಟಂಗಿರೊ ಅನಿತಕ್ಕ ಇದ್ರುವೆ ಇಂಗೆ ಮಾಡಿಕಂಡನಲ್ಲಾ ಅಂತ ಕಾಳಮಾವ ಬೇಜಾರಾಗ್ಯವುನೆ."

"ಬೇಜಾರಾಗಬ್ಯಾಡ ದ್ವಡಪ್ಪ, ಇಟೀಸ್ ಕಾಮನ್. ಅನಿತಕ್ಕ ಈಗ ಎಮ್ಮೆಲ್ಲೆ, ಯಾವಾಗ್ಲು ಜನಗಳ ಪ್ರಾಬ್ಲಂ ಬಗ್ಗೆ ತಲೆ ಕೆಡಿಸಿಗಂಡು ಕುಂತಿರತಳೆ. ಅಲ್ಲಿಗೆ ನಮ್ಮ ಕುಮಾರಣ್ಣ ಹೋಗಕ್ಕೆ ಬರದಿಲ್ಲ, ಅದ್ಕೆ ಬ್ಯಾರೆ ಯವಸ್ಥೆ ಮಾಡಿಕಂಡ. ಅನಿತಕ್ಕನೇ ಸುಮ್ಮನಿರುವಾಗ ನಿಮ್ಮದೇನು ಅಬಜಕ್ಶನ್ನು?"

"ಇವುನು ಗ್ರಾಮ ವಾಸ್ತವವ್ಯೂ ಮಾಡ್ತನೆ ಅಂತ ನಾವು ಸುಮ್ಮನಿದ್ರೆ, ಇವುನು ಸರಿಯಾದ ವಾಸ್ತವ್ಯನೆ ಮಾಡ್ಯವುನೆ ಬುಡು" ಎಂದ ಸೀರ.

"ಚಿಗಪ್ಪ ನೀನು ಕೂಡ ಮನೇಲಿ ಸರಿಯಾಗಿ ಮನಗತಿದ್ದೊನಲ್ಲ, ಆದ್ರು ಕುಮಾರಣ್ಣನ ವಾಸ್ತವ್ಯದ ಬಗ್ಗೆ ಆಡಿಕತ್ತಿ."

"ಆಡಿಕಳದೆ ಕಂದ್ಯ. ರಾಜ್ಯಭಾರ ಮಾಡಪ್ಪ ಅಂತ ನಾವಂದ್ರೆ ರಾಧಿಕನ ಮಡಿಕಂಡ್ರೆ ಆಡಿಕಳದೆ ಇನ್ನೇನು ಮಾಡಕ್ಕಾಯ್ತದೆ. ಅಂತೂ ದ್ಯಾವೇಗೌಡ ಮಕ್ಕಳಿಗೆ ವಳ್ಳೆ ಬುದ್ಧಿ ಕಲಿಸಲಿಲ್ಲ."

"ನೀನು ಕಲಿಸಿದ್ದಿಯ ಚಿಗಪ್ಪ? ನಿನ್ನ ಮಕ್ಕಳು ಹಾಳು ಮಾಡಿರೋರ ಪಟ್ಟಿ ಹೇಳ್ಳೆ?"

"ನಿನ್ನಂಥೋನು ಇನ್ನೇನು ಮಾತಾಡ್ತಿಲಾ."

"ಇನ್ನೇನು ಮಾತಾಡನ ಚಿಗಪ್ಪ, ಈ ವಾರದಲ್ಲಿ ಯರಡು ಸೆಕ್ಸ್ ಸ್ಕ್ಯಾಂಡಲ್ ವರಿಕೆ ಬಿದ್ದವೆ. ಅದ್ನೆ ಮಾತಾಡನ ತಗೊ."

"ಇನ್ನೊಂದ್ಯಾವುದ್ನ?"

"ನಮ್ಮ ನಿತ್ಯಾನಂದ ಸ್ವಾಮಿಜಿದು ಕಣಕ್ಕ. ಆ ಮುಂಡೆ ಮಗ ಆಶ್ರಮಕ್ಕೆ ಬಂದೋರ್ಯಾರ್ನು ಬುಟ್ಟಿಲ್ಲವಂತೆ. ಕೊಸರಾಡಿದ್ರೆ ಮೋಕ್ಸ ಸಿಗತದೆ ಸುಮ್ಮನಿರು ಅನ್ನೋನಂತೆ. ಅಂತೂ ಅವುನಿಗೂ ಒಂದು ಮೋಕ್ಷ ಸಿಗಂಗೆ ಕಾಣ್ತದೆ."

"ಅವುನಿನ್ನಂತಾ ಕಳ್ಳ ಸ್ವಾಮಿನ್ಲ?"


"ಆ ಕಳ್ಳ ಸ್ವಾಮಿ ಬಂದು ಕೇಳಿದೇಟಿಗೆ ಭೂಮಿ ಕೊಡ್ತರೆ, ಆಶ್ರಮ ಕಟ್ಟಿ ಕೊಡ್ತರೆ, ಕರದೇಟಿಗೆ ಹೋಗಿ ಮನಿಕತ್ತರೆ. ಈ ಕರ್ನಾಟಕದವುಕೆ ಏನಾಗ್ಯದೆ ಅಂತಿನಿ?"

"ಏನೂ ಆಗಿಲ್ಲ ಕಣೊ ಉಗ್ರಿ, ಎಡೂರಪ್ಪನಂಥೋನು ಮುಖ್ಯಮಂತ್ರಿಯಾಗಿರುವಾಗ ಇಂತವ್ಯಲ್ಲ ನ್ಯಡಿಲೇಬೇಕು."

"ಅಂಗಂತಿಯಾ?"

"ಎಸ್. ಅವುನು ಬಂದಾಗ್ಲಿಂದ ಒಂದಾದ ಮ್ಯಾಲೆ ಒಂದರಂಗೆ ಏನಾರ ನ್ಯಡಿತ್ಲೇ ಇರತವೆ. ಎಡೂರಪ್ಪ ಮೂಲತಃ ದಾರಿ ತಪ್ಪಿದೋನು. ಮತ್ತೆ ತಲೆಕೆಟ್ಟೋನು. ಅಂಥೋನು ಇರುವಾಗ ಪಾಪ ಸಂತೋಷ ಹೆಗ್ಡೆ ಸರಿಯಾಗಿ ಕ್ಯಲಸ ಮಾಡಕ್ಕಾಯ್ತದೇನೊ?"

"ಪಾಪ ಅವುರು ಈ ಭ್ರಷ್ಟ ಜನಗಳ ಸವಾಸನೆ ಬ್ಯಾಡ ಅಂತೂ ರಾಜೀನಾಮೆ ಕೊಟ್ಟು ಮನಿಗ್ವಂಟಿದ್ರು. ಅಂಥೊರ ತಿರಗ ಹಿಡಕಂಡು ಬಂದು ನ್ಯಾಯಾಧೀಶನ ಕುರ್ಚಿ ಮ್ಯಾಲೆ ಕುಂದ್ರಿಸಿ ತಿರಗ ನಾವು ಮಾಡದ್ನ ಮುಂದುವರೆಸ್ತಿವಿ ಅಂದ್ರೆ ಅವರಿಗವುಮಾನಲ್ಲವೆ?"



"ಸಂತೋಸ್ ಹ್ಯಗಡೆ ಅಂದ್ರೆ ಅವುರ್ಯಾರ್ಲ?" ಎಂದಳು ಜುಮ್ಮಿ.

"ಅವುರ್ಯಾರು ಅಂದ್ರೆ ಏನೇಳನಪ್ಪ ಈಗ. ಅವುರು ರಾಜಕೀಯದ ಕಳ್ರನ್ಯಲ್ಲ ಹಿಡಿಯೋ ಅಧಿಕಾರಿ ಕಣಕ್ಕ. ಈ ಸರಕಾರಿ ಜನ, ಆಮ್ಯಾಲೆ ರಾಜಕಾರಣಿಗಳು ಹಗಲುರಾತ್ರಿ ಕ್ವಳ್ಳೆ ಹ್ವಡದು ಗುಡ್ಡೆ ಹಾಕಿರತರೆ. ಅದ ಪತ್ತೆಹಚ್ಚಿ ಕಿತಗಂಡು ಸರಕಾರದ ಖಜಾನಿಗೆ ಜಮಾ ಮಾಡ್ತರೆ. ಆದ್ರೆ ಕಳ್ಳತನ ಮಾಡಿದೋರ್ನ ಏನೂ ಮಾಡದಿಲ್ಲ."

"ಅದ್ಯಾಕ್ಲ?"

"ಯಾಕೆ ಅಂದ್ರೆ ಅಂಥ ಪವರ್‌ನೆ ಕೊಟ್ಟಿಲ್ಲ ಅವ್ರಿಗೆ. ಅಂಗೇ ನೋಡಿದ್ರೆ ಅವರಿಗೆ ಯಾವ ಪವರ್‌ನೂ ಕೊಟ್ಟಿಲ್ಲ ಕಣಕ್ಕ. ಪರೆಗ್‌ಜಾಂಪಲ್ ಬಳ್ಳಾರಿಲಿ ಕ್ವಳ್ಳೆ ಹ್ವಡಿಯೋ ಕಬ್ಬಿಣದ ಪುಡಿ ತಗಂಡೋಗಿ ಕಾರವಾರತ್ರ ರಾಶಿ ರಾಶಿ ಹಾಕಿದ್ರು. ಅದ ಎಡೂರಪ್ಪ ಚೀಣಾ ದೇಶ, ಪಾಕಿಸ್ತಾನಕ್ಯಲ್ಲ ಮಾರಿಕಂಡ. ಅದ ಈ ಹ್ಯಗಡೆ ಪತ್ತೆಹಚ್ಚಕ್ಕೆ ಅಂತ ಹೋದ್ರೆ ಯಗಡೆನೆ ರಾಜೀನಾಮೆ ಬರದು ಮನಿಗೋಗಂಗೆ ಮಾಡಿ ಮಡಿಗ್ಯವುನೆ ಈ ಎಡೂರಪ್ಪ."

"ಅಂತ ಅವುಮಾನ ಮಾಡಿದ್ನೆ?"

"ಊ. ಇವುನೇಳಿದಂಗೆ ತೀರ್ಪು ಕೊಡೊ ಜಡ್ಜಿ ತಂದು ಕೂರಿಸಿದ್ದನಂತೆ."

"ನಾನಾಗ್ಲೆ ಹೇಳ್ಲಿಲ್ಲವೇನ್ಲ, ಇಂತ ಕಿವಿಕಿತ್ತ ಮೂಗರಕ ನನ್ನ ಮಕ್ಕಳ ಸುದ್ದಿಯ ಮಾತಾಡದೇ ಅಲ್ಲ" ಎಂದ ಕಾಳಮಾವ.

"ಅಂಗಲ್ಲ ದ್ವಡಪ್ಪ ಅವುನು ಮಾಡೋ ಕ್ಯಲಸ ಪತ್ತೆಹಚ್ಚಿ ಮಾತಾಡ್ಯೆಬೇಕು. ದೇವೇಗೌಡ ಏನೇನು ಮಾಡಿದ್ದೊ ಅದನ್ಯಲ್ಲ ಸಿಐಡಿ ತನಿಖೆ ಮಾಡಸದೆ ಆದ್ರೆ ಮುಂದು ಬಂದೋರು ಇವುನು ಮಾಡಿರದ ಸಿಬಿಐಗೇ ಕೊಡ್ತರೆ ಆಗ."

"ಅವುನು ಮಾಡಿರದ್ನಲ್ಲ ವಾಪಸ್ ಕೊಟ್ನಂತಲ್ಲೊ."

"ಕೊಡದೆಯಿರದೆಷ್ಟದೆ ಅಂತ ನಿನಿಗೇನು ಗೊತ್ತೊ ಉಗ್ರೀ. ಇವುನಿಗೋಲಿಸಿದ್ರೆ ನಮ್ಮ ಮಾಜಿ ಗುರು ಬಂಗಾರಿನೆ ಸಾವುರ ಪಾಲಿಗುತ್ತಮ ಅಂತ ಈಗ ಜಗತ್ತಿಗೇ ಗೊತ್ತಾಯ್ತಾ ಆದೆ."

"ಅಂತೆದೇನು ಮಾಡಿದುನ್ಲ?"

"ಅವುನ ಮನೆ ಹರಾಜಿಗೆ ಬಂದವಂತೆ ಕಣಕ್ಕ, ನೋಡು ಒಂದು ಕಾಲದಲ್ಲಿ ಬ್ಯಾರೆ ಪಾರ್ಟಿ ಕಟ್ಟಿ ಹೆಲಿಕಾಪ್ಟರ್ ತಗಂಡು ಇದೇ ನಾಗಮಂಗಲಕ್ಕೆ ಬಂದಿದ್ದ, ಅವುನ ಕ್ಯಾಂಡೇಟ್‌ಗೆ ನನ್ನನ್ನೇ ಕ್ಯಾಶಿಯರ ಮಾಡಿದ್ದ ಕಣಕ್ಕ. ಇವತ್ತು ಅದನ್ಯಲ್ಲ ನ್ಯನಿಸಿಗಂಡ್ರೆ ಅಳುಬತ್ತದೆ ಕಣಕ್ಕ."

"ಅಳುಬ್ಯಾಡ ಸುಂಕಿರ್ಲ."


"ಅಳು ಬತ್ತದೆ ಅಂದೆ ಕಣಕ್ಕ, ಯಾಕೊ ಕಣ್ಣೀರು ಬರಲ್ಲ. ಇದೇ ಎಡೂರಪ್ಪ ಬೇಕಾದಷ್ಟು ಆಸ್ತಿ ಕೊಂಡಕಂಡು ಬಿಲ್ಡಿಂಗ್ ಕಟ್ಟುತಾ ಅವುನೆ. ಅದೇ ನಮ್ಮ ಬಂಗಾರಿ ಮನೆನೆ ಕಳಕತ್ತಾ ಅವುನೆ. ನೋಡಕ್ಕ ಯಂಗದೆ."

"ಒಂದಲ್ಲಾ ಒಂದಿನಾ ಎಡೂರಪ್ಪನಿಗೂ ಅಂಗೇ ಆಯ್ತದೆ ಕಂದ್ಯ" ಎಂದ ಸೀರ.

"ಅಂಗಾಗದಿಲ್ಲ ಚಿಗಪ್ಪ, ಎಡೂರ ಬಂಗಾರಿವಷ್ಟು ದಡ್ಡ ಅಲ್ಲ, ಅದೂ ಅಲ್ದೆ ಅವುನು ಮಕ್ಕಳು ಕದೀಮರಿದ್ದಂಗವುರೆ. ಅದೇ ನಮ್ಮ ಬಂಗಾರಿ ಮಕ್ಕಳು ಮಾನ ಮರಿಯಾದಿಗೆ ಅಂಜಿಕಂಡು ಬಾಳೊ ಜನ." ●

...ತಾಯಿ ಮತ್ತು ಮಾತೃಭಾಷೆ

ಹಳೇ ವಾದಗಳನ್ನೇ ಮುಂದಿಟ್ಟು ಕೊರೆಯುವುದು ಬೇಡ; 'ನನ್ನ ಮಗು ಉಳಿಯಲಿ' ಎಂದು ಹೇಳುವ ...ತಾಯಿಯ ಮಾತಿನಲ್ಲಿ 'ನನ್ನ ಅವ್ವ ಉಳಿಯಲಿ' ಎಂದು ಹೇಳುವ ಮಗನ ಮಾತಿಗಿಂತ ಹೆಚ್ಚು ...ಹಟವಿದೆ. ತನ್ನ ಎದೆ ಹಾಲು ಹೀರುವವ ಬೇಕು ಎಂಬುದರಿಂದ ಹಿಡಿದು ತನ್ನನ್ನು ತಡವಿ, ...ಹರಿಸುವವ ಬೇಕು, ಹಾಗೆಯೇ ತನ್ನ ಹಡೆಯುವ ಕ್ರಿಯೆ ಸಾರ್ಥಕವಾಗಬೇಕಾದರೆ ಮಗು ...ದೊಡ್ಡವನಾಗಿ ಬಾಳಬೇಕು. ಆದರೆ ಮಗು ಬೆಳೆದಂತೆ ತಾಯಿ ಅವನ ಮನಸ್ಸಿನಲ್ಲಿ ಮಾಸುತ್ತಾಳೆ. ...ಅದೇ ಸೂತ್ರ ಆಕೆಯ ಪ್ರೀತಿ, ಮಗನ ಬಗ್ಗೆ ಹೆಮ್ಮೆ ಇತ್ಯಾದಿಯನ್ನು ಒಳಗೊಳ್ಳುತ್ತದೆ. ಫ್ರೆಂಚ್ ...ಜನ ಬೇರೆ ಭಾಷೆಯನ್ನು ಆಡಲು ಕೂಡ ಹಿಂಜರಿಯುತ್ತಿದ್ದರು. 'ನಮ್ಮ ಮಾತೃಭಾಷೆ, ...ಸಂಸ್ಕೃತಿ ಬಿಟ್ಟರೆ ಯಾವುದಿದೆ?' ಅನ್ನುತ್ತಿದ್ದರು. ಅದು ಬಹಳ ದಿನ ನಡೆಯಲಿಲ್ಲ, ಬೆಳೆದ ...ಮಗ ಊರೂರು ಸುತ್ತುವಂತೆಯೇ ಹೊಸ ಹೆಣ್ಣುಗಳನ್ನು ಕಂಡು ಮರುಳಾದಂತೆಯೇ ...ಫ್ರೆಂಚ್ ಜನ ಬೇರೆ ದೇಶಗಳೊಂದಿಗೆ ವ್ಯವಹರಿಸಬೇಕಾಯಿತು. ಬೇರೆಯವರ ಭಾಷೆಯ ಕತೆ, ...ಕಾದಂಬರಿ, ವಿಜ್ಞಾನ ಗ್ರಂಥ, ಯಕ್ಷಿಣಿಯ ಜೊತೆಗೆ, ಪ್ರವಾಸ ಸಾಹಿತ್ಯ ಶೋಧನೆಯ ...ಸಾಹಿತ್ಯ–ಎಲ್ಲ ಓದುವುದು ಅನಿವಾರ್ಯವಾಯಿತು. 'ಇದೀ ಜಗತ್ತು ಒಂದೇ ಹಳ್ಳಿ' ...ಎಂದಹೋಲಿ ಹಳ್ಳಿಯ ಭಾಷೆ ಇಂಗ್ಲಿಷ್ ಇರಲಿ, ಸ್ಪೆಯಿನ್, ಪೋರ್ಚುಗೀಸ್ ಇರಲಿ ...ಕಲಿಯಲೇಬೇಕಾಯಿತು. ಕೋಕೋಕೋಲಾ, ಜಾಜ್ ಸಂಗೀತ, ಹಿಪ್ಪೀ ಕಾವ್ಯ..... ಎಲ್ಲ ಇಲ್ಲದಿದ್ದರೆ ಫ್ರೆಂಚ್ ಹುಡುಗಿ ದೊಡ್ಡವಳಾಗಲಿಕ್ಕಿಲ್ಲ ಎಂಬ ಭಯ ಕಾಡಿತು. ಇವತ್ತು ಫ್ರಾನ್ಸ್‌ಗೆ ಹೆದರಿಕೆ ಶುರುವಾಗಿದೆ. ಫ್ರೆಂಚ್ ಸಿನಿಮಾವನ್ನು ಯಾರೂ ನೋಡುತ್ತಿಲ್ಲ, ಫ್ರೆಂಚ್ ಭಾಷೆ ಪ್ರಾಂತೀಯವಾಗಿದೆ, ಫ್ರೆಂಚ್ ಅಡಿಗೆಯನ್ನು ಚೈನಾದ ಅಡಿಗೆ ಮೀರಿಸಿದೆ, ಫ್ರೆಂಚ್ ಕಾರನ್ನು ಹಿಂದೆ ಹಾಕಿ ಬೇರೆ ಕಾರು ಓಡುತ್ತಿವೆ....



ಭಾಷೆ ಉಳಿಯಬೇಕಾದರೆ ಅದರಿಂದ ನಮಗೆ ಪ್ರೀತಿ, ಹೊಸಹೊಸ ಸ್ನೇಹ, ಇಹದ ಲಾಭ, ಪರಲೋಕದ ಸಾಧ್ಯತೆಗಳು ತೆರೆಯಬೇಕು. ಕನ್ನಡ ಈ ಎಲ್ಲ ಸವಾಲುಗಳನ್ನು ಎತ್ತಿಕೊಳ್ಳಬೇಕು. ಇಲ್ಲಿ ಕಂಪ್ಯೂಟರ್ ಭಾಷೆ, ಅಡಿಗೆಯ ನುಡಿಕಟ್ಟು, ರಂಜನೆಯ ಧ್ವನಿ, ತಂತ್ರಜ್ಞಾನದ ಮಾರ್ಗದರ್ಶನ, ಶಕ್ತಿ ಮತ್ತು ಅಧಿಕಾರವನ್ನೊಳಗೊಂಡ ಎಲ್ಲದರ ವಶ... ಬೇಕು.

ಇಸ್ರೇಲ್ ಹೊಸ ಭಾಷೆಯನ್ನೇ ಸೃಷ್ಟಿಸಿಕೊಂಡಿತು. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಭಾಷೆಯನ್ನು ಮೀರಿದ ವ್ಯವಹಾರವಿದೆ; ಎಲ್ಲವೂ ಗೊತ್ತಿದ್ದು..... ಇಲ್ಲಿ ಆತ್ಮಕ್ಕೆ, ನನ್ನ ಹೃದಯಕ್ಕೆ ಏನು ಬೇಕು ಎಂದು ನೋಡಬೇಕು. ಮನುಷ್ಯನ ಬೇಕುಗಳು ಇಷ್ಟೇ ಎಂದು ಹೇಳುವವರು ಯಾರು? ಅದೇ ಅಲ್ಲವೇ ಆತನ ವೈಶಿಷ್ಟ್ಯ ಮತ್ತು ದುರಂತ?


–ಆಗಸ್ಟ್ 10, 1994



ನೈಟ್ ಷೋ ಗಂಡಹೆಂಡತಿ ಕತೆ ಇದ್ದಂಗದಲ್ಲಾ!

ಕ್ಲೈಮ್ಯಾಕ್ಸ್ ಎಂಬ ಯಮಪಾಶದಿಂದ ಮುಖ್ಯ ಮಂತ್ರಿ ಪದವಿ ಎಂಬ ಪ್ರಾಣವಾಯುವನ್ನು ಹಿಂಪಡೆಯಲು ಹಲವಾರು ಸಾವಿತ್ರಿಗಳು ಶ್ರಮಿಸಿದ್ದವು ಎಂಬುದು ಸತ್ಯವಾನ್-ಸಾವಿತ್ರಿ ಕತೆಯಂತೆಯೇ ಹಳೆಯ ಪುರಾಣ ಆಯಿತು. ದೆಹಲಿ ಎಂಬ ಯಮಲೋಕದಿಂದ ದಿಗ್ವಿಜಯ ಸಾಧಿಸಿ ಬಂದರೆಂದೇ ಭ್ರಮಿಸಿದ್ದ ಜನತೆಗೆ ಯಡಿಯೂರಪ್ಪರ ಕಳೆಗುಂದಿದ ಮುಖ ನಿರಾಶೆ ಉಂಟುಮಾಡಿತು. ವಿಜಯದ ಸಂಕೇತವಾಗಿ ಅವರು ಎತ್ತಿ ಹಿಡಿದ ಎರಡು ಬೆರಳುಗಳು ತೆರೆದ ಕತ್ತರಿಯ ಬಾಯಿಯ ಎರಡು ಬಾಹುಗಳಾಗಿ ಗೋಚರಿಸಿತು. ಅವರ ಅಲ್ಲಾಡಿಸಿದ ಕೈ ನನ್ನ ಕುರ್ಚಿ ಇನ್ನೂ ತೂಗುಯ್ಯಾಲೆಯಲ್ಲಿ ಇದೆ ಎಂಬುದರ ಸಂಕೇತವಾಗಿ ಕಂಡದ್ದು ದುರಂತವೇ ಸರಿ. ಜನರ ಮನಸ್ಸಿನ ಭಾವನೆಗಳು ಯಡಿಯೂರಪ್ಪನವರಿಗೆ ತಲುಪಿರಬೇಕು.

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಅದನ್ನು ಹೋಗಲಾಡಿಸಲು 'ತೋರಿಕೆ ಭದ್ರತೆ' ಮುಖವಾಡ ಧರಿಸುವುದು ಅನಿವಾರ್ಯ ಆಗಿತ್ತು. ಅದಕ್ಕೇನು ಮಾಡಿದರು 'ಅಪ್ಪ'ನವರು... ಅಭಿವೃದ್ಧಿ ಮಂತ್ರ ಉಚ್ಚರಿಸಿದರು. ಅಕಟಕಟಾ, ಅದೂ ಹಳಸಲಾಗಿ ಜನರ ಹೃದಯವನ್ನು ತಾಗಲು ವಿಫಲವಾಯಿತು! ಇದರಿಂದ ವಿಚಲಿತರಾಗಲಿಲ್ಲ, ಎಷ್ಟೇ ಆಗಲಿ ಇಂತಹ ವಿದ್ಯೆಗಳಲ್ಲಿ ಅವರು ನುರಿತ ಕಲಾವಿದರಲ್ಲವೆ. ಹೂಡಿದರು ಹೊಸಬಾಣ. 'ಸಂಬಂಧಿಕರಿಂದ ದೂರವಿರುತ್ತೇನೆ' ಎಂದು ಸಾರಿದರು. ಮಕ್ಕಳು ಮರಿಗಳನ್ನು ಮನೆಯಿಂದ ಹೊರಹಾಕಿ 'ಸುದ್ದಿ' ಮಾಡಿದರು!

ಇಂತಹ ತ್ಯಾಗಮೂರ್ತಿ ರೇಣುಕಾಚಾರ್ಯ ಅಂತಹವರ ಕಣ್ಣಿಗೆ 'ಆಧುನಿಕ ಬಸವಣ್ಣ' ಆಗಿ ಗೋಚರಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. 'ಏಕ್‌ದಂ ಮನೆ ಬಿಟ್ಟು ಹೋಗಿ ಅಂದ್ರೆ ಮಕ್ಳು ಮರಿ ಕಟ್ಕಂಡು ಅವೆಲ್ಲೋಗಿ ಸಾಯ್ತವೆ ಪಾಪ' ಎಂದು ಮರುಕ ತೋರಿಸುವ ಕಷ್ಟಸುಖ ಅರಿತವರಿಗೂ ಕೊರತೆ ಇಲ್ಲ.

ಇರಲಿ. ಈ ಎರಡೂ ಘಟನೆಗಳನ್ನು ನೋಡಿದಾಗ ಒಂದು ಘಟನೆ ಧುತ್ತನೆ ನೆನಪಿಗೆ ಬಂತು.

ಎಚ್.ಆರ್. ಶಂಕರನಾರಾಯಣ ಪ್ರಸಿದ್ಧ ನಗೆ ಲೇಖಕರು. ಅವರ ಕಾವ್ಯನಾಮ ಹಾ.ರಾ. ಅವರು ಮೊದಲು ತುಮಕೂರಿನಲ್ಲಿ ವಕೀಲರಾಗಿದ್ದವರು. 'ವಕೀಲಿ ದಿನಗಳು' ಅವರ ಕೆಲವು ಅನುಭವಗಳ ಸೊಗಸಾದ ದಾಖಲೆ. ಅದರಲ್ಲಿನ ಒಂದು ಘಟನೆ ಹೀಗಿದೆ:

ಅನುಭವ ಚಿತ್ರಕ್ಕೆ ಮುನ್ನ ಸ್ವಲ್ಪ ಹಿನ್ನೆಲೆ. ಕಳೆದ ನಲವತ್ತು ಐವತ್ತರ ದಶಕದಲ್ಲಿ ಕಕ್ಷಿದಾರರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಕೋರ್ಟಿಗೆ ದೂರದ ಊರುಗಳಿಂದ ಬರಬೇಕಿತ್ತು, ಬಸ್ಸುಗಳ ಸೌಕರ್ಯ ಈಗಿನಷ್ಟು ಇರಲಿಲ್ಲ. ಒಂದು ದಿವಸ ಮೊದಲೇ ಬರುವುದು ಅನಿವಾರ್ಯವಾಗಿತ್ತು. ಬಂದರೆ ತಂಗಲು ಅನುಕೂಲತೆ ಇರಲಿಲ್ಲ. ಅದಕ್ಕೆ ಲಾಯರುಗಳು ತಮ್ಮ ಮನೆಯ ಪಕ್ಕದಲ್ಲೇ ಕಕ್ಷಿದಾರರಿಗೆ ಕೊಠಡಿಗಳು ನಿರ್ಮಿಸುತ್ತಿದ್ದರು. ಇದಕ್ಕೆ ಅನುಕೂಲವಿಲ್ಲದವರು ತಮ್ಮ ಮನೆಯಲ್ಲೇ ಕಕ್ಷಿದಾರರಿಗೂ ವಾಸ್ತವ್ಯ ಕಲ್ಪಿಸುವುದು ಅನಿವಾರ್ಯವಾಗಿತ್ತು.

"ನನ್ನ ಮನೆಯ ವರಾಂಡದಲ್ಲಿ ನನ್ನ ಕಕ್ಷಿದಾರರು ಮಲಗುತ್ತಿದ್ದರು. ಒಂದು ದಾಂಪತ್ಯ ವಿಚ್ಛೇದನ ಕೇಸಿನಲ್ಲಿ ಗಂಡನ ಕಡೆ ನಾನು. ದಾಂಪತ್ಯ ಹಕ್ಕುಗಳ ಪೂರ್ವಸ್ಥಿತಿಗೂ ನನ್ನ ಕಕ್ಷಿದಾರ ಅರ್ಜಿ ಹಾಕಿಕೊಂಡಿದ್ದ. ಹೆಂಡತಿ ಕಡೆ ಅಯ್ಯಂಗಾರರು. ಅಯ್ಯಂಗಾರರ ಮನೆ ನನ್ನ ಮನೆಯ ಮುಂದಿನ ರಸ್ತೆಯಲ್ಲಿತ್ತು. ಪ್ರತಿ ಹಿಯರಿಂಗ್ ದಿವಸದ ಹಿಂದಿನ ಸಂಜೆಯೇ ಗಂಡಹೆಂಡತಿ ಇಬ್ಬರೂ ಪ್ರತ್ಯೇಕವಾಗಿ ತುಮಕೂರಿಗೆ ಬರುತ್ತಿದ್ದರು. ಗುಟ್ಟಾಗಿ ಇಬ್ಬರೂ ಜೊತೆ ಜೊತೆಯಾಗಿ ಸೆಕೆಂಡ್ ಷೋ ಸಿನಿಮಾ ನೋಡಿ ಬರುತ್ತಿದ್ದರಂತೆ. ಹೆಂಡತಿ ಅಯ್ಯಂಗಾರ್ ಆಫೀಸ್ ರೂಮಿನಲ್ಲಿ, ಗಂಡ ನನ್ನ ಮನೆಯಲ್ಲಿ ಮಲಗುತ್ತಿದ್ದರು. ಬೆಳಿಗ್ಗೆ ಇಬ್ಬರೂ ಮುಖ ಸಿಂಡರಿಸಿಕೊಂಡು ಒಬ್ಬರನ್ನೊಬ್ಬರು ನೋಡದೆ ಬೇರೆಬೇರೆ ಮಾರ್ಗಗಳಲ್ಲಿ ಕೋರ್ಟು ತಲುಪುತ್ತಿದ್ದರು. ಎಷ್ಟೋ ತಿಂಗಳ ಮೇಲೆ ಈ ವಿಚಿತ್ರ ವಿಚಾರ ನಮ್ಮಿಬ್ಬರಿಗೂ ತಿಳಿಯಿತು. ಅಯ್ಯಂಗಾರರು ಒಂದು ದಿನ ಕೋರ್ಟಿನ ಬಳಿ ನನ್ನ ಕಕ್ಷಿದಾರ ಗಂಡನನ್ನು ಪ್ರಶ್ನಿಸಿದರು. ಅವನು 'ಅವಳು ಈಗ ಬಿಮ್ಮನಿಸಿ ಆರು ತಿಂಗಳು ಬುದ್ಧಿ' ಎಂದ."

ಸಂಬಂಧಿಕರನ್ನ ದೂರ ಇಡೋದು ಅಂದ್ರೆ ಈ 'ನೈಟ್ ಷೋ ಗಂಡ-ಹೆಂಡತಿ' ದೂರದೂರ ಇದ್ದಂಗೇ ಇದೆ ಅನಿಸೊಲ್ವಾ....


ಕಾವಿ ಧರಿಸೋದೂ ರೋಗ!

ಭ್ರಷ್ಟನೊಬ್ಬನಿಗೆ ಬೆಂಬಲ ನೀಡಿದ್ದೇ ಬಂತು ನೋಡಿ. ಹೆಣಕ್ಕೆ ರಣಹದ್ದು ಬೀಳಂಗೆ ಬೀಳ್ತಾ ಕುಂತವೆ. ಹೆಣ ಯಾಕೆ ಬಿತ್ತು ಅಂತ ಯಾವ್ರೂ ಕೇಳೊಲ್ಲ, ಆಹಾರ ಸಿಕ್ತಲ್ಲ ಅಂತ ಮುಕ್ಕಕ್ಕೆ ಮುಗಿ ಬೀಳ್ತಾ ಅವೆ. 'ಭಯೋತ್ಪಾದಕ ಸ್ವಾಮಿಗಳು' ಅಂತಾವೆ. 'ಏಜೆಂಟ್ ಸ್ವಾಮಿ' ಅಂತಾವೆ. 'ಕಾವಿ ಕಳಚಿ ಖಾಲಿ ಧರಿಸಿ' ಎಂದೆಲ್ಲ ಕೂಗಾಡ್ತವೆ. ಹಿಂಗೆಲ್ಲ ಬಾಯಿಗೆ ಬಂದಹಾಗೆ ಆಡಬಾರದು. ಅನುಕಂಪ ತೋರಬೇಕು ಅಂದ್ರೂ ಕೇಳೊಲ್ಲ, 'ಅನುಕಂಪ ಯಾವ ಸಂಪತ್ತಿಗೆ' ಅಂತ ಗೇಲಿ ಮಾಡ್ತವೆ. ಅದಕ್ಕೇ ಮನಶ್ಶಾಸ್ತ್ರವನ್ನ ಸ್ವಲ್ಪನಾದರೂ ತಿಳಿದಿರಬೇಕು ಅನ್ನೋದು. ಹಂಗೇನಾದರೂ ಮಾಡಿದರೆ ಆಗ ತಿಳಿಯುತ್ತೆ ಕಾವಿಧರಿಸೋದೂ ಒಂದು ಮನೋರೋಗ ಅಂತಾವ. ಇದಕ್ಕೆ ಮನೋ ವೈದ್ಯಕೀಯದಲ್ಲಿ 'ಸ್ಕಿಜೋಫ್ರೀನಿಯಾ' ಅಂತಾರಂತೆ!

'ಸ್ಕಿಜೋಫ್ರೀನಿಯಾ' ಹಂಗಂದ್ರೇನಪ್ಪ ಅಂತೀರಾ. ಖ್ಯಾತ ಮನಶ್ಶಾಸ್ತ್ರಜ್ಞ ಡಾ. ಚಂದ್ರಶೇಖರ್ ಅವರಿಗೂ ಹಂಗನ್ನಿಸಿತ್ತಂತೆ. ಅದು ಯಾವಾಗ ಅಂದ್ರೆ ಅವರು ಮೊದಲ ಸಲ ಈ ಹೆಸರು ಕೇಳಿದಾಗ. ಆ ಸಂದರ್ಭ ಹೀಗಿದೆ. ಅವರು ಡಾ. ನಾರಾಯಣ್ ಅವರ ಮಾನಸಿಕ ಚಿಕಿತ್ಸಾಲಯದಲ್ಲಿ ಕುಳಿತಿದ್ದರಂತೆ. ಮೂವತ್ತು ವರ್ಷದ ಯುವಕನನ್ನು ಕರೆದುಕೊಂಡು ಅವನ ತಂದೆ ಬಂದರಂತೆ. ರೋಗ ಏನು ಅಂದರೆ ಕುಳಿತಿದ್ದ ಕಡೆ ಕುಳಿತಿರೋದು; ಯಾರೊಂದಿಗೂ ಮಾತನಾಡದೇ ಮೌನೇಶ್ವರನಾಗಿರುವುದು; ಸ್ನಾನ ಬೇಡ; ಬಟ್ಟೆ ಬದಲಾಯಿಸಲೂ ಸೋಮಾರಿತನ. ಕೆಲಸ ಮಾಡು ಅಂದರೆ ಸಿಟ್ಟು! ಡಾ. ಚಂದ್ರಶೇಖರ್ ಕೇಳಿದರಂತೆ 'ನೀವೇಕೆ ಕೆಲಸ ಮಾಡುವುದಿಲ್ಲ, ನಿಮಗೇನು ಕಷ್ಟ' ಅಂತಾವ. ಡಾ. ನಾರಾಯಣರೂ ದನಿಗೂಡಿಸಿದರಂತೆ. ಆಗ ಅವನು 'ಹದಿನೈದು ವರ್ಷಗಳ ಕಾಲ ಓದಿದೆ. ಎರಡು ವರ್ಷ ಕಾಲ ಕೆಲಸ ಮಾಡಿದೆ. ಈಗ ರೆಸ್ಟ್ ತೆಗೆದುಕೊಳ್ಳಿತ್ತಿದೀನಿ. ನನ್ನ ಶರೀರದಲ್ಲಿ ಶಕ್ತಿಯೇ ಇಲ್ಲ, ಈ ಅಪ್ಪ ಅಮ್ಮ ಯಾವಾಗಲೂ ಕೆಲಸ ಮಾಡು, ಅಲ್ಲಿ ಹೋಗು ಇಲ್ಲಿ ಹೋಗು ಎಂದು ತಲೆ ತಿನ್ನುತ್ತಾರೆ. ನನ್ನ ಪಾಡಿಗೆ ರೆಸ್ಟ್ ತೆಗೆದುಕೊಳ್ಳಲು ಬಿಡುವುದಿಲ್ಲ' ಎಂದನಂತೆ! ಆಗ ಡಾ. ನಾರಾಯಣ ಅವರು 'ಇವನು ಸ್ಕಿಜೋಫ್ರೀನಿಯಾ ರೋಗಿ' ಅಂದರಂತೆ. 'ಈತನಂತೆ ಸೋಮಾರಿಗಳಾಗಿ ಕಾಲ ಕಳೆಯುವವರೆಲ್ಲ ಸ್ಕಿಜೋಫ್ರೀನಿಯಾ ರೋಗಿಗಳೆ ಸಾರ್' ಎಂದಾಗ ಅವರು 'ಅದು ಹಾಗಲ್ಲ, ಎಲ್ಲ ಸೋಮಾರಿಗಳೂ ರೋಗಿಗಳಲ್ಲ, ಆದರೆ ಮನೆಯವರು ಅಥವಾ ಸಮಾ[ಜ] ಸೋಮಾರಿಗಳು ಎಂದು ಲೇಬಲ್ ಮಾಡಿರುವವರ[ಲ್ಲಿ], ಮಠ ಆಶ್ರಮಗಳಲ್ಲಿರುವವರಲ್ಲಿ, ಸಾಧು ಸನ್ಯಾಸಿಗಳ[ಲ್ಲಿ], ಹಿಮಾಲಯದ ಪುಣ್ಯಕ್ಷೇತ್ರಗಳಲ್ಲಿ ಆಧ್ಯಾತ್ಮಿಕ ಸಾಧ[ನೆ] ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವವರಲ್ಲಿ ಸಾಕ[ಷ್ಟು] ಜನರಿಗೆ ಸ್ಕಿಜೋಫ್ರಿನಿಯಾ ರೋಗವಿರುತ್ತದೆ' ಎಂ[ದು] ವಿವರಿಸಿದರಂತೆ.

ಇಂತಹ ಮನೋರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಬೇ[ಕು] ಪರಂತು ಹೀಯಾಳಿಸಿ ರೋಗ ಉಲ್ಬಣಗೊಳಿಸ ಬಾರದು.

ಒಂದು ಆಲೋಚನೆ. ಯಡ್ಯೂರಪ್ಪನವರು ತಮ್ಮ ವಿರೋಧಿಗಳಿಗಾಗಿ ಸುಸಜ್ಜಿತ ಜೈಲು ಕಟ್ಟಿಸುವುದಾ[ಗಿ] ಆವಾಗಾವಾಗ ಹೇಳುತ್ತಿರುತ್ತಾರೆ. ಇದೇ ಹಣವನ್ನು ಇಂತ[ಹ] ಮನೋರೋಗಿಗಳಿಗೆ ಚಿಕಿತ್ಸೆ ನೀಡುವಂತಹ ಸುಸಜ್ಜಿತ ಮಾನ[ಸಿಕ] ಆಸ್ಪತ್ರೆ ನಿರ್ಮಿಸಲು ಬಳಸಬಾರದೆ ಎಂದು ಚಿಂತಿಸುತ್ತಿರುವಾ[ಗ] ಒಳದನಿಯೊಂದು ಆಕ್ಷೇಪ ಎತ್ತಿತ[ು] 'ನೀನೇನು ಯಡ್ಯೂರಪ್ಪನ್ನ ತಗೀಬೇ[ಕು] ಅಂತ ಮಾಡಿದ್ದೀಯಾ.... ಇಂತ[ಹ] ಮನೋರೋಗಿಗಳಿಗೆಲ್ಲ ಚಿಕಿ[ತ್ಸೆ] ನೀಡಿದರೆ ಅವರ 'ರೋಗ ಗು[ಣ]' ಆಗಬಹುದು. ಆಮೇಲೆ ಯಡ್ಯೂರಪ್ಪನವರಿಗೆ ಬೆಂಬಲಿಸುವವರನ್ನೆಲ್ಲಿಂದ ತರ್ತೀಯಾ... ನೀನೂ ಸರಿಯೆ' ಎನ್ನುವ ಆಕ್ಷೇಪ ಸರಿ ಇದ್ದರೂ ಇರಬಹುದೇನೋ...



ಕೈದಿಗಳ ಸಂತಸ!

ವಿಶ್ವೇಶತೀರ್ಥರ ಮಾತು ಅಂದರೆ ವೇದವಾಕ್ಯ! ಅದರ ಒಂದು ತುಣುಕು ಇತ್ತೀಚೆಗೆ ಹೊರಬಿದ್ದಿದೆ. ಅವರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲವಂತೆ ನ್ಯಾಯದ ಪರ ಅಂತೆ!

ಏನು ಈಗಿನ ನ್ಯಾಯ?

ಯಡ್ಯೂರಿ ಕುಟುಂಬದ ಭೂಹಗರಣ ಬಯಲಿ[ಗೆ] ಬಂದಿದೆ ನಿಜ. ಆದರೆ ಯಡ್ಯೂರಪ್ಪನವರೇ ಮುಖ್ಯ ಮಂತ್ರಿಯಾಗಿ ಉಳಿಯಬೇಕು!

ಯಾವ ಸೀಮೆ ನ್ಯಾಯ ಇದು?

ತೀರ್ಥ ನ್ಯಾಯ!

'ಆರೋಪ ಇದ್ದ ಮಾತ್ರಕ್ಕೆ ಅಪರಾಧಿ ಅಲ್ಲ. ನ್ಯಾಯಾಲಯದಲ್ಲಿ ಅಪರಾಧಿ ಎಂದು ಸಾಬೀತಾದರೆ ಮಾತ್ರ ಶಿಕ್ಷೆ ನೀಡಬೇಕು!

ಇದನ್ನು ಕೇಳಿ ಪುಳಕಿತರಾದರು. ಯಾರೂ ಅಂತೀರಾ... ಸೆರೆಮನೆಯಲ್ಲಿರುವ ವಿಚಾರಣಾಧೀನ ಕೈದಿಗಳು! ತಮ್ಮದೆ[ೇ] ಸಂಘಟನೆ ರೂಪಿಸಿದರು. ಯಡ್ಯೂರಪ್ಪ ನ್ಯಾಯವನ್ನೇ ತಮಗೂ ಅನ್ವಯಿಸುವಂತೆ ಶಿಫಾರಸ್ಸು ಮಾಡುವಂತೆ ತೀರ್ಥರಲ್ಲಿ ಮನವಿ ಮಾಡಿದ್ದಾರಂತೆ!

ಇಂತಹ ಹುಚ್ಚರ ಟೀಕೆ ಹಾಗೂ ಕಾಲೆಳೆಯುವಿಕೆಗಳೇ ಸೋನಿಯಾರನ್ನ ಬೆಳೆಸಿದ್ದು!!

ವಯಸ್ಸು ಹಾಗು ಜೀವನಾನುಭವಗಳು ವ್ಯಕ್ತಿಯನ್ನ ಪ್ರಬುದ್ಧನನ್ನಾಗಿಸುತ್ತದೆ. ಆತ ಎಂಥಾ ಕಟ್ಟರ್ ಸಿದ್ಧಾಂತಗಳ ಅನುಯಾಯಿಯೇ ಆಗಿರಲಿ, ವಯಸ್ಸು ಮಾಗಿದಂತೆ ಆತನ ಮಾತಿನಲ್ಲಿರುವ ನಂಜು ಕಡಿಮೆಯಾಗಿ ಪ್ರೌಢತೆ ಕಾಣಿಸಿಕೊಳ್ಳುತ್ತದೆ. ಆದರೆ ಈ ಪ್ರಕೃತಿ ಸಹಜ ನಿಯಮ ಆರೆಸ್ಸೆಸ್‌ನ ಕೆಲ ಮುದಿಗೂಬೆಗಳಿಗೆ ಅನ್ವಯಿಸುವ ಬದಲು, ಇದ್ದ ನಂಜು ಇನ್ನಷ್ಟು ವೃದ್ಧಿಯಾಗುತ್ತದೆಂದು ಮೊನ್ನಿನ ಸುದರ್ಶನನ ಮಾತು ಸಾಬೀತುಪಡಿಸಿದೆ: (ಡಿಸೆಂಬರ್ 1, 2010ರ ಸಂಚಿಕೆ) ಹಿಂದೂವಾದಿಗಳು ನಂಬಿರುವ ಮೂಲತತ್ವ ಸಿದ್ಧಾಂತ (ಸ್ತ್ರೀ ದ್ವೇಷ-ವರ್ಣದ್ವೇಷ ಇತ್ಯಾದಿ)ಗಳ ಸೊಗಡೇ ಸುದರ್ಶನನ ಮಾತಲ್ಲಿ ಎದ್ದು ಕಾಣುತ್ತಿರುವ ಕಾರಣ ಇದರಲ್ಲಿ ಅಚ್ಚರಿಯ ಮಾತೇನಿಲ್ಲ.



ತಮಾಷೆಯೆಂದರೆ, ರಾಜೀವ್ ಗಾಂಧಿಯವರ ಪತ್ನಿ ಎನ್ನುವುದನ್ನು ಬಿಟ್ಟರೆ, ವೈಯಕ್ತಿಕವಾಗಿ ಅಂತಾ ವರ್ಚಸ್ಸೇನೂ ಹೊಂದಿರದಿದ್ದ ಸೋನಿಯಾರ ಬೆಳವಣಿಗೆಗೆ ಇಂತಹ 'ಕು'ದರ್ಶನಿಗಳ ಪಾಲೇ ಅಧಿಕ. ಕೆಲವೇ ಕೆಲವು ವರ್ಷಗಳ ಹಿಂದೆ ಹೋಗಿ ನೋಡಿ, ವಿದೇಶಿ ಅಂದವರೇನು, ಪೌರತ್ವ ಪಡೆಯಲು ತಡಮಾಡಿದ ದೇಶದ್ರೋಹಿ ಅಂದವರೇನು, ಮುಂಡೆ ಬೋಳಿಸ್ಕೊಳ್ತೇನೆ ಅಂದವರೇನು, ದೇಶ ಬಿಟ್ಟು ಓಡ್ತೇನೆ ಅಂದವರೇನು ಅಷ್ಟೇ ಅಲ್ಲ ವಿಧವೆ ಅಮಂಗಳೆ ಅಂತ ಸಾರ್ವಜನಿಕ ಸಭೆಗಳಲ್ಲಿ ಕಿರುಚಾಡಿದವರೂ ಕೂಡ ಸಾಕಷ್ಟಿದ್ದರು. ಅವರೆಲ್ಲ (ಎಲ್ಲರೂ ದೊಡ್ಡ ಜನರೇ) ಈಗೆಲ್ಲಿ? ಇಂತ ಹುಚ್ಚು ಟೀಕೆಗಳಿಗೆಲ್ಲ ಸೊಪ್ಪು ಹಾಕದ ಸೋನಿಯಾ ಈ ಮೂಲಕ ತಾವು ಈ ಕೀಳು ಮಂದಿಯ ಮಟ್ಟಕ್ಕಿಳಿಯದೇ ತಮ್ಮ ದೊಡ್ಡತನವನ್ನು ಮೌನವಾಗೇ ತೋರ್ಪಡಿಸಿ ಜನರ ಮನಗೆದ್ದಿದ್ದರು. ತಮ್ಮ ಹುಚ್ಚಾಟ ತಮಗೇ ತಿರುಗುಬಾಣವಾಗುತ್ತಿರುವುದನ್ನು ನೋಡಿ ಹಾರಾಡುತ್ತಿದ್ದ ವಿರೋಧಿಗಳೆಲ್ಲ ನಂತರ ಗಪ್‌ಚುಪ್. ಮೂರನೇ ಕ್ಲಾಸ್ ಮಕ್ಕಳು ಓದೋ ಥರ ಹಾಸ್ಯಾಸ್ಪದವಾಗಿ ಭಾಷಣ ಮಾಡುತ್ತಿದ್ದ ಬಿಳಿಚುಚರ್ಮದ ಈ ಅನಾಕರ್ಷಕ ಮಹಿಳೆಯಲ್ಲಿದ್ದ ಹೆಗ್ಗಳಿಕೆಯೆಂದರೆ ಈಕೆ ಇತರರಂತೆ ದುರಾಸೆಯ ಹಣಮಾರಿ ಹೆಣ್ಣಾಗಿರಲಿಲ್ಲವೆಂಬುದು. ಇದನ್ನು ಪಿ.ಲಂಕೇಶ್ ಕಂಡುಕೊಂಡಿದ್ದರು. ಲಂಕೇಶ್‌ರ ಸೋನಿಯಾ ಪರ ನಿಲುವಿಗೆ ಇದೇ ಕಾರಣವಾಗಿತ್ತು.


ಲಂಕೇಶ್ ಸೋನಿಯಾ ಪರ ವಹಿಸುತ್ತಾರೆ ಎಂಬ ಆರೋಪವಿತ್ತು. ಸೋನಿಯಾರ ಮುಖಪುಟ ಲೇಖನಗಳೇ ಹಲವು ಬಂದಿತ್ತು ಎಂಬುದು ಇವರುಗಳು ನೀಡುವ ಸಬೂಬು. ಹೌದು, 'ಲಂಕೇಶ್ ತನ'ವೆಂದರೇನೆ ಇದೇ ತಾನೆ? ಕ್ಷುಲ್ಲಕ ಕಾರಣಗಳ ಹೆಸರಲ್ಲಿ ಯಾರೋ ಒಬ್ಬರನ್ನ, ಅದರಲ್ಲೂ ಮಹಿಳೆಯೊಬ್ಬಳನ್ನ ನಾಡಿನ ನಾಯಕರೆನಿಸಿಕೊಂಡವರೇ ಅವಮಾನಿಸುತ್ತಿರುವಾಗ ಅದಕ್ಕೆ ವಿರೋಧವೆಂಬಂತೆ ಸ್ವಲ್ಪ ಮಟ್ಟಿಗಿನ ಸೋನಿಯಾ ಪರ ವಹಿಸಿ ಅವರು ಬರೆದದ್ದು ಹೌದು. ಕೆಲಸಕ್ಕೆ ಬಾರದ ವ್ಯಕ್ತಿಯೆಂಬಂತೆ ಬಿಂಬಿತವಾಗಿದ್ದ ಸೋನಿಯಾರ ತಾಕತ್ತು ಲಂಕೇಶ್ ತಿಳಿದಂತೆಯೇ ಏನೆಂಬುದು ಈಗ ಜಗಜ್ಜಾಹೀರಾಗಿದೆ.

ನಮ್ಮದು ಹೆಣ್ಣನ್ನು ದೇವರೆಂದು ಗೌರವಿಸುವ ಸಂಸ್ಕೃತಿ, ಹೆಣ್ಣನ್ನು 'ಮಾತೆ' ಎಂದು ಕರೆಯುವ ಏಕೈಕ ದೇಶದವರು ನಾವು. ನಮ್ಮಂತ ಗ್ರೇಟ್ ದೇಶ ಹಾಗೂ ಸಂಸ್ಕೃತಿ ಬೇರೆಲ್ಲೂ ಇಲ್ಲ ಎಂದು ಈ ಸಂಸ್ಕೃತಿಯನ್ನು ಗುತ್ತಿಗೆ ಹಿಡಿದವರಂತೆ ಮಾತಾಡುವ ಸಂಘಟನೆಯವರು ಹೆಣ್ಣಿಗೆ ಯಾವ ರೀತಿ ಮರ್ಯಾದೆ ನೀಡಬಲ್ಲರು? ಎಂದು ಅದರ ಪ್ರಭಾವಿಯಾದ ಮಾಜಿ ನಾಯಕನೊಬ್ಬನ ಮಾತುಗಳಿಂದಲೇ ಅಳೆಯಬಹುದಲ್ಲವೇ? ಮರ್ಯಾದಸ್ತ ಹೆಣ್ಣೊಬ್ಬಳ ಬಗ್ಗೆ, ಆಕೆಯ ಹುಟ್ಟಿನ ಬಗ್ಗೆ ಕಪೋಲ ಕಲ್ಪಿತ ಕಥೆಗಳನ್ನ ಸಾರ್ವಜನಿಕ ವೇದಿಕೆಯಲ್ಲಿ ಹರಿಯಬಿಡುತ್ತಾನೆಂದರೆ ಆತನ ಸಂಘಟನೆಯಲ್ಲಿ ಇನ್ನೆಂಥ ಪಾಖಂಡಿಗಳು ತುಂಬಿರಬಹುದು? ಇಂತಹ ಗೋಮುಖ ನರಿಗಳ ಬಣ್ಣಬಯಲು ಮಾಡಿದ 'ಲಂಕೇಶ್'ಗೆ ಅಭಿನಂದನೆಗಳು.

-ಎಸ್.ಎಸ್. ಗೇರುಕಟ್ಟೆ

ಹೊಗಳಿಕೆ ತೆಗಳಿಕೆ

'ನೀರಾ ಮಾಡಿದ ರಾಡಿಯಾ' (ಡಿಸೆಂಬರ್ 8, 2010ರ ಸಂಚಿಕೆ) ಭಾರತದ ರಾಜಕಾರಣದಲ್ಲಿರುವ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಒಂದು ದೃಷ್ಟಾಂತ. ಭಾರತದ ರಾಜಧಾನಿಯ 'ಪವರ್ ಕಾರಿಡಾರ್'ನಲ್ಲಿ ನೀರೆಯರನ್ನೇ ಬಳಸಿ ಭ್ರಷ್ಟರಿಂದ ತಮ್ಮ ಕೆಲಸ ಮಾಡಿಸಿಕೊಳ್ಳುವ ನೆಹರೂರವರ ಕಾಲದಿಂದಲೇ ಶುರುವಾಗಿತ್ತು. ನೆಹರೂ ಕಾಲದಲ್ಲಿ ಧರ್ಮತೇಜಾ ಎಂಬ ಉದ್ಯಮಿಯು ತನ್ನ ಅತಿ ಸುಂದರ ಹೆಂಡತಿಯನ್ನು ಮುಂದಿಟ್ಟುಕೊಂಡು ರಾಜಕಾರಣಿಗಳನ್ನು ಬುಟ್ಟಿಗೆ ಹಾಕಿಕೊಂಡು ನಡೆಸಿದ ಕರ್ಮಕಾಂಡ 60 ರ ದಶಕದಲ್ಲಿ ತುಂಬಾ ಚರ್ಚೆಗೆ ಗ್ರಾಸವಾಗಿತ್ತು.



ಭಾರತದ ಎಲ್ಲಾ ದೊಡ್ಡ ಕಂಪನಿಗಳು ದಿಲ್ಲಿಯಲ್ಲಿ ತಮ್ಮ-ತಮ್ಮ ಒಂದು 'ಸಂಪರ್ಕ ವಿಭಾಗ' ತೆರೆದು ಅದರ ಮುಖ್ಯ ಸಂಪರ್ಕಾಧಿಕಾರಿಯಾಗಿ ಸಣ್ಣ ವಯಸ್ಸಿನ ಸುಂದರ ಮಹಿಳೆಯನ್ನೇ ನೇಮಿಸುವುದನ್ನು ನಾನು ದಿಲ್ಲಿಯಲ್ಲಿದ್ದಾಗ ಕಂಡಿದ್ದೇನೆ. ಇಡೀ ಜಗತ್ತಿಗೆ ಬ್ರಹ್ಮಚರ್ಯ ಹಾಗೂ ಏಕಪತ್ನಿವ್ರತದ ಮಹತ್ವ ಬೋಧಿಸುವ ರಾಮನ ನಾಡಿನಲ್ಲೇ ಅತ್ಯಧಿಕ ಕೃಷ್ಣ-ಕನ್ಹಯ್ಯಾಗಳಿರುವುದು! ನಮ್ಮ ಕರ್ನಾಟಕದಲ್ಲಿ ಒಬ್ಬ ನರ್ಸ್ ರೇಣುಕಾ, ಒಬ್ಬ ಹಾಲಪ್ಪ ಇದ್ದರೆ, ಉತ್ತರ ಭಾರತದಲ್ಲಿ 60% ರಾಜಕಾರಣಿಗಳು ರೇಣುಕಾ-ಹಾಲಪ್ಪಗಳೇ! ಹಾಗಾಗಿ ದಿಲ್ಲಿಯ ರಾಜಕಾರಣಿ-ಅಧಿಕಾರಿ ವಲಯದಲ್ಲಿ ಸುತ್ತಾಡಿ ತಮ್ಮ "ಕ್ಲೈಂಟ್"ಗಳ ಕೆಲಸ ಮಾಡಿಸುವುದರಲ್ಲಿ ಮಹಿಳೆಯರು ನಿಸ್ಸೀಮರು. 'ಎಲ್ಲದಕ್ಕೂ ರೆಡಿ' ಆಗಿರುವ ಇವರುಗಳು, ಪಿಆರ್‌ಓ, ಕನ್ಸಲ್‌ಟೆಂಟ್, ಮಹಿಳಾ-ಉದ್ಯಮಿ, ಮಹಿಳಾ ಪತ್ರಕರ್ತರು ಎಂಬ ಕೊರಳ-ಪಟ್ಟಿ ಕಟ್ಟಿಕೊಂಡು ಗಂಡಸರ ವೀಕ್‌ನೆಸ್‌ಗಳ ಲಾಭ ಪಡೆದು ತಮ್ಮ ಕೆಲಸ ಮಾಡಿಸಿಕೊಳ್ಳುವಲ್ಲಿ ತುಂಬಾ ಚತುರರು.


ಎಲ್ಲಾ ವಿಷಯಕ್ಕೂ ಎಲ್ಲರಲ್ಲೂ ಜಾತಿ ಧರ್ಮ ಕೇಳುವ ಅಭ್ಯಾಸವುಳ್ಳವರೂ ಸುಂದರ ಹೆಣ್ಣಿನ ಜಾತಿ-ಧರ್ಮ ಕೇಳುವುದಿಲ್ಲ. ಪುರುಷ ಬ್ರೋಕರ್‌ಗಳಿಗಿಂತ ಮಹಿಳಾ ಬ್ರೋಕರ್‌ಗಳು ಹೆಚ್ಚು ಸುಲಭವಾಗಿ, ಕಡಿಮೆ ಖರ್ಚಿನಲ್ಲಿ, ಹೆಚ್ಚು ಬೇಗ ಕೆಲಸ ಮಾಡಿಸಿಕೊಡಬಲ್ಲರು ಎಂಬುದು ರುಜುವಾತದ ಸತ್ಯ. ಈ ನಮ್ಮ ಕಾಮಸೂತ್ರದ ದೇಶದಲ್ಲಿ ಗಂಡಸರ 'ಯುನಿವರ್ಸಲ್-ವೀಕ್‌ನೆಸ್' ನೀರಾ ರಾಡಿಯಾಳಂತಹವರ ಸ್ಟ್ರಾಂಗ್ ಪಾಯಿಂಟ್.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಡಿಸೆಂಬರ್ 1, 2010ರ ಸಂಚಿಕೆ ಬೆಂಕಿಯಂತಿತ್ತು. ಭ್ರಷ್ಟ ಬಿಜೆಪಿ ದುಷ್ಟರ ಹಗರಣಗಳನ್ನು ಬಯಲಿಗೆಳೆದಿತ್ತು. ಇಂತಹ ಮತ್ತಷ್ಟು ವರದಿಗಳಿಗಾಗಿ ಕಾಯ್ತಾ ಇರ್ತೀನಿ ನಾನು.

- ನಿಲೇಶ್ ಬೇನಾಳ್,
ಆಲಮಟ್ಟಿ ಜಲಾಶಯ, ಬಿಜಾಪುರ ಜಿಲ್ಲೆ

ಗೋಲ್ಡು ಗಣೇಶನ ಸಂಭಾವನೆ ಜಾಸ್ತಿ ಸಂಪಾದನೆ ನಾಸ್ತಿ



ಕೇವಲ ನಾಲ್ಕೇ ನಾಲ್ಕು ವರ್ಷಗಳಲ್ಲಿ ಗೋಲ್ಡನ್‌ಸ್ಟಾರ್ ...ಶ್ ರೋಲ್ಡ್‌ಗೋಲ್ಡ್ ಸ್ಟಾರ್‌ನಂತೆ ಮಂಕಾಗುತ್ತಾರೆಂದು ...ರು ತಾನೇ ಊಹಿಸಿದ್ದರು?

ಮೊನ್ನೆ ಬಿಡುಗಡೆಯಾದ ಗಣೇಶ್ ನಟಿಸಿದ್ದ 'ಏನೋ ...ಥರಾ' ಚಿತ್ರ ಮೊದಲವಾರ ಕರ್ನಾಟಕದಾದ್ಯಂತ ಗಳಿಸಿದ ... ಗಳಿಕೆ ಎಷ್ಟು ಗೊತ್ತೆ? ಕೇವಲ 40 ಲಕ್ಷ ರೂ.ಗಳು. ... ಇತ್ತೀಚೆಗೆ ಬಂದಿರುವ ಹೊಸ ನಟರ ಚಿತ್ರದ ಗಳಿಕೆಗಿಂತಲೂ ... ಅಂದಹಾಗೆ, ಗಣೇಶ್ ಈ ಚಿತ್ರಕ್ಕಾಗಿ ಪಡೆದ ಸಂಭಾವನೆ ... ಗೊತ್ತೆ? ಕೇವಲ 90 ಲಕ್ಷ ರೂ.ಗಳು.

ಈ ಚಿತ್ರದ ಒಟ್ಟಾರೆ ಬಜೆಟ್ 6 ಕೋಟಿ ರೂ.ಗಳು. ...ವರೆ 6 ಕೋಟಿ ಬಂಡವಾಳವನ್ನು ಸುರಿದ ನಿರ್ಮಾಪಕ ...ದ್ರಶೇಖರ ಮೊದಲ ವಾರ 40 ಲಕ್ಷ ಪಡೆದಿದ್ದಾರೆಂದರೆ ... ಚಿತ್ರ ಸಕತ್ತಾಗಿ ಫ್ಲಾಪ್ ಆಗಿದೆ ಎಂದೇ ಅರ್ಥ.

... ಗಣೇಶ್ ನಟಿಸಿದ ಚಿತ್ರ ...ಕ್ಸಾಫೀಸ್‌ನಲ್ಲಿ ಹೇಳಹೆಸರಿಲ್ಲದಂತೆ ...ಗ್ಗರಿಸಿರುವುದು ಇದೇ ಮೊದಲ ...ರಿಯೇನೂ ಅಲ್ಲ. ಹಾಗೇ ...ೀಡಿದರೆ ಕಳೆದ ಮೂರು ...ರ್ಷಗಳಿಂದ ಗಣೇಶ್ ನಟಿಸಿದ ...ಾವುದೇ ಚಿತ್ರ ಲಾಭ ಮಾಡಿಲ್ಲ. ... ಉದಾಹರಣೆಗೆ ಗಣೇಶ್-...ಮ್ಯಾ-ರಾಕ್‌ಲೈನ್ ಕಾಂಬಿನೇಶನ್ ... ಬಂದ 'ಬೊಂಬಾಟ್' ಚಿತ್ರವನ್ನು ಖರೀದಿಸಿದ್ದ ...ರಕರೆಲ್ಲರೂ ಕೈ ಸುಟ್ಟುಕೊಂಡರು. ಆನಂತರ ಭಾರೀ ...ೕಕ್ಷೆಯ 'ಸರ್ಕಸ್' ಕೂಡ ಅಮೋಘವಾಗಿ ನೆಲಕಚ್ಚಿತ್ತು. ... 'ಸಂಗಮ' ಎಂಬ ಚಿತ್ರ ಭಾರೀ ಸುದ್ದಿ ಮಾಡಿತ್ತೇ ...ರತು ಅದು ಒಂದು ವಾರ ಕೂಡಾ ಹೌಸ್‌ಫುಲ್ ಪ್ರದರ್ಶನ ... ಕಾಣಲಿಲ್ಲ.



ವಾದಿಮಹೇಶ್-ಚಂದ್ರಶೇಖರ್

... ಹೀಗೆ ಸಾಲುಸಾಲಾಗಿ ಆತನ ಚಿತ್ರಗಳು ಸೋಲನ್ನು ...ಭವಿಸಲಾರಂಭಿಸಿದಾಗಲೇ ಗಣೇಶ್ ಅತ್ಯಂತ ಚಾಕಚಕ್ಯತೆ ...ಂದ ತನ್ನ ಸ್ವಂತ ನಿರ್ಮಾಣದ ಸಂಸ್ಥೆಯನ್ನಾರಂಭಿಸಿ ತನ್ನ ಮಾರುಕಟ್ಟೆ ಮತ್ತು ವರ್ಚಸ್ಸು ಇನ್ನಷ್ಟು ಕುಸಿಯದಂತೆ ನೋಡಿಕೊಂಡರು. ಅವರ ನಿರ್ಮಾಣದ 'ಮಳೆಯಲಿ ಜೊತೆಯಲಿ' ಬಾಕ್ಸಾಫೀಸ್‌ನಲ್ಲಿ ವಿಜೃಂಭಿಸದಿದ್ದರೂ ಚಿತ್ರಕ್ಕೆ ಹಾಕಿದ್ದ ಹಣಕ್ಕೆ ಮೋಸವಾಗಲಿಲ್ಲ.

ಈ ಚಿತ್ರದ ನಂತರ ಮತ್ತೆ ಗಣೇಶನ ಸೋಲಿನ ಸರಪಳಿ ಮುಂದುವರೆಯಿತು. ಆಂಧ್ರದಲ್ಲಿ ಅಭೂತಪೂರ್ವ ಯಶಸ್ಸು ಕಂಡ 'ಉಲ್ಲಾಸಂಗ, ಉತ್ಸಾಹಂಗ' ಎಂಬ ತೆಲುಗು ಚಿತ್ರದ ಕನ್ನಡಾವತರಣಿಕೆಯಲ್ಲಿ ಗಣೇಶ್ ನಟಿಸಿದಾಗ ಇಲ್ಲೂ ಈ ಚಿತ್ರ ಜಯಭೇರಿ ಬಾರಿಸುತ್ತದೆ ಎಂದೇ ಬಾಜಿದಾರರು ಭಾವಿಸಿದ್ದರು. ಆದರೆ ಕನ್ನಡದಲ್ಲಿ ತೆರೆಕಂಡ 'ಉಲ್ಲಾಸ, ಉತ್ಸಾಹ' ಎಂಬ ಚಿತ್ರ ಬಾಕ್ಸಾಫೀಸಿನಲ್ಲಿ ಎಂತಹದ್ದೂ ಮ್ಯಾಜಿಕ್ ಮಾಡಲಿಲ್ಲ. ಬದಲಾಗಿ ಗಣೇಶ್ ಕನ್ನಡದ ನಿರ್ಮಾಪಕರ ಪಾಲಿಗೆ ಟ್ರ್ಯಾಜಿಕ್ ಹೀರೋ ಎನಿಸಿಕೊಂಡರು. ಇದರ ಮುಂದುವರೆದ ಭಾಗದಂತೆ ಮೊನ್ನೆ ಬಿಡುಗಡೆಗೊಂಡ 'ಏನೋ ಒಂಥರಾ' ಚಿತ್ರ ಕೂಡ ಮೊದಲ ವಾರದಲ್ಲೇ ಸೋತಿದೆ.

ನಾಲ್ಕು ವರ್ಷಗಳ ಹಿಂದೆ 'ಮುಂಗಾರು ಮಳೆ' ಕರ್ನಾಟಕದಾದ್ಯಂತ ಭಾರೀ ಜೋರಾಗಿ ಸುರಿಯುತ್ತಿದ್ದಾಗ ಉದ್ಯಮದ ಜನರೆಲ್ಲಾ ಇದೇ ಗಣೇಶನ ಹಿಂದೆ ಹಣದ ಥೈಲಿ ಹಿಡಿದುಕೊಂಡು ಓಡಾಡುತ್ತಿದ್ದರು. ಇನ್ನೇನು ಕನ್ನಡ ಚಿತ್ರರಂಗದ ಬೇರೆ ನಾಯಕ ನಟರುಗಳ ಕಥೆ ಮುಗಿದೇಹೋಯಿತು ಎಂದು ನಿರ್ಮಾಪಕರು ಇತರೆ ನಟರ ಬಗ್ಗೆ ಗೇಲಿಯ ಮಾತು ಆಡಿದ್ದರು. ಆಗೊಮ್ಮೆ ಛಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು 'ಹುಚ್ಚ' ಖ್ಯಾತಿಯ ಸುದೀಪ್ ಹೇಳಿದ ಮಾತುಗಳು ನೆನಪಿಗೆ ಬರುತ್ತಿವೆ. "ಈ ನಿರ್ಮಾಪಕರೆಲ್ಲಾ ಮುಂದೊಂದು ದಿನ ಮತ್ತೆ ನಮ್ಮ ಮನೆ ಬಾಗಿಲಿಗೆ ಬಂದೇ ಬರುತ್ತಾರೆ, ನೋಡಿ. ಯಾಕೆಂದರೆ ಗಣೇಶ್ ನಟಿಸಿದ ಎಲ್ಲಾ ಚಿತ್ರಗಳು 'ಮುಂಗಾರು ಮಳೆ' ತರಹ ಭರ್ಜರಿ ಯಶಸ್ಸು ಕಾಣಲು ಸಾಧ್ಯವಿಲ್ಲ, ಅದನ್ನೇ ನಿರೀಕ್ಷಿಸುವ ನಿರ್ಮಾಪಕರಿಗೂ ಮತ್ತು ಗಣೇಶ್‌ಗೂ ಭ್ರಮನಿರಸನವಾಗಲಿದೆ" ಎಂದು ಯಾವುದೋ ಸಂತೋಷಕೂಟದಲ್ಲಿ ಈ ಯುವ ನಾಯಕರು ಹೇಳಿದ್ದರು.


ಆಗ ಗಣೇಶನ ಯಶಸ್ಸನ್ನು ನೋಡಿ ಜೀರ್ಣಿಸಿಕೊಳ್ಳಲಾಗದೇ ಇವರಿಬ್ಬರು ಹೀಗೆ ಮಾತನಾಡುತ್ತಿದ್ದಾರೆ ಎಂದು ಕೆಲವರು ಕುಹಕವಾಡಿದ್ದರು. ಆದರೆ ಅಂದು ಇವರಿಬ್ಬರು ಹೇಳಿದ್ದ ಭವಿಷ್ಯ ಇಷ್ಟು ಬೇಗ ನಿಜವಾಗುತ್ತದೆ ಎಂದು ಯಾರೂ ಭಾವಿಸಿರಲಿಲ್ಲ.

ಗಣೇಶ್ ಮೇಲಿರುವ ಮಹತ್ತರವಾದ ಆರೋಪವೆಂದರೆ ಸಿನಿಮಾ ಮುಗಿದ ನಂತರ ಗಣೇಶ್ ತನ್ನ ಚಿತ್ರದ ಪ್ರಚಾರಕ್ಕಾಗಿ ನಿರ್ಮಾಪಕರ ಜೊತೆ ಸಹಕರಿಸುವುದಿಲ್ಲವೆಂದು. ಈ ನೆಪವನ್ನೇ ಮುಂದಿಟ್ಟುಕೊಂಡು ಮೊನ್ನೆ 'ಏನೋ ಒಂಥರಾ' ಚಿತ್ರದ ನಿರ್ಮಾಪಕ ಚಂದ್ರಶೇಖರ್ ಗಣೇಶ್ ವಿರುದ್ಧ ಆರೋಪಗಳ ಸುರಿಮಳೆಗೈದರು. "ಚಿತ್ರ ಬಿಡುಗಡೆ ಸಂದರ್ಭದಲ್ಲಿ ನಾವು ಏನೇ ಮಾಡಿದರೂ, ಎಷ್ಟೇ ವಿನಂತಿಸಿಕೊಂಡರೂ ಗಣೇಶ್ ಚಿತ್ರದ ಪ್ರಚಾರಕ್ಕೆ ಬರಲಿಲ್ಲ. ಚಿತ್ರದ ಸೋಲಿಗೆ ಹಲವಾರು ಕಾರಣಗಳಲ್ಲಿ ಇದೂ ಒಂದು" ಎಂಬುದು ಅವರ ಆರೋಪ.

ಆದರೆ ತಮ್ಮ ಸ್ವಂತ ನಿರ್ಮಾಣದ ಚಿತ್ರದ ಪ್ರಚಾರಕ್ಕೆ ಗಣೇಶ್ ಹೆಚ್ಚು ಆದ್ಯತೆ ಕೊಡುತ್ತಾರೆ ಎಂಬುದು ಉಳಿದ ನಿರ್ಮಾಪಕರ ದೂರು. ಅದು ನಿಜ ಕೂಡ. ಯಾಕೆಂದರೆ ತನ್ನ ನಿರ್ಮಾಣದ 'ಮಳೆಯಲಿ, ಜೊತೆಯಲಿ' ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಗಣೇಶ್ ಮತ್ತೊಮ್ಮೆ ಉದಯ ಟಿವಿಯಲ್ಲಿ 'ಕಾಮಿಡಿ ಟೈಮ್ಸ್' ಕಾರ್ಯಕ್ರಮ ನಡೆಸಿಕೊಡುವ ಮೂಲಕ ತಮ್ಮ ಚಿತ್ರದ ಪ್ರಚಾರ ಮಾಡಿದ್ದರು. ಕ್ರಿಕೆಟ್ ಬಗ್ಗೆ ಗಣೇಶ್‌ಗೆ ಅಂತ ವಿಶೇಷವಾದ ಕ್ರೇಜ್ ಇಲ್ಲದಿದ್ದರೂ ಮೈಸೂರಿನಲ್ಲಿ ನಡೆದ ರಣಜಿ ಫೈನಲ್ಸ್ ಪಂದ್ಯವನ್ನು ಪತ್ನಿ ಶಿಲ್ಪಾ ಜೊತೆ ವೀಕ್ಷಿಸಿ ಸುದ್ದಿ ಮಾಡಿದ್ದರು.

ಒಂದು ಚಿತ್ರದ ಸೋಲಿಗೆ ಹಲವಾರು ಕಾರಣಗಳಿರಬಹುದು. ಉದಾಹರಣೆಗೆ ಗಣೇಶನ ಸಂಭಾವನೆ ಸಿಕ್ಕಾಪಟ್ಟೆ ಜಾಸ್ತಿ; ಗಣೇಶ್ ನಟನೆಯು ಏಕತಾನತೆಯಿಂದ ಕೂಡಿದೆ; ಈತನ ಬಗೆಗಿನ ಕ್ರೇಜ್ ಸಿಕ್ಕಾಪಟ್ಟೆ ಕೆಳಗಿಳಿದಿದೆ; ಚಿತ್ರದ ಕಥಾವಸ್ತು ಆಯ್ಕೆಯಲ್ಲಿ ಮುಗ್ಗರಿಸಿರಬಹುದು ಅಥವಾ ಗಣೇಶ್ ಟ್ಯಾಲೆಂಟನ್ನು ನಿರ್ದೇಶಕ ಸಮರ್ಪಕವಾಗಿ ಬಳಸಿಕೊಂಡಿಲ್ಲ, ಇತ್ಯಾದಿ, ಇತ್ಯಾದಿ.

ಇವುಗಳಲ್ಲಿ ಗಣೇಶ್ ಚಿತ್ರದ ಸೋಲಿಗೆ ಯಾವುದು ಕಾರಣ ಗೊತ್ತಿಲ್ಲ. ಆದರೆ ಗಣೇಶ್ ಚಿತ್ರಗಳು ಸೋಲುತ್ತಿರುವುದು ಮಾತ್ರ ಸತ್ಯವಾದ ಸಂಗತಿ. ●



ಗೆದ್ದರೆ ಸೂಪರ್ ಗೆಲ್ಲದಿದ್ದರೆ ಪಾಪರ್!

ಹತ್ತು ವರ್ಷಗಳ ನಂತರ ಉಪ್ಪಿ ನಿರ್ದೇಶನ ಮಾಡುತ್ತಿರುವುದು ಆತನ ಅಭಿಮಾನಿಗಳಿಗೆ ಎಲ್ಲಿಲ್ಲದ ಸಂತೋಷ ತಂದುಕೊಟ್ಟಿದೆ. ಈಗ ಉಪೇಂದ್ರ ನಿರ್ದೇಶಿಸಿ ನಾಯಕನಾಗಿ ನಟಿಸುತ್ತಿರುವ 'ಸೂಪರ್' ಚಿತ್ರದತ್ತ ಇಡೀ ಗಾಂಧಿನಗರ ಕಾತರದ ಕಣ್ಣುಗಳಿಂದ ನೋಡುತ್ತಿದೆ.

ರಾಕ್‌ಲೈನ್ ವೆಂಕಟೇಶ್ ನಿರ್ಮಿಸುತ್ತಿರುವ ಈ ಚಿತ್ರ ಗಲ್ಲಾ ಪೆಟ್ಟಿಗೆಯಲ್ಲಿ ಮುಗ್ಗರಿಸುವ ಚಾನ್ಸ್ ಬಹಳ ಕಡಿಮೆ. ಈ ಚಿತ್ರವನ್ನು ಒಮ್ಮೆಗೆ ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ನಿರ್ಮಿಸುವ ಮುಖಾಂತರ ರಾಕ್‌ಲೈನ್ ತಮ ವ್ಯಾವಹಾರಿಕ ಬುದ್ಧಿವಂತಿಕೆಯನ್ನು ಮೆರೆದಿದ್ದಾರೆ. ಯಾಕೆಂದರೆ ಈ ಚಿತ್ರದ ನಾಯಕಿಯಾಗಿ ನಟಿಸುತ್ತಿರುವ ನಯನತಾರಾ ಎಂಬ ಸುಂದರಿಗೆ ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ ಅಪಾರವಾದ ಬೇಡಿಕೆ ಇದೆ. ಹೀಗಾಗಿ ಈ ಚಿತ್ರದ ತಮಿಳು ಮತ್ತು ತೆಲುಗು ಅವತರಣಿಕೆಯನ್ನು ಈಗಾಗಲೇ ಅಲ್ಲಿಯ ಚಾನೆಲ್‌ನವರು ಬಹಳ ಉತ್ತಮ ರೇಟ್‌ಕೊಟ್ಟು ಖರೀದಿಸಿದ್ದಾರಂತೆ. ಅದರರ್ಥ ಚಿತ್ರದ ಬಜೆಟ್‌ನ ಬಹುದೊಡ್ಡ ಪಾಲು ಮೂರು ಭಾಷೆಯ ಟಿವಿ ಚಾನೆಲ್‌ಗಳ ಪ್ರಸಾರದ ಹಕ್ಕುಗಳಿಂದ ರಾಕ್‌ಲೈನ್ ಈಗಾಗಲೇ ಪಡೆದಿದ್ದಾರೆಂದಾಯಿತು.

ಮತ್ತೊಂದೆಡೆ ಚಿತ್ರದ ಕಥಾವಸ್ತು ವಿಭಿನ್ನವಾಗಿದೆಯಂತೆ. ಇನ್ನು ಗಿಮಿಕ್ ರಾಜ ಉಪ್ಪಿ ಪಡ್ಡೆ ಹುಡುಗರನ್ನು ರಂಜಿಸುವ ದೃಷ್ಟಿಯಿಂದ ಖಂಡಿತವಾಗಿಯೂ ಈ ಚಿತ್ರದಲ್ಲೂ ಗಿಮಿಕ್ಕು, ಮ್ಯಾಜಿಕ್ಕು ಮಾಡೇ ಮಾಡುತ್ತಾರೆ. ಈಗಿರುವ ಟ್ರೆಂಡನ್ನು ನೋಡಿದರೆ ಒಂದು ಹಾಡು, ಒಂದು ಗಿಮಿಕ್ ಕ್ಲಿಕ್ ಆದರೂ ಸಾಕು, ಸಿನಿಮಾ ಬಾಕ್ಸಾಫೀಸ್‌ನಲ್ಲಿ ಸುಲಭವಾಗಿ ಗೆಲ್ಲುತ್ತದೆ. ಇದಕ್ಕೆ ಈಗಷ್ಟೇ ಜಯಭೇರಿ ಬಾರಿಸಿರುವ ಪುನೀತ್ ನಟಿಸಿರುವ 'ಜಾಕಿ' ಒಂದು ತಾಜಾ ಉದಾಹರಣೆ.

ಹೀಗಾಗಿ 'ಸೂಪರ್' ಚಿತ್ರ ಬಾಕ್ಸ್‌ಆಫೀಸಿನಲ್ಲಿ ಗೆಲ್ಲಬಹುದು. ಆದರೆ ಈಗಾಗಲೇ ಮಧ್ಯವಯಸ್ಕರಾಗಿರುವ ಉಪೇಂದ್ರರಿಗೆ ಈ ಚಿತ್ರ ಪುನರ್ಜನ್ಮ ನೀಡಿ ಆತನ ತಾರಾಮೌಲ್ಯ ಮತ್ತು ವರ್ಚಸ್ಸನ್ನು ವೃದ್ಧಿಸುತ್ತದೋ? ಉಪೇಂದ್ರ ಈ ಚಿತ್ರದಲ್ಲಿ ನಿರ್ದೇಶಕರಾಗಿ ಗೆಲ್ಲುತ್ತಾರೋ ಅಥವಾ ನಾಯಕ ನಟರಾಗಿ ಗೆಲ್ಲುತ್ತಾರೋ? ಅದೇನೇ ಇದ್ದರೂ ಈ ಚಿತ್ರದ ಯಶಸ್ಸು ಉಪ್ಪಿಯ ಪಾಲಿಗೆ ಅತಿ ಮುಖ್ಯವಾಗಿದೆ. 'ಸೂಪರ್' ಚಿತ್ರದ ನಿರೂಪಣೆ, ಚಿತ್ರಕಥೆ ಮತ್ತು ಸಂಭಾಷಣೆಗಳು ಕ್ಲಿಕ್ ಆದರೆ ಉಪ್ಪಿ ಹತ್ತು ವರ್ಷಗಳ ನಂತರ ಮತ್ತೊಂದು ಮ್ಯಾಜಿಕ್ ಮಾಡಿದಂತಾಗುತ್ತದೆ. ಈ ಚಿತ್ರದ ಯಶಸ್ಸಿನ ಮುಖಾಂತರ ಈಗ ಚಾಲ್ತಿಯಲ್ಲಿರುವ ಯೋಗರಾಜ್‌ಭಟ್, ಸೂರಿ, ಪ್ರೇಮ್ ಮೊದಲಾದ ಹೊಸ ತಲೆಮಾರಿನ ನಿರ್ದೇಶಕರನ್ನು ಉಪ್ಪಿ ಓವರ್‌ಟೇಕ್ ಮಾಡಿದಂತಾಗುತ್ತದೆ. ಹತ್ತು ವರ್ಷಗಳ ಹಿಂದೆ ಚಿತ್ರವಿಚಿತ್ರ ಉಡುಪು ಧರಿಸಿ, ವಿಚಿತ್ರವಾದ ಡೈಲಾಗ್ ಮತ್ತು ಹಾಡುಗಳನ್ನು ಬರೆದು ಪಡ್ಡೆ ಹುಡುಗರ ಆರಾಧ್ಯದೈವ ಎನಿಸಿಕೊಂಡಿದ್ದ ಉಪೇಂದ್ರ ಮತ್ತೆ ಗೆದ್ದರೆ ಸೂಪರ್, ಗೆಲ್ಲದಿದ್ದರೆ ಪಾಪರ್!!!

ಗ್ಲಾಮರಸ್ ಬೆಡಗಿಯರ ರೀ ಎಂಟ್ರಿ

ಇತ್ತೀಚೆಗೆ ಮರೆಯಾಗಿದ್ದ ಇಬ್ಬರು ಅಪ್ಪಟ ಕನ್ನಡ ಸ್ಪೈಸಿ ...ರ್ಲ್ಸ್ ಮತ್ತೆ ಕಾಣಿಸಿಕೊಳ್ಳುತ್ತಿದ್ದಾರೆ. ಸ್ಮಿತಾ ಮತ್ತು ಡೈಸಿ ...ೋಪಣ್ಣ ಎಂಬ ಇಬ್ಬರು ಬೆಡಗಿಯರು ಕಳೆದ ಎರಡು ...ರ್ಷಗಳಲ್ಲಿ ಕನ್ನಡ ಚಿತ್ರಗಳಲ್ಲಿ ನಟಿಸಿದ್ದೇ ಇಲ್ಲ. ಅಷ್ಟೇ ಅಲ್ಲ, ... ಇಲ್ಲಿ ಸಭೆ ಸಮಾರಂಭ, ಟಿವಿ ರಿಯಾಲಿಟಿ ...ೕಗಳಲ್ಲಿ ತಮ್ಮ ಮುಖ ಅಥವಾ ಮೈ ...ಾಟವನ್ನು ತೋರಿಸಿದ್ದೂ ಇಲ್ಲ! ಹಾಗಾದರೆ ... ಮನೆಯಂಗಳದಲ್ಲರಳಿದ ಈ ಹೂಗಳು ...ಾಗಿಹೋದವೆ ಎಂಬ ಸಂಶಯವೂ ಕಾಡಿತ್ತು. ... ಸ್ಮಿತಾ ಮತ್ತು ಡೈಸಿ ಬೋಪಣ್ಣ 'ಬೋಲ್ಡ್ ...ಡ್ ಬ್ಯೂಟಿಫುಲ್' ಎಂದೆನಿಸಿಕೊಂಡವರು. ...ರೆ ಅವರ ನಂತರ ಕನ್ನಡ ಚಿತ್ರ ದಿಗಂತದಲ್ಲಿ ...ಣಿಸಿಕೊಂಡ ಹೊಸ ಹುಡುಗಿಯರೂ ಎಷ್ಟು ...ದಾಸ್ ಆಗಿದ್ದರೆಂದರೆ ಉದ್ಯಮದ ಜನ ...ವರಿಬ್ಬರನ್ನು ಮರೆತೇಬಿಟ್ಟರು. ನಮ್ಮ ನಿರ್ಮಾ... ನಿರ್ದೇಶಕರುಗಳೆಲ್ಲಾ ರಾಗಿಣಿ ಎಂಬ ಆರಡಿ ...ತ್ತರದ ಸುಂದರಿ ಮತ್ತು ನಿಧಿ ಸುಬ್ಬಯ್ಯ ...ಬ ಇನ್ನೊಬ್ಬಳು ಮಹಾಸುಂದರಿಯ ಸುತ್ತ ಗಿರಕಿ ...ಹೊಡೆಯಲಾರಂಭಿಸಿದರು.



ಸ್ಮಿತಾ

'ಚಮ್ಕಾಯಿಸಿ, ಚಿಂದಿ ಉಡಾಯಿಸಿ' ಚಿತ್ರದಲ್ಲಿ ಕೋಮಲ್ ...ಜತೆ ನಾಯಕಿಯಾಗಿದ್ದ ನಿಧಿ ಸುಬ್ಬಯ್ಯ ಸಮುದ್ರ ತೀರದಲ್ಲಿ ... ಮೈಮಾಟವನ್ನು ಕುಲುಕಿ ನರ್ತಿಸಿದ್ದನ್ನು ನೋಡಿ ಅರಸಿಕರನ್ನೂ ...ರೋಮಾಂಚನಗೊಳಿಸಿದ್ದಳು. ಅದಾದನಂತರ ...ಯೋಗರಾಜ್ ಭಟ್ಟರ 'ಪಂಚರಂಗಿ' ಚಿತ್ರದಲ್ಲಿ ...ನ್ನೊಂದು ರೀತಿಯ ಬೆಡಗಿಯಾಗಿ, ತುಂಡು ...ಗೆ ಧರಿಸಿ ಪಡ್ಡೆ ಹುಡುಗರನ್ನು ಮೆಚ್ಚಿಸಿದ್ದಳು. ... ಮತ್ತೊಂದೆಡೆ ರಾಗಿಣಿ ತನ್ನ ಮೊದಲ ...ತ್ರ 'ಹೋಳಿ'ಯಲ್ಲಿ ಮೈ ಚಳಿ ಬಿಟ್ಟು ನಟಿಸಿ... ಆಕೆಗೆ ತಾರಾಮೌಲ್ಯ ತಂದುಕೊಟ್ಟಿದ್ದು ...ದೀಪ್ ಜತೆ ನಟಿಸಿದ 'ವೀರಮದಕರಿ' ಚಿತ್ರ. ... ವಿಶ್ವವಿರೂಪ ಆಕೆಯೂ ಅಷ್ಟೇ, ತುಂಡು ...ಗೆಗಳನ್ನು ಧರಿಸಿ ತನ್ನ ನೀಳವಾದ ಮೊಣ...ಕಾಲನ್ನು ಪ್ರದರ್ಶಿಸುವುದರಲ್ಲಿ ಹೆಚ್ಚು ಸಂತೋಷ ...ಪಡುತ್ತಾಳೆ.



ನಿಧಿ

... ಹೀಗೆ ನಿಧಿ ಸುಬ್ಬಯ್ಯ ಮತ್ತು ರಾಗಿಣಿ ಗ್ಲಾಮರಸ್ ...ನಾಯಕಿಯರಾಗಿ ಮೆರೆಯುತ್ತಿರುವಾಗಲೇ ರಾಧಿಕಾ ಪಂಡಿತ್ ಮತ್ತು ಆಂದ್ರಿತಾ ರೇ ಎಂಬ ಪಟಾಣಿ ನಾಯಕಿಯರು ಕೂಡಾ ತಮ್ಮ ನಟನೆ, ಹಾವಭಾವ, ನಡೆನುಡಿಯಿಂದ ಇಡೀ ಉದ್ಯಮದ ಗಮನ ಸೆಳೆದಿದ್ದಾರೆ. ಇವರಿಬ್ಬರಲ್ಲಿ ಆಂದ್ರಿತಾ ಆರಂಭದಲ್ಲಿ 'ಜಂಗ್ಲಿ' ಚಿತ್ರದಲ್ಲಿ ಐಟಂ ಸಾಂಗ್ ಹುಡುಗಿ ತರಹ ಕಾಣಿಸಿಕೊಂಡಳು. ಈ ಹುಡುಗಿ ಐಟಂ ಸಾಂಗ್‌ಗಷ್ಟೇ ಸೀಮಿತಳಾಗುತ್ತಾಳೋ ಎಂದೆನಿಸುವಷ್ಟರಲ್ಲಿ ಅಂದ್ರಿತಾ 'ಮನಸಾರೆ'ಯಲ್ಲಿ ಅದ್ಭುತವಾದ ನಟನೆಯನ್ನು ನೀಡುವ ಮುಖಾಂತರ ತನ್ನೊಳಗೊಬ್ಬ ಕಲಾವಿದೆ ಇದ್ದಾಳೆಂಬುದನ್ನು ತೋರಿಸಿದ್ದಳು. ಈಗ ಅಂದ್ರಿತಾ ಗ್ಲಾಮರಸ್ ಆಗಿಯೂ ಉತ್ತಮ ಅಭಿನೇತ್ರಿಯಾಗಿಯೂ ಕಾಣಿಸಿಕೊಳ್ಳುತ್ತಿದ್ದಾಳೆ.

ಆಕೆಗೆ ಪರ್ಯಾಯವಾಗಿಯೋ ಎಂಬಂತೆ ರಾಧಿಕಾ ಪಂಡಿತ್ ಎಂಬ ಕರಾವಳಿ ಹುಡುಗಿ ತನ್ನ ಭಾವಪೂರ್ಣ ನಟನೆಯಿಂದ ಒಂದೊಂದೇ ಚಿತ್ರಗಳ ಮುಖಾಂತರ ಯಶಸ್ಸಿನ ಮೆಟ್ಟಿಲೇರುತ್ತಿದ್ದಾಳೆ. ಈ ಮಧ್ಯೆ ಅಲ್ಲೊಮ್ಮೆ ಇಲ್ಲೊಮ್ಮೆ ಬಂದು ಹೋಗುವ ಜೆನ್ನಿಫರ್ ಕೊತ್ವಾಲ್ ಮತ್ತು ರೇಖಾ ಕೂಡಾ ಎಲ್ಲರನ್ನು ಬೆಚ್ಚಿಬೀಳಿಸುತ್ತಾರೆ. ಈ ಮೇಲೆ ತಿಳಿಸಿದ ಹುಡುಗಿಯರಲ್ಲದೆ, ಶರ್ಮಿಳಾ ಮಾಂಡ್ರೆ ಮತ್ತು ಹರಿಪ್ರಿಯಾ ಎಂಬ ಇನ್ನಿಬ್ಬರು ಸಖತ್ ಗ್ಲಾಮರಸ್ ಆಗಿದ್ದರೂ ಒಂದು ಒಳ್ಳೆಯ ಬ್ರೇಕ್‌ಗಾಗಿ ಕಾಯುತ್ತಿದ್ದಾರೆ.

ಹೀಗೆ ಸ್ಮಿತಾ ಮತ್ತು ಡೈಸಿ ಬೋಪಣ್ಣ ಪುನರಾಗಮನದ ಈ ಸಂದರ್ಭದಲ್ಲಿ ಕನ್ನಡದ ನಾಯಕಿಯರ ಲೋಕದೊಳಗೆ ಒಂದು ಸುತ್ತು ಹಾಕಿದಂತಾಗಿದೆ. ಇದರ ಒಟ್ಟಾರೆ ಅರ್ಥ ಏನೆಂದರೆ ಈಗ ಕನ್ನಡ ಚಿತ್ರರಂಗದಲ್ಲಿ ಹೆಚ್ಚು ಹೆಚ್ಚು ನಾಯಕಿಯರು ಸ್ವೀಟ್ ಸಿಕ್ಸ್‌ಟೀನ್‌ಗೆ ಕಾಲಿಡುವ ಸಂದರ್ಭದಲ್ಲೇ ಚಿತ್ರರಂಗಕ್ಕೂ ಕಾಲಿಡುತ್ತಿದ್ದಾರೆ. ಅಷ್ಟೇ ಅಲ್ಲ, ಈ ಹಿಂದಿನ ನಾಯಕಿಯರಂತೆ ಇವರು ತೀರಾ ಮಡಿವಂತರಲ್ಲ, ಯಾವುದೇ ರೀತಿಯ ಉಡುಪುಗಳನ್ನು ಧರಿಸಲು ಇವರು ಹಿಂಜರಿಯುವುದೇ ಇಲ್ಲ, ಹೀಗಾಗಿ ಸಹಜವಾಗೇ ನಿರ್ಮಾಪಕರು-ನಿರ್ದೇಶಕರುಗಳಿಗೆ ಈ ಹುಡುಗಿಯರು ಇಷ್ಟವಾಗುತ್ತಾರೆ.

ಹಾಗೇ ನೋಡಿದರೆ ಸ್ಮಿತಾ ಮತ್ತು ಡೈಸಿ ಕೂಡ ಈಗಿನ ಜನರೇಷನ್‌ನ ನಾಯಕಿಯರೇ. ಕವಿತಾ ಲಂಕೇಶರ 'ಅವ್ವ' ಚಿತ್ರದಲ್ಲಿ ಕೆಲವು ಚುಂಬನದ ದೃಶ್ಯಗಳಿದ್ದುದರಿಂದ ಅನೇಕ ಹುಡುಗಿಯರು ಈ ಪಾತ್ರ ಮಾಡಲು ಹಿಂಜರಿದಿದ್ದರು. ಆಗ ಯಾವುದೇ ಮುಲಾಜಿಲ್ಲದೆ ಧೈರ್ಯವಾಗಿ ನಾಯಕ ವಿಜಯ್ ಜೊತೆ ಸ್ಮಿತಾ ಕಿಸ್ಸಿಂಗ್ ದೃಶ್ಯಗಳಲ್ಲಿ ಪಾಲ್ಗೊಂಡಿದ್ದಳು. ಅದೇರೀತಿ ಡೈಸಿ ಬೋಪಣ್ಣ ಕೂಡಾ ಕವಿತಾ ಲಂಕೇಶರ 'ಬಿಂಬ'ದಲ್ಲಿ ಮೈತುಂಬಾ ಬಟ್ಟೆಯುಟ್ಟು ನಟಿಸಿದ್ದರೂ ಆ ನಂತರ ಗ್ಲಾಮರಸ್ ನಾಯಕಿಯಾಗಿ ಇತರೆ ಚಿತ್ರಗಳಲ್ಲಿ ಕುಣಿದಿದ್ದಳು.



ಡೈಸಿ

ಅದೇನೇ ಇರಲಿ, ಇಬ್ಬರೂ ಈಗ ಒಂದು ಪುಟ್ಟ ಬ್ರೇಕ್‌ನ ನಂತರ ಮತ್ತೆ ಗಾಂಧಿನಗರಕ್ಕೆ ವಾಪಸ್ಸಾಗಿದ್ದಾರೆ. ಇಂದು ಅವರ ಮುಂದೆ ಬಹಳ ದೊಡ್ಡ ಅಗ್ನಿ ಪರೀಕ್ಷೆಯಿದೆ. ತಮಗಿಂತ ಕಡಿಮೆ ಬಟ್ಟೆ ಧರಿಸುವ ಕನ್ನಡ ಹುಡುಗಿಯರೊಂದಿಗೆ ಇವರು ಪೈಪೋಟಿಗೆ ಇಳಿಯಬೇಕಾಗಿದೆ. ಈ ಸ್ಪರ್ಧೆಯಲ್ಲಿ ಸ್ಮಿತಾ ಮತ್ತು ಡೈಸಿ ಗೆದ್ದು ಮತ್ತೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳುತ್ತಾರೋ ನೋಡಬೇಕು.

ಅಂದಹಾಗೆ ಸ್ಮಿತಾ ಪುನಃ ನಟಿಸುತ್ತಿರುವುದು ಬಿ.ಸಿ.ಪಾಟೀಲ್ ಸಹೋದರ ಅಶೋಕ್ ಪಾಟೀಲರ '9 ಟು 12' ಚಿತ್ರದಲ್ಲಿ. ಡೈಸಿ ಕಾಣಿಸಿಕೊಳ್ಳುತ್ತಿರುವುದು ಚೇಂಬರ್ ಕಾರ್ಯದರ್ಶಿ ಕೆ.ಗಣೇಶ್ ನಿರ್ಮಿಸುತ್ತಿರುವ, ಜೆ.ಜೆ.ಕೃಷ್ಣ ನಿರ್ದೇಶನದ, ಆದಿತ್ಯ ನಾಯಕನಾಗಿ ನಟಿಸುತ್ತಿರುವ 'ಮಾಸ್' ಎಂಬ ಚಿತ್ರದಲ್ಲಿ. ಈ ಇಬ್ಬರು ನಾಯಕಿಯರ ಎರಡನೇ ಇನ್ನಿಂಗ್ಸ್ ಸುಖಕರವಾಗಿರಲಿ ಎಂಬುದು ನಮ್ಮ ಶುಭ ಹಾರೈಕೆ.

● ಶೆಣೈ

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 15-12-2010 RNI No. KARKAN200


ಶಿವಣ್ಣನ ಮೈಲಾರಿ ಮಹಿಮೆ!

ವಯಸ್ಸು ಐವತ್ತಕ್ಕೆ ಹತ್ತಿರವಾದರೂ ಇಂದಿಗೂ ಹದಿನಾರು ವಯಸ್ಸಿನ ನಟಿಯರೊಂದಿಗೆ ಲವರ್‌ಬಾಯ್ ಆಗಿ ಕಾಣಿಸಿಕೊಳ್ಳುವ ಶಿವರಾಜ್ ಕುಮಾರ್ ಎವರ್ ಗ್ರೀನ್ ಹೀರೋ. ಎಂಥದ್ದೇ ಸಂಗೀತವಿರಲಿ ಅದರ ರಿದಮ್ಮಿಗೆ ತಕ್ಕಂತೆ ಮೈಮೂಳೆಯನ್ನು ತಿರುಗಿಸಬಲ್ಲರು ಶಿವಣ್ಣ. ಆದರೆ ಶಿವಣ್ಣ ನಟಿಸಿದ ಇತ್ತೀಚಿನ ಬಹಳಷ್ಟು ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಹೀನಾಯವಾಗಿ ಸೋತಿವೆ. ಈ ಸೋಲಿಗೆ ಕಾರಣಗಳೇನು? ಇದರಿಂದ ಶಿವಣ್ಣ ಎದ್ದುಬರೋದು ಯಾವಾಗ? 'ಮೈಲಾರಿ'ಯ ಮೂಲಕವಾದರೂ ಶಿವಣ್ಣ ಹೊಸ ಟ್ರೆಂಡ್ ಆರಂಭಿಸುತ್ತಾರಾ?



ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅವರ ವೃತ್ತಿ ಬದುಕೇ ಹಾಗೆ...! ಹಲವೊಮ್ಮೆ ಅವರು ನಟಿಸಿದ ಸಿನಿಮಾ ಸೂಪರ್ ಹಿಟ್ ಆದರೆ ಆನಂತರ ಅವರ ಇತರೆ ಸಿನಿಮಾಗಳು ಇದ್ದಕ್ಕಿದ್ದಂತೆ ಒಂದರ ಹಿಂದೆ ಒಂದು ನೆಲಕಚ್ಚಿ ಬಿಡುತ್ತವೆ. ಆಗೆಲ್ಲ 'ಶಿವಣ್ಣನ ಜಮಾನಾ ಮುಗೀತು' ಎಂಬ ಕೂಗು ಕೇಳಿಬರುತ್ತದೆ. ಆದರೆ ಶಿವರಾಜ್‌ಕುಮಾರ್ ಮಾತ್ರ ಫೀನಿಕ್ಸ್ ಹಕ್ಕಿಯಂತೆ ಎದ್ದುಬಂದು ಒಂದು ಹಿಟ್ ಚಿತ್ರವನ್ನು ನೀಡುವ ಮೂಲಕ ತಾನಿನ್ನೂ ಇದ್ದೇನೆ ಎಂದು ಸಾಬೀತುಪಡಿಸುತ್ತಾರೆ. ಇದು ಕಳೆದ ಎರಡು ದಶಕಗಳಿಂದ ನಡೆದುಕೊಂಡು ಬಂದಿರುವ ನಿರಂತರ ಪ್ರಕಿಯೆ.

ಇದೇ ಡಿಸೆಂಬರ್ ಹತ್ತರಂದು ಬಿಡುಗಡೆಯಾಗುತ್ತಿರುವ ಶಿವರಾಜ್‌ಕುಮಾರ್ ಅಭಿನಯದ 'ಮೈಲಾರಿ' ಚಿತ್ರ ಭಾರೀ ಸದ್ದುಗದ್ದಲ ಎಬ್ಬಿಸಿದೆ. 'ಜೋಗಿ'ಯಲ್ಲಿ ಹೊಸ ಟ್ರೆಂಡ್ ಸೆಟ್ ಮಾಡಿದಂತೆ 'ಮೈಲಾರಿ' ಮೂಲಕವೂ ಶಿವಣ್ಣ ಹೊಸ ಟ್ರೆಂಡ್ ಆರಂಭಿಸುತ್ತಾರೆಯೇ ಎಂದು ಈ ಚಿತ್ರದ ಸ್ಟಿಲ್ಲುಗಳನ್ನು ನೋಡಿದವರು ಕೇಳುತ್ತಿದ್ದಾರೆ.



ಕನಕಪುರ ಶ್ರೀನಿವಾಸ್ ನಿರ್ಮಾಣದ ಈ ಚಿತ್ರವನ್ನು 'ತಾಜ್‌ಮಹಲ್' ಚಂದ್ರು ನಿರ್ದೇಶಿಸಿದ್ದಾರೆ. ಚಂದ್ರು ಅವರ ನಿರ್ದೇಶನದ ಎರಡನೇ ಚಿತ್ರ 'ಪ್ರೇಮ್ ಕಹಾನಿ' ಹೀನಾಯವಾಗಿ ಸೋತಿದ್ದರಿಂದ 'ಮೈಲಾರಿ'ಯನ್ನು ಗೆಲ್ಲಿಸಲೇಬೇಕಾದ ಅನಿವಾರ್ಯತೆ ಅವರದ್ದಾಗಿದೆ. ಶಿವಣ್ಣನಂಥ ಶಿವಣ್ಣನೇ ಕರೆದು ಅವರಿಗೆ ತಮ್ಮ ಕಾಲ್‌ಶೀಟ್ ಕೊಟ್ಟಿರುವಾಗ ಚಂದ್ರು ಹಿಂದಿಗಿಂತ ಹೆಚ್ಚು ಉತ್ಸುಕರಾಗಿ ಸಿನಿಮಾ ಮಾಡಿಮುಗಿಸಿದ್ದಾರೆ. ಗುರುಕಿರಣ್ ಸಂಗೀತ ನೀಡಿರುವ 'ಮೈಲಾರಿ'ಯ ಆಡಿಯೋ ಮಾರುಕಟ್ಟೆಯಲ್ಲಿ ಬಿಡುಗಡೆಯಾದ ಮೊದಲ ದಿನವೇ 20 ಸಾವಿರ ಸೀಡಿಗಳು ಖರ್ಚಾಗಿ ದಾಖಲೆ ಹುಟ್ಟುಹಾಕಿದೆ. ಇದು ಆನಂದ್ ಆಡಿಯೋ ಇತಿಹಾಸದಲ್ಲೇ ಮೊದಲಂತೆ.

ಕಳೆದ ಎರಡು-ಮೂರು ವರ್ಷಗಳಲ್ಲಿ ಶಿವಣ್ಣ ಅಭಿನಯಿಸಿದ ಹತ್ತಾರು ಚಿತ್ರಗಳು ತೊಪತೊಪನೆ ಧರೆಗುರುಳಿವೆ. ಈ ಸೋಲುಗಳಿಂದಾಗಿ ಈ ಹಿಂದೆ 'ಮಿನಿಮಮ್ ಗ್ಯಾರೆಂಟಿ ನಟ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಶಿವರಾಜ್ ಕುಮಾರ್ ಅವರ ತಾರಾ ವರ್ಚಸ್ಸೇ ಕುಂದಿದೆ. ಎಲ್ಲ ಚಿತ್ರಗಳಲ್ಲೂ ಏಕತಾನತೆಯ ಬಾಡಿ ಲಾಂಗ್ವೇಜು, ನಟನೆಗೆ ಅವಕಾಶವೇ ಇಲ್ಲದ ಹೊಡಿಬಡಿ ದೃಶ್ಯಗಳು, ಡೈಲಾಗುಗಳಂತೂ ತಲೆ ಚಿಟ್ಟುಹಿಡಿಸುವಂತಹವು... ಎಷ್ಟು ಅಂತ ಜನ ಸಹಿಸಿಯಾರು? ಶಿವಣ್ಣ ಬಗೆಗಿನ ಕ್ರೇಜ್ ಇದ್ದಕ್ಕಿದ್ದಂತೆ ಕುಸಿದು ಬೀಳಲು ಮುಖ್ಯ ಕಾರಣ ಚಿತ್ರಗಳ ಆಯ್ಕೆಯಲ್ಲಿ ಅವರು ಮಾಡಿದ ತಪ್ಪುಗಳು. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ 'ಶಿವರಾಜ್‌ಕುಮಾರ್ ಕೇವಲ ದುಡ್ಡಿಗಾಗಿ ಸಿನಿಮಾ ಗಳನ್ನು ಒಪ್ಪಿಕೊಳ್ಳುತ್ತಾರಾ?' ಎಂದು ಎಲ್ಲರೂ ಪ್ರಶ್ನಿಸುವ ಮಟ್ಟಿಗೆ ಹೋಗಿತ್ತು. ಇನ್ನು ಆ ಸಿನಿಮಾಗಳನ್ನು ನಿರ್ದೇಶಿಸಿದ ಜನ ಶಿವಣ್ಣನ ಹೇರ್ ಸ್ಟೈಲುಗಳನ್ನು ಇತ್ತಿಂದತ್ತ ಅತ್ತಿಂದಿತ್ತ ತಿರುಗಿಸಿದರೇ ಹೊರತು ಶಿವಣ್ಣನ ಘನತೆ, ಪ್ರತಿಭೆಗೆ ಮತ್ತವರ ವೃತ್ತಿಬದುಕಿಗೆ ತಿರುವು ನೀಡುವಂಥ ಒಂದು ಪಾತ್ರವನ್ನೂ ಸೃಷ್ಟಿಸಲಿಲ್ಲ.

ಹೀಗಾಗಿ ಕಳೆದ ಒಂದು ದಶಕದಲ್ಲಿ ಶಿವರಾಜ್‌ಕುಮಾರ್ ಅಭಿನಯಿಸಿದ ಬಹುತೇಕ ಸಿನಿಮಾಗಳು ಹೊಡಿ, ಬಡಿ, ಕಡಿ ಸೂತ್ರಗಳನ್ನೇ ಹೊಂದಿದ್ದವು. ಇವುಗಳನ್ನು ಬಿಟ್ಟರೆ ಸಾಯಿಪ್ರಕಾಶರ ಕರ್ಚೀಫು ತೋಯಿಸುವ 'ತಂಗಿ' ಸೆಂಟಿಮೆಂಟ್‌ನ ಹಳಸಲು ಕಥೆಯ ಚಿತ್ರಗಳಲ್ಲೇ ಅವರು ಹೆಚ್ಚಾಗಿ ಕಾಣಿಸಿಕೊಂಡಿದ್ದು.

ಹಲವಾರು ಸೋಲುಗಳ ನಂತರ ಮೊದಲಿನಂತೆ ಸಿಕ್ಕಸಿಕ್ಕ ಸಿನಿಮಾಗಳಿಗೆ ಕಾಲ್‌ಶೀಟು ಹಂಚದೆ ಈಗ ಸಿನಿಮಾ ಆಯ್ಕೆಗಳ ಬಗ್ಗೆ ಶಿವಣ್ಣ ಸಿಕ್ಕಾಪಟ್ಟೆ ಮುತುವರ್ಜಿ ವಹಿಸುತ್ತಿದ್ದಾರೆ. ತಮ್ಮ 99ನೇ ಚಿತ್ರ 'ಮೈಲಾರಿ' ಕಥೆಯನ್ನು ಒಂದಲ್ಲ, ನಾಲ್ಕು ಬಾರಿ ಕೇಳಿ 'ಕಥೆ ಗಟ್ಟಿಯಾಗಿದೆ' ಎಂಬ ಕಾರಣಕ್ಕೆ ಒಪ್ಪಿದರಂತೆ. "ಈ ಚಿತ್ರದಲ್ಲಿ ಲವ್, ಸೆಂಟಿಮೆಂಟು, ರೌಡಿಸಂ, ಥ್ರಿಲ್ಲು ಎಲ್ಲಾ ಇರುವುದರಿಂದ ಎಲ್ಲ ಬಗೆಯ ಪ್ರೇಕ್ಷಕರನ್ನು ಈ ಬಾರಿ ಹಿಡಿದಿಡುತ್ತೇನೆ" ಎನ್ನುವುದು ಶಿವಣ್ಣನ ಬಲವಾದ ನಂಬಿಕೆಯಾಗಿದೆ.

ವಯಸ್ಸು ಐವತ್ತಕ್ಕೆ ಹತ್ತಿರವಾದರೂ ಇಂದಿಗೂ ಹದಿನಾರರ ನಟಿಯರೊಂದಿಗೆ ಲವರ್ ಬಾಯ್‌ಆಗಿ, ಆಕ್ಷನ್ ಹೀರೋ ಆಗಿ ಕಾಣಿಸಿಕೊಳ್ಳುವ ಶಿವರಾಜ್‌ಕುಮಾರ್ ಎವರ್‌ಗ್ರೀನ್ ಹೀರೋ. ಎಂಥದ್ದೇ ಸಂಗೀತವಿರಲಿ ಅದರ ರಿದಮ್ಮಿಗೆ ತಕ್ಕತೆ ಮೈ ಕುಣಿಸಬಲ್ಲರು ಶಿವಣ್ಣ. ಬಹಳಷ್ಟು ಜನ ಹೀರೋಗಳಿಗೆ ನಲವತ್ತು ದಾಟುವ ಹೊತ್ತಿಗೇ ಕುತ್ತಿಗೆಯಲ್ಲಿ ನೆರಿಗೆ ಶುರುವಾಗಿರುತ್ತದೆ. ಆದರೆ ಶಿವರಾಜ್ ಕುಮಾರ್ ತನ್ನ ದೇಹ ಮತ್ತು ಮುಖಕಾಂತಿಯನ್ನು ಇವತ್ತಿಗೂ ಒಂದೇ ರೀತಿ ಮೇಂಟೇನ್ ಮಾಡಿಕೊಂಡು ಬಂದಿದ್ದಾರೆ. 'ಆನಂದ್' ಚಿತ್ರದಿಂದ ಆರಂಭವಾದ ಅವರು ನಟನಾ ವೃತ್ತಿಯಲ್ಲಿ 'ಜನುಮದ ಜೋಡಿ', 'ಚೈತ್ರದ ಚಿಗುರು' ತರಹದ ಸದಭಿರುಚಿಯ ಚಿತ್ರಗಳೂ ಇವೆ, 'ದೊರೆ', 'ಹಗಲುವೇಶ'ದಂಥ ಕಲಾತ್ಮಕ ಚಿತ್ರಗಳಲ್ಲೂ ಇವೆ. ಈಗ 'ಮೈಲಾರಿ' ಗೆದ್ದರೆ ಮುಂದೆ ಬರುವ 100ನೇ ಚಿತ್ರ 'ಜೋಗಯ್ಯ'ನಿಗೂ ಒಂದಿಷ್ಟು ಸಹಕಾರಿಯಾಗುತ್ತದೆ. 'ಮೈಲಾರಿ' ಅವರ ಹಳೇ ಸೋಲುಗಳಿಂದ ಮುಕ್ತಿ ದೊರಕಿಸಬೇಕಿದೆ....

● ಅರುಣ್

ಸದಾ ಸಲ್ಲಾಪ..!



ಸದಾ ಎಂಬ ಸ್ನಿಗ್ಧ ಸುಂದರಿ ಕನ್ನಡದಲ್ಲಿ ಸೆಕೆಂಡ್ ಇನ್ನಿಂಗ್ಸ್ ಶುರು ಮಾಡಿದ್ದಾಳೆ. ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಮೊನಾಲಿಸಾ' ಮೂಲಕ ಕನ್ನಡಕ್ಕೆ ಎಂಟ್ರಿ ಕೊಟ್ಟ ಸದಾ ಮೊನ್ನೆಮೊನ್ನೆಯಷ್ಟೇ ಬಿಡುಗಡೆಗೊಂಡ ಇಂದ್ರಜಿತ್ ಅವರ 'ಹುಡುಗ ಹುಡುಗಿ'ಯಲ್ಲಿ ಗ್ಲಾಮರಸ್ ಆಗಿ ಕಾಣಿಸಿಕೊಂಡಿದ್ದಳು. ಈಗ ಆಕೆಯ ಮತ್ತೊಂದು ಕನ್ನಡ ಚಿತ್ರ 'ಮೈಲಾರಿ' ಬಿಡುಗಡೆಗೆ ಬಂದು ನಿಂತಿದೆ.

ಸದಾ ತನ್ನ ನಟನಾ ವೃತ್ತಿ ಆರಂಭಿಸಿದ್ದು ತೆಲುಗಿನ 'ಜಯಂ' ಚಿತ್ರದಿಂದ. ಆಕೆ ನಾಯಕಿಯಾಗಿ ನಟಿಸಿದ ಚಿತ್ರ ಸೂಪರ್ ಹಿಟ್ ಆಗಿ ಈಕೆಗೆ ಉತ್ತಮ ನಟಿ ಎಂಬ ಫಿಲಂಫೇರ್ ಪ್ರಶಸ್ತಿಯೂ ಸಂದಾಯವಾಗಿತ್ತು. ನಂತರ ಈಕೆ ನಟಿಸಿದ 'ವರ್ಣಜಾಲಂ' ಎಂಬ ತಮಿಳು ಚಿತ್ರವೂ ಯಶಸ್ವಿಯಾಗಿತ್ತು.

ಇಡೀ ಇಂಡಿಯಾದ ಪ್ರೇಕ್ಷಕರನ್ನು ಸೆಳೆದಿರುವ ಶಂಕರ್ ನಿರ್ದೇಶನದ 'ಅನ್ನಿಯನ್' ಚಿತ್ರದಲ್ಲಿ ಸದಾ ವಿಕ್ರಂನೊಂದಿಗೆ ನಟಿಸಿದ್ದಳು. ಈ ಚಿತ್ರದಲ್ಲಿ ಸದಾಳ ಸೌಂದರ್ಯ ಮತ್ತು ಪ್ರತಿಭೆ ಎರಡೂ ಹೊರಹೊಮ್ಮಿದ್ದವು. ನಂತರ ಈಕೆ ಬ್ಯುಸೀ ನಾಯಕಿಯಾದಳು. ಅದು ಯಾವ ಮಟ್ಟಕ್ಕೆ ಎಂದರೆ, ಒಂದು ಚಿತ್ರಕ್ಕೆ ಈಕೆ ಅಪೇಕ್ಷಿಸುತ್ತಿದ್ದ ಸಂಭಾವನೆ ಒಂದು ಕೋಟಿ ರೂಪಾಯಿ ಮುಟ್ಟಿತ್ತು.

ಆದರೆ ತಿರುಗೋ ಭೂಮಿಯಲ್ಲಿ ಎಲ್ಲವೂ ಒಂದೇ ಸ್ಥಾನದಲ್ಲಿ ಇರುವುದಾದರೂ ಹೇಗೆ ಸಾಧ್ಯ? ಅಂತೆಯೇ ಸದಾಳ ಬೇಡಿಕೆಯೂ ಕಾಲಕ್ರಮೇಣ ಕೆಳಮುಖವಾಗತೊಡಗಿತು. ಅದೇ ಸಂದರ್ಭದಲ್ಲಿ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ತಮ್ಮ ಮಗ ಆದಿತ್ಯ ನಾಯಕನಟನಾಗಿ ನಟಿಸಿದ 'ಮೋಹಿನಿ' ಚಿತ್ರಕ್ಕೆ ಈಕೆಯನ್ನು ನಾಯಕಿಯನ್ನಾಗಿ ಕರೆತಂದು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಿನಿಮಾ ತಯಾರಿಸಿದರು. ಆದರೆ ಆ ಚಿತ್ರ ಅಂಥ ಯಶಸ್ಸನ್ನೇನೂ ಕಾಣಲಿಲ್ಲ.

...ಹೀಗೆ ಸದಾ ಎಂಬ ಈ ಸುಂದರಿ ಯಶಸ್ಸಿನ ಉತ್ತುಂಗವನ್ನೂ ಸೋಲಿನ ಪಾತಾಳವನ್ನೂ ಕಾಣುತ್ತಾ ಸಾಗಿದಳು. ಮಹಾರಾಷ್ಟ್ರದ ರತ್ನಗಿರಿಯ ಮರಾಠಿ ಮುಸ್ಲಿಂ ಮನೆತನದಲ್ಲಿ ಹುಟ್ಟಿ-ಬೆಳೆದ ಸದಾಳ ಒರಿಜಿನಲ್ ಹೆಸರು ಸದಾಫ್ ಮಹ್ಮದ್ ಸೈಯದ್ ಎಂದು. ಗುಲಾಬಿ ದಳಗಳಂಥ ಅದರಗಳನ್ನು ಹೊಂದಿರುವ ಸದಾ, ತನ್ನ ಕಿರುನಗೆಯಿಂದಲೇ ಇಡೀ ಚಿತ್ರಾಸಕ್ತರ ಮನಸ್ಸೂರೆಗೊಂಡ ಚೆಲುವೆ. ಸ್ವತಃ ಶಿವರಾಜ್‌ಕುಮಾರ್ ಅವರೇ 'ಆಕೆಯ ಅಭಿನಯ ಸೂಪರ್ಬ್. ನಾನು ಸದಾಳ ಸಾಕಷ್ಟು ಸಿನೆಮಾಗಳನ್ನು ನೋಡಿದ್ದೇನೆ...' ಎಂದು ಸರ್ಟಿಫಿಕೇಟ್ ನೀಡಿದ್ದಾರೆ. ಕನ್ನಡದ ಮೂಲಕವಾದರೂ ಈಕೆಯ ಸೆಕೆಂಡ್ ಇನ್ನಿಂಗ್ಸ್ ಆರಂಭವಾಗುತ್ತದಾ ಅನ್ನೋದನ್ನು 'ಮೈಲಾರಿ'ಯೇ ನಿರ್ಧರಿಸಬೇಕು! ●

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Ma...